ಶುಕ್ರವಾರ, ಆಗಸ್ಟ್ 6, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 218 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ನಟಿ ಪಾವನಾ ಗೌಡ ಅವರಿಗೆ ಇದೀಗ ಚಂದನವನದಲ್ಲಿ ಹೊಸ ಅವಕಾಶಗಳ ಬಾಗಿಲು ತೆರೆಯುತ್ತಿದೆ. ಶ್ರೀನಗರ ಕಿಟ್ಟಿ ಅಭಿನಯದ 'ಗೌಳಿ' ಚಿತ್ರಕ್ಕೆ ನಾಯಕಿಯಾಗಿ ಇವರು ಆಯ್ಕೆಯಾಗಿದ್ದು, ರವಿಚಂದ್ರನ್ ನಟನೆಯ 6T ಚಿತ್ರದಲ್ಲಿ ಗ್ಲಾಮರಸ್ ರೋಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಆಳ-ಅಗಲ 5 ವರ್ಷಗಳಲ್ಲಿ 1.76 ಲಕ್ಷ ಅತ್ಯಾಚಾರ ಪ್ರಕರಣ

ಚರ್ಚೆಯಿಲ್ಲದೇ ಮೂರು ಮಸೂದೆ ಅಂಗೀಕಾರ 13

'ಅಣ್ಣಾಮಲೈ ವಿರೋಧ– ಐ ಡೋಂಟ್ ಕೇರ್' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,580 ▲	16,294 ▲	₹49,480 (ಬೆಂಗಳೂರು)	₹69,600 (ಬೆಂಗಳೂರು)	74.17 ▲

ರಾಜ್ಯ ಕೋವಿಡ್ ಅಂಕಿ–ಅಂಶ

29,13,512 ▲	ಒಟ್ಟು ಸೋಂಕಿತರು (29,11,727 ನಿನ್ನೆಯ ವಿವರ)
24,414 ▲	ಸಕ್ರಿಯ ಪ್ರಕರಣಗಳು
28,52,368 ▲	ಗುಣಮುಖರಾದವರು
36,705 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,785	▲
ಗುಣಮುಖ	1,651	▼
ಸಾವು	25	▲

ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟಗಳು

'ಕಾವೇರಿ ಪ್ರಾಧಿಕಾರದ ಸಮ್ಮತಿ ಅಗತ್ಯ' 9

ಪೂರ್ವಾನ್ವಯ ತೆರಿಗೆ ಕೊನೆಗೊಳಿಸಲು ಮುಂದಾದ ಕೇಂದ್ರ ಸರ್ಕಾರ 13

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಭೂ ಕಬಳಿಕೆಗೆ 116 ನಕಲಿ ಮೊಕದ್ದಮೆ • ಭೂಗಳ್ಳರ ಜಾಲ ಭೇದಿಸಿದ ಸಿಐಡಿ

₹ 600 ಕೋಟಿ ಆಸ್ತಿ ಕಬಳಿಕೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಾರಸುದಾರರು ಉಪಯೋಗಿಸದ ಖಾಲಿ ಜಾಗವನ್ನು ಕೊಳ್ಳೆ ಹೊಡೆಯಲು ನಕಲಿ ಕಕ್ಷಿದಾರ–ಪ್ರತಿವಾದಿಗಳನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಲಪಟಾಯಿಸುತ್ತಿದ್ದ ಭೂಗಳ್ಳರ ಭಾರಿ ಜಾಲವನ್ನು ಸಿಐಡಿ ಪೊಲೀಸರು ಭೇದಿಸಿದ್ದಾರೆ.

'ಮೋಸದ ಮಾರ್ಗದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆಯುತ್ತಿದ್ದ' ಬಗ್ಗೆ ಹೈಕೋರ್ಟ್ ನೀಡಿದ್ದ ನಿರ್ದೇಶನದಂತೆ ಲಘು ಪ್ರಕರಣಗಳ ನ್ಯಾಯಾಲಯದ (ಎಸ್‌ಸಿಸಿಎಚ್) ರಿಜಿಸ್ಟ್ರಾರ್ ಆರ್. ಧನಲಕ್ಷ್ಮಿ, ಹಲಸೂರು ಗೇಟ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಇದನ್ನು ಆಧರಿಸಿ 2020ರ ಡಿಸೆಂಬರ್ 7ರಂದು ಎಫ್‌ಐಆರ್ ದಾಖಲಾಗಿತ್ತು. ಇದರ ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ ಅಧಿಕಾರಿಗಳು, ನಕಲಿ ದಾಖಲೆ ಸೃಷ್ಟಿಸಿ ರಾಜಿ ಡಿಕ್ರಿ ಪಡೆದಿದ್ದ ಸುಮಾರು 116 ನಕಲಿ ಮೊಕದ್ದಮೆಗಳನ್ನು ಪತ್ತೆ ಹಚ್ಚಿದ್ದಾರೆ.

'ಬೆಂಗಳೂರು ಹಾಗೂ ಹೊರವಲಯದ ಜಾಗಕ್ಕೆ ಚಿನ್ನಕ್ಕಿಂತಲೂ ಹೆಚ್ಚಿನ ಬೆಲೆ ಇದೆ. ಕೆಲ ಜಾಗಗಳನ್ನು ವಾರಸುದಾರರು ಬಳಸಿಕೊಳ್ಳುತ್ತಿಲ್ಲ. ಅಂಥ ಜಾಗಗಳನ್ನು ಗುರುತಿಸಿ ಕಬಳಿಸುತ್ತಿದ್ದ ಜಾಲದ ಬಗ್ಗೆ ದಾಖಲೆ ಸಮೇತ ಮಾಹಿತಿ ಕಲೆ ಹಾಕುತ್ತಿದ್ದೇವೆ. ಸದ್ಯಕ್ಕೆ 116 ನಕಲಿ ಮೊಕದ್ದಮೆಗಳಲ್ಲಿ ಸುಮಾರು ₹ 600 ಕೋಟಿ ಮೌಲ್ಯದ ಆಸ್ತಿಯನ್ನು ಭೂಗಳ್ಳರು ತಮ್ಮದಾಗಿಸಿಕೊಂಡಿರುವುದು ತನಿಖೆಯಲ್ಲಿ ಕಂಡುಬಂದಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಷಾ ಹರಿಲಾಲ್ ಭಿಕಾಬಾಯಿ ಅಂಡ್ ಕಂಪನಿ ಪ್ರಕರಣದಲ್ಲಿ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಕೆಲವರು ನಕಲಿ ಮೊಕದ್ದಮೆ ದಾಖಲಿಸಿ ರಾಜಿ ಡಿಕ್ರಿ ಪಡೆಯುತ್ತಿದ್ದ ಸಂಗತಿಯನ್ನು ಪತ್ತೆ ಹಚ್ಚಿತ್ತು. ಎಫ್‌ಐಆರ್ ದಾಖಲಿಸಿ ಸಿಐಡಿ ಅಧಿಕಾರಿಗಳಿಂದ ವಿಶೇಷ ತನಿಖೆ ನಡೆಸುವಂತೆಯೂ ನಿರ್ದೇಶನ ನೀಡಿತ್ತು' ಎಂದೂ ಮೂಲಗಳು ತಿಳಿಸಿವೆ.

ನಾಲ್ವರು ವಕೀಲರ ಬಂಧನ: 'ಭೂಗಳ್ಳರ ಜೊತೆ ಕೈ ಜೋಡಿಸಿದ್ದ ನಾಲ್ವರು ವಕೀಲರನ್ನು ಈಗಾಗಲೇ ಬಂಧಿಸಲಾಗಿದೆ. ತನಿಖೆ ಗೌಪ್ಯತೆ ದೃಷ್ಟಿಯಿಂದ ಬಂಧಿತರ ಹೆಸರು ಬಹಿರಂಗಪಡಿಸಲಾಗದು. ಬಂಧಿತರ ವಿಚಾರಣೆಯಿಂದ ಮಹತ್ವದ ಮಾಹಿತಿಗಳು ಲಭ್ಯವಾಗಿದ್ದು, ಪ್ರಕರಣದ ಪ್ರಮುಖ ಆರೋಪಿಯನ್ನೂ ಪತ್ತೆ ಮಾಡಲಾಗಿದೆ'.

'ಖಾಲಿ ಜಾಗಗಳನ್ನು ಗುರುತಿಸುತ್ತಿದ್ದ ಪ್ರಮುಖ ಆರೋಪಿ, ಅವುಗಳ ಪಟ್ಟಿ ಸಿದ್ಧಪಡಿಸಿ ವಕೀಲರಿಗೆ ವಿಷಯ ತಿಳಿಸುತ್ತಿದ್ದ. ಆಸ್ತಿಯ ನೈಜ ಮಾಲೀಕರ ಹೆಸರು ಮುಚ್ಚಿಟ್ಟು, ಅವರ ಹೆಸರಿನ ಜಾಗದಲ್ಲೇ ನಕಲಿ ಕಕ್ಷಿದಾರ ಹಾಗೂ ಪ್ರತಿವಾದಿಗಳನ್ನು ವಕೀಲರು ಸೃಷ್ಟಿಸುತ್ತಿದ್ದರು. ಅದಕ್ಕೆ ಸಂಬಂಧಪಟ್ಟಂತೆ ನಕಲಿ ದಾಖಲೆಗಳನ್ನು ಸಿದ್ಧಪಡಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುತ್ತಿದ್ದರು. ಪ್ರಕರಣ ದಾಖಲಾದ ಸಂಗತಿ ನೈಜ ಮಾಲೀಕರಿಗೆ ಗೊತ್ತೇ ಆಗುತ್ತಿರಲ್ಲ.'

'ನಕಲಿ ದಾಖಲೆಗಳೇ ಅಸಲಿ ಎಂದು ವಾದಿಸಿ ನ್ಯಾಯಾಲಯದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆಯುತ್ತಿದ್ದರು. ಅದೇ ಡಿಕ್ರಿ ಬಳಸಿಯೇ ಭೂಗಳ್ಳರು, ಸಂಧಾನದ ಮೂಲಕ ಜಾಗವನ್ನು ಕಬಳಿಸುತ್ತಿದ್ದರು. ನಂತರ, ಅದೇ ಜಾಗವನ್ನು ಬೇರೆಯವರಿಗೆ ಕೋಟ್ಯಂತರ ರೂಪಾಯಿಗೆ ಮಾರಾಟ ಮಾಡುತ್ತಿದ್ದರೆಂಬ ಸಂಗತಿ ತನಿಖೆಯಲ್ಲಿ ಬಯಲಾಗಿದೆ' ಎಂದೂ ಸಿಐಡಿ ಮೂಲಗಳು ತಿಳಿಸಿವೆ.

ಪ್ರಜಾವಾಣಿ ವಿಶೇಷ

'ಕಂಪನಿ ಜಾಗ ಕಬಳಿಸಲು ಹೊರಟಿದ್ದ ಭೂಗಳ್ಳರು'

ಯಶವಂತಪುರ ಬಳಿಯ ಗೋಕುಲ 1ನೇ ಹಂತದ ಆಂಜನೇಯ ದೇವಸ್ಥಾನ ಬಳಿ ಇರುವ ಷಾ ಹರಿಲಾಲ್ ಭಿಕಾಭಾಯಿ ಅಂಡ್ ಕಂಪನಿಗೆ ಸೇರಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಜಾಗ ಕಬಳಿಸಲು ಭೂಗಳ್ಳರು ಯತ್ನಿಸಿದ್ದರು. ಇದೇ ಪ್ರಕರಣವನ್ನು ಉಲ್ಲೇಖಿಸಿ ರಿಜಿಸ್ಟ್ರಾರ್ ಧನಲಕ್ಷ್ಮಿ ದೂರು ನೀಡಿದ್ದರು.

ಅಪರಾಧ ಸಂಚು (ಐಪಿಸಿ 34 ಮತ್ತು ಐಪಿಸಿ 120ಬಿ), ವಂಚನೆ (ಐಪಿಸಿ 420), ಸಹಿ ನಕಲು (ಐಪಿಸಿ 465), ನಕಲಿ ದಾಖಲೆ ದೃಷ್ಟಿ (ಐಪಿಸಿ 468), ನಕಲಿ ದಾಖಲೆಗಳನ್ನು ಅಸಲಿ ಎಂದು ಬಳಸಿದ (ಐಪಿಸಿ 471) ಆರೋಪದಡಿ ಮೈಸೂರಿನ ಬಿ. ಮಣಿ (28), ಅರುಣ್ ಹಾಗೂ ಸೆಂದಿಲ್ ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

'ಬೇರೆಯವರ ಜತೆ ಶಾಮೀಲಾದ ಮೂವರು ಆರೋಪಿಗಳು ನಕಲಿ ದಾಖಲೆ ಸೃಷ್ಟಿಸಿ, ಅವುಗಳನ್ನೇ ಅಸಲಿ ಎಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ಮೋಸದಿಂದ ರಾಜಿ ಡಿಕ್ರಿ ಪಡೆದಿದ್ದಾರೆ. ಆಸ್ತಿಯ ನೈಜ ಮಾಲೀಕರಾದ ಷಾ ಹರಿಲಾಲ್ ಭಿಕಾಬಾಯಿ ಅಂಡ್ ಕಂಪನಿ ಅವರನ್ನು ಕಕ್ಷಿದಾರರನ್ನಾಗಿ ಮಾಡದೇ ವಿಷಯ ಮುಚ್ಚಿಟ್ಟು ವಂಚಿಸಿದ್ದಾರೆ. ಇದೇ ರೀತಿಯಲ್ಲೇ, ನಕಲಿ ಮೊಕದ್ದಮೆ ದಾಖಲಿಸಿ ರಾಜಿ ಡಿಕ್ರಿ ಪಡೆದಿರುವ ಪ್ರಕರಣಗಳು ಹೆಚ್ಚಿರುವ ಬಗ್ಗೆ ಸಂಶಯವಿದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದೂ ಅವರು ಕೋರಿದ್ದರು.

ಶಾಸಕ ಜಮೀರ್, ಬೇಗ್‌ಗೆ ಇ.ಡಿ ಕಂಟಕ

ಬೆಂಗಳೂರು: ಮಾಜಿ ಸಚಿವ ರೋಷನ್ ಬೇಗ್ ಮತ್ತು ಶಾಸಕ ಜಮೀರ್ ಅಹಮದ್ ಖಾನ್ ಅವರ ಮನೆ ಮತ್ತು ಕಚೇರಿಗಳ ಮೇಲೆ ಇ.ಡಿ ಅಧಿಕಾರಿಗಳು ಗುರುವಾರ ದಾಳಿ ನಡೆಸಿದ್ದಾರೆ. 6

ಆಯಕಟ್ಟಿನ ಖಾತೆಗೆ ಸಚಿವರ ಬೇಡಿಕೆ

ಬೆಂಗಳೂರು: ಖಾತೆ ಹಂಚಿಕೆ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಹಿರಿಯ ಸಹೋದ್ಯೋಗಿಗಳ ಜತೆ ಚರ್ಚೆ ನಡೆಸಿದ್ದು, ತಮಗೆ ಇಂತಹದ್ದೇ ಆಯಕಟ್ಟಿನ ಖಾತೆ ಬೇಕು ಎಂದು ಕೆಲವು ಸಚಿವರು ಬೇಡಿಕೆ ಮಂಡಿಸಿದ್ದಾರೆ. 8

ಬೋಳು ಮಂಡೆ– ಕೋವಿಡ್ 'ಕೊಡುಗೆ'

ಬೆಂಗಳೂರು: ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಹೆಚ್ಚಿನವರಿಗೆ 3 ತಿಂಗಳ ಬಳಿಕ ಕೂದಲು ಉದುರುವಿಕೆ ಸಮಸ್ಯೆ ಗಳು ಕಾಣಿಸಿಕೊಳ್ಳಲಾರಂಭಿಸಿವೆ. ಈ ಸಮಸ್ಯೆ ಪುರುಷರಿಗಿಂತ ಮಹಿಳೆಯರಲ್ಲಿ ಅಧಿಕವಾಗಿದೆ. 12

ಭಾರತದ ಚಾರಿತ್ರಿಕ ಸಾಧನೆ

ಒಲಿಂಪಿಕ್ ಅಂಗಳದ ನವತಾರೆಯರು..

ಒಲಿಂಪಿಕ್ ಹಾಕಿಯಲ್ಲಿ 41 ವರ್ಷಗಳ ನಂತರ ಭಾರತ ಪುರುಷರ ತಂಡವು ಕಂಚಿನ ಪದಕ ಜಯಿಸಿತು. ಗುರುವಾರ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಮನಪ್ರೀತ್ ಸಿಂಗ್ ಬಳಗವು 5–4 ರಿಂದ ಜರ್ಮನಿಯ ವಿರುದ್ಧ ರೋಚಕ ಜಯ ಸಾಧಿಸಿತು.

ಜಪಾನ್ ಕುಸ್ತಿಪಟುಗೆ ಚಿನ್ನ

ಮಹಿಳೆಯರ 57 ಕೆಜಿ ವಿಭಾಗದ ಫ್ರೀಸ್ಟೈಲ್ ಕುಸ್ತಿಯಲ್ಲಿ ಚಿನ್ನದ ಪದಕ ಜಯಿಸಿದ ಆತಿಥೇಯ ಜಪಾನ್‌ನ ರಿಸಾಕೊ ಕವಾಯ್

ಶಾಟ್‌ಪಟ್ ದಾಖಲೆ..

ರಯನ್ ಕ್ರೌಸರ್ ಅಮೆರಿಕ

ದೂರ: 23.30 ಮೀ. (ಒಲಿಂಪಿಕ್ ದಾಖಲೆ)

ರವಿ ಬೆಳ್ಳಿ ಕಿರಣ

- ಭಾರತದ ಕುಸ್ತಿಪಟು ರವಿಕುಮಾರ್ ದಹಿಯಾ ಬೆಳ್ಳಿ ಪದಕ ಗಳಿಸಿದರು.
- **ಎದುರಾಳಿ:** ಝವೂರ್ ಯುಗೇವ್ (ರಷ್ಯಾ ಒಲಿಂಪಿಕ್ ಸಮಿತಿ; ಚಿನ್ನ)

ಪಾಯಿಂಟ್: ರವಿಕುಮಾರ್ 4
ಯುಗೇವ್ 7

ಕರಾಟೆ ಹೊಳಪು

ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ನಡೆದ ಕರಾಟೆ ಸ್ಪರ್ಧೆಯ ಮಹಿಳೆಯರ ವಿಭಾಗದ ಕಟಾದಲ್ಲಿ ಚಿನ್ನದ ಪದಕ ಜಯಿಸಿದ ಸ್ಪೇನ್‌ನ ಸಾಂಡ್ರಾ ಸ್ಯಾಂಚೆಜ್

ಪೆಗಾಸಸ್ ಪ್ರಕರಣ ಸತ್ಯವಾಗಿದ್ದರೆ ಗಂಭೀರ

ಸ್ವತಂತ್ರ ತನಿಖೆ ಕೋರಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಲಾಗಿದೆ ಎಂಬ ವರದಿಗಳು ನಿಜವಾಗಿದ್ದರೆ ಇದೊಂದು ಗಂಭೀರ ಸ್ವರೂಪದ ಪ್ರಕರಣ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ತಂತ್ರಜ್ಞಾನ ಬಳಸಿ ಅಕ್ರಮವಾಗಿ ಗೂಢಚರ್ಯೆ ನಡೆಸಲಾಗಿದೆ ಎಂಬ ಪ್ರಕರಣವು 2019ರ ಮೇ ನಲ್ಲಿಯೇ ಬಯಲಾದರೂ ಅಪರಾಧ ತನಿಖೆಗಾಗಿ ದೂರು ದಾಖಲಿಸಲು ಏಕೆ ಯತ್ನಿಸಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಪೀಠವು ಪ್ರಶ್ನಿಸಿದೆ. ನ್ಯಾಯಮೂರ್ತಿಗಳೂ ಸೇರಿದಂತೆ ವಿವಿಧ ವರ್ಗಗಳ ಜನರ ಮೇಲೆ ಗೂಢಚರ್ಯೆ ನಡೆಸಲಾಗಿದೆ ಎಂಬ ಪ್ರಕರಣದ ಸ್ವತಂತ್ರ ತನಿಖೆ ನಡೆಯಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪೀಠವು ಸೂಚಿಸಿದೆ.

13ನೇ ಪುಟ ನೋಡಿ

Dabur RED PASTE

ಡಾಬರ್ ರೆಡ್ ಪೇಸ್ಟ್

ರಕ್ಷಿಸುತ್ತದೆ ನಿಮ್ಮನ್ನು

7 ದಂತ ಸಮಸ್ಯೆಗಳಿಂದ

ಡಾಬರ್ ರೆಡ್ ಪೇಸ್ಟ್ 7 ದಂತ ಸಮಸ್ಯೆಗಳಿಂದ ರಕ್ಷಿಸುತ್ತದೆ ಎಂಬುದು ಚಿಕಿತ್ಸಾತ್ಮಕವಾಗಿ ಸಾಬೀತಾಗಿದೆ: ದಂತ ಕುಳಿಗಳು, ದುರ್ಗಂಧದ ಉಸಿರು, ರಕ್ತ ಒಸರುವ ದಂತಗಳು, ಹಲ್ಲುನೋವು*, ಹಳದಿಯಾಗುವುದು, ಹೊಪ್ಪಳಿಕೆಗಳು ಮತ್ತು ರೋಗಾಣಿಗಳು.

AYURVEDIC CLINICALLY PROVEN Formula ORAL CARE

ಭಾರತದ ನಂ. 1 ಆಯುರ್ವೇದೀಯ ಟೂತ್‌ಪೇಸ್ಟ್**

*18g

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ 1800-103-1644 ಅಥವಾ www.daburdentalcare.com ಗೆ ಲಾಗ್ ಆನ್ ಮಾಡಿ.

**ಎ ಸಿ ನೀಲ್ಸನ್ ಡೇಟಾ (ಮಾರ್ಚ್ 2021) *ಹಲ್ಲುನೋವು: ಒಸಡು ಸಮಸ್ಯೆಯಿಂದಾಗಿ ಕಾಣಿಸಿಕೊಂಡ ನೋವು

ಸಿಸಿಬಿ ಪೊಲೀಸರ ಕಾರ್ಯಾಚರಣೆ ● ಇಬ್ಬರು ಆರೋಪಿಗಳ ಬಂಧನ

₹4.50 ಕೋಟಿಯ ರಕ್ತಚಂದನ ಜಪ್ತಿ

ಪ್ರಜಾವಾಣಿ ವಾರ್ತೆ

ಸಿಸಿಬಿ ಪೊಲೀಸರು ಜಪ್ತಿ ಮಾಡಿರುವ ರಕ್ತಚಂದನ

ಬೆಂಗಳೂರು: ರಕ್ತಚಂದನ ಮರಗಳನ್ನು ಅಕ್ರಮವಾಗಿ ಕಡಿದು ವಿದೇಶಗಳಿಗೆ ಸಾಗಣೆ ಮಾಡುತ್ತಿದ್ದ ಜಾಲವನ್ನು ಪತ್ತೆ ಮಾಡಿರುವ ಸಿಸಿಬಿ ಪೊಲೀಸರು, ₹ 4.50 ಕೋಟಿ ಮೌಲ್ಯದ ರಕ್ತಚಂದನದ ತುಂಡುಗಳನ್ನು ಜಪ್ತಿ ಮಾಡಿದ್ದಾರೆ.

'ಆಂಧ್ರಪ್ರದೇಶ ಹಾಗೂ ತಮಿಳುನಾಡಿನಿಂದ ನಗರಕ್ಕೆ ರಕ್ತಚಂದನವನ್ನು ತಂದು ವಿದೇಶಕ್ಕೆ ಸಾಗಿಸುತ್ತಿದ್ದ ಮಾಹಿತಿ ಸಿಕ್ಕಿತ್ತು. ಅದರನ್ವಯ ಕಾರ್ಯಾಚರಣೆ ನಡೆಸಿ ಆನಂದ್ ಕುಮಾರ್ (51) ಹಾಗೂ ಅನಿಲ್ ಸಿಂಘಿ (47) ಎಂಬುವರನ್ನು ಬಂಧಿಸಲಾಗಿದೆ. ಜಾಲದಲ್ಲಿ ಸಕ್ರಿಯರಾಗಿದ್ದ ಮತ್ತಷ್ಟು ಮಂದಿ ತಲೆಮರೆಸಿಕೊಂಡಿದ್ದಾರೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಹುಳಿಮಾವು ಠಾಣೆ ವ್ಯಾಪ್ತಿಯ ಕಮ್ಮನಹಳ್ಳಿ ಗೊಟ್ಟಿಗೆರೆ ಮುಖ್ಯರಸ್ತೆ ಬಳಿ ಬುಧವಾರ (ಆ. 4) ಬೆಳಿಗ್ಗೆ ಕಾರೊಂದನ್ನು ತಡೆದು ಪರಿಶೀಲನೆ ನಡೆಸಲಾಗಿತ್ತು. ಕಾರಿನಲ್ಲಿ ರಕ್ತಚಂದನದ ದೊಡ್ಡ ತುಂಡು ಸಿಕ್ಕಿತ್ತು. ಕಾರಿನಲ್ಲಿದ್ದ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಅಕ್ರಮ ಸಾಗಣೆ ಬಯಲಾಯಿತು' ಎಂದೂ ತಿಳಿಸಿದರು.

ಗೋದಾಮು ಮೇಲೂ ದಾಳಿ: 'ಬನ್ನೇರುಘಟ್ಟ ರಸ್ತೆಯ ಹೊಮ್ಮದೇವನಹಳ್ಳಿ ಮುಖ್ಯರಸ್ತೆಯಲ್ಲಿರುವ ಗೋದಾಮಿನಲ್ಲಿ ರಕ್ತಚಂದನ ತುಂಡುಗಳನ್ನು ಬಚ್ಚಿಟ್ಟಿದ್ದ ಸಂಗತಿ ಆರೋಪಿಗಳಿಂದ ಗೊತ್ತಾಗಿತ್ತು. ಗೋದಾಮು ಮೇಲೆ ದಾಳಿ ಮಾಡಲಾಯಿತು. ಅಲ್ಲಿ ನಿಲ್ಲಿಸಿದ್ದ ತಮಿಳುನಾಡು ನೋಂದಣಿ ಸಂಖ್ಯೆ ಲಾರಿಯಲ್ಲೂ ರಕ್ತಚಂದನದ ತುಂಡುಗಳಿದ್ದವು' ಎಂದೂ ಅಧಿಕಾರಿ ಹೇಳಿದರು.

'ರಕ್ತಚಂದನಕ್ಕೆ ವಿದೇಶದಲ್ಲಿ ಬೇಡಿಕೆ ಇದೆ. ಅಲ್ಲಿಯ ಕೆಲ ಮಧ್ಯವರ್ತಿಗಳ ಜೊತೆ ಒಡನಾಟ ಹೊಂದಿದ್ದ ಆರೋಪಿಗಳು ರಕ್ತಚಂದನ ಸಾಗಣೆಯಲ್ಲಿ ತೊಡಗಿದ್ದರು. ರಕ್ತಚಂದನ ಮಾದರಿಯನ್ನು ಗ್ರಾಹಕರೊಬ್ಬರಿಗೆ ತೋರಿಸಲು ಕಾರಿನಲ್ಲಿ ಹೊರಟಿದ್ದಾಗಲೇ ನಮ್ಮ ಕೈಗೆ ಸಿಕ್ಕಿಬಿದ್ದಿದ್ದರು' ಎಂದೂ ವಿವರಿಸಿದರು.

ಸರಕುಗಳ ಜೊತೆ ಬಚ್ಚಿಟ್ಟು ಸಾಗಣೆ: 'ರಕ್ತಚಂದನವನ್ನು ಕಡಿದು ಬೆಂಗಳೂರಿಗೆ ತರಲು ಆರೋಪಿಗಳು ವ್ಯವಸ್ಥಿತ ಜಾಲ ರೂಪಿಸಿಕೊಂಡಿದ್ದರು. ದಿನಬಳಕೆ ಸರಕುಗಳ ಮಧ್ಯದಲ್ಲಿ ರಕ್ತಚಂದನ ತುಂಡುಗಳನ್ನು ಬಚ್ಚಿಟ್ಟುಕೊಂಡು ತಮಿಳುನಾಡು ಹಾಗೂ ಆಂಧ್ರಪ್ರದೇಶದಿಂದ ಹೊರಟ ಲಾರಿ, ಬೆಂಗಳೂರಿಗೆ ಬಂದು ತಲುಪುತ್ತಿತ್ತು. ಲಾರಿ ಬರುತ್ತಿದ್ದ ಮಾರ್ಗದಲ್ಲಿರುವ ಚೆಕ್‌ಪೋಸ್ಟ್ ಸಿಬ್ಬಂದಿ ಮೇಲೂ ಅನುಮಾನವಿದೆ. ರಾತ್ರಿ ಹೊತ್ತಿನಲ್ಲಿ ಲಾರಿ ಹೆಚ್ಚಾಗಿ ಸಂಚರಿಸುತ್ತಿತ್ತು. ಈ ಜಾಲದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿದೆ' ಎಂದೂ ಅಧಿಕಾರಿ ಹೇಳಿದರು.

ತೆರಿಗೆ ಪಾವತಿ ವಿಳಂಬಕ್ಕೆ ಭಾರಿ ದಂಡ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಪಾವತಿ ವಿಳಂಬಕ್ಕೆ ಶೇ 200ರವರೆಗೆ ದಂಡ ವಿಧಿಸುತ್ತಿರುವ ಬಿಬಿಎಂಪಿಯ ಕ್ರಮಕ್ಕೆ ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ) ಆಕ್ಷೇಪ ವ್ಯಕ್ತಪಡಿಸಿದೆ.

'ಕಳೆದ ಐದು ವರ್ಷಗಳಲ್ಲಿ ಆಸ್ತಿ ತೆರಿಗೆ ಪಾವತಿಸದ ಕಟ್ಟಡಗಳ ಮಾಲೀಕರಿಗೆ ಬಿಬಿಎಂಪಿ ನೋಟಿಸ್ ನೀಡಲು ಆರಂಭಿಸಿದ್ದು ಭಾರಿ ದಂಡ ವಿಧಿಸುತ್ತಿದೆ. ಕೆಲವರಿಗೆ ಲಕ್ಷ ರೂಪಾಯಿಯವರೆಗೆ ದಂಡ ನೀಡುವಂತೆ ನೋಟಿಸ್ ನೀಡಲಾಗಿದೆ. ಈ ಬಗ್ಗೆ ಕಟ್ಟಡದ ಮಾಲೀಕರಿಗೆ ಯಾವುದೇ ಮುನ್ಸೂಚನೆ ಅಥವಾ ಮಾಹಿತಿ ನೀಡದೆ ಇದ್ದಕ್ಕಿದ್ದಂತೆ ನೋಟಿಸ್ ನೀಡಲಾಗುತ್ತಿದೆ' ಎಂದು ಪಕ್ಷ ದೂರಿದೆ.

'2016ರಲ್ಲಿ ವಲಯಗಳ ಪುನರ್ ವಿಂಗಡಣೆಯ ಆಧಾರದ ಮೇಲೆ ಬಿಬಿಎಂಪಿಯು ಈ ನೋಟಿಸ್‌ಗಳನ್ನು ನೀಡಲಾಗುತ್ತಿದೆ. ವಲಯಗಳ ಪುನರ್‌ವಿಂಗಡಣೆ ಬಗ್ಗೆ ಎಷ್ಟೋ ಜನರಿಗೆ ಮಾಹಿತಿ ಇಲ್ಲ. ತಮ್ಮ ಕಟ್ಟಡ ಯಾವ ವಲಯದಲ್ಲಿ ಬರುತ್ತದೆ ಎಂಬ ಬಗ್ಗೆಯೂ ಗೊತ್ತಿಲ್ಲ. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನೂ ಬಿಬಿಎಂಪಿ ಮಾಡಿಲ್ಲ. ಈಗ ಇದ್ದಕ್ಕಿದ್ದಂತೆ ಭಾರಿ ದಂಡ ವಿಧಿಸುತ್ತಿರುವುದು ಸರಿಯಲ್ಲ' ಎಂದು ಪಕ್ಷವು ಪ್ರಕಟಣೆಯಲ್ಲಿ ಹೇಳಿದೆ.

ನೋಟಿಸ್ ಪಡೆದಿರುವ ಸಾವಿರಾರು ಜನ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಹೇಳಿರುವ ಬಿಎನ್‌ಪಿ, ಈ ಕುರಿತು ಮುಖ್ಯಮಂತ್ರಿಯವರಿಗೆ ಆನ್‌ಲೈನ್‌ನಲ್ಲಿ ಕೋರಿಕೆ ಸಲ್ಲಿಸುವ ಅಭಿಯಾನ ಆರಂಭಿಸಿದೆ. ಈ ಆನ್‌ಲೈನ್ ಅರ್ಜಿಗೆ ಸಹಿ ಹಾಕಿ ಅಭಿಯಾನವನ್ನು ಬೆಂಬಲಿಸಲು https://propertytax.nammabnp.org/ ಸಂಪರ್ಕ ಕೊಂಡಿ ಬಳಸಿ ಎಂದು ಪಕ್ಷವು ಮನವಿ ಮಾಡಿಕೊಂಡಿದೆ.

ನಗರದಲ್ಲಿ ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 7ರಂದು ಬೆಳಿಗ್ಗೆ 10ರಿಂದ ಸಂಜೆ 5ರ ತನಕ ನಗರದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಕೆ.ಆರ್. ಮಾರುಕಟ್ಟೆ, ಅವೆನ್ಯೂ ರಸ್ತೆ, ಬಿ.ವಿ.ಕೆ ಅಯ್ಯಂಗಾರ್ ರಸ್ತೆ, ಆರ್.ಟಿ. ರಸ್ತೆ, ಸಿ.ಟಿ. ರಸ್ತೆ, ಚಿಕ್ಕಪೇಟೆ, ನಗರತ್ ಪೇಟೆ, ಸಿಲ್ವರ್ ಜುಬಿಲಿ ಪಾರ್ಕ್ ರಸ್ತೆ, ಪುರಭವನ, ಜೆ. ಸಿ. ರಸ್ತೆ, ಕೆ.ಜಿ.ರಸ್ತೆ, ವಿಕ್ಟೋರಿಯಾ ಆಸ್ಪತ್ರೆ, ಗೋರಿಪಾಳ್ಯ, ಬಿನ್ನಿಪೇಟೆ, ಕಲಾಸಿಪಾಳ್ಯ ಮುಖ್ಯರಸ್ತೆ, ಶಂಕರಪುರ, ಮೈಸೂರು ರಸ್ತೆ, ಪೊಲೀಸ್ ವಸತಿ ಗೃಹ, ತಿಗಳರಪೇಟೆ, ಎನ್.ಆರ್.ರಸ್ತೆ, ಕೋಟೆ ಬೀದಿ, ಶಿವಾಜಿ ರಸ್ತೆ.

ಎನ್.ಜಿ.ಇ.ಎಫ್ ಕೈಗಾರಿಕಾ ಪ್ರದೇಶ, ಆರ್.ಎಚ್.ಬಿ. ಕಾಲೊನಿ, ಜಿ.ಸಿ.ಪಾಳ್ಯ, ಮಹದೇವಪುರ, ಫಿಯೋನಿಕ್ಸ್ ಮಾಲ್, ಸಿಂಗಯನಪಾಳ್ಯ, ಮಹದೇವಪುರ ಹೊರವರ್ತುಲ ರಸ್ತೆ, ಶಿವಗಂಗಾ ಬಡಾವಣೆ, ಚಿಕ್ಕಣ್ಣ ಬಡಾವಣೆ, ಗೋಶಾಲೆ ರಸ್ತೆ, ಮಣಿಪಾಲ್ ಆಸ್ಪತ್ರೆ, ಎಲ್ ಆ್ಯಂಡ್ ಟಿ ಕಂಪನಿ, ವಿಐಎಸ್‌ಎನ್‌ಎಲ್ ಕಂಪನಿ, ಕಾವೇರಿನಗರ, ರಾಜಪಾಳ್ಯ, ಹೂಡಿ ಸರ್ಕಲ್, ತಿಗಳರಪಾಳ್ಯ, ಬಸವನಗರ, ಸೀತಾರಾಂ ಪಾಳ್ಯ, ಗ್ರಾಫೈಟ್ ರಸ್ತೆ, ಮುನಿಕದೀರಪ್ಪ ಬಡಾವಣೆ, ಐ.ಟಿ.ಐ ಎಸ್ಟೇಟ್, ಎಚ್.ಆರ್.ಡಿ ಕೇಂದ್ರ, ದೊಡ್ಡನೆಕ್ಕುಂದಿ, ವಿ.ಆರ್ ಮಾಲ್.

ವಸಂತನಗರ, ಮಿಲ್ಲರ್ಸ್ ರಸ್ತೆ, ಕನ್ನಿಂಗ್‌ಹ್ಯಾಂ ರಸ್ತೆ, ಎ.ಆರ್. ಸರ್ಕಲ್, ಗಾಂಧಿ ನಗರ, ಮಾಗಡಿ ರಸ್ತೆ, ಓಕಳಿಪುರ, ಚಿಕ್ಕಪೇಟೆ, ಕಾಟನ್‌ಪೇಟೆ, ಹೋಟೆಲ್ ಶಂಗ್ರಿಲಾ, ಕಾವೇರಿ ಭವನ, ಕೆಎಚ್‌ಬಿ, ಜಲಮಂಡಳಿ, ಕಂದಾಯ ಭವನ, ಕಾಟನ್‌ಪೇಟೆ, ನೃಪತುಂಗ ರಸ್ತೆ, ಯು.ವಿ.ಸಿ.ಇ, ಕೃಷಿ ವಿಜ್ಞಾನ ಕಚೇರಿ, ಆರ್.ಬಿ.ಐ, ಪೊಲೀಸ್ ಕಮಿಷನರ್ ಕಚೇರಿ, ವೈ.ಎಂ.ಸಿ.ಎ, ಸುಂಕಲ್‌ಪೇಟೆ, ಗಾಣಿಗರ ಮಾರ್ಗ, ಕೆ.ಜಿ. ರಸ್ತೆ, ಕಬ್ಬನ್‌ಪೇಟೆ, ಶಾರದಾ ಥಿಯೇಟರ್ ಹಿಂಭಾಗ, ಎಸ್.ಪಿ ರಸ್ತೆ, ಎಸ್.ಜೆ.ಪಿ ರಸ್ತೆ, ಧರ್ಮರಾಯ ಸ್ವಾಮಿ ದೇವಸ್ಥಾನ ಮತ್ತು ಸುತ್ತಲಿನ ಪ್ರದೇಶ.

ಓಕಳಿಪುರ, ಸ್ವತಂತ್ರಪಾಳ್ಯ, ದಯಾನಂದ ನಗರ, ರಾಬರ್ಟ್‌ಸನ್ ಬ್ಲಾಕ್, ಜಕ್ಕರಾಯನ ಕೆರೆ, ಹನುಮಂತಪ್ಪ ಕಾಲೊನಿ, ಪ್ಲಾಟ್‌ಫಾರಂ ರಸ್ತೆ, ರಾಮಚಂದ್ರಾಪುರ, ಕುಮಾರ ಪಾರ್ಕ್, ಶೇಷಾದ್ರಿಪುರ, ನೆಹರೂನಗರ, ಜೆಸಿಡಬ್ಲ್ಯು ನಗರ, ವಿ.ವಿ. ಗಿರಿ ಕಾಲೊನಿ, ಮಲ್ಲೇಶ್ವರ, ಶಿರೂರು ಪಾರ್ಕ್, ಮಂತ್ರಿ ಗ್ರೀನ್ಸ್ ಅಪಾರ್ಟ್‌ಮೆಂಟ್, ಅಪೊಲೊ ಆಸ್ಪತ್ರೆ, ಶ್ರೀಪುರ, ಮಂತ್ರಿ ಮಾಲ್ ಮತ್ತು ಸುತ್ತ–ಮುತ್ತಲಿನ ಪ್ರದೇಶ.

ನದಿಗೆ ಹಾರಿ ನವ ವಿವಾಹಿತೆ ಆತ್ಮಹತ್ಯೆ

ಪೂಜಾ

ಸಕಲೇಶಪುರ: ಚನ್ನರಾಯಪಟ್ಟಣ ತಾಲ್ಲೂಕಿನ ನವ ವಿವಾಹಿತೆ ಪೂಜಾ (22) ಗುರುವಾರ ಹೇಮಾವತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರು. ಮಳಲಿ ಗ್ರಾಮದ ಅಶ್ವತ್ಥ್ ಅವರೊಂದಿಗೆ ಫೆಬ್ರುವರಿಯಲ್ಲಿ ಪ್ರೇಮ ವಿವಾಹವಾಗಿತ್ತು. ನಂತರ ದಂಪತಿ ಕುಟುಂಬದಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಮಹಡಿಯಿಂದ ಬಿದ್ದು ಪ್ರಾಧ್ಯಾಪಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತಿಕೆರೆಯ ಎಂ.ಎಸ್. ರಾಮಯ್ಯ ಆಸ್ಪತ್ರೆ ಕಟ್ಟಡದ ಎಂಟನೇ ಮಹಡಿಯಿಂದ ಬಿದ್ದು ಡಾ. ಅಂಬರೀಷ್ ವಿಜಯರಾಘವ್ (45) ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

ಗುರುವಾರ ಬೆಳಿಗ್ಗೆ ಈ ಘಟನೆ ನಡೆದಿದ್ದು, ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬನಶಂಕರಿ 3ನೇ ಹಂತದ ನಿವಾಸಿ ಅಂಬರೀಷ್, ಆಸ್ಪತ್ರೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದರು. ಅವರ ಪತ್ನಿ ಸಹ ವೈದ್ಯೆ. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಳಿಗ್ಗೆ 11.45ರ ಸುಮಾರಿಗೆ ಎಂಟನೇ ಮಹಡಿಗೆ ಹೋಗಿದ್ದ ಅಂಬರೀಷ್, ಅಲ್ಲಿಂದಲೇ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ. ಇದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಆದರೆ, ಕಾರಣ ಗೊತ್ತಾಗಿಲ್ಲ' ಎಂದೂ ತಿಳಿಸಿವೆ.

'ಅಂಬರೀಷ್ ಅವರ ಸಹೋದ್ಯೋಗಿಗಳು ಕೆಲಸಕ್ಕೆ ರಾಜೀನಾಮೆ ನೀಡಿದ್ದರು. ಅದರಿಂದಾಗಿ ಕೆಲಸದ ಒತ್ತಡ ಹೆಚ್ಚಾಗಿತ್ತು. ಲಾಕ್‌ಡೌನ್ ಸಮಯದಲ್ಲೂ ಅಂಬರೀಷ್ ಮಾನಸಿಕವಾಗಿ ನೊಂದಿದ್ದರು ಎನ್ನಲಾಗಿದೆ. ಸಾವಿನ ಬಗ್ಗೆ ತನಿಖೆ ಮುಂದುವರಿದಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಪ್ರಕಟಣೆ

ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ

ನಂ.5, 5ನೇ ಮುಖ್ಯರಸ್ತೆ, ಡಾ. ರಾಧಾಕೃಷ್ಣನ್ ನಗರ, ಶಿಕ್ಷಕರ ಬಡಾವಣೆ
ಮೈಸೂರು – 570 029
(ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದ ಸಂಸ್ಥೆ)
"ಶಿಕ್ಷಣ ವಂಚಿತರಿಗಾಗಿ–ಶಿಕ್ಷಣ"

10ನೇ ತರಗತಿ / SSLC

ಹೊಸ ಕಲಿಕಾ ಅಧ್ಯಯನ ಕೇಂದ್ರಗಳನ್ನು ತೆರೆಯಲು ಸಂಸ್ಥೆಗಳಿಂದ ಪ್ರಸ್ತಾವನೆ ಆಹ್ವಾನಿಸಲಾಗಿದೆ
ಮತ್ತು
2021–22ನೇ ಸಾಲಿಗೆ 10ನೇ ತರಗತಿ ಪ್ರವೇಶಕ್ಕೆ ನೊಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ

- ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಎಸ್‌ಎಲ್‌ಬಿ 2006 ದಿನಾಂಕ. 06.09.2006ರ ಅನ್ವಯ ಕರ್ನಾಟಕ ಮುಕ್ತ ವಿದ್ಯಾಲಯ 10ನೇ ತರಗತಿ ಪರೀಕ್ಷೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ತತ್ಸಮಾನ.
- ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ತೇರ್ಗಡೆ ಪ್ರಮಾಣಪತ್ರ ನೀಡಿಕೆ.
- ಉತ್ತೀರ್ಣರಾದ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕೆ ಅರ್ಹರು.
- ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮುಕ್ತ ವಿದ್ಯಾಲಯ ಕಲಿಕಾ ಅಧ್ಯಯನ ಕೇಂದ್ರಗಳಿವೆ.

ಮಾಹಿತಿಗಾಗಿ ಸಂಪರ್ಕಿಸಿ: 0821-2548269, 94498 20714, 95901 91113
Email: jsskar.openschool_mysore@yahoo.com, web: www.jsskos.com

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 (ನಿಯಮಾವಳಿಗಳು) ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದೆ ಏಳುವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2014–15ರಲ್ಲಿ ಘೋಷಿಸಲಾದ ಮಧ್ಯಮಾವಧಿ ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಸಹ ಮೇಲೆ ಹೇಳಲಾದ ನಿಯಮಾವಳಿಗನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ನವೆಂಬರ್ 14, 2021** ರಂದು ವರ್ಗಾಯಿಸಲಾಗುವುದು ಇಲ್ಲವೇ ಜಮಾ ಮಾಡಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ನಿಯಮಾವಳಿಗನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವೆಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

ಅ) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂಚಾಲಿತವಾಗಿ ರದ್ದಾಗುತ್ತವೆ.

ಆ) **ಷೇರುಗಳನ್ನು ನೀವು ವಿದ್ಯುನ್ಮಾನ ರೂಪದಲ್ಲಿ ಹೊಂದಿದ್ದಿರೆ:** ಐಇಪಿಎಫ್ ಖಾತೆಗೆ ವರ್ಗವಾಗಲು ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ನವೆಂಬರ್ 05, 2021**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ಕೊಡದೆ ಜಾರಿಮಾಡುತ್ತದೆ. ನಿಯಮಾವಳಿಗನುಸಾರ ಸಂಬಂಧಿಸಿದ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಬಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ಈ ಷೇರುಗಳು ಮತ್ತು ಲಾಭಾಂಶಗಳನ್ನು ಐಇಪಿಎಫ್ ಪ್ರಾಧಿಕಾರದಿಂದ ನಿಗದಿತ ನಮೂನೆ ಐಇಪಿಎಫ್–5ರಲ್ಲಿ ಕೋರಿಕೆಯನ್ನು ಆನ್‌ಲೈನ್ ಮೂಲಕ ಸಲ್ಲಿಸಿ ಮತ್ತು ನಿಗದಿತ ನಮೂನೆ ಐಇಪಿಎಫ್–5ರಲ್ಲಿ ಅಗತ್ಯವೆಂದು ಹೇಳಲಾದ ದಸ್ತಾವೇಜುಗಳೊಂದಿಗೆ ಭೌತಿಕ ಪ್ರತಿಯನ್ನು ಕಂಪನಿಯ ನೋಡಲ್ ಅಧಿಕಾರಿಗೆ ಸಲ್ಲಿಸಿ ಪಡೆಯಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪಪ್ರಧಾನ ವ್ಯವಸ್ಥಾಪಕರು, ಮೆ॥ ಕೆಫಿನ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಟ್, ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೇನಿಯಮ್ ಟವರ್ ಬಿ, ಪ್ಲಾಟ್ 31–32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ – 500032. ದೂರವಾಣಿ: +91 40 6716 2222 ಅಥವಾ ವಿ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಆಗಸ್ಟ್ 05, 2021
ಬೆಂಗಳೂರು, ಭಾರತ

ಕೆಎಫ್‌ಸಿ ನೆರವು

ಬೆಂಗಳೂರು: ಆಹಾರ ವಿತರಣೆಯ ಪ್ರಮುಖ ಕಂಪನಿ ಕೆಎಫ್‌ಸಿ ಇಂಡಿಯಾ ಸಂಸ್ಥೆಯು ರೆಸ್ಟೋರೆಂಟ್ ಉದ್ಯಮದ ಚೇತರಿಕೆ ಹಾಗೂ ಸಣ್ಣ ಆಹಾರ ವ್ಯವಹಾರಗಳಿಗೆ ನೆರವು ನೀಡುವ ನಿಟ್ಟಿನಲ್ಲಿ ನಗರದ 100 ಸಣ್ಣ ಆಹಾರ ಉದ್ಯಮಿಗಳಿಗೆ ಸಹಾಯಹಸ್ತ ಚಾಚಿದೆ.

ಕೋವಿಡ್ ಸಂಕಷ್ಟದಲ್ಲಿರುವ ರೆಸ್ಟೋರೆಂಟ್ ಉದ್ಯಮದ ವ್ಯವಹಾರವನ್ನು 2022ರ ವೇಳೆಗೆ ಚೇತರಿಕೆ ಕಾಣುವಂತೆ ಮಾಡುವ ಗುರಿಯನ್ನು ಇದು ಹೊಂದಿದೆ.

‘ಆಹಾರ ಸುರಕ್ಷತೆ ಮತ್ತು ನೈರ್ಮಲ್ಯ, ಲಾಭದಾಯಕ, ಆಹಾರ ವಿತರಣೆ ಮತ್ತು ಗ್ರಾಹಕರ ಅನುಭವದಂತಹ ಉದ್ಯಮವು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ತರಬೇತಿ ನೀಡುವ ಕೆಲಸ ಮಾಡಲಿದ್ದೇವೆ’ ಎಂದು ಕೆಎಫ್‌ಸಿ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಮೀರ್ ಮೆನನ್ ತಿಳಿಸಿದ್ದಾರೆ.

SAD DEMISE

GOPALAIAH S.V.
Retired Police Officer, Mysore State Police
DOB : 02/07/1924 - DOD : 05/08/2021
Cremation: 06-08-2021
Deeply mourned by :
Family Members & Friends
Contact : 98450 77552

ಕೂಡ್ಲು ಗ್ರಾಮ: 15 ದಿನಗಳಿಗೊಮ್ಮೆ ನೀರು ಪೂರೈಕೆ

ಡ್ರಮ್ ಇದ್ದರೆ ಮಾತ್ರ ನೀರು!

• ಲಿಂಗರಾಜು

ಪ್ರತಿ ಮನೆಯಲ್ಲೂ ಕಾಣುವ ನೀರು ತುಂಬಿಸಲು ಇಟ್ಟಿರುವ ಡ್ರಮ್‌ಗಳು

ಪ್ರಜಾವಾಣಿ ವಿಶೇಷ

ಬೊಮ್ಮನಹಳ್ಳಿ: ‘ನಮ್ಮ ಮನೆಯಲ್ಲಿ ಆರು ಜನ ಇದ್ದೀವಿ, 15 ದಿನಕ್ಕೊಮ್ಮೆ ಎರಡು ಡ್ರಮ್ ನೀರು ಕೊಡ್ತಾರೆ, ಇದು ಯಾವುದಕ್ಕೂ ಸಾಲುತ್ತಿಲ್ಲ, ಹೀಗಾಗಿ ಒಂದು ಕೊಡ ನೀರಿಗೆ ₹4 ಕೊಟ್ಟು ಖರೀದಿ ಮಾಡುತ್ತಿದ್ದೇವೆ, ಚುನಾವಣೆ ವೇಳೆ ಕಂಡ ರಾಜಕೀಯದವರು ಇದುವರೆಗೂ ಇತ್ತ ತಲೆ ಹಾಕಿಲ್ಲ, ನಮ್ಮ ಗೋಳು ಯಾರಿಗೇ ಹೇಳೋಣ?’ ಎಂದು ಮನೆ ಕೆಲಸ ಮಾಡುವ ರುಕ್ಮಿಣಿ ನೀರಿನ ಹಾಹಾಕಾರವನ್ನು ಬಿಚ್ಚಿಟ್ಟರು.

ಆನೇಕಲ್ ವಿಧಾನಸಭಾ ಕ್ಷೇತ್ರದ ಬಿಬಿಎಂಪಿ ಸಿಂಗಸಂದ್ರ ವಾರ್ಡ್‌ಗೆ ಒಳಪಡುವ ಕೂಡ್ಲು ಗ್ರಾಮದ ಬಸವಲಿಂಗಪ್ಪ ಬಡಾವಣೆ ಹಾಗೂ ಮಗ್ಗದ ಬಡಾವಣೆ ನಿವಾಸಿಗಳು ನೀರಿಗಾಗಿ ರೋಧಿಸುತ್ತಿದ್ದಾರೆ.

ಬಿಬಿಎಂಪಿಯಿಂದ 15 ದಿನಕ್ಕೊಮ್ಮೆ ಟ್ಯಾಂಕರ್ ಮೂಲಕ ಪ್ರತಿ ಮನೆಗೆ ಎರಡು ಡ್ರಮ್ ನೀರು ಕೊಡುತ್ತಾರೆ. ಡ್ರಮ್ ಇದ್ದವರಿಗೆ ಮಾತ್ರವೇ ನೀರು ನೀಡುವುದರಿಂದ, ನೀರು ತುಂಬಿಸಿಕೊಳ್ಳಲು ಬಡಾವಣೆಯ ಪ್ರತಿ ಮನೆಯಲ್ಲೂ ಸಾಲಾಗಿ ಜೋಡಿಸಿರುವ ಡ್ರಮ್ ಗಳು ಕಾಣುತ್ತವೆ! ಮನೆಯಲ್ಲಿನ ಒಬ್ಬರು ನೀರಿನ ಟ್ಯಾಂಕರ್ ಬರುವುದನ್ನೇ ಕಾಯುತ್ತಾ ಕೂರಬೇಕು. ಇಲ್ಲದಿದ್ದಲ್ಲಿ ನೀರು ಸಿಗುವುದಿಲ್ಲ!

ಅಗತ್ಯವಿರುವಷ್ಟು ನೀರು ಬೇಕಿದ್ದಲ್ಲಿ ಖಾಸಗಿ ಟ್ಯಾಂಕರ್ ನೀರು ಖರೀದಿಸಬೇಕು, ಒಂದು ಟ್ಯಾಂಕ್ ನೀರಿಗೆ ₹1000 ನೀಡಬೇಕು. ಬೇಸಿಗೆಯಲ್ಲಿ ಈ ದರ ದುಪ್ಪಟ್ಟಾಗುತ್ತದೆ. ಹೀಗಾಗಿ, ನೀರಿಗಾಗಿ ಪ್ರತಿ ತಿಂಗಳೂ ಸಾವಿರಾರು ರೂಪಾಯಿ ವ್ಯಯಿಸಬೇಕಿದೆ ಎಂದು ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸವಿರುವ ಇಲ್ಲಿನ ನಿವಾಸಿಗಳು ತಮ್ಮ ಅಳಲು ತೋಡಿಕೊಂಡಿದ್ದಾರೆ.

700 ಕುಟುಂಬಗಳು ವಾಸವಾಗಿರುವ ಬಡಾವಣೆಯ ನಿವಾಸಿಗಳು, ನೀರಿನ ಸಮಸ್ಯೆ ಬಗೆಹರಿಸುವಂತೆ ಬಿಬಿಎಂಪಿ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್, ಜಲಮಂಡಳಿ ಅಧಿಕಾರಿಗಳು, ಬಿಬಿಎಂಪಿ ಆಡಳಿತಾಧಿಕಾರಿಗೆ ಮನವಿ ಸಲ್ಲಿಸಿದ್ದರೂ ಯಾರೂ ಸಮಸ್ಯೆಗೆ ಸ್ಪಂದಿಸಿಲ್ಲ.

ಪೈಪ್ ಲೈನ್ ಇದೆ, ನೀರು ಪೂರೈಕೆ ಇಲ್ಲ!: 110 ಹಳ್ಳಿ ಕಾವೇರಿ ನೀರು ಪೂರೈಕೆಗಾಗಿ ಮೂರು ವರ್ಷಗಳ ಹಿಂದೆಯೇ ಪೈಪ್ ಲೈನ್ ಹಾಕಲಾಗಿದ್ದರೂ ನೀರು ಪೂರೈಕೆ ಆಗುತ್ತಿಲ್ಲ. ಪಕ್ಕದಲ್ಲೇ ಇರುವ ಬೇರೊಂದು ವಾರ್ಡ್‌ಗೆ ಸೇರಲ್ಪಡುವ ಬಡಾವಣೆಗೆ ಕಾವೇರಿ ನೀರು ಪೂರೈಕೆಯಾಗುತ್ತಿದ್ದರೂ ಇಲ್ಲಿಗೆ ನೀರು ಕೊಡಲು ತೊಂದರೆಯಾದರೂ ಏನು? ಎಂದು ಇಲ್ಲಿನವರು ಪ್ರಶ್ನಿಸುತ್ತಾರೆ.

‘ಕಾವೇರಿ ನೀರನ್ನು 2023ಕ್ಕೆ ಕೊಡುವುದಾಗಿ ಜಲಮಂಡಳಿ ಹೇಳುತ್ತಿದೆ. ಅಲ್ಲಿಯವರೆಗೆ ಕೊಳವೆಬಾವಿಗಳನ್ನು ತೋಡಿ ತಾತ್ಕಾಲಿಕವಾಗಿ ನೀರಿನ ಸಮಸ್ಯೆ ನಿವಾರಿಸಬಹುದಾಗಿತ್ತು. ಬೊಮ್ಮನಹಳ್ಳಿ ವಲಯದಲ್ಲಿ ಸಾಕಷ್ಟು ಎಸ್‌ಸಿಟಿಎಸ್‌ಪಿ ಅನುದಾನವಿದ್ದು, ಅದನ್ನು ಬಳಸಿ ಕೊಳವೆ ಬಾವಿ ಕೊರೆದು, ಈಗಿರುವ ಪೈಪ್ ಲೈನ್ ಮೂಲಕ ನೀರು ಪೂರೈಕೆ ಮಾಡುವಂತೆ ಹಲವು ಬಾರಿ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ವಿಧಾನಸಭಾ ಕ್ಷೇತ್ರ ಹಾಗೂ ಪಾಲಿಕೆ ಎರಡೂ ಮೀಸಲು ಕ್ಷೇತ್ರಗಳು. ಹೀಗಿದ್ದರೂ ಸಮಸ್ಯೆ ಬಗೆಹರಿಸಲು ಇಬ್ಬರೂ ಪ್ರಯತ್ನಿಸಿಲ್ಲ’ ಎಂದು ಬಹುಜನ ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಆರ್.ಎಂ.ಎನ್ ರಮೇಶ್ ದೂರಿದರು.

‘ಸಮಸ್ಯೆ ಅಷ್ಟೇನೂ ಗಂಭೀರವಾಗಿಲ್ಲ. ಕಾವೇರಿ ಪೈಪ್ ಲೈನ್ ಅಳವಡಿಕೆ ಕಾರ್ಯ ನಿಧಾನವಾಗಿದ್ದರಿಂದ ಸ್ವಲ್ಪ ತೊಂದರೆಯಾಗಿದೆ. ಈಗಾಗಲೇ ಒಂದು ಕೊಳವೆಬಾವಿ ಕೊರೆಸಲಾಗಿದ್ದು, ಶೀಘ್ರವೇ ಸಂಪರ್ಕ ನೀಡಲಾಗುವುದು’ ಎಂದು ಆನೇಕಲ್ ಶಾಸಕ ಶಿವಣ್ಣ ಹೇಳಿದರು.

ಬಾಯ್ಲರ್ ಸ್ಫೋಟ: ಐವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ತಾಲ್ಲೂಕಿನ ವಿದುರಾಶ್ವತ್ಥ ಬಳಿ ಇರುವ ಪ್ರೀಕಾಟ್ ಕಾರ್ಖಾನೆಯಲ್ಲಿ ಗುರುವಾರ ಸಂಭವಿಸಿದ ಬಾಯ್ಲರ್ ಸ್ಫೋಟದಲ್ಲಿ ಐದು ಮಂದಿ ಕಾರ್ಮಿಕರು ಗಾಯಗೊಂಡಿದ್ದಾರೆ.

ಗಾಯಾಳುಗಳ ಪೈಕಿ ಮೂವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪ್ರೀಕಾಟ್ ಕಾರ್ಖಾನೆಯಲ್ಲಿ ಬಟ್ಟೆ ತಯಾರಿಕೆಗೆ ಬೇಕಾಗುವ ವಿವಿಧ ಮಾದರಿ ನೂಲಿನ ದಾರ ಸಿದ್ಧಪಡಿಸಲಾಗುತ್ತದೆ. ನೂಲಿಗೆ ಬಣ್ಣ ಹಚ್ಚಲು ಬೇಕಾಗುವ ರಾಸಾಯನಿಕ ವಸ್ತು, ನೀರು ಮತ್ತು ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣ ಮಿಶ್ರಣದಿಂದ ದಾರವನ್ನು ಕಾರ್ಮಿಕರು ಸಿದ್ಧಪಡಿಸುತ್ತಿದ್ದರು.

ಗುರುವಾರ ಈ ಮಿಶ್ರಣ ಸಿದ್ಧಪಡಿಸಲು ಆಧುನಿಕ ಯಂತ್ರ ಬಳಕೆ ಮಾಡಲಾಗಿತ್ತು. ಇದರಲ್ಲಿ ತಣ್ಣನೆ ನೀರು ಬಳಸುವ ಬದಲಾಗಿ ಬಿಸಿನೀರು ಬಳಸಿ ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚಿನ ಸೋಡಿಯಂ ಹೈಡ್ರಾಕ್ಸೈಡ್ ಬೆರೆಸಿದ ಕಾರಣ ಬಾಯ್ಲರ್ ಸ್ಫೋಟಗೊಂಡಿದೆ.

ಘಟನೆಯಲ್ಲಿ ಕಾರ್ಮಿಕರಾದ ಹರೀಶ್ (32), ವೆಂಕಟೇಶ್ (42), ರವಿಕುಮಾರ್ (39), ಆನಂದ ಕುಮಾರ್ (32) ಹಾಗೂ ಗೊರವಯ್ಯ (29) ಗಾಯಗೊಂಡವರು.

ಘಟನೆ ಬಳಿಕ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್, ಸಿಪಿಐ ಎಸ್.ಡಿ.ಶಶಿಧರ್, ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್ಐ ವಿಜಯಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಸಂಕ್ಷಿಪ್ತ ಸುದ್ದಿ

ಆರೋಗ್ಯ ತಪಾಸಣಾ ಉಚಿತ ಶಿಬಿರ

ಬೆಂಗಳೂರು: ಮಲ್ಲೇಶ್ವರದ ಆಯುರ್ವೇದ ಮತ್ತು ಆರ್ಗಾನಿಕ್ ಭವನವು ವಾಸು ಆಯುರ್ವೇದ ಔಷಧ ಕಂಪನಿ ಸಹಯೋಗದಲ್ಲಿ ಇದೇ 8ರಂದು ಬೆಳಿಗ್ಗೆ 10ರಿಂದ 3 ಗಂಟೆಯವರೆಗೆ ಉಚಿತ ಆರೋಗ್ಯ ತಪಾಸಣಾ ಮತ್ತು ಸಲಹಾ ಶಿಬಿರವನ್ನು ಆಯೋಜಿಸಿದೆ.

ಮಧುಮೇಹ, ರಕ್ತದೊತ್ತಡ, ಮೂಳೆ ಸಾಂದ್ರತೆಯ ತಪಾಸಣೆ ಮಾಡಲಾಗುತ್ತದೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸ್ಥಳ: 18/19, 8ನೇ ಅಡ್ಡ ರಸ್ತೆ, ಮಲ್ಲೇಶ್ವರ. ದೂ.: 080 42111223 ಅಥವಾ 9019622242

ಶಿಕ್ಷಣ ನೀತಿ: 9ರಂದು ಸಂವಾದ

ಬೆಂಗಳೂರು: ‘ಸಮುದಾಯ’ ಕರ್ನಾಟಕವು ‘ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಒಕ್ಕೂಟ ಧರ್ಮ’ ಎಂಬ ವಿಷಯದ ಬಗ್ಗೆ ಇದೇ 9ರಂದು ಸಂಜೆ 7 ಗಂಟೆಗೆ ಆನ್‌ಲೈನ್ ವೇದಿಕೆಯಲ್ಲಿ ಸಂವಾದ ಹಮ್ಮಿಕೊಂಡಿದೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಮುಖಂಡ ವೈ.ಎಸ್.ವಿ. ದತ್ತ, ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಯು. ಬಸವರಾಜ್, ಜೆಎನ್‌ಯು ಕನ್ನಡ ಅಧ್ಯಯನ ಪೀಠದ ನಿವೃತ್ತ ಮುಖ್ಯಸ್ಥ ಪುರುಷೋತ್ತಮ ಬಿಳಿಮಲೆ ಸಂವಾದದಲ್ಲಿ ಭಾಗವಹಿಸಲಿದ್ದಾರೆ.

‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಸನ್ನದ್ಧವಾಗಿದೆ. ರಾಜ್ಯ ಸರ್ಕಾರವೂ ಇದನ್ನು ಅನುಷ್ಠಾನ ಮಾಡುವ ಪ್ರಯತ್ನ ಮಾಡುತ್ತಿದೆ. ಶಿಕ್ಷಣವು ರಾಜ್ಯಗಳ ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ. ಸಂವಿಧಾನದ ನಿಯಮಗಳಂತೆ ಒಕ್ಕೂಟ ತತ್ವವನ್ನು ಸರ್ಕಾರ ಪಾಲಿಸಬೇಕಾಗುತ್ತದೆ. ಈ ನೀತಿಯ ಅನುಷ್ಠಾನದಲ್ಲಿ ಸಂವಿಧಾನದ ಒಕ್ಕೂಟ ತತ್ವಗಳು ಪಾಲನೆಯಾಗುತ್ತಿವೆಯೇ ಎಂಬುದನ್ನು ಜನರು ಚರ್ಚೆ ಮಾಡಬೇಕಿದೆ’ ಎಂದು ಸಮುದಾಯ ಕರ್ನಾಟಕದ ಅಧ್ಯಕ್ಷ ಅಚ್ಯುತ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

WEEKEND CORNER ಕ್ಲಾಸಿಫೈಡ್ಸ್

EDUCATION CORNER ಕ್ಲಾಸಿಫೈಡ್ಸ್



ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

General

75% OFF - Commercial property 13 acres value 12 crore is for sale at 3.5 Cr. Attached to Hiriyur -Bellary Highway, Clear title, Suitable for Investment, Loan, Collateral Security- 9880560996

Flat

Kumaraswamy Layout

FOR SALE, Two BHK flat on the first floor of SATHWIK APARTMENTS 7 squares super built area on site measuring 3600 sq.ft, with one car parking, east facing at Vittal Nagar, ISRO Layout, K.S Layout 2nd Stage, Bengaluru, Rs. 50,00,000/-, Genuine Buyers contact- 9742261750/ 9845355551

Farm House/ Land/ Resorts

Hesaraghatta

SALE FARM house 600 Sft (Proposed) 9 Gunta's Fruits bearing trees 39 lacs (land+House) Hesaraghatta, 9945080017/ 9663904949

Yeshwanthpur

PRIME INDUSTRIAL land for SALE 1,08,000 sft in Yeshwanthpur. Parallel to Tumkur Road.BDA land with clear tiles. Suitable for Residential/ Commercial developments. Contact OWNER: 9880264422 / 7337844260.

House

J P Nagar

PRIME PROPERTY G+2 Floor Duplex House total area 1350Sqft Site area 500sqft opposite park posh location BDA property JP Nagar 1st Phase. 20x50 BDA site west facing with duplex house Contact- 9845033641

Sites

Hebbal

WANTED/ AVAILABLE Plots/houses Arkavathy Layout, R.T.Nagar, Thanisandra, Hebbal, Jakkur, Yelahanka, HBR,Hennur. Immediate_settlement. “SPACELINKS” 9845129934.

Vishweshwariah Layout

VISHWESHWARAIAH LAYOUT BDA SITE SALE 6th-BLOCK, 40x60 EAST FACE 5000/-Negotiable 40ft Road: 9341733480/ 8892901567

40X60 VISHWESHWARIAH Layout 1st Block 5750 And 30X40 Site Sale North Face 7000Sqft. Contact: 8310003509

REAL ESTATE BUYING

Home Finance

General

WANTED RESIDENTIAL Property 'A' Khata forRental income, In and around Bangalore for 2 to 2.5CR. Call Verna Developers,MG-Road. 9916310226/ 9611055416.

RENTAL PROPERTIES

Accommodation Available

Farm House/Land/ Resorts

WE ARE looking for long term Rent/ Lease Farm house in North Bangalore. Contact: 9538000003

Commercial

SHOPS 200/1200SQFT OFFICE SPACE Available on RENT 80ft Road on @Peenya Industrial Area (1km- Jalahalli cir, Metro & Ring Road) 300/500/1700/3300Sqft. Lift Facilities. Contact: S.Venkatesh 9845021497

SOCIAL SERVICES

Others

HOME NURSES available for HOME/ HOSPITAL/ PATIENT CARE-24/7. MAJ Gandhinagar, Bangalore. Contact: 7022399993, 6366883838

EDUCATIONAL

General



JOB OPPORTUNITIES

Multiple Vacancy

WANTED
A leading higher education institute in Bangalore requires
Asst. Accountants Telecallers
Candidates with relevant experience may call:
4121 5454 / 93428 42666
or E-mail their resume to: office@msec.ac.in

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers-7676760299/ 7676760399

Graphic Designers

WANTED MALE/ Female Graphic Designer for HI- END Prepress Software for a Pvt Limited Company in around Rajajinagar Age below 40 years Contact: 9108458798/ 23384085

Security & Detectives

LOCATION: BANGALORE, Commercial Street, Age: 25 to 35 yrs. Salary: 11,000 + Accommodation. Education: 8th Pass or SSLC. Contact: 6366521234/ 8762595192

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

50_ROOMS HOTEL, Off Kanakapura Main Road available_for Rent or Revenue sharing basis with_MG Contact: 9591400500.

PUBLIC NOTICE

PUBLIC NOTICE
I, B.E. VIJAYAKUMAR alias E. VIJAYACHANDRA SALA, Son of Late B.S. Eraiah, Residing at House No.78 to 82 at Cottonpet Main Road, Bangalore-560 053, I on 06-07-2017 presented to Hon'ble Court CCH-45. O.S.No.1711/08 a Memo and I.A. to change my name as above said NO OBJECTIONS in open Court on 07-11-2017 presented Memo and I.A. said that to Court that so many mistakes in my Ids, Aadhaar Card and etc. Said that Diffendent - 2 and his colleagues mis-leaded, and my Wife and my children given a G.P.A to me, same age used in all documents, now some cheaters, rowdies are trying to misuse and doing fraud find will be prosecuted. Identified by me, vide affidavit dated 04-08-2021 Sworn before me B.S.Padma Prasad, Advocate and Notary, Bangalore.

PERSONAL

Announcements

I, KAKUMANU ANIL SRI HARSH Residing #A-411,Mahaveer Dazzle Apartment, Basavannanagar Road,Near Hoodi Junction, Bangalore-48. I declare that KAKUMANU ANIL SRI HARSH & K.A.SRI HARSHA, is the same both are me only vide Affidavit Dt:22-04-2021 Sworn before Notary, M.Rajendra,Bangalore.

Change of Name

I, GOPALA SUBRAYA BHAT, R/a No. B-606, Banyan Block, Brigade Orchards, Devanahalli, Bangalore Rural, have changed my name to GOPAL BHAT, vide affidavit dated 05.08.2021 before Notary L. Gopalakrishna, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

I, RANI. J, W/o D. Ravikumar, R/a No. 26, G 16th street, Jogupalaya, Halasur, Bangalore- 560008, have changed my name to JACQUELENE DOMINIC, vide affidavit dated 05.08.2021, Certificate No. IN-KA66781603768571T, before Notary A.R.Muneer Ahmed, Bangalore.

I, ANTONY Urias Issac aged 49 Years, S/o I. Antony, R/at G-4, Pearl Nest Apartments, #80, Anthony Nicholas Street, Ashok Nagar, Bangalore-25. have changed my name to ANAND URIAS ISSAC vide affidavit dated 05/08/2021 before notary S. Samuel Solomon, Bangalore.

I, DENESH Kumar .T, Residing at No. 372, Sai Krupa, (Near West Gate), Nisarga Layout, Jigani, Bengaluru-560105 inform that I have changed my daughter's name from SONAL DENESH KUMAR to NISHVIKA .D vide Affidavit dated 05.08.2021, sworn to before Notary K.V. Mani, Bangalore

GOODWILL CHRISTIAN COLLEGE FOR WOMEN
(CSI Karnataka Central Diocese)
AFFILIATED TO BENGALURU NORTH UNIVERSITY
ADMISSIONS OPEN - 2021-22
(DIRECT AND ONLINE)
COURSES OFFERED
- BBA
- B.Com
- BCA
- B.Sc
- B.A
#10, Promenade Road, Frazer Town, Bengaluru-560005
Ph : 080-25567177 / 41100422.
E-mail : goodwillchristiancollege@gmail.com
Website: www.goodwillchristiancollege.com



ಕೆಂಬತ್ತಹಳ್ಳಿ ಕೆರೆ ಜಾಗದಲ್ಲಿ ಕಟ್ಟಿದ್ದ ಗೋಡೆ: ಬಿಬಿಎಂಪಿ ಅಧಿಕಾರಿಗಳಿಂದ ತೆರವು

ಆದೇಶದ ಬಳಿಕವೂ ನಿಲ್ಲದ ಒತ್ತುವರಿ

• ಪ್ರವೀಣ್ ಕುಮಾರ್ ಪಿ.ವಿ.

ಕೆಂಬತ್ತಹಳ್ಳಿ ಕೆರೆಯ ಜಾಗದಲ್ಲಿ ನಿರ್ಮಿಸಲಾಗುತ್ತಿದ್ದ ಗೋಡೆಯನ್ನು ಬಿಬಿಎಂಪಿ ಅಧಿಕಾರಿಗಳು ತೆರವುಗೊಳಿಸಿದರು

ಬೆಂಗಳೂರು: ಕೆರೆ, ಕಾಲುವೆಗಳ ಒತ್ತುವರಿಗೆ ಅವಕಾಶ ಕಲ್ಪಿಸಬಾರದು ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಹಾಗೂ ಹೈಕೋರ್ಟ್ ಪದೇ ಪದೇ ಆದೇಶ ಮಾಡುತ್ತಲೇ ಇವೆ. ಕೆರೆಗಳು ಸೇರಿದಂತೆ ಯಾವುದೇ ಜಲ ಕಾಯಗಳ ಜಾಗವನ್ನು ಸರ್ಕಾರವಾಗಲೀ ಖಾಸಗಿಯವರಾಗಲೀ ಅನ್ಯ ಉದ್ದೇಶಕ್ಕೆ ಬಳಸಲೇಬಾರದು ಎಂದು ಕಂದಾಯ ಇಲಾಖೆಯು ಇದೇ ಜುಲೈ 14ರಂದು ಸುತ್ತೋಲೆ ಹೊರಡಿಸಿದೆ. ಇದಾಗಿ 20 ದಿನಗಳಲ್ಲೇ ಅಂಜನಾಪುರ ವಾರ್ಡ್‌ನ ಕೆಂಬತ್ತಹಳ್ಳಿ ಕೆರೆಯ ಒತ್ತುವರಿ ಪ್ರಯತ್ನ ನಡೆದಿದೆ.

ಈ ಕೆರೆಗೆ ಸಂಬಂಧಿಸಿದ ಜಾಗದಲ್ಲಿ ಸ್ಮಶಾನ ಅಭಿವೃದ್ಧಿಗಾಗಿ ಆವರಣ ಗೋಡೆ ನಿರ್ಮಿಸಲಾಗಿದೆ. ಆದರೆ, ಸ್ಥಳೀಯರ ಹೋರಾಟದಿಂದ ಹಾಗೂ ಬಿಬಿಎಂಪಿ ಅಧಿಕಾರಿಗಳ ಮಧ್ಯಪ್ರವೇಶದಿಂದಾಗಿ ಈ ಪ್ರಯತ್ನ ವಿಫಲಗೊಂಡಿದೆ. ಇಲ್ಲಿ ನಿರ್ಮಿಸುತ್ತಿದ್ದ ತಡೆಗೋಡೆಯನ್ನು ಬಿಬಿಎಂಪಿ ಕೆರೆ ವಿಭಾಗದ ಅಧಿಕಾರಿಗಳು ಬುಧವಾರ ತೆರವುಗೊಳಿಸಿದ್ದಾರೆ.

ಕಂದಾಯ ಇಲಾಖೆಯ ದಾಖಲೆ ಪ್ರಕಾರ ಕೆಂಬತ್ತಹಳ್ಳಿ ಕೆರೆ ಎಂಟು ಎಕರೆ ಏಳು ಗುಂಟೆ ಪ್ರದೇಶದಲ್ಲಿ ವ್ಯಾಪಿಸಿದೆ. ಕೆರೆಯ ಸ್ವಲ್ಪ ಭಾಗ ಒತ್ತುವರಿಯಾಗಿದೆ. ಈ ಕೆರೆಗೆ ಸಂಬಂಧಿಸಿದ ಜಾಗದಲ್ಲಿ ಗ್ರಾಮಸ್ಥರು ಹೆಣಗಳನ್ನು ಹೂಳುತ್ತಿದ್ದರು. ಈ ಜಾಗವನ್ನೇ ಸ್ಮಶಾನ ಎಂದು ಗುರುತಿಸಿ, ಅದಕ್ಕೆ ತಡೆಗೋಡೆ ಕಟ್ಟುವ ಪ್ರಯತ್ನ ನಡೆಸಲಾಗುತ್ತಿದೆ.

ಪ್ರಜಾವಾಣಿ ವಿಶೇಷ

ಇಂತಹ ಪ್ರಯತ್ನಗಳು ಪದೇ ಪದೇ ಮರುಕಳಿಸುತ್ತಿವೆ ಎಂಬುದು ಈ ಕೆರೆ ಉಳಿಸಲು ಹೋರಾಟ ನಡೆಸುತ್ತಿರುವ ಕಾರ್ಯಕರ್ತರ ಆರೋಪ.

'ಕೆಲ ತಿಂಗಳ ಹಿಂದೆ ಇಲ್ಲಿಗೆ ಸಮೀಪ ಅಂಜನಾಪುರ ಕೆರೆಗೆ ಸಂಬಂಧಿಸಿದ ಜಾಗವನ್ನೂ ಸ್ಮಶಾನಕ್ಕಾಗಿ ಒತ್ತುವರಿ ಮಾಡುವ ಪ್ರಯತ್ನ ನಡೆದಿತ್ತು. ಇದರ ಬೆನ್ನಲ್ಲೇ, ಕೆಂಬತ್ತಹಳ್ಳಿ ಕೆರೆಯ ಜಾಗವನ್ನು ಸ್ಮಶಾನಕ್ಕಾಗಿ ಒತ್ತುವರಿ ಪ್ರಯತ್ನ ನಡೆದಿದೆ. ಅಧಿಕೃತವಾಗಿ ಮಂಜೂರಾದ ಜಾಗದಲ್ಲಿ ಸ್ಮಶಾನ ಅಭಿವೃದ್ಧಿಪಡಿಸಿದರೆ ನಮ್ಮ ಅಭ್ಯಂತರವೇನೂ ಇಲ್ಲ. ಯಾವ ದಾಖಲೆಗಳೂ ಇಲ್ಲದೇ ಕೆರೆಗೆ ಸಂಬಂಧಿಸಿದ ಜಾಗವನ್ನು ಒತ್ತುವರಿ ಮಾಡುವುದು ಸರಿಯೇ' ಎಂದು ಪ್ರಶ್ನಿಸುತ್ತಾರೆ ಕೆರೆ ಉಳಿಸುವ ಹೋರಾಟಗಳಲ್ಲಿ ತೊಡಗಿರುವ ಆನಂದ ಯಾದವಾಡ.

'ಕೆಂಬತ್ತಹಳ್ಳಿ ಕೆರೆಗೆ ಸಂಬಂಧಿಸಿದ ಜಾಗದಲ್ಲಿ ತಡೆಗೋಡೆ ನಿರ್ಮಿಸುವುದನ್ನು ಈ ಕೆರೆಯ ಪರಿವೀಕ್ಷಣೆಗಾಗಿ ನೇಮಿಸಿರುವ ಗೃಹರಕ್ಷಕ ದಳ ಸಿಬ್ಬಂದಿ ಹಾಗೂ ಸ್ಥಳೀಯರು ನಮ್ಮ ಗಮನಕ್ಕೆ ತಂದಿದ್ದರು. ನಾವು ಈ ತಡೆಗೋಡೆಯನ್ನು ತಕ್ಷಣವೇ ತೆರವುಗೊಳಿಸಿದ್ದೇವೆ' ಎಂದು ಬಿಬಿಎಂಪಿ ಕೆರೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನಿತ್ಯಾ 'ಪ್ರಜಾವಾಣಿ'ಗೆ ತಿಳಿಸಿದರು.

'ದಶಕಗಳಿಂದ ಈ ಜಾಗವನ್ನು ಸ್ಮಶಾನವನ್ನಾಗಿ ಬಳಸುತ್ತಿದ್ದೇವೆ ಎಂದು ಸ್ಥಳೀಯರು ತಗಾದೆ ತೆಗೆದಿದ್ದಾರೆ. ಅದಕ್ಕಾಗಿ ಕಂದಾಯ ಇಲಾಖೆ ಅಧಿಕಾರಿಗಳ ನೆರವಿನಿಂದ ಕೆರೆಯ ಸರ್ವೆ ನಡೆಸಿದ್ದೇವೆ. ಈ ಜಾಗ ಕೆರೆಗೇ ಸಂಬಂಧಿಸಿದ್ದು ಎಂಬುದು ಸರ್ವೆಯಲ್ಲೂ ಮನದಟ್ಟಾಗಿದೆ. ಈ ಕುರಿತ ಸಮಗ್ರ ವರದಿ ಇನ್ನಷ್ಟೇ ಕೈ ಸೇರಬೇಕಿದೆ' ಎಂದು ಅವರು ತಿಳಿಸಿದರು.

ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಿ: 'ಕೆಂಬತ್ತಹಳ್ಳಿ ಕೆರೆ ಒಡಲಿಗೆ ಕೊಳಚೆ ನೀರು ಸೇರುತ್ತಿದೆ. ಇದನ್ನು ತಡೆಗಟ್ಟಬೇಕು. ಕೆರೆಗೆ ಸಂಬಂಧಿಸಿ ಜಾಗ ಒತ್ತುವರಿಯಾಗಿದೆ, ಅದನ್ನು ತೆರವುಗೊಳಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು. ಅನ್ಯ ಉದ್ದೇಶಕ್ಕೆ ಈ ಕೆರೆಯ ಜಾಗ ಒತ್ತುವರಿಗೆ ಶಾಶ್ವತವಾಗಿ ಕಡಿವಾಣ ಬೀಳಬೇಕಾದರೆ ಈ ಜಲಕಾಯವನ್ನು ಬಿಬಿಎಂಪಿಯು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು' ಎಂದು ಒತ್ತಾಯಿಸುತ್ತಾರೆ ಸ್ಥಳೀಯ ನಿವಾಸಿ ಶೈಲೇಶ್ ಚರಾಟಿ.

ಬಿಡಿಎಯಿಂದಲೂ ಒತ್ತುವರಿ?

ಈ ಕೆರೆ ಈ ಹಿಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಧೀನದಲ್ಲಿತ್ತು. ಬಡಾವಣೆಗೆ ರಸ್ತೆ ನಿರ್ಮಿಸಲು ಬಿಡಿಎ ಕೂಡಾ ಈ ಕೆರೆಯ ಜಾಗವನ್ನು ಒತ್ತುವರಿ ಮಾಡಿದೆ ಎಂದು ದೂರುತ್ತಾರೆ ಸ್ಥಳೀಯರು.

ಬಿಡಿಎ ಈ ಕೆರೆಗೆ ಈ ಹಿಂದೆ ಬೇಲಿಯನ್ನು ನಿರ್ಮಿಸಿತ್ತು. ಆದರೆ, ಅದು ಕೆಲವೆಡೆ ಕಿತ್ತುಹೋಗಿದೆ. ಹೆಣಗಳನ್ನು ಹೂಳುವ ಸಲುವಾಗಿ ಹಾಗೂ ಗೋರಿಗಳನ್ನು ನಿರ್ಮಿಸಲು ಕೆಲವು ಸ್ಥಳೀಯರೂ ಕೆರೆಯ ಬೇಲಿಯನ್ನೂ ಕಿತ್ತು ಹಾಕಿದ್ದಾರೆ.

'ಈ ಕೆರೆ ಜಾಗ ಒತ್ತುವರಿಯಾಗಿರುವುದು ನಿಜ. ಬಿಡಿಎ ಅಧೀನದಲ್ಲಿದ್ದ ಈ ಜಲಕಾಯವು ಬಿಬಿಎಂಪಿಗೆ ನಾಲ್ಕು ವರ್ಷಗಳ ಹಿಂದಷ್ಟೇ ಹಸ್ತಾಂತರವಾಗಿದೆ. ಆದರೆ, ಬಿಬಿಎಂಪಿ ಸ್ವಾಧೀನಕ್ಕೆ ಬಂದ ಬಳಿಕ ಕೆರೆಯ ಯಾವುದೇ ಜಾಗ ಒತ್ತುವರಿಯಾಗಲು ಅವಕಾಶ ಕಲ್ಪಿಸಿಲ್ಲ. ಎಷ್ಟು ಜಾಗ ಒತ್ತುವರಿಯಾಗಿದೆ ಎಂಬುದನ್ನು ನಿಖರವಾಗಿ ತಿಳಿಯಲು ಶೀಘ್ರವೇ ಟೋಟಲ್ ಸ್ಟೇಷನ್ ಸರ್ವೆ ನಡೆಸಲಿದ್ದೇವೆ' ಎಂದು ನಿತ್ಯಾ ಮಾಹಿತಿ ನೀಡಿದರು.

ಕೆರೆ ಅಭಿವೃದ್ಧಿಗೆ ಅಲ್ಪಾವಧಿ ಟೆಂಡರ್

ಕೆಂಬತ್ತಿಹಳ್ಳಿ ಕೆರೆಯನ್ನು ಮುಖ್ಯಮಂತ್ರಿಯವರ ನವನಗರೋತ್ಥಾನ ಯೋಜನೆ ಅಡಿ ಅಭಿವೃದ್ಧಿಪಡಿಸಲು ಬಿಬಿಎಂಪಿ ಕ್ರಮ ಕೈಗೊಂಡಿದೆ. ₹ 3 ಕೋಟಿ ವೆಚ್ಚದ ಕಾಮಗಾರಿಗೆ 2021ರ ಜನವರಿ 30ರಂದು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

'ಕೆರೆಗೆ ಕೊಳಚೆ ನೀರು ಸೇರದಂತೆ ತಡೆಯಲು ಪ್ರತ್ಯೇಕ ಕಾಲುವೆ ನಿರ್ಮಿಸಬೇಕು. ಈ ಕೆರೆಯ ದಂಡೆಗಳು ಸದೃಢವಾಗಿಲ್ಲ. ಅವುಗಳನ್ನೂ ದುರಸ್ತಿಗೊಳಿಸಬೇಕು. ಕೆರೆಗೆ ನೀರು ಹೊತ್ತು ತರುವ ರಾಜಕಾಲುವೆಗಳಲ್ಲಿ ಹೂಳು ತುಂಬಿದೆ. ಅವುಗಳನ್ನೂ ತೆರವುಗೊಳಿಸಬೇಕಾದ ಅಗತ್ಯ. ಕೆರೆ ಭರ್ತಿಯಾದರೆ ಇದರ ನೀರು ಅಂಜನಾಪುರ ಕೆರೆಗೆ ಸೇರುತ್ತದೆ. ಈ ತೂಬನ್ನೂ ದುರಸ್ತಿಗೊಳಿಸಬೇಕು. ಹಾಗಾಗಿ ಈ ಕೆರೆಯ ಸಮಗ್ರ ಅಭಿವೃದ್ಧಿ ಇಷ್ಟು ಕಡಿಮೆ ಮೊತ್ತ ಸಾಲದು. ಅನುದಾನ ಹೆಚ್ಚಿಸಬೇಕು' ಎಂಬುದು ಸ್ಥಳೀಯರ ಒತ್ತಾಯ.

ಬಿಎಂಟಿಸಿ ವೋಲ್ವೊ ಬಸ್

ಮೂಲೆ ಸೇರಿದ ಬಿಎಂಟಿಸಿ ವೋಲ್ವೊ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಾಗಿ ಬದಲಾಗುತ್ತಿರುವ ಬೆಂಗಳೂರಿನಲ್ಲಿ ಜನರಿಗೆ ಹವಾನಿಯಂತ್ರಿತ ಸಾರಿಗೆ ಸೇವೆ ಒದಗಿಸಲು ಖರೀದಿಸಿದ ವೋಲ್ವೊ ಬಸ್‌ಗಳು ಬಿಎಂಟಿಸಿಗೆ ಬಿಳಿಯಾನೆಯಾಗಿ ಪರಿಣಮಿಸಿವೆ. ಅವುಗಳು ಕೋವಿಡ್ ಬಳಿಕ ಮೂಲೆ ಸೇರಿ ಡಿಪೋಗಳಲ್ಲೇ ನಿಂತಿವೆ.

ಈ ಬಸ್‌ಗಳು ಪ್ರತಿ ಕಿಲೋ ಮೀಟರ್ ಸಂಚಾರಕ್ಕೆ ₹80ರಿಂದ ₹85 ಖರ್ಚಾಗುತ್ತಿದ್ದರೆ, ಕೋವಿಡ್ ಸಂದರ್ಭದಲ್ಲಿ ಪ್ರತಿ ಕಿಲೋ ಮೀಟರ್‌ಗೆ ವರಮಾನದ ಪ್ರಮಾಣ ₹50ಕ್ಕೆ ಇಳಿಕೆಯಾಗಿದೆ. ಒಟ್ಟು 860 ವೋಲ್ವೊ ಬಸ್‌ಗಳು ನಿಗಮದಲ್ಲಿವೆ. ಜೂನ್ 21ರಿಂದ ಬಸ್‌ಗಳು ಸಂಚಾರವನ್ನು ಪುನರ್ ಆರಂಭಿಸಿದ್ದರೂ, ಕೇವಲ 60 ಬಸ್‌ಗಳನ್ನು ಬಿಎಂಟಿಸಿಯು ರಸ್ತೆಗೆ ಇಳಿಸಿದೆ.

ಹೆಚ್ಚಿನ ಖಾಸಗಿ ಕಂಪನಿಗಳು ಮನೆಯಿಂದ ಕೆಲಸ ಮಾಡುವ ಪದ್ಧತಿ ಅಳವಡಿಸಿಕೊಂಡಿದ್ದು, ಬಸ್ ಸಂಚಾರ ಮಾಡಿದರೂ ಪ್ರಯಾಣಿಕರು ಇಲ್ಲವಾಗಿದ್ದಾರೆ. ಏರಿಕೆಯಾಗುತ್ತಿರುವ ಡೀಸೆಲ್ ಬೆಲೆ ನಡುವೆ ಬಸ್‌ಗಳ ಸಂಚಾರ ಆರಂಭಿಸಲು ಸಮರ್ಥ ಆಯ್ಕೆ ಕಾಣಿಸುತ್ತಿಲ್ಲ. ಆದರೂ, ಪ್ರತಿ ಬಸ್‌ಗೆ ವರ್ಷಕ್ಕೆ ₹1 ಲಕ್ಷ ನಿರ್ವಹಣಾ ವೆಚ್ಚ ಬರಲಿದೆ. ಕೆಲ ತಿಂಗಳ ಕಾಲ ನಿಲ್ಲಿಸಿ ಮತ್ತೆ ಕಾರ್ಯಾಚರಣೆ ಆರಂಭಿಸಬೇಕು ಎಂದರೂ ಹೆಚ್ಚುವರಿ ವೆಚ್ಚ ಬರಲಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬಸ್‌ಗಳನ್ನು ಹವಾನಿಯಂತ್ರಿತ ರಹಿತವನ್ನಾಗಿಸುವುದು ಮತ್ತು ಬೇರೆ ನಿಗಮಗಳಿಗೆ ನೀಡುವುದಷ್ಟೇ ಈ ಹೊರೆಯಿಂದ ತಪ್ಪಿಸಿಕೊಳ್ಳಲು ಇರುವ ಮಾರ್ಗ. ವಿಮಾನ ನಿಲ್ದಾಣಕ್ಕೆ ಹೊರತುಪಡಿಸಿ ಬೇರೆ ಮಾರ್ಗದಲ್ಲಿ ಈ ಬಸ್‌ಗಳ ಕಾರ್ಯಾಚರಣೆ ಆರಂಭಿಸದೇ ಇರುವುದೇ ಸೂಕ್ತ ಎಂದು ಪರಿಗಣಿಸಲಾಗಿದೆ ಎಂದು ಹೇಳಿದರು.

2014-15ರಲ್ಲಿ ವೋಲ್ವೊ ಬಸ್‌ಗಳನ್ನು ಬಿಎಂಟಿಸಿ ರಸ್ತೆಗೆ ಇಳಿಸಿದೆ. ಆರಂಭದಲ್ಲಿ ಐ.ಟಿ ಉದ್ಯೋಗಿಗಳು ಈ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದರು. ಓಲಾ, ಉಬರ್ ರೀತಿಯ ಕಂಪನಿಗಳು ಕಡಿಮೆ ದರದಲ್ಲಿ ಟ್ಯಾಕ್ಸಿ ಸೇವೆ ಒದಗಿಸಿದ ಬಳಿಕ ಈ ಬಸ್ ಹತ್ತುವ ಜನರ ಸಂಖ್ಯೆ ಇಳಿಕೆ ಆಯಿತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಏಕತಾ ಯಾತ್ರೆಯ ತಂಡವನ್ನು ಸ್ವಾಗತಿಸಿದ ಬಿಜೆಪಿ ಮುಖಂಡರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವ ಎಸ್.ಟಿ.ಸೋಮಶೇಖರ್, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮುಂತಾದವರು ಇದ್ದರು.

ಹಿಮಾಚಲಕ್ಕೆ ಏಕತಾ ಬೈಕ್ ಯಾತ್ರೆ

ಬೆಂಗಳೂರು: ಭಾರತದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ತಮಿಳು ನಾಡಿನ ಮಧುರೆಯಿಂದ ಬಂದಿರುವ 25 ಜನರ ತಂಡದ 'ಬುಲೆಟ್' ಯಾತ್ರೆ ಗುರುವಾರ ನಗರವನ್ನು ತಲುಪಿತು.

ಇದರ ನೇತೃತ್ವವನ್ನು ರಾಜಲಕ್ಷ್ಮಿ ವಹಿಸಿದ್ದು, ಏಕತಾ ಯಾತ್ರೆಯ ಅಂಗವಾಗಿ ಬುಲೆಟ್ ಬೈಕ್‌ಗಳ ಮೂಲಕ ಈ ತಂಡ ಹಿಮಾಚಲ ಪ್ರದೇಶದ ಅಟಲ್ ಸುರಂಗವನ್ನು ತಲುಪಲಿದೆ. ಒಟ್ಟು 19 ದಿನಗಳ ಯಾತ್ರೆ ಇದಾಗಿದ್ದು, 4,450 ಕಿ.ಮೀ ದೂರವನ್ನು ಕ್ರಮಿಸಲಿದೆ. ಈಗಾಗಲೇ ಒಂದು ಸಾವಿರ ಕಿ.ಮೀ ಕ್ರಮಿಸಿದೆ.

ರಾಜ್ಯ ಬಿಜೆಪಿ ಕಚೇರಿ ಬಳಿ ಪಕ್ಷದ ಕಾರ್ಯಕರ್ತರು ಯಾತ್ರೆಗೆ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಈ ರೀತಿಯ ಕಾರ್ಯಕ್ರಮಗಳು ಯುವ ಜನತೆಯಲ್ಲಿ ದೇಶ ಭಕ್ತಿಯ ಜಾಗೃತಿಗೆ ಪೂರಕವಾಗಿವೆ ಎಂದು ಹೇಳಿದರು.

ಬೈಕ್ ಯಾತ್ರೆಯ ರೂವಾರಿ ರಾಜಲಕ್ಷ್ಮಿ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಗಳನ್ನು ಜನತೆಗೆ ತಲುಪಿಸುವುದು ನಮ್ಮ ಉದ್ದೇಶ. ಆ ಮೂಲಕ ಜನ ಜಾಗೃತಿ ಮೂಡಿಸಿ ಅವರಿಗೆ ಬಲ ತುಂಬುವ ಉದ್ದೇಶದಿಂದ ಈ ಯಾತ್ರೆ ನಡೆಯುತ್ತಿದೆ' ಎಂದು ಹೇಳಿದರು.

ನಿವೃತ್ತ ನೌಕರರಿಗೂ ಹೆಲ್ತ್ ಕಾರ್ಡ್ ಸೌಕರ್ಯ ನೀಡಿ

ಬೆಂಗಳೂರು: ಬಿಬಿಎಂಪಿಯಲ್ಲಿ 30 ವರ್ಷಗಳಿಗೂ ಅಧಿಕ ಕಾಲ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವವರಿಗೂ ಆರೋಗ್ಯ ಕಾರ್ಡ್‌ನ ಅಡಿ ಸೌಲಭ್ಯ ಒದಗಿಸಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ಈ ಕುರಿತು ಸಂಘವು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಗುರುವಾರ ಮನವಿ ಸಲ್ಲಿಸಿದೆ.

'ಬಿಬಿಎಂಪಿಯಲ್ಲಿ ದೀರ್ಘ ಕಾಲ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ನೌಕರರು ಒತ್ತಡದ ಕೆಲಸ ನಿರ್ವಹಿಸಿ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಅಂತಹ ನೌಕರರು ನಿವೃತ್ತರಾದ ಬಳಿಕ ನಿವೃತ್ತಿ ವೇತನ ಮತ್ತು ಗಳಿಕೆ ರಜೆ ಮೊತ್ತವನ್ನು ಆಸ್ಪತ್ರೆ ವೆಚ್ಚಕ್ಕಾಗಿ ಬಳಸಬೇಕಾದ ಅನಿವಾರ್ಯ ಸ್ಥಿತಿ ಎದುರಿಸುತ್ತಿದ್ದಾರೆ. ಕೆಲವು ಅಧಿಕಾರಿಗಳು, ನೌಕರರು ಹಾಗೂ ಅವರ ಪತಿ ಅಥವಾ ಪತ್ನಿ ಶಸ್ತ್ರಚಿಕಿತ್ಸೆಗೆ ಒಳಗಾಗಿ ವೈದ್ಯಕೀಯ ವೆಚ್ಚಕ್ಕಾಗಿಯೇ ₹ 5ಲಕ್ಷದಿಂದ ₹ 10 ಲಕ್ಷದವರೆಗೂ ವ್ಯಯಿಸಿ ಸಂಕಷ್ಟದ ಸ್ಥಿತಿ ತಲುಪಿದ್ದಾರೆ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಬಿಬಿಎಂಪಿ ಆರೋಗ್ಯ ಕಾರ್ಡ್ ಸೌಲಭ್ಯವನ್ನು ಅವರಿಗೂ ವಿಸ್ತರಿಸಬೇಕಾದ ಅಗತ್ಯವಿದೆ' ಎಂದು ಸಂಘದ ಅಧ್ಯಕ್ಷ ಎ.ಅಮೃತ ರಾಜ್ ತಿಳಿಸಿದರು.

'ಕೇಂದ್ರ ಸರ್ಕಾರದ ಹಾಗೂ 20 ರಾಜ್ಯಗಳ ಸರ್ಕಾರಿ ನೌಕರರು ನಿವೃತ್ತಿ ಬಳಿಕವೂ ಅವರ ಹಾಗೂ ಅವರ ಪತಿ/ಪತ್ನಿಯ ಚಿಕಿತ್ಸೆಗೆ ಆರೋಗ್ಯ ಕಾರ್ಡ್ ಸೌಲಭ್ಯ ಪಡೆಯಲು ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಬಿಬಿಎಂಪಿ ನೌಕರರಿಗೂ ಈ ಸೌಲಭ್ಯ ಒದಗಿಸಬೇಕು' ಎಂದು ಅವರು ಒತ್ತಾಯಿಸಿದರು.

ಬಿಜೆಪಿ ಆಡಳಿತದ ರಾಜ್ಯಗಳಿಗೆ ಹೆಚ್ಚು ಲಸಿಕೆ ಪೂರೈಕೆ: ಮಮತಾ ಟೀಕೆ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: 'ಬಿಜೆಪಿ ಆಡಳಿತದ ರಾಜ್ಯಗಳಿಗೆ ಮಾತ್ರ ಕೋವಿಡ್-19 ಲಸಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದೂರಿದ್ದಾರೆ.

ಈ ಬಗ್ಗೆ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಅವರು, 'ಹೆಚ್ಚು ಜನ ಸಾಂದ್ರತೆ ಹೊಂದಿರುವ ಪಶ್ಚಿಮ ಬಂಗಾಳದಂತಹ ರಾಜ್ಯಗಳಿಗೆ ಅಗತ್ಯವಿರುವಷ್ಟು ಲಸಿಕೆಗಳು ದೊರೆಯುತ್ತಿಲ್ಲ. ಈ ವಿಷಯವನ್ನು ಹಲವು ಬಾರಿ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ' ಎಂದು ತಿಳಿಸಿದ್ದಾರೆ.

'ಬಿಜೆಪಿ ಆಡಳಿತ ಇರುವ ಉತ್ತರ ಪ್ರದೇಶ, ಗುಜರಾತ್ ಮತ್ತು ಕರ್ನಾಟಕಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆಯನ್ನು ಕೇಂದ್ರ ಸರ್ಕಾರ ಪೂರೈಸುತ್ತಿದೆ. ಇಂತಹ ಕ್ರಮಕ್ಕೆ ಆಕ್ಷೇಪವಿಲ್ಲ. ಆದರೆ, ಪಶ್ಚಿಮ ಬಂಗಾಳಕ್ಕೆ ಅನ್ಯಾಯವಾಗುತ್ತಿರುವುದನ್ನು ನೋಡುತ್ತ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಪೂರೈಸದಿದ್ದರೆ ಸಾಂಕ್ರಾಮಿಕ ಕಾಯಿಲೆಯಿಂದ ಗಂಭೀರ ಪರಿಸ್ಥಿತಿ ಸೃಷ್ಟಿಯಾಗುವ ಸಾಧ್ಯತೆ ಇದೆ' ಎಂದಿದ್ದಾರೆ.

'ಯಾವ ಒತ್ತಡಕ್ಕೂ ಮಣಿಯದೆ ಯೋಜನೆ ಅನುಷ್ಠಾನಗೊಳಿಸಿ'

ಪ್ರಜಾವಾಣಿ ವಾರ್ತೆ

ಸಾ.ರಾ. ಗೋವಿಂದು

ಬಿ.ಟಿ.ಲಲಿತಾ ನಾಯಕ್

ಬೆಂಗಳೂರು: 'ಕುಡಿಯುವ ನೀರನ್ನು ಒದಗಿಸುವ ಮೇಕೆದಾಟು ಯೋಜನೆ ಯಾವುದೇ ಕಾರಣಕ್ಕೂ ನಿಲ್ಲಬಾರದು. ಒತ್ತಡಗಳಿಗೆ ಮಣಿಯದೆ ರಾಜ್ಯ ಸರ್ಕಾರವು ಇದನ್ನು ಆದಷ್ಟು ಬೇಗ ಅನುಷ್ಠಾನ ಮಾಡಬೇಕು' ಎಂದು ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಆಗ್ರಹಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೇಕೆದಾಟು ಯೋಜನೆಯನ್ನು ಅನುಷ್ಠಾನ ಮಾಡಬಾರದೆಂದು ತಮಿಳುನಾಡಿನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಅವರು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ಈ ಹಿಂದೆ ಐಪಿಎಸ್ ಅಧಿಕಾರಿಯಾಗಿ ಇಲ್ಲಿ ಕಾರ್ಯನಿರ್ವಹಿಸಿದ್ದ ಅವರು, ಈಗ ರಾಜಕೀಯ ಲಾಭಕ್ಕಾಗಿ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಯಾವುದೇ ಕಾರಣಕ್ಕೂ ರಾಜ್ಯ ಹಿಂದೆ ಸರಿಯಬಾರದು. ಪಕ್ಷಾತೀತವಾಗಿ ಹೋರಾಟ ನಡೆಸಬೇಕು' ಎಂದರು.

ಕಲಾವಿದ ಚಂದ್ರು, 'ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ 2018ರಲ್ಲಿಯೇ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಕೇಂದ್ರ ಸರ್ಕಾರ ಕೂಡ ತಾತ್ವಿಕ ಒಪ್ಪಿಗೆ ನೀಡಿದೆ. ಈ ಯೋಜನೆಯಿಂದ ನಮಗೆ ಅಂತಿಮವಾಗಿ 4.75 ಟಿಎಂಸಿ ಅಡಿ ಕುಡಿಯುವ ನೀರು ದೊರೆಯಲಿದೆ. ಉಳಿದ ನೀರು ತಮಿಳುನಾಡಿಗೆ ಹೋಗಲಿದೆ. ಅನಗತ್ಯವಾಗಿ ಅವರು ಕ್ಯಾತೆ ತೆಗೆಯುತ್ತಿದ್ದಾರೆ. ನಮ್ಮ ನೆಲ, ಜಲವನ್ನು ಅವರು ನಿರಂತರ ಕಬಳಿಸುತ್ತಾ ಬಂದಿದ್ದಾರೆ. ಹಾಗಾಗಿ, ಯೋಜನೆ ಅನುಷ್ಠಾನದ ವಿಚಾರವಾಗಿ ಧ್ವನಿಯೆತ್ತಬೇಕಾಗಿದೆ. ನಮ್ಮ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಬೇಕು' ಎಂದರು.

ಲೇಖಕಿ ಬಿ.ಟಿ. ಲಲಿತಾ ನಾಯಕ್, 'ಯೋಜನೆಗೆ ಜಲ ಆಯೋಗ ಕೂಡ ಅನುಮತಿ ನೀಡಿದೆ. ಈ ಯೋಜನೆ ಅನುಷ್ಠಾನದಿಂದ ತಮಿಳುನಾಡಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ. ಬಸವರಾಜ ಬೊಮ್ಮಾಯಿ ಅವರು ಯೋಜನೆ ಅನುಷ್ಠಾನದ ಹಿಂದೆ ಸರಿಯಬಾರದು' ಎಂದು ಹೇಳಿದರು.

ಮೇಕೆದಾಟು: ಎಎಪಿ ಉಪವಾಸ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಕಾಮಗಾರಿಯನ್ನು ಕೂಡಲೇ ಆರಂಭಿಸಿ, ವರ್ಷದೊಳಗೆ ಪೂರ್ಣಗೊಳಿಸಬೇಕೆಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ನಗರದಲ್ಲಿ ಗುರುವಾರ ಉಪವಾಸ ಸತ್ಯಾಗ್ರಹ ನಡೆಸಿದರು.

ನಗರದ ಮೌರ್ಯ ವೃತ್ತದ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ನೇತೃತ್ವದಲ್ಲಿ ಉಪವಾಸ ನಡೆಸಿದರು.

'ಬೆಂಗಳೂರು ನಗರ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. 13 ವರ್ಷಗಳ ಹಿಂದೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೇವಲ 100 ವಾರ್ಡ್‌ಗಳಿದ್ದವು. 2007ರಲ್ಲಿ 110 ಹಳ್ಳಿಗಳು ಸೇರಿ ವಾರ್ಡ್‌ಗಳ ಸಂಖ್ಯೆ 198 ತಲುಪಿತು. ಈಗ 45 ವಾರ್ಡ್‌ಗಳನ್ನು ಸೇರಿಸಿ 243 ವಾರ್ಡ್ ಮಾಡಲು ಸಿದ್ಧತೆ ನಡೆಯುತ್ತಿದೆ. 2007ರಲ್ಲಿ ಸೇರಿದ 110 ವಾರ್ಡ್‌ಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ. ಅಲ್ಲಿನ ಪೈಪುಗಳಲ್ಲಿ ನೀರಿನ ಬದಲು ಕೇವಲ ಗಾಳಿ ಬರುತ್ತಿದೆ. ಮೇಕೆದಾಟು ಅಣೆಕಟ್ಟೆ ನಿರ್ಮಾಣವಾದರೆ 243 ವಾರ್ಡ್‌ಗಳಿಗೆ ಕುಡಿಯುವ ನೀರು ಪೂರೈಕೆ ಸಾಧ್ಯ' ಎಂದು ಪೃಥ್ವಿರೆಡ್ಡಿ ಹೇಳಿದರು.

'ಕುಡಿಯುವ ನೀರು ಕೂಡ ಇಲ್ಲದ ನಗರ ಸ್ಮಾರ್ಟ್ ಸಿಟಿ ಆಗಲು ಸಾಧ್ಯವಿಲ್ಲ. ಮೇಕೆದಾಟು ಯೋಜನೆ ಕರ್ನಾಟಕದ ಹಕ್ಕು. ಇದಕ್ಕೆ ಕಾನೂನು ಅಡ್ಡಿಯಿಲ್ಲ. ನ್ಯಾಯಮಂಡಳಿಯಿಂದ ತೊಂದರೆಯಿದೆ ಎಂದು ಬಿಜೆಪಿ ನಾಯಕರು ಸುಳ್ಳು ಹೇಳುತ್ತಿದ್ದಾರೆ. ಒಂದು ವರ್ಷದೊಳಗೆ ಪೂರ್ಣಗೊಳ್ಳಬೇಕೆಂದು ಕಾಲಮಿತಿ ಇಟ್ಟುಕೊಂಡು ಮೇಕೆದಾಟು ಯೋಜನೆಯ ಕಾಮಗಾರಿಗೆ ಕೂಡಲೇ ಗುದ್ದಲಿ ಪೂಜೆ ನೆರವೇರಿಸಬೇಕು' ಎಂದು ಆಗ್ರಹಿಸಿದರು.

ಎಎಪಿ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಮಾತನಾಡಿ, 'ಮೇಕೆದಾಟು ಯೋಜನೆ ವಿಚಾರದಲ್ಲಿ ಕೇಂದ್ರ ಸರ್ಕಾರವು ತಮಿಳುನಾಡಿನ ಪರವಾಗಿದೆ ಎಂದು ಆ ರಾಜ್ಯದ ಬಿಜೆಪಿ ಮುಖಂಡರು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದರಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. 'ಡಬಲ್ ಎಂಜಿನ್' ಆಡಳಿತ ನೀಡುವುದಾಗಿ ಹೇಳಿದ್ದ ಬಿಜೆಪಿಯು ದ್ವಂದ್ವ ನಿಲುವು ಹೊಂದಿದೆ' ಎಂದು ಟೀಕಿಸಿದರು.

ಎಎಪಿ ಮಾಧ್ಯಮ ಸಂಚಾಲಕ ಜಗದೀಶ್ ಸದಂ ಮಾತನಾಡಿ, 'ಕಳೆದ ಎಪ್ಪತ್ತು ವರ್ಷಗಳಿಂದಲೂ ಕೇಂದ್ರ ಸರ್ಕಾರ ನೀರಾವರಿ ಯೋಜನೆಗಳಲ್ಲಿ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ. ತಮಿಳುನಾಡಿನ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ವಿನಾ ಕಾರಣ ಮೇಕೆದಾಟು ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಕರ್ನಾಟಕಕ್ಕೆ ದ್ರೋಹ ಬಗೆಯುತ್ತಿರುವ ಎರಡೂ ಪಕ್ಷಗಳಿಗೆ ರಾಜ್ಯದ ಜನ ತಕ್ಕಪಾಠ ಕಲಿಸಬೇಕು' ಎಂದು ಹೇಳಿದರು.

ಮೇಕೆದಾಟು ಯೋಜನೆ ಕಾಮಗಾರಿಗೆ ಒತ್ತಾಯಿಸಿ ನಗರದ ಮೌರ್ಯ ವೃತ್ತದ ಮಹಾತ್ಮ ಗಾಂಧಿ ಪ್ರತಿಮೆ ಎದುರು ಎಎಪಿ ಕಾರ್ಯಕರ್ತರು ಉಪವಾಸ ಸತ್ಯಾಗ್ರಹ ನಡೆಸಿದರು (ಎಡಚಿತ್ರ), ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಕೇಂದ್ರ ಸರ್ಕಾರ ತಕ್ಷಣವೇ ಒಪ್ಪಿಗೆ ನೀಡಲಿ: ಕಾಂಗ್ರೆಸ್

ಬೆಂಗಳೂರು: ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ತಕ್ಷಣ ಒಪ್ಪಿಗೆ ನೀಡಬೇಕು ಹಾಗೂ ಶಂಕುಸ್ಥಾಪನೆಗೆ ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಮತ್ತು ಈ ಯೋಜನೆಯನ್ನು ತಮಿಳುನಾಡಿನ ಬಿಜೆಪಿ ಘಟಕದ ಅಧ್ಯಕ್ಷ ಅಣ್ಣಾಮಲೈ ರಾಜಕೀಯ ಲಾಭಕ್ಕಾಗಿ ವಿರೋಧಿಸುತ್ತಿದ್ದಾರೆಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕಾವೇರಿ ನದಿ ನೀರಿನ ವಿಷಯದಲ್ಲಿ ಅನವಶ್ಯಕವಾಗಿ ತಮಿಳುನಾಡು ಅಪಪ್ರಚಾರ ಮಾಡುತ್ತಿದೆ. ವಾಸ್ತವಾಂಶದ ಮಾಹಿತಿ ಪಡೆಯದೆ ಅಲ್ಲಿನ ಪಕ್ಷಗಳು ರಾಜಕೀಯ ಲಾಭಕ್ಕಾಗಿ ನಿರಂತರವಾಗಿ ಕುಡಿಯುವ ನೀರಿನ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿವೆ. ಕೇಂದ್ರ ಸರ್ಕಾರ ಕೂಡಲೇ ಹಿಂದಿನ ಕಾಂಗ್ರೆಸ್ ಸರ್ಕಾರ ಸಿದ್ಧಪಡಿಸಿರುವ ಡಿಪಿಆರ್‌ಗೆ ಮಂಜೂರಾತಿ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಯೋಜನೆಯನ್ನು ಜಾರಿಗೆ ತರಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಜನಪರವಾದ ಈ ಯೋಜನೆಯನ್ನು ಕೂಡಲೇ ಜಾರಿಗೊಳಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಮೇಕೆದಾಟು ವಿಷಯದಲ್ಲಿ ಕೇವಲ ಪ್ರಚಾರಕ್ಕಾಗಿ ಧರಣಿಯ ನಾಟಕ ಆಡುತ್ತಿದ್ದಾರೆಂದು ಅಣ್ಣಾಮಲೈ ನಡೆ ಖಂಡಿಸಿ, ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಲಾಯಿತು. ಬೆಂಗಳೂರು ನಗರ ಕಾಂಗ್ರೆಸ್ ಘಟಕದ ಎಸ್.ಮನೋಹರ್, ಎ.ಎ. ಸಲೀಂ, ಜಿ. ಜನಾರ್ದನ್, ಎ. ಆನಂದ್, ಮಹೇಶ್, ಪುಟ್ಟರಾಜು, ಉಮೇಶ್, ಚಂದ್ರಶೇಖರ್, ಪ್ರಕಾಶ್ ಪ್ರಭಾಕರ್ ಇದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಭಾರತ ಸರ್ಕಾರ

'ಪ್ರಧಾನ ಮಂತ್ರಿ-ದಕ್ಷತೆ ಮತ್ತು ಕುಶಲತೆ ಸಂಪನ್ನ ಹಿತಗ್ರಾಹಿ (ಪಿಎಂ-ದಕ್ಷ್) ಯೋಜನೆ'

ಅಡಿಯಲ್ಲಿ ಉಚಿತ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳಿಗೆ ಆನ್‌ಲೈನ್ ನೋಂದಣಿ

18 ರಿಂದ 45 ವರ್ಷ ವಯೋಮಾನ ಒಳಗಿನ ಪರಿಶಿಷ್ಟ ಜಾತಿ (ಎಸ್‌ಸಿ), ಇತರ ಹಿಂದುಳಿದ ವರ್ಗಗಳ (ಒಬಿಸಿ), ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇಬಿಸಿ), ಡಿನೋಟಿಫೈಡ್, ಅಲೆಮಾರಿ, ಅರೆ ಅಲೆಮಾರಿ ಸಮುದಾಯದ (ಡಿಎನ್‌ಟಿ) ಮತ್ತು ಚಿಂದಿ ಆಯುವವರು ಹಾಗೂ ಅವರನ್ನು ಅವಲಂಬಿಸಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೌಶಲ್ಯಾಭಿವೃದ್ಧಿ/ಮರು-ಕೌಶಲೀಕರಣ, ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ, ಅಲ್ಪಾವಧಿ ಮತ್ತು ದೀರ್ಘಾವಧಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳಿಗಾಗಿ

ಆಸಕ್ತಿಯುಳ್ಳ ಅಭ್ಯರ್ಥಿಗಳು **pmdaksh.dosje.gov.in** ವೆಬ್‌ಸೈಟ್‌ನಲ್ಲಾಗಲಿ ಅಥವಾ ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲಾಗುವ **"ಪಿಎಂದಕ್ಷ್"** ಮೊಬೈಲ್ ಆ್ಯಪ್‌ನಲ್ಲಾಗಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಬಂಧಿತ ನಿಗಮಗಳ ವೆಬ್‌ಸೈಟ್ ಪರಿಶೀಲಿಸುವುದು.

ಅನುಷ್ಠಾನಗೊಳಿಸುವ ಸಂಸ್ಥೆಗಳು

ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ (ಎನ್‌ಎಸ್‌ಎಫ್‌ಡಿಸಿ)-ಪ.ಜಾ.ಗಾಗಿ
(ವೆಬ್‌ಸೈಟ್: https://www.nsfdc.nic.in ಇ-ಮೇಲ್: support-nsfdc@nic.in ಟೋಲ್ ಫ್ರೀ ನಂ.: 1800110396)

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ (ಎನ್‌ಬಿಸಿಎಫ್‌ಡಿಸಿ) -ಒಬಿಸಿ, ಇಬಿಸಿ ಮತ್ತು ಡಿಎನ್‌ಟಿ ಗಾಗಿ
(ವೆಬ್‌ಸೈಟ್: https://nbcfdc.gov.in ಇ-ಮೇಲ್: nbcfdc.skilltraining@gmail.com ಟೋಲ್ ಫ್ರೀ ನಂ.: 18001023399)

ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ (ಎನ್‌ಎಸ್‌ಕೆಎಫ್‌ಡಿಸಿ) -ಚಿಂದಿ ಆಯುವವರು ಮತ್ತು ಅವರ ಅವಲಂಬಿತರು ಸೇರಿದಂತೆ ಸಫಾಯಿ ಕರ್ಮಚಾರಿಗಳಿಗಾಗಿ
(ವೆಬ್‌ಸೈಟ್: www.nskfdc.nic.in ಇ-ಮೇಲ್: nskfdc-msje@nic.in ಫೋನ್: 011-26382476, 77, 78)

davp 38123/11/0002/2122

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ವೇದಪ್ರಕಾಶ್ ಎಂಬುವರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಶ್ರೀ. ಪಸುಪುಲೇಟಿ ಜನಿತ್ ಕುಮಾರ್ ರವರಿಂದ ಖರೀದಿಸಲು ಮಾರಾಟ ಒಪ್ಪಂದ ಮಾಡಿಕೊಂಡಿದ್ದು, ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಹಕ್ಕು, ಆಸಕ್ತಿ ಅಥವಾ ಇನ್ನಾವುದೇ ತಂಟೆ ತಕರಾರುಗಳಿದ್ದರೇ, ಈ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ, ದಾಖಲೆಗಳನ್ನು ಸಲ್ಲಿಸಬಹುದಾಗಿದೆ. ಸದರಿ ದಿನಾಂಕ ದೊಳಗೆ ಯಾವುದೇ ಆಕ್ಷೇಪಣೆ ಬರದಿದ್ದಲ್ಲಿ ನನ್ನ ಕಕ್ಷಿದಾರರು ಕ್ರಯದ ಪ್ರಕ್ರಿಯೆಯನ್ನು ಮುಂದು ವರಿಸುತ್ತಾರೆ. ತದನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

:ಷೆಡ್ಯೂಲ್:

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಬಿದರಗುಪ್ಪೆ ಗ್ರಾಮದ ವಸತಿ ಉದ್ದೇಶಕ್ಕೆ ಪರಿವರ್ತನೆಗೊಂಡ ಸರ್ವೆ ನಂ.324/3 ಮತ್ತು 323 ರಲ್ಲಿ ವಿಂಗಡಿಸಿರುವ ಸ್ವತ್ತಿನ ಸಂಖ್ಯೆ:ನಂ.1 ರಲ್ಲಿ ಕಟ್ಟಿರುವ "Celebrity Square" ಎಂಬ ಹೆಸರಿನಲ್ಲಿ ಕಟ್ಟಿರುವ ವಸತಿ ಸಂಕೀರ್ಣದ Block-"B" ನಲ್ಲಿರುವ 5ನೇ ಮಹಡಿಯ Flat No.B-515, ಖಾತೆ ಸಂಖ್ಯೆ: 604/1/B-515 & ಸ್ವತ್ತಿನ I.D.No. 150200100200121456 ಆಗಿದ್ದು ಈ ಸ್ವತ್ತಿನ ಚಕ್ಕುಬಂದಿ: **East by : Open Space, West by : Passage, North by : Flat No.B-516, South by : Open Space.**

M.S.VISHWANATHA, ADVOCATE, No.1795, 2nd Floor, 40th 'A' Cross, 9th Block, Jayanagar, BANGALORE-560 069, Mob:9844704705

ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂದಾಯಿತ ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಜಿನೆಸ್ ಪಾರ್ಕ್, ಗಣಪತರಾವ್ ಕದಂ ಮಾರ್ಗ, ಲೋವರ್ ಪರೇಲ್, ಮುಂಬೈ-400013. ಸಿಐಎನ್ ನಂ. U67190MH2008PLC187552.
ಶಾಖಾ ಕಚೇರಿ ವಿಳಾಸ: 2ನೇ ಮಹಡಿ, ಪ್ರೆಸ್ಟೀಜ್ ಕ್ರೋನಿಕ್ ನಂ. 62, ರಿಚ್ಮಂಡ್ ರಸ್ತೆ, ಬೆಂಗಳೂರು-560025

ಸ್ವಾಧೀನತಾ ಪ್ರಕಟಣೆ

(ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ರ ನಿಯಮ 8(1) ರೊಂದಿಗೆ ಅನುಬಂಧ 4 ಓದಿಕೊಂಡಂತಿನ ಪ್ರಕಾರ)

ಅದಾಗ್ಯೂ, ಈ ಕೆಳಗೆ ಸಹಿ ಹಾಕಿರುವ **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯು, ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 9 ಅನ್ನು ಸೆಕ್ಷನ್ 13(2) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸಾಲಗಾರರು ಮತ್ತು ಸಹ-ಸಾಲಗಾರರು/ಜಾಮೀನುದಾರರು ಆಗಿರುವ 1) **ಚಲಪತಿ ರಾವ್ ಜಿ** ಬಿನ್ ಗುನ್ನಾಳ ಯರ್ರಯ್ಯ ನಂ.81, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ದೇವಸ್ಥಾನದ ಹತ್ತಿರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು-560090 (ಕರ್ನಾಟಕ) ಮತ್ತು **ಇನ್ನೊಂದು ವಿಳಾಸ**: ಮ.ನಂ.07, ಪಿಐಡಿ ನಂ. 012, ಡಬ್ಲ್ಯು0405 2, ಖಾತಾ ನಂ. 129/7, ಸರ್ವೆ ನಂ. 16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ-560090 (ಕರ್ನಾಟಕ) 2) **ರಕ್ಷಾ ಕ್ರಿಯೇಶನ್ಸ್ ಪ್ರತಿನಿಧಿಸುವವರು ಶ್ರೀ. ಚಲಪತಿರಾವ್ ಜಿ** ನಂ.81, ಅಬ್ಬಿಗೆರೆ ಮುಖ್ಯರಸ್ತೆ, ಅಬ್ಬಿಗೆರೆ ಕಾಲೋನಿ, 2ನೇ ಮಹಡಿ, ನೀಲಮ್ಮ ಯೆರಯ್ಯ ಬಿಲ್ಡಿಂಗ್, ಬೆಂಗಳೂರು-560090 (ಕರ್ನಾಟಕ) 3) **ನರೇಶ್‌ಕುಮಾರ್** ಬಿನ್ ಗುನ್ನಾಳ ಯರ್ರಯ್ಯ ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ದೇವಸ್ಥಾನದ ಹತ್ತಿರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು-560090 **ಮತ್ತೊಂದು ವಿಳಾಸ**: ಮ.ನಂ.07, ಪಿಐಡಿ ನಂ.012, ಡಬ್ಲ್ಯು0405 2, ಖಾತಾ ನಂ.129/7, ಸರ್ವೆ ನಂ.16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ-560090 (ಕರ್ನಾಟಕ) 4) **ಶ್ರೀಮತಿ. ಕುಮಾರಿ ಕೋಂ. ಚಲಪತಿರಾವ್ ಜಿ** ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ದೇವಸ್ಥಾನದ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು-560090 ಮತ್ತು **ಇನ್ನೊಂದು ವಿಳಾಸ**: ಮ.ನಂ.07, ಪಿಐಡಿ ನಂ.012, ಡಬ್ಲ್ಯು0405 2, ಖಾತಾ ನಂ.129/7, ಸರ್ವೆ ನಂ.16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ-560090 (ಕರ್ನಾಟಕ) 5) **ರಘು ಯರ್ರಯ್ಯ** ಬಿನ್ ಗುನ್ನಾಳ ಯರ್ರಯ್ಯ, ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ದೇವಸ್ಥಾನದ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು-560090 ಮತ್ತು **ಇನ್ನೊಂದು ವಿಳಾಸ**: ಮ.ನಂ.07, ಪಿಐಡಿ ನಂ.012, ಡಬ್ಲ್ಯು0405 2, ಖಾತಾ ನಂ. 129/7, ಸರ್ವೆ ನಂ.16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ-560090 (ಕರ್ನಾಟಕ) 6) **ಶ್ರೀಮತಿ. ದೇವಿಕಾ ಜಿ ಆರ್** ನಂ. 75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ದೇವಸ್ಥಾನದ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು-560090 7) **ಶ್ರೀಮತಿ. ಕನ್ನಿಕಾ ಚಿಡಾ** ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ದೇವಸ್ಥಾನದ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು-560090 ಇವರುಗಳಿಗೆ ದಿನಾಂಕ 21/05/2021 ರಂದು ಡಿಮಾಂಡ್ ನೋಟಿಸ್ ಹೊರಡಿಸಿದ್ದರು ಮತ್ತು ಸದರಿ ನೋಟಿಸ್ ದಿನಾಂಕದಿಂದ 60 ದಿನಗಳೊಳಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ಬಾಕಿಮೊತ್ತ **ರೂ. 59,65,172/- (ರೂಪಾಯಿ ಐವತ್ತೊಂಬತ್ತು ಲಕ್ಷ ಅರವತ್ತೈದು ಸಾವಿರದ ಒಂದು ನೂರ ಎಪ್ಪತ್ತೆರಡು ಮಾತ್ರ)** ಮೊಬಲಗನ್ನು ಬಡ್ಡಿ ಹಾಗೂ ಅನ್ವಯಿಕ ದಂಡ ಬಡ್ಡಿಶುಲ್ಕ, ಇತರೆ ಖರ್ಚು ವೆಚ್ಚ ಮುಂತಾದವುಗಳನ್ನು ಮರುಪಾವತಿಸಬೇಕೆಂದು ಕರೆ ನೀಡಿದ್ದರು.

ಅದಾಗ್ಯೂ, ಸಾಲಗಾರರು ಸದರಿ ಬಾಕಿಮೊತ್ತವನ್ನು ಮರುಪಾವತಿಸಲು ವಿಫಲಾಗಿದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ತಿಳಿಸುವುದು ಏನೆಂದರೆ, ಈ ಕೆಳಗೆ ಸಹಿ ಹಾಕಿರುವವರು ಸದರಿ ನಿಯಮಗಳ ನಿಯಮ 9 ರೊಂದಿಗೆ ಸದರಿ ಕಾಯ್ದೆಯ ಸೆಕ್ಷನ್ 13(4) ಅನ್ನು ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳನ್ನ ಚಲಾಯಿಸುವ ಮೂಲಕ, ಈ ಕೆಳಗೆ ವಿವರಿಸಲಾಗಿರುವ ಸ್ವತ್ತನ್ನು 05/08/2021 ರಂದು ತಮ್ಮ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ.

ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಸದರಿ ಸ್ವಾಧೀನ ಸ್ವತ್ತುಗಳೊಂದಿಗೆ ಯಾವುದೇ ವ್ಯವಹಾರ ಮಾಡತಕ್ಕದ್ದಲ್ಲ, ಅದಾಗ್ಯೂ ವ್ಯವಹರಿಸಿದಲ್ಲಿ ಅಂತಹ ವಹಿವಾಟು ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ ರವರಿಗೆ ಸಂದಾಯ ಆಗಬೇಕಿರುವ, 21/05/2021 ರಂತೆಗಿನ ಬಾಕಿಮೊತ್ತ **ರೂ. 59,65,172/- (ರೂಪಾಯಿ ಐವತ್ತೊಂಬತ್ತು ಲಕ್ಷ ಅರವತ್ತೈದು ಸಾವಿರದ ಒಂದು ನೂರ ಎಪ್ಪತ್ತೆರಡು ಮಾತ್ರ)** ಮೊಬಲಗು + ಅನ್ವಯಿಕ ಬಡ್ಡಿ ಮತ್ತು ದಂಡದ ಬಡ್ಡಿ, ಇನ್ನಿತರ ಖರ್ಚು, ವೆಚ್ಚ, ಶುಲ್ಕ ಇತ್ಯಾದಿಗಳ ನಿಬಂಧನೆಗೆ ಒಳಡುತ್ತದೆ.

ಸ್ವತ್ತಿನ ಷೆಡ್ಯೂಲ್-ಎ: ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ವಿಳಾಸದಲ್ಲಿರುವ, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ, ಸೈಟ್ ನಂ.07, ಖಾತಾ ನಂ.129/07 ಹೊಂದಿರುವ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ **ಸ್ವತ್ತಿನ ಚಕ್ಕುಬಂದಿ**: ಪೂರ್ವಕ್ಕೆ: ಶ್ರೀನಿವಾಸುಲುರವರ ನಿವೇಶನ; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ಶ್ರೀಮತಿ. ಗಂಗಮ್ಮನವರ ಸ್ವತ್ತು. ವಿಸ್ತೀರ್ಣ: ಪೂರ್ವ-ಪಶ್ಚಿಮ: 40 ಅಡಿ ಮತ್ತು ಉತ್ತರ-ದಕ್ಷಿಣ: 30 ಅಡಿ ಒಟ್ಟಾರೆ ಜಿಎಫ್+ಎಫ್‌ಎಫ್+ಎಸ್‌ಎಫ್ ಸೇರಿದಂತೆ ವಿಸ್ತೀರ್ಣ 1200 ಚ.ಅ.

ಸ್ಥಳ: ಬೆಂಗಳೂರು
ದಿನಾಂಕ: 06-08-2021

ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್
ದೂರವಾಣಿ ಸಂ.: 9030001897/9866577659

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ - 560095, ಭಾರತ,
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com
www.teamleasegroup.com

ಇಪ್ಪತ್ತೊಂದನೇ (21ನೇ) ವಾರ್ಷಿಕ ಸರ್ವಸದಸ್ಯರ ಸಭೆ, ರಿಮೋಟ್ ಇ-ವೋಟಿಂಗ್ ವಿವರಗಳು ಮತ್ತು ಅಂತಿಮ ದಿನಾಂಕದ ಸೂಚನೆ

1) ಸುತ್ತೋಲೆ ಸಂ. 20/2020 ದಿನಾಂಕ ಮೇ 05, 2020 ಈ ಸಾಮಾನ್ಯ ಸುತ್ತೋಲೆಯನ್ನು ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ (MCA) ಹೊರಡಿಸಿರುವ ಏಪ್ರಿಲ್ 08, 2020, ಏಪ್ರಿಲ್ 13, 2020 ಮತ್ತು ಜನವರಿ 13, 2021 ದಿನಾಂಕಗಳ ಸಾಮಾನ್ಯ ಸುತ್ತೋಲೆಗಳಾದ 14/2020, 17/2020 & 02/2021 ಜೊತೆ, ಕಂಪನಿಗಳ ಅಧಿನಿಯಮ, 2013 ರಲ್ಲಿನ ಅನ್ವಯವಾಗುವ ಇತರ ಪ್ರಾವಧಾನಗಳ ಜೊತೆ ಓದಿ ಅರ್ಥೈಸಿಕೊಂಡ ಪ್ರಕಾರ ಟೀಂಲೀಸ್ ಸರ್ವೀಸಸ್ ಲಿಮಿಟೆಡ್ (ಕಂಪನಿ) ಜುಲೈ 28, 2021 ದಿನಾಂಕದ ತನ್ನ ಎಜಿಎಮ್ ಸೂಚನೆಯಲ್ಲಿ (ಸೂಚನೆ) ಸ್ಪಷ್ಟವಾಗಿ ತಿಳಿಸಿರುವಂತಹ ವ್ಯವಹಾರಗಳನ್ನು ನಡೆಸಲು, ತನ್ನ ಇಪ್ಪತ್ತೊಂದನೆಯ (21ನೇ) ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) ಶುಕ್ರವಾರ, ಸೆಪ್ಟೆಂಬರ್ 03, 2021 ರಂದು ಭಾ.ಕಾ. ಮಧ್ಯಾಹ್ನ 03.00ಕ್ಕೆ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ-ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲಿದೆ ಎಂದು ಈ ಮೂಲಕ ಕಂಪನಿಯ ಹಿತಾಸಕ್ತಿದಾರರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.

2) ಮೇಲೆ ಹೇಳಿರುವಂತಹ MCA ಸುತ್ತೋಲೆಗಳ ಮತ್ತು SEBI ಸುತ್ತೋಲೆ ಸಂ. SEBI/HO/CFD/CMD1/CIR/P/2020/79 ದಿನಾಂಕ ಮೇ 12, 2020 ಮತ್ತು ಸುತ್ತೋಲೆ ಸಂ. SEBI/HO/CFD/CMD2/CIR/P/2021/11 ದಿನಾಂಕ ಜನವರಿ 15, 2021 (ಇನ್ನು ಮುಂದೆ 'ಸದರಿ ಸುತ್ತೋಲೆಗಳು' ಎಂದು ಉಲ್ಲೇಖಿಸಲಾಗುತ್ತದೆ) ಪ್ರಕಾರ, ಯಾರೆಲ್ಲ ಶೇರುದಾರರು ತಮ್ಮ ಇಮೇಲ್ ಐಡಿ ಗಳನ್ನು ರಿಜಿಸ್ಟ್ರಾರ್ ಮತ್ತು ಶೇರು ವರ್ಗಾವಣೆ ಮಧ್ಯವರ್ತಿಗಳ/ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟರ ಜೊತೆ ನೋಂದಾಯಿಸಿಕೊಂಡಿರುವರೋ ಮತ್ತು ಯಾರೆಲ್ಲರ ಹೆಸರುಗಳು ಜುಲೈ 30, 2021 ರಂದು (ಅಂತಿಮ ದಿನಾಂಕದಂದು) ಸದಸ್ಯರ ರಿಜಿಸ್ಟರಿನಲ್ಲಿ/ಫಲಾನುಭವಿ ಮಾಲಿಕರ ಪಟ್ಟಿಯಲ್ಲಿ ಕಂಡುಬರುತ್ತವೆಯೋ ಅಂತಹ ಶೇರುದಾರರಿಗೆಲ್ಲ ಎಜಿಎಮ್ ಸೂಚನೆ ಮತ್ತು 2020-21 ವಿತ್ತೀಯ ವರ್ಷದ ವಾರ್ಷಿಕ ವರದಿಗಳ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಕಂಪನಿಯು ಎಜಿಎಮ್ ಸೂಚನೆ ಮತ್ತು 2020-21 ವಿತ್ತೀಯ ವರ್ಷದ ವಾರ್ಷಿಕ ವರದಿಗಳ ವಿದ್ಯುನ್ಮಾನ ಪ್ರತಿಗಳನ್ನು ಇಲೆಕ್ಟ್ರಾನಿಕ್ ವಿದ್ಯುನ್ಮಾನದ ಮೂಲಕ ರವಾನಿಸುವ ಕೆಲಸವನ್ನು ಆಗಸ್ಟ್ 05, 2021 ರಂದು ಪೂರ್ಣಗೊಳಿಸಿದೆ.

3) ಕಂಪನಿಗಳ ಅಧಿನಿಯಮ, 2013 ರ 108ನೇ ಕಲಮು, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ರ 20ನೇ ನಿಯಮ, ಇದರ ಬದಲಿಗಿರುವ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ತಿದ್ದುಪಡಿ, 2015 ಮತ್ತು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ಮತ್ತು ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆ ನೀಡಿರುವ ಸೆಕ್ರೆಟೇರಿಯಲ್ ಸ್ಟಾಂಡರ್ಡ್ ಅನ್ವಯ ಅಂತಿಮ ದಿನಾಂಕವಾದ ಆಗಸ್ಟ್ 27, 2021 ರಂದು ಭೌತಿಕ ಅಥವಾ ಡೀಮ್ಯಾಟ್ ಸ್ವರೂಪದಲ್ಲಿ ಶೇರುಗಳನ್ನು ಹೊಂದಿರುವ ಶೇರುದಾರರು ಎಜಿಎಮ್ ರಿಮೋಟ್ ಇ-ವೋಟಿಂಗ್ ಸ್ಥಳದಿಂದ ಸೂಚನೆಯಲ್ಲಿ ಹೇಳಿರುವಂತಹ ಎಲ್ಲ ನಿರ್ಣಯಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸಬಹುದು. ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಮುಂಚೆ ಕಾರ್ವಿ ಫಿನ್‌ಟೆಕ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು) (KFintech) ಸೇವೆಗಳನ್ನು ನಿಯೋಜಿಸಿಕೊಂಡಿದೆ. ಎಲ್ಲ ಶೇರುದಾರರಿಗೂ ಈ ಮೂಲಕ ತಿಳಿಸುವುದೇನೆಂದರೆ:

i) ಈ ಕೆಳಗಿನ ವೋಟಿಂಗ್ ಅವಧಿಯಲ್ಲಿ ಮಾತ್ರವೇ ಇ-ವೋಟಿಂಗ್ ಸೌಲಭ್ಯ ಇರುತ್ತದೆ:

ಇ-ವೋಟಿಂಗ್ ಪ್ರಾರಂಭ	ಇ-ವೋಟಿಂಗ್ ಮುಕ್ತಾಯ
ಆಗಸ್ಟ್ 31, 2021 ಭಾ.ಕಾ. ಬೆಳಗ್ಗೆ 09.00	**ಸೆಪ್ಟೆಂಬರ್ 02, 2021 ಭಾ.ಕಾ. ಸಂಜೆ 05.00**

ii) ವಿದ್ಯುನ್ಮಾನ ವಿಧಾನದಲ್ಲಿ ಅಥವಾ ಎಜಿಎಮ್‌ನಲ್ಲಿ ಮತದಾನದ ಅರ್ಹತೆಯನ್ನು ನಿರ್ಧರಿಸಲು ಅಂತಿಮ ದಿನಾಂಕ: ಆಗಸ್ಟ್ 27, 2021

iii) ಸೆಪ್ಟೆಂಬರ್ 02, 2021ರಂದು ಸಂಜೆ 05.00 (ಭಾ.ಕಾ.) ನಂತರ ರಿಮೋಟ್ ಇ-ವೋಟಿಂಗ್ ಮಾಡ್ಯೂಲನ್ನು ಕಾರ್ವಿಯು ತೆಗೆದುಬಿಡುತ್ತದೆ ಮತ್ತು ಶೇರುದಾರರು ನಿರ್ಣಯವೊಂದರ ಮೇಲೆ ತಮ್ಮ ಮತವನ್ನು ಚಲಾಯಿಸಿದ ನಂತರ ಅದನ್ನು ಮತ್ತೆ ಬದಲಾಯಿಸಲು ಅವಕಾಶವಿರುವುದಿಲ್ಲ.

iv) ಎಜಿಎಮ್‌ನಲ್ಲಿ ಇ-ವೋಟಿಂಗ್‌ಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.

v) 'ಎಜಿಎಮ್'ಗೂ ಮೊದಲೇ ತಮ್ಮ ಮತವನ್ನು ಚಲಾಯಿಸಿರುವ ಶೇರುದಾರರೂ 'ಎಜಿಎಮ್'ನಲ್ಲಿ ಭಾಗವಹಿಸಬಹುದು ಆದರೆ ಮತ್ತೊಮ್ಮೆ ಮತ ಚಲಾಯಿಸುವ ಹಕ್ಕು ಅವರಿಗೆ ಇರುವುದಿಲ್ಲ.

vi) ಅಂತಿಮ ದಿನಾಂಕದಂದು ಸದಸ್ಯರ ರಿಜಿಸ್ಟರಿನಲ್ಲಿ ಅಥವಾ ಡಿಪಾಸಟಿರಿಗಳು ನಿರ್ವಹಿಸುತ್ತಿರುವ ಫಲಾನುಭವಿ ಮಾಲಿಕರ ರಿಜಿಸ್ಟರಿನಲ್ಲಿ ಹೆಸರಿರುವಂತಹ ವ್ಯಕ್ತಿಯು ಮಾತ್ರವೇ ರಿಮೋಟ್ ವೋಟಿಂಗ್ ಮತ್ತು ಎಜಿಎಮ್‌ನಲ್ಲಿರುವ ಇ-ವೋಟಿಂಗ್ ಸೌಲಭ್ಯಕ್ಕೆ ಅರ್ಹನಾಗಿರುತ್ತಾನೆ.

vii) ಇಲೆಕ್ಟ್ರಾನಿಕ್ ವೋಟಿಂಗ್ ಪ್ರಕ್ರಿಯೆ ನ್ಯಾಯೋಚಿತವಾಗಿ ಮತ್ತು ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಲು ಕಂಪನಿಯು ಶ್ರೀ ಮುಖೇಶ್ ಸಿರೋಯ, ಎಂ ಸಿರೋಯ ಮತ್ತು ಕಂಪನಿ, ಕಂಪನಿ ಸೆಕ್ರೆಟರಿಗಳು, ವೃತ್ತಿಪರ ಕಂಪನಿ ಸೆಕ್ರೆಟರಿಗಳು (FCS: 5682, COP:4157), ಮುಂಬೈ, ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿದೆ.

viii) ಒಂದು ವೇಳೆ ಯಾವುದೇ ವ್ಯಕ್ತಿಯು ಎಜಿಎಮ್ ಸೂಚನೆಯನ್ನು ರವಾನಿಸಿದ ಬಳಿಕ ಆದರೆ ಇ-ವೋಟಿಂಗ್‌ನ ನಿರ್ಧರಿಸುವ ದಿನಾಂಕದಂದು ಎಂದರೆ ಶುಕ್ರವಾರ, ಆಗಸ್ಟ್ 27, 2021 ರಂದು, ಅಥವಾ ಅದರ ಒಳಗೆ ಕಂಪನಿಯ ಸದಸ್ಯನಾಗಿದ್ದರೆ ಅಂತಹ ವ್ಯಕ್ತಿಯು ನಿಶುಲ್ಕ ಸಂಖ್ಯೆ 1-800-309-4001 ಮೂಲಕ ಕೆಫಿನ್‌ಟೆಕ್ ಕಂಪನಿಯನ್ನು ಸಂಪರ್ಕಿಸಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳನ್ನು ಪಡೆದುಕೊಳ್ಳಬಹುದು, ಅಥವಾ ಅಂತಹ ಸದಸ್ಯರು einward.ris@kfintech.com ಗೆ ತಮ್ಮ ಕೋರಿಕೆಯನ್ನು ಇಮೇಲ್ ಮಾಡಬಹುದು.

4) ಸದರಿ ಸೂಚನೆ ಮತ್ತು ವಾರ್ಷಿಕ ವರದಿ ಜೊತೆಗೆ VC/OAVM ಮೂಲಕ ಎಜಿಎಮ್ ನಲ್ಲಿ ಭಾಗವಹಿಸುವುದಕ್ಕೆ ಸೂಚನೆಗಳು ಮತ್ತು ಇ-ವೋಟಿಂಗ್‌ಗೆ ಸಂಬಂಧಪಟ್ಟ ಸೂಚನೆಗಳು ಕಂಪನಿಯ ವೆಬ್‌ಸೈಟ್ www.teamleasegroup.com ಮತ್ತು ಕೆಫಿನ್ ವೆಬ್‌ಸೈಟ್ https://evoting.kfintech.com ಗಳಲ್ಲಿ ಲಭ್ಯವಿರುತ್ತವೆ.

5) ಇಲೆಕ್ಟ್ರಾನಿಕ್ ವೋಟಿಂಗ್ ಬಗ್ಗೆ ಏನಾದರೂ ಪ್ರಶ್ನೆಗಳಿದ್ದರೆ ಮತ್ತು/ಯಾ ದೂರುದುಮ್ಮಾನಗಳಿದ್ದರೆ ಶೇರುದಾರರು ಕಾರ್ವಿ ವೆಬ್‌ಸೈಟ್ https://evoting.karvy.com (KFintech Website) ನಲ್ಲಿರುವ 'ಸಹಾಯ ಮತ್ತು ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು' (FAQs) ವಿಭಾಗವನ್ನು ಮತ್ತು ಅಲ್ಲೇ ಡೌನ್‌ಲೋಡ್ ವಿಭಾಗದಲ್ಲಿರುವ ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಪರಾಮರ್ಶಿಸಬಹುದು ಅಥವಾ ಕೆಫಿನ್‌ಟೆಕ್, ಕಾರ್ವಿ ಸೆಲೆನಿಯಮ್ ಟವರ್ ಬಿ, ಪ್ಲಾಟ್ 31-32, ಗಚ್ಚಿಬೌಲಿ, ಫೈನಾನ್ಷಲ್ ಡಿಸ್ಟ್ರಿಕ್ಟ್, ನಾನಾಕ್ರಮಗುಡ, ಹೈದರಾಬಾದ್-500032 ಕಂಪನಿಯ ರಜಿತಾ ಚೊಲ್ಲೇಟಿ/ ಪ್ರೇಮಕುಮಾರ್ ನಾಯರ್ (ಯೂನಿಟ್: ಟೀಂಲೀಸ್ ಸರ್ವೀಸಸ್ ಲಿಮಿಟೆಡ್) ಇವರನ್ನು ಅಥವಾ einward.ris@karvy.com ವೆಬ್‌ಸೈಟ್ ಮೂಲಕ ಅಥವಾ ದೂರವಾಣಿ ಸಂಖ್ಯೆ 1- 800-309-4001 ಅಥವಾ ಕೆಫಿನ್‌ಟೆಕ್‌ನ ಶುಲ್ಕರಹಿತ ಸಂಖ್ಯೆ 1- 800-309-4001 ಮೂಲಕ ಸಂಪರ್ಕಿಸಿ ಸ್ಪಷ್ಟೀಕರಣಗಳನ್ನು ಪಡೆದುಕೊಳ್ಳಬಹುದು.

6) VC/OAVM ಸೌಲಭ್ಯದ ಮೂಲಕ ಎಜಿಎಮ್ ನಲ್ಲಿ ಭಾಗವಹಿಸಲು ತಾಂತ್ರಿಕ ನೆರವು ಅಥವಾ ಐಟಿ ನೆರವು ಅಗತ್ಯವಿರುವ ಶೇರುದಾರರು ಸಂಪರ್ಕಿಸಬಹುದು: ಕೆಫಿನ್‌ಟೆಕ್‌ನ ಶುಲ್ಕರಹಿತ ಸಂಖ್ಯೆ 1- 800-309-4001.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/-
ಅಲಕಾ ಚಂದ
ಕಂಪನಿ ಕಾರ್ಯದರ್ಶಿ ಮತ್ತು ಅನುವರ್ತನಾ ಅಧಿಕಾರಿ
(M. No. F10911)

ದಿನಾಂಕ: **ಆಗಸ್ಟ್ 05, 2021**
ಸ್ಥಳ: **ಬೆಂಗಳೂರು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ (ವಿದ್ಯುತ್),
ಯಲಹಂಕ ವಲಯ, ಬ್ಯಾಟರಾಯನಪುರ, ಬೆಂಗಳೂರು - 560 092.
ಸಂಖ್ಯೆ: ಬೃಬೆಂಮಪಾ/ಕಾಪಾಅ/ವಿ/ಯವ/ಪಿಆರ್/119/2021-22 ದಿನಾಂಕ: 04.08.2021

ತಿದ್ದುಪಡಿ-2

ವಿಷಯ: ಟೆಂಡರ್ ಬಿಡ್ಸ್ ಸಲ್ಲಿಸುವ ಮತ್ತು ತೆರೆಯುವ ದಿನಾಂಕಗಳ ತಿದ್ದುಪಡಿ ಪ್ರಕಟಣೆ.

ಉಲ್ಲೇಖ: ಟೆಂಡರ್ ಪ್ರಕಟಣೆ ಸಂ: ಕಾಪಾಅ/ವಿದ್ಯುತ್/ಯವ/ಟೆಂಡರ್/01/2021-22, ದಿನಾಂಕ: 03.06.2021

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಟೆಂಡರ್ ಬಿಡ್ ಕಾಮಗಾರಿಗಳ ಸಲ್ಲಿಸುವ ಮತ್ತು ತೆರೆಯುವ ದಿನಾಂಕಗಳ ತಿದ್ದುಪಡಿ ಪ್ರಕಟಣೆ. ಅದರಂತೆ ಮಾರ್ಪಾಡಾದ ದಿನಾಂಕಗಳನ್ನು ಈ ಕೆಳಕಂಡಂತೆ ಓದಿಕೊಳ್ಳುವುದು.

ನಿಗದಿಪಡಿಸಿದ್ದ ದಿನಾಂಕ	ಮಾರ್ಪಾಡಾದ ದಿನಾಂಕ
ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 06.08.2021 ರ ಸಂಜೆ 4:00 ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ. ಮತ್ತು ತಾಂತ್ರಿಕ ಬಿಡ್/ಟೆಂಡರ್‌ಗಳನ್ನು ತೆರೆಯುವ ದಿನಾಂಕ 09.08.2021ರ ಸಂಜೆ 4:00 ಗಂಟೆಗೆ.	ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 30.08.2021 ರ ಸಂಜೆ 4:00 ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ. ಮತ್ತು ತಾಂತ್ರಿಕ ಬಿಡ್/ಟೆಂಡರ್‌ಗಳನ್ನು ತೆರೆಯುವ ದಿನಾಂಕ 01.09.2021ರ ಸಂಜೆ 4:00 ಗಂಟೆಗೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ವಿದ್ಯುತ್ ವಿಭಾಗ, ಯಲಹಂಕ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂದಾಯಿತ ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಜಿನೆಸ್ ಪಾರ್ಕ್, ಗಣಪತರಾವ್ ಕದಂ ಮಾರ್ಗ, ಲೋವರ್ ಪರೇಲ್, ಮುಂಬೈ-400013. ಸಿಐಎನ್ ನಂ. U67190MH2008PLC187552.
ಶಾಖಾ ಕಚೇರಿ ವಿಳಾಸ: 2ನೇ ಮಹಡಿ, ಪ್ರೆಸ್ಟೀಜ್ ಕ್ರೋನಿಕ್ ನಂ. 62, ರಿಚ್ಮಂಡ್ ರಸ್ತೆ, ಬೆಂಗಳೂರು-560025

ಸ್ವಾಧೀನತಾ ಪ್ರಕಟಣೆ

(ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ರ ನಿಯಮ 8(1) ರೊಂದಿಗೆ ಅನುಬಂಧ 4 ಓದಿಕೊಂಡಂತಿನ ಪ್ರಕಾರ)

ಅದಾಗ್ಯೂ, ಈ ಕೆಳಗೆ ಸಹಿ ಹಾಕಿರುವ **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯು, ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 9 ಅನ್ನು ಸೆಕ್ಷನ್ 13(2) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸಾಲಗಾರರು ಮತ್ತು ಸಹ-ಸಾಲಗಾರರು/ಜಾಮೀನುದಾರರು ಆಗಿರುವ 1) **ಗಿರಿಜಾ ಎಂಟರ್‌ಪ್ರೈಸಸ್ ಪ್ರತಿನಿಧಿಸುವ ಪಾಲುದಾರರು ಶ್ರೀ. ರಾಮಕೃಷ್ಣ ಶ್ರೀನಿವಾಸ** ನಂ.8, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟ್, ಬೆಂಗಳೂರು-560018 (ಕರ್ನಾಟಕ) 2) **ಗಿರಿಜಾ ಎಂಟರ್‌ಪ್ರೈಸಸ್ ಪ್ರತಿನಿಧಿಸುವ ಪಾಲುದಾರರು ಶ್ರೀಮತಿ. ಶ್ರೀನಿವಾಸ** ಗಿರಿಜಾ ನಂ.8, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟ್, ಬೆಂಗಳೂರು-560018 (ಕರ್ನಾಟಕ) 3) **ಗಿರಿಜಾ ಎಂಟರ್‌ಪ್ರೈಸಸ್ ಪ್ರತಿನಿಧಿಸುವ ಪಾಲುದಾರರು ಶ್ರೀ. ಶಶಾಂಕ್ ಶ್ರೀನಿವಾಸ** ನಂ.8, ಅಪ್ಪಜಪ್ಪ ಅಗ್ರಹಾರ, ಚಾಮರಾಜಪೇಟ್, ಬೆಂಗಳೂರು-560018 (ಕರ್ನಾಟಕ) 4) **ಶ್ರೀ. ರಾಮಕೃಷ್ಣ ಶ್ರೀನಿವಾಸ ಬಿನ್ ರಾಮಕೃಷ್ಣ** ನಂ.8, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟ್, ಬೆಂಗಳೂರು-560018 ಮತ್ತು **ಇನ್ನೊಂದು ವಿಳಾಸ**: ನಂ.10, ಚಾಮರಾಜಪೇಟ್ ಸೈಟ್ ನಂ.10 (ಹಳೆಯ:227) 1ನೇ ಅಡ್ಡರಸ್ತೆ, ಚಾಮರಾಜಪೇಟ್, ಕಾರ್ಪೋರೇಶನ್ ಡಿವಿಜನ್ ನಂ.42, (ಹಳೆಯ ನಂ.42-ಡಿ), ಬೆಂಗಳೂರು-560018 (ಕರ್ನಾಟಕ) 5) **ಶ್ರೀಮತಿ. ಶ್ರೀನಿವಾಸ ಗಿರಿಜಾ** ಕೋಂ. ಶ್ರೀ. ರಾಮಕೃಷ್ಣ ಶ್ರೀನಿವಾಸ ನಂ.8, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟ್, ಬೆಂಗಳೂರು-560018 ಮತ್ತು ಇನ್ನೊಂದು ವಿಳಾಸ: ನಂ.10, ಚಾಮರಾಜಪೇಟ್ ಸೈಟ್ ನಂ.10 (ಹಳೆಯ:227) 1ನೇ ಅಡ್ಡರಸ್ತೆ, ಚಾಮರಾಜಪೇಟ್, ಕಾರ್ಪೋರೇಶನ್ ಡಿವಿಜನ್ ನಂ.42, (ಹಳೆಯ ನಂ.41-ಡಿ), ಬೆಂಗಳೂರು-560018 (ಕರ್ನಾಟಕ) 6) **ಶ್ರೀ. ಶಶಾಂಕ್ ಶ್ರೀನಿವಾಸ ಬಿನ್ ಶ್ರೀನಿವಾಸ ರಾಮಕೃಷ್ಣಪ್ಪ** ನಂ.8, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟ್, ಬೆಂಗಳೂರು-560018 ಇವರುಗಳಿಗೆ ದಿನಾಂಕ 21/05/2021 ರಂದು ಡಿಮಾಂಡ್ ನೋಟಿಸ್ ಹೊರಡಿಸಿದ್ದರು ಮತ್ತು ಸದರಿ ನೋಟಿಸ್ ದಿನಾಂಕದಿಂದ 60 ದಿನಗಳೊಳಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ಬಾಕಿಮೊತ್ತ **ರೂ. 2,45,54,008.59/- (ರೂಪಾಯಿ ಎರಡು ಕೋಟಿ ನಲವತ್ತೈದು ಲಕ್ಷ ಐವತ್ನಾಲ್ಕು ಸಾವಿರದ ಎಂಟು ಮತ್ತು ಐವತ್ತೊಂಬತ್ತು ಪೈಸೆ ಮಾತ್ರ)** ಮೊಬಲಗನ್ನು ಬಡ್ಡಿ ಹಾಗೂ ಅನ್ವಯಿಕ ದಂಡ ಬಡ್ಡಿಶುಲ್ಕ, ಇತರೆ ಖರ್ಚು ವೆಚ್ಚ ಮುಂತಾದವುಗಳನ್ನು ಮರುಪಾವತಿಸಬೇಕೆಂದು ಕರೆ ನೀಡಿದ್ದರು.

ಅದಾಗ್ಯೂ, ಸಾಲಗಾರರು ಸದರಿ ಬಾಕಿಮೊತ್ತವನ್ನು ಮರುಪಾವತಿಸಲು ವಿಫಲಾಗಿದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ತಿಳಿಸುವುದು ಏನೆಂದರೆ, ಈ ಕೆಳಗೆ ಸಹಿ ಹಾಕಿರುವವರು ಸದರಿ ನಿಯಮಗಳ ನಿಯಮ 9 ರೊಂದಿಗೆ ಸದರಿ ಕಾಯ್ದೆಯ ಸೆಕ್ಷನ್ 13(4) ಅನ್ನು ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳನ್ನ ಚಲಾಯಿಸುವ ಮೂಲಕ, ಈ ಕೆಳಗೆ ವಿವರಿಸಲಾಗಿರುವ ಸ್ವತ್ತನ್ನು 05/08/2021 ರಂದು ತಮ್ಮ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ.

ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಸದರಿ ಸ್ವಾಧೀನ ಸ್ವತ್ತುಗಳೊಂದಿಗೆ ಯಾವುದೇ ವ್ಯವಹಾರ ಮಾಡತಕ್ಕದ್ದಲ್ಲ, ಅದಾಗ್ಯೂ ವ್ಯವಹರಿಸಿದಲ್ಲಿ ಅಂತಹ ವಹಿವಾಟು ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ ರವರಿಗೆ ಸಂದಾಯ ಆಗಬೇಕಿರುವ, 21/05/2021 ರಂತೆಗಿನ ಬಾಕಿಮೊತ್ತ **ರೂ. 2,45,54,008.59/- (ರೂಪಾಯಿ ಎರಡು ಕೋಟಿ ನಲವತ್ತೈದು ಲಕ್ಷ ಐವತ್ನಾಲ್ಕು ಸಾವಿರದ ಎಂಟು ಮತ್ತು ಐವತ್ತೊಂಬತ್ತು ಪೈಸೆ ಮಾತ್ರ)** ಮೊಬಲಗು + ಅನ್ವಯಿಕ ಬಡ್ಡಿ ಮತ್ತು ದಂಡದ ಬಡ್ಡಿ, ಇನ್ನಿತರ ಖರ್ಚು, ವೆಚ್ಚ, ಶುಲ್ಕ ಇತ್ಯಾದಿಗಳ ನಿಬಂಧನೆಗೆ ಒಳಡುತ್ತದೆ.

ಸ್ವತ್ತಿನ ಷೆಡ್ಯೂಲ್-ಎ: ಒಂದನೇ ಅಡ್ಡರಸ್ತೆ, ಚಾಮರಾಜಪೇಟ್, ಬೆಂಗಳೂರು ವಿಳಾಸದಲ್ಲಿರುವ, ನಂ.10 (ಹಳೆಯ ನಂ.227), ಬೆಂಗಳೂರು ಕಾರ್ಪೋರೇಶನ್ ಡಿವಿಜನ್ ನಂ.42 (ಹಳೆಯ ನಂ.41-ಡಿ) ಹೊಂದಿರುವ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ, ವಿಸ್ತೀರ್ಣ: ಪೂರ್ವ-ಪಶ್ಚಿಮ: 64 ಅಡಿ ಮತ್ತು 8 ಇಂಚ್‌ಗಳು ಅಥವಾ 19.65 ಮೀಟರ್ ಹಾಗೂ ಉತ್ತರ-ದಕ್ಷಿಣ: 41 ಅಡಿ ಮತ್ತು 6 ಇಂಚ್‌ಗಳು ಅಥವಾ 12.75 ಮೀಟರ್, ಒಟ್ಟಾರೆ 2683 ಚದರ ಅಡಿ ಅಥವಾ 298 ಚದರ ಯಾರ್ಡ್, ಮುಂಭಾಗದಲ್ಲಿ ಸುತ್ತಲೂ ಮೂರು ಚದರಗಳ ಅಳತೆಯುಳ್ಳ ಕಟ್ಟಡವೂ ಸೇರಿರುತ್ತದೆ ಮತ್ತು **ಸದರಿ ಸ್ವತ್ತಿನ ಚಕ್ಕುಬಂದಿ**: (ದಿ.15/04/2020ರ **ಸೇಲ್ ಡೀಡ್ ನಂ. 177/1999-2000** ರಲ್ಲಿ ಸಂಪೂರ್ಣ ವಿವರವಾಗಿ ಮತ್ತು ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ) ಪೂರ್ವಕ್ಕೆ: ಅಡ್ಡರಸ್ತೆ; ಪಶ್ಚಿಮಕ್ಕೆ: ನಂ.243 ಹೊಂದಿರುವ ಸ್ವತ್ತು; ಉತ್ತರಕ್ಕೆ: ಕನ್ಸರ್ವನ್ಸಿ; ದಕ್ಷಿಣಕ್ಕೆ: ನಂ.243 ಹೊಂದಿರುವ ಸ್ವತ್ತು; **ಸ್ವತ್ತಿನ ವಿವರ**: ಪ್ಲಿಂಥ್ ಏರಿಯಾ: ಮೂರು ಚದರಗಳು, ರೂಫ್: ಆರ್.ಸಿ.ಸಿ., ಫ್ಲೋರಿಂಗ್: ರೆಡ್ ಆಕ್ಸೈಡ್, ಗೋಡೆಗಳು: ಮಾರ್ಟರ್ ಜೊತೆಗೆ ಮಣ್ಣು, ಬಾಗಿಲುಗಳು ಮತ್ತು ಕಿಟಕಿಗಳು: ಎಲ್ಲಾ ರೀತಿಯ ಮರಗಳದ್ದು, ಕಟ್ಟಡದ ವಯಸ್ಸು: 33 ವರ್ಷ, ಸೌಲಭ್ಯಗಳು: ಸಾಮಾನ್ಯ ದೀಪ ವ್ಯವಸ್ಥೆ, ವಿದ್ಯುತ್, ನೀರು ಮತ್ತು ಚರಂಡಿ ಸಂಪರ್ಕಗಳು, ಕಾಂಪೌಂಡ್ ಗೋಡೆಗಳು, ಹಣ್ಣು ಬಿಡುವ ಮರಗಳು ಮತ್ತು ಗೋಡೆಗಳು ಇರುವುದಿಲ್ಲ.

ಸ್ಥಳ: ಬೆಂಗಳೂರು
ದಿನಾಂಕ: 06-08-2021

ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್
ದೂರವಾಣಿ ಸಂ.: 9030001897/9866577659

ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂದಾಯಿತ ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಜಿನೆಸ್ ಪಾರ್ಕ್, ಗಣಪತರಾವ್ ಕದಂ ಮಾರ್ಗ, ಲೋವರ್ ಪರೇಲ್, ಮುಂಬೈ-400013. ಸಿಐಎನ್ ನಂ. U67190MH2008PLC187552.
ಶಾಖಾ ಕಚೇರಿ ವಿಳಾಸ: 2ನೇ ಮಹಡಿ, ಪ್ರೆಸ್ಟೀಜ್ ಕ್ರೋನಿಕ್ ನಂ. 62, ರಿಚ್ಮಂಡ್ ರಸ್ತೆ, ಬೆಂಗಳೂರು-560025

ಸ್ವಾಧೀನತಾ ಪ್ರಕಟಣೆ

(ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ರ ನಿಯಮ 8(1) ರೊಂದಿಗೆ ಅನುಬಂಧ 4 ಓದಿಕೊಂಡಂತಿನ ಪ್ರಕಾರ)

ಅದಾಗ್ಯೂ, ಈ ಕೆಳಗೆ ಸಹಿ ಹಾಕಿರುವ **ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯು, ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 9 ಅನ್ನು ಸೆಕ್ಷನ್ 13(2) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸಾಲಗಾರರು ಮತ್ತು ಸಹ-ಸಾಲಗಾರರು/ಜಾಮೀನುದಾರರು ಆಗಿರುವ 1) **ಸುಮಂತ್ ಇಂಟೀರಿಯರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಪ್ರತಿನಿಧಿಸುವ ನಿರ್ದೇಶಕರು ಶ್ರೀಮತಿ. ಲೀಲಾ ಗಂಗಾಧರ್** ನಂ.15/4ಎ, 2ನೇ ಮಹಡಿ, ಚಳ್ಳಕೆರೆ, ಹೆಚ್‌ಆರ್‌ಬಿಆರ್ ಬಡಾವಣೆ, ಆರ್‌ಸಿಐ ಸ್ಕೂಲ್ ಹಿಂಭಾಗ, ವರ್ತುಲ ರಸ್ತೆ, ಕಲ್ಯಾಣನಗರ, ಬೆಂಗಳೂರು-560043 (ಕರ್ನಾಟಕ) 2) **ಸುಮಂತ್ ಇಂಟೀರಿಯರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಪ್ರತಿನಿಧಿಸುವ ನಿರ್ದೇಶಕರು ಶ್ರೀ. ಹೇಮಂತ್ ಜಿ ಕರಿಯಪ್ಪ** ನಂ.15/4ಎ, 2ನೇಮಹಡಿ, ಚಳ್ಳಕೆರೆ, ಹೆಚ್‌ಆರ್‌ಬಿಆರ್ ಬಡಾವಣೆ, ಆರ್‌ಸಿಐ ಸ್ಕೂಲ್ ಹಿಂಭಾಗ, ವರ್ತುಲ ರಸ್ತೆ, ಕಲ್ಯಾಣನಗರ, ಬೆಂಗಳೂರು-560043 (ಕರ್ನಾಟಕ) 3) **ಶ್ರೀಮತಿ. ಲೀಲಾ ಗಂಗಾಧರ್** ಕೋಂ. ಶ್ರೀ. ಕೆ ಗಂಗಾಧರ್ ನಂ.15/4ಎ, ಚಳ್ಳಕೆರೆ, ಹೆಚ್‌ಆರ್‌ಬಿಆರ್ ಬಡಾವಣೆ, ಆರ್‌ಸಿಐ ಸ್ಕೂಲ್ ಹಿಂಭಾಗ, ವರ್ತುಲ ರಸ್ತೆ, ಕಲ್ಯಾಣನಗರ, ಬೆಂಗಳೂರು-560043 (ಕರ್ನಾಟಕ) ಮತ್ತು **ಇನ್ನೊಂದು ವಿಳಾಸ**: ಪ್ರಾಪರ್ಟಿ ನಂ.4 ಮತ್ತು 4ಎ, ಖಾತಾ ನಂ.15/4, ಚಳ್ಳಕೆರೆ, ವರ್ತುಲ ರಸ್ತೆ, ಕಲ್ಯಾಣನಗರ, ಬೆಂಗಳೂರು-560043 4) **ಶ್ರೀ. ಹೇಮಂತ್ ಜಿ ಕರಿಯಪ್ಪ** ನಂ.15/4ಎ, ಚಳ್ಳಕೆರೆ, ಹೆಚ್‌ಆರ್‌ಬಿಆರ್ ಬಡಾವಣೆ, ಆರ್‌ಸಿಐ ಸ್ಕೂಲ್ ಹಿಂಭಾಗ, ವರ್ತುಲ ರಸ್ತೆ, ಕಲ್ಯಾಣನಗರ, ಬೆಂಗಳೂರು-560043 (ಕರ್ನಾಟಕ) ಇವರುಗಳಿಗೆ **ದಿನಾಂಕ** 21/05/2021 ರಂದು ಡಿಮಾಂಡ್ ನೋಟಿಸ್ ಹೊರಡಿಸಿದ್ದರು ಮತ್ತು ಸದರಿ ನೋಟಿಸ್ ದಿನಾಂಕದಿಂದ 60 ದಿನಗಳೊಳಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ಬಾಕಿಮೊತ್ತ **ರೂ. 1,61,41,556.73/- (ರೂಪಾಯಿ ಒಂದು ಕೋಟಿ ಅರವತ್ತೊಂದು ಲಕ್ಷ ನಲವತ್ತೊಂದು ಸಾವಿರದ ಐದು ನೂರ ಐವತ್ತಾರು ಮತ್ತು ಎಪ್ಪತ್ಮೂರು ಪೈಸೆ ಮಾತ್ರ)** ಮೊಬಲಗನ್ನು ಬಡ್ಡಿ ಹಾಗೂ ಅನ್ವಯಿಕ ದಂಡ ಬಡ್ಡಿಶುಲ್ಕ, ಇತರೆ ಖರ್ಚು ವೆಚ್ಚ ಮುಂತಾದವುಗಳನ್ನು ಮರುಪಾವತಿಸಬೇಕೆಂದು ಕರೆ ನೀಡಿದ್ದರು.

ಅದಾಗ್ಯೂ, ಸಾಲಗಾರರು ಸದರಿ ಬಾಕಿಮೊತ್ತವನ್ನು ಮರುಪಾವತಿಸಲು ವಿಫಲಾಗಿದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ತಿಳಿಸುವುದು ಏನೆಂದರೆ, ಈ ಕೆಳಗೆ ಸಹಿ ಹಾಕಿರುವವರು ಸದರಿ ನಿಯಮಗಳ ನಿಯಮ 9 ರೊಂದಿಗೆ ಸದರಿ ಕಾಯ್ದೆಯ ಸೆಕ್ಷನ್ 13(4) ಅನ್ನು ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳನ್ನ ಚಲಾಯಿಸುವ ಮೂಲಕ, ಈ ಕೆಳಗೆ ವಿವರಿಸಲಾಗಿರುವ ಸ್ವತ್ತನ್ನು 05/08/2021 ರಂದು ತಮ್ಮ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ.

ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಸದರಿ ಸ್ವಾಧೀನ ಸ್ವತ್ತುಗಳೊಂದಿಗೆ ಯಾವುದೇ ವ್ಯವಹಾರ ಮಾಡತಕ್ಕದ್ದಲ್ಲ, ಅದಾಗ್ಯೂ ವ್ಯವಹರಿಸಿದಲ್ಲಿ ಅಂತಹ ವಹಿವಾಟು ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ ರವರಿಗೆ ಸಂದಾಯ ಆಗಬೇಕಿರುವ, 21/05/2021 ರಂತೆಗಿನ ಬಾಕಿಮೊತ್ತ ರೂ. 1,61,41,556.73/- (ರೂಪಾಯಿ ಒಂದು ಕೋಟಿ ಅರವತ್ತೊಂದು ಲಕ್ಷ ನಲವತ್ತೊಂದು ಸಾವಿರದ ಐದು ನೂರ ಐವತ್ತಾರು ಮತ್ತು ಎಪ್ಪತ್ಮೂರು ಪೈಸೆ ಮಾತ್ರ) ಮೊಬಲಗು + ಅನ್ವಯಿಕ ಬಡ್ಡಿ ಮತ್ತು ದಂಡದ ಬಡ್ಡಿ, ಇನ್ನಿತರ ಖರ್ಚು, ವೆಚ್ಚ, ಶುಲ್ಕ ಇತ್ಯಾದಿಗಳ ನಿಬಂಧನೆಗೆ ಒಳಡುತ್ತದೆ.

ಸ್ವತ್ತಿನ ಷೆಡ್ಯೂಲ್: ಷೆಡ್ಯೂಲ್ ನಂ.1 ಚಳ್ಳಕೆರೆ, ವರ್ತುಲ ರಸ್ತೆ, ಕಲ್ಯಾಣನಗರ ಅಂಚೆ, ಬೆಂಗಳೂರು-560043 ವಿಳಾಸದಲ್ಲಿರುವ, ನಂ.4 ಬಿಬಿಎಂಪಿ ಖಾತಾ ನಂ.15/4, ಪಿಐಡಿ ನಂ.025-ಡಬ್ಲ್ಯು1693-25 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ, ವಿಸ್ತೀರ್ಣ: ಪೂರ್ವ-ಪಶ್ಚಿಮ: 71'-0 ಅಡಿ, ಉತ್ತರ-ದಕ್ಷಿಣ: 40'-0 ಅಡಿ ಜೊತೆಗೆ ಅದರಲ್ಲಿರುವ ಕಟ್ಟಡವೂ ಸೇರಿರುತ್ತದೆ ಮತ್ತು ಸದರಿ **ಸ್ವತ್ತಿನ ಚಕ್ಕುಬಂದಿ**: ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ: ದೊಡ್ಡತಾಯಪ್ಪ ರೆಡ್ಡಿರವರ ಸ್ವತ್ತು; ಉತ್ತರಕ್ಕೆ: ಕೃಷ್ಣಾ ರೆಡ್ಡಿರವರ ಸ್ವತ್ತು (ಅದೇ ಸ್ವತ್ತಿನ ಭಾಗ); ದಕ್ಷಿಣಕ್ಕೆ: ಸರ್ವೆ ನಂ. 89/1.

ಷೆಡ್ಯೂಲ್ ನಂ.2 ಚಳ್ಳಕೆರೆ, ಕಲ್ಯಾಣನಗರ ಅಂಚೆ, ವರ್ತುಲ ರಸ್ತೆ, ಬೆಂಗಳೂರು-560043 ವಿಳಾಸದಲ್ಲಿರುವ, ನಂ.4 ಬಿಬಿಎಂಪಿ ಖಾತಾ ನಂ.15/4ಎ, ಪಿಐಡಿ ನಂ.025-ಡಬ್ಲ್ಯು1693-25 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ, ವಿಸ್ತೀರ್ಣ: ಪೂರ್ವ-ಪಶ್ಚಿಮ: 71'-0 ಅಡಿ, ಉತ್ತರ-ದಕ್ಷಿಣ: 38'-0 ಅಡಿ ಜೊತೆಗೆ ಅದರಲ್ಲಿರುವ ಕಟ್ಟಡವೂ ಸೇರಿರುತ್ತದೆ ಮತ್ತು ಸದರಿ **ಸ್ವತ್ತಿನ ಚಕ್ಕುಬಂದಿ**: ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ: ದೊಡ್ಡತಾಯಪ್ಪ ರೆಡ್ಡಿರವರ ಸ್ವತ್ತು; ಉತ್ತರಕ್ಕೆ: ಕೃಷ್ಣಾ ರೆಡ್ಡಿರವರ ಸ್ವತ್ತು (ಅದೇ ಸ್ವತ್ತಿನ ಭಾಗ); ದಕ್ಷಿಣಕ್ಕೆ: ಸೈಟ್ ನಂ. 4ರ ಉಳಿಕೆ ಭಾಗ.

ಸ್ಥಳ: ಬೆಂಗಳೂರು
ದಿನಾಂಕ: 06-08-2021

ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್
ದೂರವಾಣಿ ಸಂ.: 9030001897/9866577659

ಜನಾನುರಾಗಿ ನಾಯಕ ಪರಮೇಶ್ವರ್

ರಾಜಕಾರಣದಲ್ಲಿ ಮೂರು ದಶಕ ಪೂರೈಸಿರುವ ಮಾಜಿ ಉಪಮುಖ್ಯಮಂತ್ರಿ **ಡಾ. ಜಿ. ಪರಮೇಶ್ವರ್** ಇಂದು 70ನೇ ಜನ್ಮದಿನದ ಸಂಭ್ರಮದಲ್ಲಿದ್ದಾರೆ. ರಾಜಕೀಯ ಜೀವನದಲ್ಲಿ ಅನೇಕ ಏಳು–ಬೀಳುಗಳನ್ನು ಕಂಡಿರುವ ಅವರ ಜೀವನ ಮತ್ತು ರಾಜಕಾರಣ ಅನೇಕರಿಗೆ ಸ್ಫೂರ್ತಿ ಮತ್ತು ಮಾದರಿ.

ರಾಹುಲ್ ಗಾಂಧಿ ಅವರೊಂದಿಗೆ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ಆಶೀರ್ವಾದ ಪಡೆದ ಕ್ಷಣ

ಪರಮೇಶ್ವರ್ ‘ರಾಜಕೀಯ ಪಯಣ’

- **1988:** ಕೆಪಿಸಿಸಿ ಜಂಟಿ ಕಾರ್ಯದರ್ಶಿ
- **1989:** ಮಧುಗಿರಿ ಶಾಸಕ
- **1992:** ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ
- **1993:** ರೇಷ್ಮೆ ಸಚಿವ
- **1994:** ಅಲ್ಪಮತಗಳಿಂದ ಪರಾಭವ
- **1997:** ಕೆಪಿಸಿಸಿ ಉಪಾಧ್ಯಕ್ಷ, ಎಐಸಿಸಿ ಸದಸ್ಯ
- **1999:** ಮಧುಗಿರಿ ಶಾಸಕ
- **1999:** ಉನ್ನತ ಶಿಕ್ಷಣ, ವಿಜ್ಞಾನ–ತಂತ್ರಜ್ಞಾನ ಸಚಿವ
- **2001:** ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ ಸಚಿವ
- **2003:** ಉನ್ನತ ಶಿಕ್ಷಣ, ವಾರ್ತಾ ಸಚಿವ
- **2004:** ಮಧುಗಿರಿ ಶಾಸಕ
- **2008:** ಮಧುಗಿರಿ ಶಾಸಕ
- **2010:** ಕೆಪಿಸಿಸಿ ಅಧ್ಯಕ್ಷ
- **2013:** ಕೊರಟಗೆರೆಯಲ್ಲಿ ಪರಾಜಯ
- **2015:** ವಿಧಾನ ಪರಿಷತ್ ಸದಸ್ಯ, ಗೃಹ ಸಚಿವ
- **2018:** ಕೊರಟಗೆರೆ ಶಾಸಕ

‘ನಮ್ಮ ನಾಯಕ ಮುಖ್ಯಮಂತ್ರಿ ಹುದ್ದೆಗೆ ಎಲ್ಲ ಅರ್ಹತೆ, ಅನುಭವ ಹೊಂದಿದ್ದಾರೆ. ಕಾಂಗ್ರೆಸ್‌ನ ಹಲವು ನಾಯಕರು, ವಿರೋಧ ಪಕ್ಷದ ನಾಯಕರೂ ಇದನ್ನು ಒಪ್ಪುತ್ತಾರೆ. ದೂರದೃಷ್ಟಿಯ ನಾಯಕನಿಗೆ ಮುಂದೆ ರಾಜ್ಯದ ದೊರೆಯಾಗುವ ಭಾಗ್ಯ ದೊರೆತೇ ದೊರೆಯುತ್ತದೆ..’

ಮಾಜಿ ಉಪಮುಖ್ಯಮಂತ್ರಿ, ಡಾ. ಜಿ. ಪರಮೇಶ್ವರ್ ಅವರ ಅಭಿಮಾನಿಗಳ ವಿಶ್ವಾಸದ ಮಾತುಗಳು ಇವು.

ರಾಜ್ಯದ ಅತ್ಯುನ್ನತ ಹುದ್ದೆ ಕೊನೆ ಗಳಿಗೆಯಲ್ಲಿ ಕೈ ತಪ್ಪಿದಾಗಲೂ ಪರಮೇಶ್ವರ್ ಅವರು ಸಂಯಮ ಕಳೆದುಕೊಂಡವರಲ್ಲ. ಇಂತಹ ಸಂಯಮ, ಸಂವೇದನಾಶೀಲ ಗುಣದಿಂದಲೇ ಅವರು ‘ಮಾದರಿ ನಾಯಕ’ರಾಗಿ ಜನಮನದಲ್ಲಿದ್ದಾರೆ, ‘ತುಂಬಿದ ಕೊಡ ತುಳುಕುವುದಿಲ್ಲ’ ಎಂಬ ಮಾತಿಗೆ ಅನ್ವರ್ಥವಾಗಿದ್ದಾರೆ. ರಾಜಕಾರಣದಲ್ಲಿ ಮೂರು ದಶಕ ದಾಟಿರುವ ಅವರು, ಜೀವನದಲ್ಲಿ ಏಳನೇ ದಶಕಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಪರಮೇಶ್ವರ್ ಅವರ ಜೀವನ ಮತ್ತು ರಾಜಕಾರಣ ಅನೇಕರಿಗೆ ಸ್ಫೂರ್ತಿ ಮತ್ತು ಮಾದರಿ.

ಶಿಕ್ಷಣ ಭೀಷ್ಮ ಎಚ್.ಎಂ. ಗಂಗಾಧರಯ್ಯ ಹಾಗೂ ಗಂಗಮಾಳಮ್ಮ ದಂಪತಿಯ ಪುತ್ರರಾಗಿ 1951ರ ಆಗಸ್ಟ್ 6ರಂದು ಜನಿಸಿರುವ ಪರಮೇಶ್ವರ್ ಅವರಿಗೆ ಈಗ 70ನೇ ಜನ್ಮದಿನದ ಸಂಭ್ರಮ.

ಸಿದ್ಧಾರ್ಥನ ಹೆಸರಿನಲ್ಲಿ ರಾಜ್ಯದ ಬಹಳಷ್ಟು ಪ್ರದೇಶಗಳಲ್ಲಿ ಶಿಕ್ಷಣ ಕೇಂದ್ರಗಳು, ಶಾಲೆ, ಕಾಲೇಜುಗಳನ್ನು ಪ್ರಾರಂಭಿಸಿದವರು ಗಂಗಾಧರಯ್ಯನವರು. ಎಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್ ಕಾಲೇಜು, ಪಾಲಿ ಭಾಷಾ ಬೋಧನಾ ಕೇಂದ್ರ, ಸಂಸ್ಕೃತ ಪಾಠಶಾಲೆ, ಶಿಕ್ಷಕರ ತರಬೇತಿ ಕಾಲೇಜು ಇತ್ಯಾದಿ ಕೇಂದ್ರಗಳನ್ನು ನಿರ್ಮಿಸುವ ಮೂಲಕ ಶಿಕ್ಷಣ ಸಾಮ್ರಾಜ್ಯವನ್ನೇ ಕಟ್ಟಿದವರು. ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ ಪರಮೇಶ್ವರ್ ಅವರು, ರಾಜಕೀಯವಾಗಿಯೂ ತಮ್ಮ ಛಾಪು ಮೂಡಿಸಿದ್ದಾರೆ. ಈಗ ಅವರು ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಕಾಡೆಮಿಯ ಕುಲಪತಿಯೂ ಹೌದು.

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಪ್ರಥಮ ಉಪಮುಖ್ಯಮಂತ್ರಿಯಾಗಿ ಆಡಳಿತ ನಡೆಸಿ, ಮುಖ್ಯಮಂತ್ರಿ ಸ್ಥಾನದೆಡೆಗೆ ಮುನ್ನಡೆದಿರುವ ಡಾ.ಜಿ.ಪರಮೇಶ್ವರ್ ಅವರಿಗೆ ‘ರಾಜಕೀಯ ಅನುಭವ’ ರಕ್ತದಲ್ಲಿಯೇ ಪ್ರಾಪ್ತವಾಗಿದೆ. ಗಂಗಾಧರಯ್ಯ ಅವರು ವಿಧಾನ ಪರಿಷತ್ ನಾಮಕರಣ ಸದಸ್ಯರಾಗಿದ್ದವರು. ಜೊತೆಗೆ ಮೈಸೂರು ವಿಶ್ವವಿದ್ಯಾಲಯದ ಕೌನ್ಸಿಲ್ ಸದಸ್ಯರೂ ಆಗಿದ್ದರು.

ಪ್ರತಿಭಾವಂತ, ಸುಶಿಕ್ಷಿತ

ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆದಿರುವ ಪರಮೇಶ್ವರ್ ಅವರು, ಕ್ರೀಡಾಪಟುವೂ ಹೌದು. ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ತಮ್ಮದೇ ಸಿದ್ಧಾರ್ಥ ಪ್ರೌಢಶಾಲೆಯಲ್ಲಿ ಮುಗಿಸಿ, ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಪಿಯುಸಿ ಓದಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಕೃಷಿಯಲ್ಲಿ ಬಿಎಸ್‌ಸಿ ಪದವಿ ಪಡೆದಿರುವ ಅವರು, ಆಸ್ಟ್ರೇಲಿಯಾದ ಅಡಿಲೇಡ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪಡೆದಿದ್ದಾರೆ.

ರಾಜೀವ್ ಗಾಂಧಿಯವರಿಂದಲೇ ಆಹ್ವಾನ

1986ರಲ್ಲಿ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಶಂಕುಸ್ಥಾಪನೆ ನೆರವೇರಿಸಲು ಆಗಿನ ಪ್ರಧಾನಿ ರಾಜೀವ್ ಗಾಂಧಿಯವರೇ ಬಂದಿದ್ದರು. ಆ ಸಮಾರಂಭದಲ್ಲಿ, ಪರಮೇಶ್ವರ್ ಅವರ ವಾಕ್ಚಾತುರ್ಯ, ಶೈಕ್ಷಣಿಕ ಸಾಧನೆ, ಕೌಟುಂಬಿಕ ಹಿನ್ನೆಲೆ ಗಮನಿಸಿದ ಅವರು, ಪರಮೇಶ್ವರ್ ಅವರನ್ನು ರಾಜಕೀಯ ಆಹ್ವಾನಿಸುತ್ತಾರೆ. ಅದಾಗಿ, ಎರಡೇ ವರ್ಷದಲ್ಲಿ ಅಂದರೆ, 1988ರಲ್ಲಿ ಕೆಪಿಸಿಸಿ ಜಂಟಿ ಕಾರ್ಯದರ್ಶಿಯಾಗಿ ನೇಮಕಗೊಳ್ಳುತ್ತಾರೆ. ಮುಂದಿನ ವರ್ಷದಲ್ಲಿಯೇ ಮಧುಗಿರಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗುತ್ತಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿದ್ದ ವೇಳೆ ನಗರದಲ್ಲಿ ತೆಂಗಿನ ನಾರಿನ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿದ್ದ ಸಂದರ್ಭ

ಸಾಧನೆ ಸಂಕೇತಿಸುವ ರೇಷ್ಮೆ ಭವನ

1992ರಲ್ಲಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರ ಸಂಪುಟದಲ್ಲಿ ರೇಷ್ಮೆ ಸಚಿವರಾಗುವ ಮೂಲಕ ರಾಜಕೀಯವಾಗಿ ಮೊದಲ ಪ್ರಮುಖ ಘಟ್ಟಕ್ಕೆ ಏರಿದ ಪರಮೇಶ್ವರ್, ನಂತರ ಅನೇಕ ಉನ್ನತ ಹುದ್ದೆಗಳನ್ನು ಅಲಂಕರಿಸಿದರು.

ಹಿರಿಯ ರಾಜಕಾರಣಿ ಸಿ. ಭೈರೇಗೌಡ ಅವರು ವೇಮಗಲ್ ಹೋಬಳಿಯ ಕ್ಯಾಲನೂರು ಗ್ರಾಮದಲ್ಲಿ ರೇಷ್ಮೆ ಮಾರಾಟ ಮಳಿಗೆ ಮಂಜೂರು ಮಾಡಿಕೊಡಲು ಕೋರಿದ್ದರು. ಅದನ್ನು ಮಂಜೂರು ಮಾಡಿ ಶಂಖು ಸ್ಥಾಪನೆಯನ್ನು ನೆರವೇರಿಸಿದ ಪರಮೇಶ್ವರ್, ಅದರ ಉದ್ಘಾಟನೆ ಸಮಯದಲ್ಲಿ ಅಧಿಕಾರ ರಹಿತರಾಗಿರುತ್ತಾರೆ. ಆದರೆ, ಆಗ ಕೃಷಿ ಸಚಿವರಾಗಿದ್ದ ಭೈರೇಗೌಡರು ಪರಮೇಶ್ವರ್ ಅವರನ್ನೇ ಕರೆಸಿ ಉದ್ಘಾಟನೆ ಮಾಡಿಸುತ್ತಾರೆ.

ಅದಲ್ಲದೆ, ಅಂದು ಪರಮೇಶ್ವರ್ ಅವರು ಬೆಂಗಳೂರು ಓಕಳಿಪುರದ ಬಳಿ ₹10 ಕೋಟಿ ವೆಚ್ಚದಲ್ಲಿ ಕಟ್ಟಿಸಿದ ರೇಷ್ಮೆಭವನ ಇಂದಿಗೂ ತಲೆ ಎತ್ತಿ ನಿಂತು, ಅವರ ಸಾಧನೆಯನ್ನು ಸಂಕೇತಿಸುತ್ತಿದೆ.

ಮಾದರಿಯಾದ ಸಿಇಟಿ ಪ್ರಾಧಿಕಾರ

ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಉನ್ನತ ಶಿಕ್ಷಣ ಸಚಿವರಾಗಿದ್ದವರು ಡಾ.ಜಿ. ಪರಮೇಶ್ವರ್.

ವಿಶ್ವವಿದ್ಯಾಲಯಗಳ ಅಧಿನಿಯಮಕ್ಕೆ ತಿದ್ದುಪಡಿ ತಂದು ಕುಲಪತಿಗಳ ಆಯ್ಕೆ, ಅವಧಿ ಹಾಗೂ ಸೆನೆಟ್–ಸಿಂಡಿಕೇಟ್ ಸದಸ್ಯರ ಆಯ್ಕೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಮಹಿಳೆಯರಿಗೆ ಸ್ಥಾನಗಳ ಮೀಸಲು ವಿಚಾರಗಳಿಗೆ ಹೆಚ್ಚು ಒತ್ತು ನೀಡಿದರು. ಇವರ ಅಧಿಕಾರಾವಧಿಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷಾ ಪ್ರಾಧಿಕಾರ ಅಥವಾ ಸಿಇಟಿ ಪ್ರಾಧಿಕಾರದ ಕಾರ್ಯವೈಖರಿ ಇಡೀ ದೇಶಕ್ಕೆ ಮಾದರಿಯಾಗಿತ್ತು. ಸಿಇಟಿ ನಿರ್ವಹಣೆ ಹಾಗೂ ಅದರ ಉಸ್ತುವಾರಿಯನ್ನು ಪರಮೇಶ್ವರ್ ಸಮರ್ಪಕವಾಗಿ ನಿರ್ವಹಿಸಿದ್ದರು.

ಪರಿಶಿಷ್ಟ ಜಾತಿಯ ಮೊದಲ ಉಪಮುಖ್ಯಮಂತ್ರಿ

ಬದಲಾದ ಕಾಲಘಟ್ಟದಲ್ಲಿ ಕಾಂಗ್ರೆಸ್–ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯ‌ಮಂತ್ರಿಯಾಗುವ ಮೂಲಕ ಡಾ.ಜಿ. ಪರಮೇಶ್ವರ್ ಅವರು ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಮೊದಲ ಉಪಮುಖ್ಯಮಂತ್ರಿ ಎನಿಸುತ್ತಾರೆ. 2018ರಲ್ಲಿ ಈ ಹೊಣೆಯೊಂದಿಗೆ ಗೃಹ, ಬೆಂಗಳೂರು ನಗರಾಭಿವೃದ್ಧಿ ಮತ್ತು ಯುವ ಜನಸೇವಾ ಕ್ರೀಡಾ ಖಾತೆಗಳನ್ನೂ ಅವರು ನಿಭಾಯಿಸಿದ್ದರು.

ಬೆಂಗಳೂರಿಗೆ ಐಟಿ–ಬಿಟಿ ಗರಿ

ಬೆಂಗಳೂರು ಮಾಹಿತಿ ತಂತ್ರಜ್ಞಾನದ ನಗರವಾಗಿ ದೇಶದಲ್ಲಿ ಮಾತ್ರವಲ್ಲದೆ, ವಿಶ್ವದಲ್ಲಿಯೇ ಹೆಸರುವಾಸಿಯಾಗುವಲ್ಲಿ ಪರಮೇಶ್ವರ್ ಅವರ ಕೊಡುಗೆಯೂ ಅಪಾರ. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ನಗರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದರು. ಆಗ, ಮಾಹಿತಿ ತಂತ್ರಜ್ಞಾನ ಸಚಿವರಾಗಿದ್ದವರು ಡಾ. ಜಿ. ಪರಮೇಶ್ವರ್. ಸಿಲಿಕಾನ್ ಸಿಟಿಯಾಗಿ ನಗರವು ಗುರುತಿಸಿಕೊಳ್ಳುವಲ್ಲಿ ಪರಮೇಶ್ವರ್ ಅವರ ಪಾತ್ರ ದೊಡ್ಡದು.

ನಂತರದ ವರ್ಷಗಳಲ್ಲಿ ಗೃಹ ಸಚಿವರಾಗಿ, ಉಪಮುಖ್ಯಮಂತ್ರಿಯಾಗಿ ಪರಮೇಶ್ವರ್ ಅವರು ಕಾರ್ಯನಿರ್ವಹಿಸಿದರೂ, ನಮ್ಮ ನಾಯಕನಿಗೆ ಮುಖ್ಯಮಂತ್ರಿ ಪಟ್ಟ ಒಲಿದು ಬರಲಿಲ್ಲ ಎಂಬ ಕೊರಗು ಅವರ ಅಭಿಮಾನಿಗಳಲ್ಲಿದೆ. ಅವರ ಅರ್ಹತೆ, ಅನುಭವಕ್ಕೆ ಆ ಸ್ಥಾನ ದೊರೆತೇ ದೊರೆಯುತ್ತದೆ ಎಂಬ ವಿಶ್ವಾಸವನ್ನೂ ಅಭಿಮಾನಿಗಳು ವ್ಯಕ್ತಪಡಿಸುತ್ತಾರೆ.

ಕೆಪಿಸಿಸಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ರಾಹುಲ್ ಗಾಂಧಿಯವರನ್ನು ಸನ್ಮಾನಿಸಿದ ಕ್ಷಣ

ಕೊರೊನಾ ಸೇನಾನಿಗಳಾದ ಅಂಗನವಾಡಿ ಕಾರ್ಯಕರ್ತರಿಗೆ ದಿನಸಿ ಕಿಟ್ ವಿತರಿಸಿದ ಸಂದರ್ಭ

ಕೋವಿಡ್ ಸಂತ್ರಸ್ತರ ನೆರವಿಗೆ ನಿಂತ ನಾಯಕ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೊಂದಿಗೆ ಪರಮೇಶ್ವರ್

ಅಭಿವೃದ್ಧಿ ಪಥದಲ್ಲಿ ಕೊರಟಗೆರೆ

ಕೊರಟಗೆರೆಯ ಶಾಸಕರಾಗಿರುವ ಡಾ. ಜಿ. ಪರಮೇಶ್ವರ್ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಶಿಕ್ಷಣ ಕ್ಷೇತ್ರದ ಬಗ್ಗೆ ಹೆಚ್ಚು ಒಲವು ಹೊಂದಿರುವ ಅವರು, ಕ್ಷೇತ್ರದಲ್ಲಿ ಶಿಕ್ಷಣ ಕ್ಷೇತ್ರ ಏಳಿಗೆಗೆ ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ಕೊಳಲ ಹೋಬಳಿಯಲ್ಲಿ ₹30 ಕೋಟಿ ವೆಚ್ಚದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಹಾಗೂ ಸಿ.ಎನ್. ದುರ್ಗ ಹೋಬಳಿಯ ಸಿದ್ಧನ ಬೆಟ್ಟ ಬಳಿ ₹28 ಕೋಟಿ ವೆಚ್ಚದಲ್ಲಿ ಇಂದಿರಾಗಾಂಧಿ ವಸತಿ ಶಾಲೆಯನ್ನು ಅವರು ಮಂಜೂರು ಮಾಡಿಸಿಕೊಂಡಿದ್ದು, ಈ ಶಾಲೆಗಳ ಕಾಮಗಾರಿ ಪ್ರಗತಿಯಲ್ಲಿದೆ.

ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ಘೋಷಿಸಲಾಗಿದ್ದ ₹10 ಕೋಟಿ ಅನುದಾನವನ್ನು ಬಿಜೆಪಿ ಸರ್ಕಾರದಲ್ಲಿ ವಾಪಸ್ ಪಡೆಯಲಾಗಿತ್ತು. ಕೊರಟಗೆರೆ ತಾಲ್ಲೂಕಿನ ತೋವಿನಕೆರೆ–ಕೆಸ್ತೂರು, ಬೆಳ್ಳಾವಿ ರಸ್ತೆ ಅಭಿವೃದ್ಧಿಗೆ ಈ ₹10 ಕೋಟಿ ಮುಂಜೂರಾಗಿತ್ತು. ಪಟ್ಟು ಹಿಡಿದು ಅದನ್ನು ಮಂಜೂರು ಮಾಡಿಸಿದ ಪರಮೇಶ್ವರ್, ರಸ್ತೆ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಿದ್ದಾರೆ.

₹500 ಕೋಟಿ ವೆಚ್ಚದಲ್ಲಿ ಕೆಎಸ್‌ಆರ್‌ಪಿ ಕಟ್ಟಡ ನಿರ್ಮಾಣ ಸೇರಿದಂತೆ ಕ್ಷೇತ್ರದಲ್ಲಿ ಹಲವು ಕಾಮಗಾರಿಗಳು ಪ್ರಗತಿಯಲ್ಲಿವೆ.

ಕೋವಿಡ್ ಕಾಲದಲ್ಲೂ ‘ಕ್ರಿಯಾಶೀಲ’

ಜನರ ಸೇವೆ ಮಾಡಲು, ಅವರ ಸಂಕಷ್ಟಗಳಿಗೆ ಸ್ಪಂದಿಸಲು ಸಚಿವ, ಮುಖ್ಯಮಂತ್ರಿಯಂತಹ ಹುದ್ದೆ ಇಲ್ಲದಿದ್ದರೂ, ಶಾಸಕರಾಗಿಯೂ ಅವರ ಕಣ್ಣೀರು ಒರೆಸಬಹುದು ಎಂದು ತೋರಿಸಿಕೊಟ್ಟವರು ಡಾ. ಜಿ. ಪರಮೇಶ್ವರ್. ಕೊರಟಗೆರೆ ಕ್ಷೇತ್ರದಲ್ಲಿ 30 ಸಾವಿರಕ್ಕೂ ಹೆಚ್ಚು ಕುಟುಂಬಳಿಗೆ ದಿನಸಿ ಕಿಟ್ ವಿತರಿಸುವ ಮೂಲಕ ಇತರರಿಗೂ ಅವರು ಮಾದರಿಯಾದರು.

ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಈಡಾದವರಿಗೆ ಅಗತ್ಯ ವಸ್ತುಗಳನ್ನು ಪೂರೈಸಿದರು. ಪರಮೇಶ್ವರ್ ಅವರ ಅಭಿಮಾನಿಗಳು ರಾಜ್ಯದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕೋವಿಡ್ ಸಂತ್ರಸ್ತರ ನೆರವಿಗೆ ನಿಂತರು. ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಕೊರೊನಾ ಸೇನಾನಿಗಳಿಗೆ ಅಗತ್ಯ ವಸ್ತುಗಳನ್ನು ಪೂರೈಸಿದ್ದಲ್ಲದೆ, ಸಿದ್ಧಾರ್ಥ ಚಾರಿಟಬಲ್ ಟ್ರಸ್ಟ್ ಮೂಲಕ ಕೋವಿಡ್ ಸೇವೆಗಾಗಿಯೇ ಎರಡು ಆಂಬುಲೆನ್ಸ್‌ಗಳನ್ನೂ ಪರಮೇಶ್ವರ್ ನೀಡಿದರು.

ಸಂಕಷ್ಟದಲ್ಲಿ ಪಕ್ಷದ ಚುಕ್ಕಾಣಿ ಹಿಡಿದ ಧೀಮಂತ

ರಾಜ್ಯದಲ್ಲಿ 2010ರಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿದ್ದಾಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್‌ನ ಕಾರ್ಯಕರ್ತರಲ್ಲಿ ವಿಶ್ವಾಸವೇ ಕುಗ್ಗಿತ್ತು. ಪಕ್ಷದ ನೇತೃತ್ವ ವಹಿಸಲು ದೊಡ್ಡ ಪೈಪೋಟಿಯೂ ಇತ್ತು. ಆಗ, ರಾಜ್ಯದಲ್ಲಿ ಪಕ್ಷದ ಚುಕ್ಕಾಣಿ ಸಿಕ್ಕಿದ್ದು ಡಾ. ಜಿ. ಪರಮೇಶ್ವರ್ ಅವರ ಕೈಗೆ. 2010ರ ಅಕ್ಟೋಬರ್ 27ರಂದು ಕೆಪಿಸಿಸಿ ಅಧ್ಯಕ್ಷರಾದಾಗ, ಚುನಾವಣೆಗೆ ಮೂರೇ ವರ್ಷ ಬಾಕಿ ಇತ್ತು.

ಕಾಂಗ್ರೆಸ್ ನಡಿಗೆ ಜನರ ಬಳಿಗೆ, ಮತದಾರರೊಂದಿಗೆ ಮುಖಾಮುಖಿ, ನಾಡ ರಕ್ಷಣಾ ರ್‍ಯಾಲಿ ಮುಂತಾದ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಹಲವಾರು ವರ್ಷಗಳಿಂದ ಮಲಗಿದ್ದ ಕಾಂಗ್ರೆಸ್ಸಿಗರನ್ನು ಜಾಗೃತಿಗೊಳಿಸಿದರು. ಹೊಸಬರಿಗೆ ಪಕ್ಷದಲ್ಲಿ ಜವಾಬ್ದಾರಿಗಳನ್ನು ನೀಡಿದರು. ಹಿರಿತನಗಳಿಗೆ ಒತ್ತು ಕೊಟ್ಟರು. ಚಿಂತನ– ಮಂಥನ ಕಾರ್ಯಕ್ರಮದ ಮೂಲಕ ಕಾಂಗ್ರೆಸ್‌ನ ಐತಿಹಾಸಿಕ ಹಿನ್ನೆಲೆಯನ್ನು ಬೆಳಕಿಗೆ ತಂದರು. ಕಾಂಗ್ರೆಸ್‌ನಡಿಗೆ ರಾಜ್ಯಪಾಲರ ಬಳಿಗೆ, ಕಾಂಗ್ರೆಸ್‌ನಡಿಗೆ ಚುನಾವಣಾ ಆಯುಕ್ತರ ಬಳಿಗೆ, ಕಾರ್ಯಕ್ರಮಗಳ ಮೂಲಕ ಬಿಜೆಪಿಯ ದುರಾಡಳಿತದ ಬಗ್ಗೆ ದುರ್ವರ್ತನೆ ಬಗ್ಗೆ ದೂರು ನೀಡಿದರು. ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ, ಕಾರ್ಯಕ್ರಮದ ಮೂಲಕ ಸುಮಾರು 73 ಸಾವಿರ ಕಿ.ಮೀ ಪಾದಯಾತ್ರೆ ನಡೆಸಿದರು. ...ಫಲಿತಾಂಶ ಬಂದಾಗ ಅತಿ ದೊಡ್ಡ ಪಕ್ಷವಾಗಿ ಕಾಂಗ್ರೆಸ್ ಹೊರ ಹೊಮ್ಮಿದರೂ, ಸ್ವಕ್ಷೇತ್ರ ...ರೆಯಲ್ಲಿ ಪರಮೇಶ್ವರ್ ಪರಾಭವಗೊಂಡರು. ಮುಖ್ಯಮಂತ್ರಿಯಾಗುವ ಎಲ್ಲ ...ಯಿದ್ದರೂ, ಈ ಸೋಲನ್ನೇ ನೆಪವಾಗಿಸಿ ಅವರಿಗೆ ಅವಕಾಶ ತಪ್ಪಿಸಲಾಯಿತು ಎಂಬ ...ಧಾನ ಅವರ ಅಭಿಮಾನಿಗಳಲ್ಲಿದೆ.



ಉಪಮುಖ್ಯಮಂತ್ರಿಯಾಗಿದ್ದ ವೇಳೆ ವಿರೋಧ ಪಕ್ಷಗಳ ಸದಸ್ಯರ ಪ್ರಶ್ನೆಗೆ ಉತ್ತರಿಸಿದ ಕ್ಷಣ

ಕ್ರೀಡಾಪಟು ಪರಮೇಶ್ವರ್ !

ಕಾಲೇಜು ದಿನಗಳಲ್ಲಿ ಉತ್ತಮ ಅಥ್ಲೀಟ್ ಆಗಿದ್ದ ಪರಮೇಶ್ವರ್ 100,200 ಹಾಗೂ 400 ಮೀಟರ್ ಓಟದ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡಿದ್ದರು. ಇದಲ್ಲದೆ, ಕಬಡ್ಡಿ, ಫುಟ್‌ಬಾಲ್ ಆಡುತ್ತಿದ್ದ ಪರಮೇಶ್ವರ್ ಅತ್ಯುತ್ತಮ ಕ್ರೀಡಾಪಟು ಎನಿಸಿದ್ದರು. ಕೃಷಿ ಕಾಲೇಜಿನ ಪರವಾಗಿ ಕಂಠೀರವ ಕ್ರೀಡಾಂಗಣದಲ್ಲಿ 100ಮೀ ಓಟದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದರು.

ಜೈಪುರದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ವಿಶ್ವವಿದ್ಯಾಲಯಗಳ ಒಕ್ಕೂಟದ ಪರವಾಗಿ ಪರಮೇಶ್ವರ್ ಭಾಗವಹಿಸಿದ್ದರು.

ರಾಜ್ಯ ಅಥ್ಲೆಟಿಕ್ಸ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿ, ಭಾರತದ ಅಥ್ಲೆಟಿಕ್ಸ್ ಅಸೋಸಿಯೇಷನ್‌ನ ಉಪಾಧ್ಯಕ್ಷರಾಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ.

ನಾಯಕನ ಹಾದಿಯಲ್ಲೇ ಅಭಿಮಾನಿಗಳು... ಲಾಕ್ ಡೌನ್ ನಿಂದ ಸಂಕಷ್ಟಕ್ಕೆ ಈಡಾದವರಿಗೆ ಉಚಿತ ಊಟದ ವ್ಯವಸ್ಥೆ

ಉಪಮುಖ್ಯಮಂತ್ರಿಯಾಗಿದ್ದ ವೇಳೆ, ಬಿಬಿಎಂಪಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯ ಅಹವಾಲು ಆಲಿಸುತ್ತಿರುವ ನಾಯಕ

ಸರ್ವರಿಗೂ ನೆರವು... ದಿನಸಿ ಕಿಟ್ ವಿತರಣೆಯ ಸಂದರ್ಭ

ನಡುರಸ್ತೆಯಲ್ಲೇ ವಾಹನ ಅಡ್ಡ ಹಾಕುವ ಪೊಲೀಸರು ● ತುರ್ತು ಕೆಲಸಕ್ಕೆ ಹೊರಟವರಿಗೂ ತೊಂದರೆ

ಎಗ್ಗಿಲ್ಲದ ದಂಡ ವಸೂಲಿ; ಕಿರಿಕಿರಿ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಾಹನಗಳ ಸುಗಮ ಸಂಚಾರ ಕಡೆಗೆ ಗಮನ ಹರಿಸಬೇಕಾದ ನಗರದ ಸಂಚಾರ ಪೊಲೀಸರು, ಇತ್ತೀಚಿನ ದಿನಗಳಲ್ಲಿ ದಂಡ ವಸೂಲಿಗಷ್ಟೇ ಸೀಮಿತವಾಗುತ್ತಿದ್ದಾರೆ. ಆ ಕೆಲಸದಲ್ಲೂ ನಿಯಮ ಪಾಲನೆ ಮಾಡದೇ ಮನಸ್ಸಿಗೆ ಬಂದ ರೀತಿಯಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸಿ ಜನರಿಗೆ ಕಿರಿಕಿರಿಯನ್ನುಂಟು ಮಾಡುತ್ತಿದ್ದಾರೆ ಎಂಬುದು ಜನರ ಆರೋಪ.

ರಾಜಧಾನಿಯ ವಾಹನ ದಟ್ಟಣೆ ನಿಯಂತ್ರಿಸಿ ಜನರ ಓಡಾಟಕ್ಕೆ ಅನುಕೂಲ ಕಲ್ಪಿಸಬೇಕಾದ ಪೊಲೀಸರು, ಪ್ರತಿ ಠಾಣೆಯಿಂದ ಎಷ್ಟು ದಂಡ ವಸೂಲಿ ಆಯಿತು ? ಯಾವೆಲ್ಲ ದಂಡ ವಿಧಿಸಲಾಯಿತು ? ಎಂಬ ಲೆಕ್ಕಾಚಾರದಲ್ಲಿ ಕಾಲ ಕಳೆಯುತ್ತಿರುವುದೇ ಸಮಸ್ಯೆ ಉಲ್ಬಣಕ್ಕೆ ಕಾರಣ.

ಬಹುತೇಕ ವೃತ್ತಗಳಲ್ಲಿ ಒಬ್ಬರೇ ಕಾನ್‌ಸ್ಟೆಬಲ್ ದಟ್ಟಣೆ ನಿಯಂತ್ರಣ ಮಾಡುತ್ತಿದ್ದಾರೆ. ಅದೇ ವೃತ್ತದ ಬಳಿಯಲ್ಲೇ ಎಎಸ್‌ಐ, ಹೆಡ್ ಕಾನ್‌ಸ್ಟೆಬಲ್, ಎರಡಕ್ಕಿಂತ ಹೆಚ್ಚು ಕಾನ್‌ಸ್ಟೆಬಲ್‌ಗಳು ದಂಡ ಸಂಗ್ರಹ ಕೆಲಸದಲ್ಲಿ ನಿರತರಾಗಿರುತ್ತಾರೆ. ದಟ್ಟಣೆಗೂ ತಮಗೂ ಯಾವುದೇ ಸಂಬಂಧವಿಲ್ಲದಂತೆ ವರ್ತಿಸುತ್ತಾರೆ. ಅವರು ರಸ್ತೆ ಮಧ್ಯೆಯೇ ವಾಹನಗಳನ್ನು ಅಡ್ಡಗಟ್ಟುವುದರಿಂದಲೂ ದಟ್ಟಣೆ ಸಮಸ್ಯೆ ಮತ್ತಷ್ಟು ಹೆಚ್ಚಾಗುತ್ತಿದೆ. ಇಂಥ ದೃಶ್ಯಗಳು ನಗರದಲ್ಲಿ ನಿತ್ಯವೂ ನಮಗೆ ಕಾಣಸಿಗುತ್ತವೆ.

'ದಂಡ ಸಂಗ್ರಹ ಮಾಡುವ ವೇಳೆ ಯಾವೆಲ್ಲ ನಿಯಮಗಳನ್ನು ಪಾಲಿಸಬೇಕು' ಎಂಬ ಬಗ್ಗೆ ಮೋಟಾರು ವಾಹನಗಳ ಕಾಯ್ದೆಯಡಿ ಉಲ್ಲೇಖಿಸಲಾಗಿದೆ. ಆ ನಿಯಮಗಳು ತಮಗೆ ಸಂಬಂಧವಿಲ್ಲವೆಂಬಂತೆ ವರ್ತಿಸುತ್ತಿರುವ ಬಹುತೇಕ ಸಂಚಾರ ಪೊಲೀಸರು, ದಾಖಲೆಗಳ ಪರಿಶೀಲನೆ ನೆಪದಲ್ಲಿ ಸಿಕ್ಕ ಸಿಕ್ಕ ವಾಹನಗಳನ್ನು ಅಡ್ಡಗಟ್ಟುತ್ತಿರುವುದು ಜನರ ಸಿಟ್ಟಿಗೆ ಕಾರಣವಾಗಿದೆ.

ದಾಖಲೆಗಳು ಸಮರ್ಪಕವಾಗಿದ್ದರೂ ವಾಹನದ ಸಣ್ಣಪುಟ್ಟ ತಪ್ಪುಗಳನ್ನು ಹುಡುಕಿ ದಂಡ ಸಂಗ್ರಹ ಮಾಡುತ್ತಿದ್ದಾರೆ. 'ಒಮ್ಮೆ ಪೊಲೀಸರು ವಾಹನ ತಡೆದರೆ, ಎಷ್ಟೇ ದಾಖಲೆ ತೋರಿಸಿದರೂ ದಂಡ ವಿಧಿಸದೇ ಬಿಡುವುದಿಲ್ಲ' ಎಂಬುದು ಎಲ್ಲರಿಗೂ ಗೊತ್ತಾಗಿದೆ. ಪೊಲೀಸರ ವರ್ತನೆ ಬಗ್ಗೆ ಹಲವು ಸಾರ್ವಜನಿಕರು, ಹಿರಿಯ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂಬುದು ಜನರ ದೂರು.

ಕಮಿಷನರ್ ಅವರಿಗೆ ಮನವಿ ಮಾಡಿರುವ ಬಸವನಗುಡಿಯ ನಿವಾಸಿಯೊಬ್ಬರು, 'ರಸ್ತೆಯಲ್ಲಿ ವಾಹನಗಳನ್ನು ಅಡ್ಡಗಟ್ಟಿ ಸುಖಾಸುಮ್ಮನೇ ದಂಡ ಹಾಕುವ ಹಿಂಸಾತ್ಮಕ ಕೆಲಸಗಳಿಂದ ಮುಕ್ತಿ ಕೊಡಿ' ಎಂದರು.

ಸಿಂಗಸಂದ್ರ ಬಡಾವಣೆ ನಿವಾಸಿಯೂ ಆಗಿರುವ ಕಾರು ಚಾಲಕ ರಘು, 'ಎಲ್ಲ ದಾಖಲೆಗಳು ಇದ್ದರೂ ಪೊಲೀಸರು ಸುಖಾಸುಮ್ಮನೆ ಹಿಡಿಯುತ್ತಾರೆ. ದಾಖಲೆ ತೋರಿಸಿದಾಗ ಬೇರೆ ಬೇರೆ ಪ್ರಶ್ನೆ ಕೇಳುತ್ತಾರೆ. ನಿಯಮ ಉಲ್ಲಂಘನೆ ಪ್ರಕರಣಗಳು ಇಲ್ಲದಿದ್ದರೂ ₹ 200ರಿಂದ ₹ 300 ಲಂಚ ಕೇಳುತ್ತಾರೆ. ಕೋವಿಡ್ ಸಂದರ್ಭದಲ್ಲಿ ನಮ್ಮಂಥ ಚಾಲಕರು ಜೀವನ ನಡೆಸುವುದೇ ಕಷ್ಟವಾಗಿದೆ. ಲಂಚ ಎಲ್ಲಿಂದ ಕೊಡುವುದು' ಎಂದು ಪ್ರಶ್ನಿಸಿದರು.

ಜಯನಗರದ ಖಾಸಗಿ ಕಂಪನಿ ಉದ್ಯೋಗಿ ಸುಧೀಂದ್ರ, 'ಜನರ ಓಡಾಟ ಹೆಚ್ಚಿರುವ ಹಾಗೂ ವಾಹನಗಳ ದಟ್ಟಣೆ ಇರುವ ಕಡೆಗಳಲ್ಲಿ ಸುಗಮ ಸಂಚಾರಕ್ಕಾಗಿ ಪೊಲೀಸರು ಹೆಚ್ಚು ಕೆಲಸ ಮಾಡುವುದಿಲ್ಲ. ಬದಲಿಗೆ, ವಾಹನಗಳನ್ನು ತಡೆದು ದಂಡ ವಸೂಲಿಯಲ್ಲಿ ನಿರತರಾಗಿರುತ್ತಾರೆ' ಎಂದೂ ಆರೋಪಿಸಿದರು.

ತುರ್ತು ಕೆಲಸಗಳಿಗೂ ಅಡ್ಡಿ: ಆಸ್ಪತ್ರೆ, ಔಷಧಿ ಅಂಗಡಿ ಹಾಗೂ ಇತರೆ ತುರ್ತು ಕೆಲಸಗಳಿಗೆ ಹೊರಟವರನ್ನು ಅಡ್ಡಗಟ್ಟುವ ಪೊಲೀಸರು, ದಂಡ ಸಂಗ್ರಹ ನೆಪದಲ್ಲಿ ಕಿರುಕುಳ ನೀಡುತ್ತಿರುವ ದೂರುಗಳು ಇವೆ.

'ಪತ್ನಿಯನ್ನು ಕರೆದುಕೊಂಡು ಬೈಕ್‌ನಲ್ಲಿ ಆಸ್ಪತ್ರೆಗೆ ಹೊರಟಿದ್ದೆ. ಇಬ್ಬರೂ ಹೆಲ್ಮೆಟ್ ಧರಿಸಿದ್ದೆವು. ಹಳೇ ಮದ್ರಾಸ್ ರಸ್ತೆಯಲ್ಲಿ ನನ್ನನ್ನು ತಡೆದಿದ್ದ ಪೊಲೀಸರು, ವಾಹನಗಳ ದಾಖಲೆ ಕೇಳಿದರು. ತೋರಿಸಿದ್ದೆ. ಬೇಗ ಬಿಡಿ ಆಸ್ಪತ್ರೆಗೆ ಹೋಗಬೇಕೆಂದು ವಿನಂತಿಸಿದ್ದೆ. ಅದಕ್ಕೆ ಒಪ್ಪದ ಕಾನ್‌ಸ್ಟೆಬಲ್, ಎಎಸ್‌ಐ ಜೊತೆ ಮಾತನಾಡಿ ಎಂದಿದ್ದರು' ಎಂಬುದಾಗಿ ದೊಮ್ಮಲೂರು ನಿವಾಸಿ ಮಂಜುನಾಥ್ ಹೇಳಿದರು.

'ಎಎಸ್‌ಐ ಬಳಿ ಹೋದಾಗ, 'ಎಷ್ಟು ಇದೆಯೋ ಅಷ್ಟು ಕೊಟ್ಟು ಹೋಗಿ' ಎಂದಿದ್ದರು. ಎಲ್ಲ ದಾಖಲೆ ಇದೆ. ಹೆಲ್ಮೆಟ್ ಧರಿಸಿದ್ದೇವೆ. ಏಕೆ ಹಣ ಕೊಡಬೇಕು ಎಂದು ಪ್ರಶ್ನಿಸಿದಾಗ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿದ್ದರು' ಎಂದೂ ಅವರು ತಮಗಾದ ಅನುಭವ ಬಿಚ್ಚಿಟ್ಟರು.

ಅಡಗಿ ಕುಳಿತು ದಂಡ ಸಂಗ್ರಹ: 'ನಿತ್ಯವೂ ಇಂತಿಷ್ಟು ದಂಡ ಸಂಗ್ರಹಿಸಬೇಕು' ಎಂಬುದಾಗಿ ಪ್ರತಿಯೊಂದು ಸಂಚಾರ ಠಾಣೆಗೂ ಗುರಿ ನೀಡಲಾಗುತ್ತಿದೆ. ಇದೇ ಕಾರಣಕ್ಕೆ ಠಾಣೆ ಸಿಬ್ಬಂದಿ, ನಾನಾ ಕಸರತ್ತು ನಡೆಸಿ ಕಾನೂನು ಮೀರಿ ಅಶಿಸ್ತಿನ ಮೂಲಕ ದಂಡ ಸಂಗ್ರಹ ಮಾಡುತ್ತಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ ಎನ್ನುತ್ತಾರೆ ಪೊಲೀಸರ 'ದಂಡಪ್ರಯೋಗ' ಬಲ್ಲ ನಿವೃತ್ತ ಅಧಿಕಾರಿಯೊಬ್ಬರು.

ಬಸವೇಶ್ವರನಗರದ ನಿವಾಸಿ ಪ್ರೇಮ್, 'ರಸ್ತೆ ಪಕ್ಕದ ಕಟ್ಟಡ ಹಾಗೂ ವಾಹನಗಳ ಹಿಂಬದಿಯಲ್ಲಿ ಅಡಗಿ ಕುಳಿತು ಪೊಲೀಸರು ವಾಹನ ಹಿಡಿಯುತ್ತಾರೆ. ಇದು ದಂಡ ವಸೂಲಿಯೋ ಅಥವಾ ಸುಲಿಗೆಯೋ ಎಂಬುದೇ ಗೊತ್ತಾಗುತ್ತಿಲ್ಲ. ಈ ರೀತಿ ದಂಡ ಸಂಗ್ರಹದಿಂದ ಅಪಘಾತಗಳು ಹೆಚ್ಚಾಗುತ್ತಿದ್ದು, ಇದಕ್ಕೆ ಯಾರು ಹೊಣೆ' ಎಂದು ಪ್ರಶ್ನಿಸಿದರು.

ಟೋಯಿಂಗ್ ಮಾಡಿ ನಗರದ ಪುರಭವನ ಎದುರು ನಿಲ್ಲಿಸಿದ್ದ ವಾಹನಗಳ ಮಾಲೀಕರಿಂದ ಪೊಲೀಸರು ದಂಡ ಸಂಗ್ರಹಿಸಿದರು

2021ರ ಜನವರಿಯಿಂದ ಜೂನ್‌ವರೆಗೆ ದಂಡ ವಸೂಲಿ ಅಂಕಿ–ಅಂಶ

45.21 ಲಕ್ಷ — ದಾಖಲಾದ ಪ್ರಕರಣಗಳು

₹64.12 ಕೋಟಿ — ವಿಧಿಸಲಾದ ದಂಡ

6.79 ಲಕ್ಷ — ದಂಡ ವಿಧಿಸಿದ ವಾಹನಗಳ ಸಂಖ್ಯೆ

ನಿತ್ಯ ಸಂಚಾರ ಸದಾ ಕಿರಿಕಿರಿ 1

45 ನಗರದಲ್ಲಿರುವ ಸಂಚಾರ ಠಾಣೆಗಳು

4,602 ಸಂಚಾರ ಪೊಲೀಸರ ಸಂಖ್ಯೆ

ವರ್ಷವಾರು ದಂಡ ಸಂಗ್ರಹ

ವರ್ಷ	ಪ್ರಕರಣಗಳ ಸಂಖ್ಯೆ(ಲಕ್ಷಗಳಲ್ಲಿ)	ದಂಡ ಸಂಗ್ರಹ (₹ಕೋಟಿಗಳಲ್ಲಿ)
2012	52.04	₹53.85
2013	54.33	₹56.98
2014	74.36	₹65.92
2015	76.26	₹70.44
2016	91.80	₹66.97
2017	94.63	₹112
2018	83.89	₹81.25
2019	79.87	₹89.18
2020	84.06	₹98.08

ಯಾವೆಲ್ಲ ವಾಹನಗಳ ಮೇಲೆ ಎಷ್ಟು ಪ್ರಕರಣ

ವಾಹನ	ಪ್ರಕರಣ ಸಂಖ್ಯೆ
ಬಸ್‌ಗಳು	23,581
ಸರಕು ಸಾಗಣೆ ವಾಹನ	25,285
ಆಟೊ	11,297
ಲಘುವಾಹನ	14,134
ದ್ವಿಚಕ್ರ ವಾಹನ	5,37,264
ಟೆಂಪೊ	67663

ಸಂಚಾರ ಸೂಚನೆಗಳ ಅರಿವಿರಲಿ

ಕೆ.ಆರ್ ಮಾರುಕಟ್ಟೆ ವೃತ್ತದ ಎಸ್‌ಜೆ.ಪಿ ರಸ್ತೆಯಲ್ಲಿ ಸಂಚಾರಿ ನಿಯಮ ಉಲ್ಲಂಘಿಸಿದ ಜನರ ಬಳಿ ದಂಡ ವಸೂಲಿ ಮಾಡುತ್ತಿರುವ ಪೊಲೀಸರು

ಸುದ್ದಿ 2 ನಿಮಿಷ

ಜಿಂದಾಲ್‌ಗೆ ಭೂಮಿ: ಯಥಾಸ್ಥಿತಿ ವಿಸ್ತರಣೆಗೆ ಹೈಕೋರ್ಟ್ ಆದೇಶ

ಬೆಂಗಳೂರು: ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಜಮೀನನ್ನು ಜೆಎಸ್‌ಡಬ್ಲ್ಯು ಕಂಪನಿಗೆ ಮಾರಾಟ ಮಾಡುವ ಪ್ರಕ್ರಿಯೆಗೆ ನೀಡಿರುವ ಯಥಾಸ್ಥಿತಿ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.

ಹೊಸ ಸಚಿವ ಸಂಪುಟ ರಚನೆ ಆಗಿರುವುದರಿಂದ ಹೊಸದಾಗಿ ಅಫಿಡವಿಟ್ ಸಲ್ಲಿಸಲು ಸರ್ಕಾರದ ಪರ ವಕೀಲರು ಕಾಲಾವಕಾಶ ಕೋರಿದರು. ಏಪ್ರಿಲ್ 26ರ ಸಂಪುಟ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದರೂ, ಬಳಿಕ ನಡೆದ ಸಭೆಗಳಲ್ಲಿ ಅದನ್ನು ಖಚಿತಪಡಿಸಿಲ್ಲ ಎಂದು ವಿವರಿಸಿದರು.

ಯಥಾಸ್ಥಿತಿ ಕಾಯ್ದುಕೊಳ್ಳುವ ಬಗ್ಗೆ ಸರ್ಕಾರ ಭರವಸೆ ನೀಡಿದ ಬಳಿಕ ವಿಚಾರಣೆಯನ್ನು ಪೀಠ ಆ.31ಕ್ಕೆ ಮುಂದೂಡಿತು. 'ಸಂಪುಟದ ಹಲವು ಸಚಿವರ ವಿರೋಧ ಇದ್ದರೂ ಕಡಿಮೆ ದರದಲ್ಲಿ ಸರ್ಕಾರದ ಜಾಗವನ್ನು ಜೆಎಸ್‌ಡಬ್ಲ್ಯು ಕಂಪನಿಗೆ ಮಾರಾಟ ಮಾಡಲು ಸರ್ಕಾರ ಹೊರಟಿದೆ' ಎಂದು ಕೆ.ಎ. ಪಾಲ್ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ಹಲಸುಲಿಗೆ ನುಗ್ಗಿದ ಕಾಡಾನೆ

ಸಕಲೇಶಪುರ: ತಾಲ್ಲೂಕಿನ ಹಲಸುಲಿಗೆ ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಕಾಡಾನೆಗಳು ನುಗ್ಗಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಗ್ರಾಮ ಪಂಚಾಯಿತಿ ಮುಂಭಾಗದ ಮುಖ್ಯ ರಸ್ತೆಯಲ್ಲೇ ಕೆಲವು ನಡೆದು ಬಂದರೆ, ಮತ್ತೊಂದು ಆನೆ ಜನನಿಬಿಡ ರಸ್ತೆಯಲ್ಲಿಯೇ ಸುಮಾರು ಅರ್ಧ ಕಿ.ಮೀ. ದೂರ ಸಾಗಿತು. ಪಾದಚಾರಿಗಳು, ಮನೆಯಂಗಳದಲ್ಲಿದ್ದವರು ಹೆದರಿ ಓಡಿ ಹೋದರು.

'ಕಾಡಾನೆಗಳು ಭತ್ತದ ಸಸಿ ಮಡಿಗಳನ್ನು ತುಳಿಯುತ್ತವೆ. ಪೈರನ್ನು ತಿಂದುಹಾಕುತ್ತವೆ. ಕಟಾವು ಹಂತಕ್ಕೆ ಬಂದ ಬೆಳೆಯನ್ನೂ ನಾಶ ಮಾಡುತ್ತವೆ. ಹೀಗಾಗಿ ಭತ್ತ ಬೆಳೆಯುವುದನ್ನೇ ನಿಲ್ಲಿಸಬೇಕಾಗಿದೆ' ಎಂದು ಹಲಸುಲಿಗೆಯ ರೈತ ಎಚ್.ವಿ. ಗಿರೀಶ್ ಅಲವತ್ತುಕೊಂಡರು.

'ಆನೆಗಳು ಕದಲದೇ ನಿಲ್ಲುವುದರಿಂದ ಕಾಫಿ ತೋಟಕ್ಕೆ ಹೋಗಲು ಹಿಂಜರಿಯುವಂತಾಗಿದೆ. ತೋಟದಲ್ಲಿ ಅನೇಕ ಕೆಲಸಗಳು ಬಾಕಿ ಉಳಿದಿವೆ. ಕಾರ್ಮಿಕರು ಕೆಲಸಕ್ಕೆ ಬರುತ್ತಿಲ್ಲ' ಎಂದು ಹಸಿಡೆ ಗ್ರಾಮದ ರೈತರ ದಯಾನಂದ್ ಹೇಳಿದರು.

ರಸ್ತೆ ಅಪಘಾತ ತಡೆಗೆ ಜಾಗೃತಿ

ಬೆಂಗಳೂರು: ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್ 'ರಾಷ್ಟ್ರೀಯ ಮೂಳೆ ಮತ್ತು ಕೀಲು ದಿನ'ದ ಪ್ರಯುಕ್ತ ಸಾಮಾಜಿಕ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

'ಈ ವರ್ಷವು ರಸ್ತೆ ಅಪಘಾತ ಮತ್ತು ದೈಹಿಕ ಗಾಯದಿಂದ ಉಂಟಾಗುತ್ತಿರುವ ಸಾವು ಪ್ರಕರಣಗಳನ್ನು ಕೇಂದ್ರೀಕರಿಸಲಾಗುತ್ತಿದೆ. 2018ರ ವಿಶ್ವ ರಸ್ತೆ ಅಂಕಿ ಅಂಶದ ಪ್ರಕಾರ ರಸ್ತೆ ಅಪಘಾತ ಸಾವಿನಲ್ಲಿ ಭಾರತವು ಪ್ರಪಂಚದಲ್ಲಿಯೇ ಅಗ್ರ ಸ್ಥಾನದಲ್ಲಿದೆ. 2019ರಲ್ಲಿ 4.49 ಲಕ್ಷ ರಸ್ತೆ ಅಪಘಾತಗಳು ದೇಶದಲ್ಲಿ ನಡೆದಿದ್ದು, 1.51 ಲಕ್ಷ ಮಂದಿ ಸಾವಿಗೀಡಾಗಿದ್ದಾರೆ. ಶೇ 69.3ರಷ್ಟು ಮಂದಿ 18ರಿಂದ 45 ವರ್ಷದೊಳಗಿನವರಾಗಿದ್ದಾರೆ. ರಸ್ತೆ ಅಪಘಾತ ಸಂಭವಿಸಿದ ಕೂಡಲೇ ನಿಗದಿತ ಅವಧಿಯೊಳಗೆ ವೈದ್ಯಕೀಯ ಆರೈಕೆ ಮಾಡದಿರುವುದರಿಂದ ಈ ಸಾವುಗಳು ಸಂಭವಿಸುತ್ತಿವೆ. ಅವನ್ನು ತಡೆಯಬೇಕಿದೆ' ಎಂದು ಅಸೋಸಿಯೇಷನ್ ಅಧ್ಯಕ್ಷ ಡಾ.ಎಚ್.ಎಸ್. ಚಂದ್ರಶೇಖರ್ ತಿಳಿಸಿದ್ದಾರೆ. 'ರಸ್ತೆ ಅಪಘಾತ ಸಂಭವಿಸಿದ ತಕ್ಷಣ ಸರಿಯಾದ ಪ್ರಥಮ ಚಿಕಿತ್ಸೆ ಒದಗಿಸಿದಲ್ಲಿ ಅನೇಕ ಜೀವಗಳನ್ನು ಉಳಿಸಬಹುದು. ಹೀಗಾಗಿ, ಈ ವರ್ಷ 1ಲಕ್ಷ ಜೀವರಕ್ಷಕರನ್ನು ಸೃಷ್ಟಿಸುವ ಗುರಿ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು, ಪೊಲೀಸರು, ಸಾರ್ವಜನಿಕರಿಗೆ ಈ ಬಗ್ಗೆ ತರಬೇತಿ ನೀಡಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಅಪ್ಪಗೆರೆ ಗ್ರಾಮದಲ್ಲಿ ಅಕ್ರಮವಾಗಿ ಮಗು ಪಾಲನೆ ಪ್ರಕರಣ

ಶಿಶು ಮಾರಾಟ ಜಾಲದ ಶಂಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಅಪ್ಪಗೆರೆ ಗ್ರಾಮದಲ್ಲಿ ಮಹಿಳೆಯೊಬ್ಬರು ಅಕ್ರಮವಾಗಿ ಮಗು ಪಾಲನೆ ಮಾಡುತ್ತಿದ್ದ ಪ್ರಕರಣವು ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಚನ್ನಪಟ್ಟಣ ಹಾಗೂ ಬೆಂಗಳೂರಿನಲ್ಲಿ ಶಿಶು ಮಾರಾಟ ಜಾಲ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಅಧಿಕಾರಿಗಳು ಅನುಮಾನ ವ್ಯಕ್ತಪಡಿಸಿದ್ದಾರೆ.

ಅಪ್ಪಗೆರೆ ಗ್ರಾಮದಲ್ಲಿ ಜುಲೈ ತಿಂಗಳಿನಲ್ಲಿ ಮಹಿಳೆಯೊಬ್ಬರು ನವಜಾತ ಶಿಶುವೊಂದನ್ನು ನನ್ನ ಮಗು ಎಂದು ಹೇಳಿಕೊಂಡು ಪಾಲನೆ ಮಾಡುತ್ತಿದ್ದರು. ಮಗುವಿನ ಜನನ ವಿಚಾರ ದಾಖಲು ಮಾಡಿಕೊಳ್ಳಲು ಅಂಗನವಾಡಿ ಕಾರ್ಯಕರ್ತೆ ಹೋಗಿದ್ದಾಗ ಮಗುವಿನ ಆಸ್ಪತ್ರೆಯ ದಾಖಲಾತಿಗಳು ಇಲ್ಲದ ವಿಚಾರ ಗೊತ್ತಾಗಿದೆ. ಅನುಮಾನಗೊಂಡ ಅಂಗನವಾಡಿ ಕಾರ್ಯಕರ್ತೆ ಸಿಡಿಪಿಒಗೆ ದೂರು ನೀಡಿದ್ದರು. ಮಕ್ಕಳ ಕಲ್ಯಾಣ ಇಲಾಖಾ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಬಂದ ಸಿಡಿಪಿಒ ಪರಿಶೀಲನೆ ನಡೆಸಿದ್ದರು.

ಮಹಿಳೆ ಅಧಿಕಾರಿಗಳ ಜೊತೆ ಇದು ನನ್ನ ಮಗುವಲ್ಲ. ನಾನು ಶಿಶುವನ್ನು ದತ್ತು ಪಡೆದಿರುವುದಾಗಿ ತಿಳಿಸಿದ್ದಳು. ಆಗ ಅಧಿಕಾರಿಗಳು ತನಿಖೆ ನಡೆಸಿದಾಗ ಆಕೆ ಕಾನೂನು ಪ್ರಕಾರ ದತ್ತು ಪಡೆದಿರುವ ದಾಖಲೆಗಳು ಆಕೆಯ ಬಳಿ ಇರಲಿಲ್ಲ. ಅಧಿಕಾರಿಗಳು ಈ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದರು. ಆಗ ಪೊಲೀಸರು ದತ್ತು ಪಡೆದ ಮಹಿಳೆ ಹಾಗೂ ದತ್ತು ಕೊಟ್ಟ ಮಹಿಳೆಯನ್ನು ಬಂಧಿಸಿದ್ದರು.

ನರ್ಸ್ ಬಂಧನ: ಈ ಬಗ್ಗೆ ತನಿಖೆ ಮುಂದುವರಿಸಿದ್ದ ಪೊಲೀಸರಿಗೆ ಈ ಜಾಲದಲ್ಲಿ ಇನ್ನೂ ಹಲವು ಮಂದಿ ಇರುವ ಬಗ್ಗೆ ಮಾಹಿತಿ ದೊರೆತಿದ್ದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ನರ್ಸ್‌ಗಳು ಮತ್ತು ಸಾರ್ವಜನಿಕ ಆಸ್ಪತ್ರೆಯ ಒಬ್ಬ ಸಹಾಯಕಿ ಸೇರಿ 7 ಮಂದಿಯನ್ನು ಬಂಧಿಸಿದ್ದಾರೆ. ನರ್ಸ್ ಹಾಗೂ ಆಸ್ಪತ್ರೆಯ ಸಹಾಯಕಿ ಬಂಧನವಾಗಿರುವ ಕಾರಣ ಮಕ್ಕಳ ಮಾರಾಟ ಜಾಲ ಕಾರ್ಯನಿರ್ವಹಿಸುತ್ತಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ.

ತಾಲ್ಲೂಕಿನ ಮತ್ತೀಕೆರೆ ಶೆಟ್ಟಿಹಳ್ಳಿ ಗ್ರಾಮದ ಮಹಿಳೆ ಮದ್ದೂರಿನ ವ್ಯಕ್ತಿಯೊಬ್ಬರನ್ನು ವಿವಾಹವಾಗಿದ್ದರು. ಈಕೆಯ ಪತಿ ಬೆಂಗಳೂರಿನ ಬಿಬಿಎಂಪಿಯಲ್ಲಿ ಕೆಲಸ ಮಾಡುತ್ತಿದ್ದರು. ಈಕೆ ಮದುವೆಯಾಗಿ ಹಲವು ವರ್ಷ ಕಳೆದರೂ ಮಕ್ಕಳಾಗಿರಲಿಲ್ಲ. ತನಗೆ ಮಕ್ಕಳಾಗುವುದಿಲ್ಲ ಎಂಬುದು ತಿಳಿಯುತ್ತಿದ್ದಂತೆ ಎಲ್ಲಿ ಪತಿ ನನ್ನನ್ನು ದೂರ ಮಾಡುವರೊ ಎಂಬ ಭಯದಿಂದ ಈಕೆ ಪತಿಗೆ ತಾನು ಗರ್ಭಿಣಿ ಎಂದು ನಂಬಿಸಿ, ಮನೆಯಿಂದ ಹೊರಬಂದು ತವರುಮನೆಗೂ ಹೋಗದೆ ತಾಲ್ಲೂಕಿನ ಅಪ್ಪಗೆರೆಯಲ್ಲಿ ಒಬ್ಬರೇ ವಾಸವಾಗಿದ್ದರು. 'ನಾನು ಗರ್ಭಿಣಿ' ಎಂದು ಪತಿಗೆ ಹೇಳಿ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿಕೊಂಡಿದ್ದೇನೆ ಎಂದು ಹೊಟ್ಟೆಗೆ ಬಟ್ಟೆ ಹಾಕಿಕೊಂಡು ಪತಿಯನ್ನು ನಂಬಿಸಿ 7 ತಿಂಗಳು ಕಳೆದ ನಂತರ ಸೀಮಂತವನ್ನು ಸಹ ಮಾಡಿಸಿಕೊಂಡಿದ್ದರು ಎಂದು ತಿಳಿದುಬಂದಿದೆ.

ಬಾಣಂತಿ ನಾಟಕ: 'ಒಂಬತ್ತು ತಿಂಗಳು ಕಳೆಯುತ್ತಿದ್ದಂತೆ ನವಜಾತು ಶಿಶುವನ್ನು ಹಣವನ್ನು ಕೊಟ್ಟು ಖರೀದಿಸಿ, ಮಗುವಿನ ಜನನವಾಯಿತು' ಎಂದು ಹೇಳಿ ತಲೆಗೆ ಬಟ್ಟೆ ಕಟ್ಟಿಕೊಂಡು ತಾನು ಬಾಣಂತಿ ಎಂದು ಪತಿಯನ್ನು ನಂಬಿಸಿದ್ದಾಳೆ. ಶಿಶುವಿನ ಜನನವಾಗಿದೆ ಎಂದು ತಿಳಿದ ಅಂಗನವಾಡಿ ಕಾರ್ಯಕರ್ತೆ ಮಗುವಿನ ವಿವರಗಳನ್ನು ದಾಖಲೆ ಮಾಡಿಕೊಳ್ಳಲು ಆಕೆಯ ಮನೆಗೆ ತೆರಳಿ ಮಗುವಿನ ಕಾರ್ಡ್ ಕೊಡಲು ಕೇಳಿದಾಗ ಆ ಮಹಿಳೆ ತಡವರಿಸಿದ್ದಾಳೆ. ಮಗುವಿನ ಕಾರ್ಡ್ ಇಲ್ಲದ್ದನ್ನು ಮನಗಂಡ ಅಂಗನವಾಡಿ ಕಾರ್ಯಕರ್ತೆ ಅನುಮಾನಗೊಂಡು ಸಿಡಿಪಿಒಗೆ ತಿಳಿಸಿದ್ದಾರೆ. ಆಗ ಇಡೀ ಪ್ರಕರಣ ಹೊರಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪ್ಪಗೆರೆ ಮಹಿಳೆಯು ತನಗೆ ಪರಿಚಿತಳಾಗಿದ್ದ ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಸಹಾಯಕಿಯೊಬ್ಬರ ಮೂಲಕ ಶಿಶುವನ್ನು ಖರೀದಿಸುವ ಕೃತ್ಯಕ್ಕೆ ಮುಂದಾಗಿದ್ದಳು. ಸಾರ್ವಜನಿಕ ಆಸ್ಪತ್ರೆಯ ಸಹಾಯಕಿಯು ಹಣ ಪಡೆದು ತನಗೆ ಪರಿಚಿತರಾಗಿದ್ದ ಬೆಂಗಳೂರಿನ ಇಬ್ಬರು ನರ್ಸ್‌ಗಳನ್ನು ಭೇಟಿಯಾಗಿ ಅವರ ಮೂಲಕ ಬೆಂಗಳೂರಿನ ಮಹಿಳೆಯೊಬ್ಬರಿಗೆ ಸೇರಿದ್ದ ನವಜಾತ ಶಿಶುವನ್ನು ಹಣಕೊಟ್ಟು ಖರೀದಿ ಮಾಡಿ ತಂದಿದ್ದಾರೆ. ಈ ಜಾಲದಲ್ಲಿ ಮಧ್ಯವರ್ತಿಯಾಗಿ ಬೆಂಗಳೂರಿನ ಮತ್ತೊಬ್ಬ ಮಹಿಳೆ ಸಹಕಾರ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನ ನವಜಾತ ಶಿಶುವಿನ ಮಾರಾಟ ನಡೆದಿರುವ ಕಾರಣ ಶಿಶು ಮಾರಾಟ ದಂಧೆ ರಾಜಧಾನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಬಲವಾದ ಅನುಮಾನವಿದೆ. ಬಂಧಿತ ಆರೋಪಿಗಳ ಪಟ್ಟಿಯಲ್ಲಿ ಇಬ್ಬರು ನರ್ಸ್‌ಗಳು ಮತ್ತು ಆಸ್ಪತ್ರೆಯಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿರುವ ಒಬ್ಬ ಮಹಿಳೆಯ ಹೆಸರು ಇರುವ ಕಾರಣ ಅನುಮಾನ ಬಲಗೊಂಡಿದೆ. ಪ್ರಕರಣದ ಬಗ್ಗೆ ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಕ್ಕಳನ್ನು ಸಾಕಲು ಸಾಧ್ಯವಿಲ್ಲ ಎನ್ನುವ ಬಡವರನ್ನು ಗುರಿಯಾಗಿಸಿಕೊಂಡು ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಡಿಸುವುದಾಗಿ ಹೇಳಿ ಹಣಕ್ಕೆ ಶಿಶುಗಳನ್ನು ಮಾರಾಟ ಮಾಡುತ್ತಿರುವ ವ್ಯವಸ್ಥಿತ ತಂಡವೊಂದು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ.

₹70 ಸಾವಿರಕ್ಕೆ ಮಾರಾಟ

'ಬೆಂಗಳೂರಿನಲ್ಲಿ ಪಾದರಕ್ಷೆ ಹೊಲಿಯುವ ಮಹಿಳೆಯೊಬ್ಬರಿಗೆ ಒಂಬತ್ತು ಮಕ್ಕಳಿದ್ದು, ಆಕೆ ₹70 ಸಾವಿರಕ್ಕೆ ತನ್ನ ನವಜಾತ ಶಿಶುವನ್ನು ಮಾರಾಟ ಮಾಡಿದ್ದಾಳೆ. ಈ ಪ್ರಕರಣದಲ್ಲಿ ಒಟ್ಟು 7 ಮಂದಿ ಕಾರ್ಯನಿರ್ವಹಿಸಿದ್ದು, ಇವರನ್ನೆಲ್ಲಾ ಬಂಧಿಸಲಾಗಿದೆ. ಪ್ರಕರಣದ ತನಿಖೆಯು ಪ್ರಗತಿಯಲ್ಲಿದೆ. ಇದರೊಂದಿಗೆ ಶಿಶುವಿನ ಮಾರಾಟ ಜಾಲದ ಬಗ್ಗೆ ಅನುಮಾನವಿದೆ. ಶೀಘ್ರವೇ ಇದರ ತನಿಖೆ ಪೂರ್ಣ ಮಾಡಲಾಗುವುದು' ಎಂದು ಚನ್ನಪಟ್ಟಣ ಸರ್ಕಲ್ ಇನ್‌ಸ್ಪೆಕ್ಟರ್ ಬಿ.ಶಿವಕುಮಾರ್ ತಿಳಿಸಿದರು.

ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿ 55 ಲಕ್ಷಗಳ ವೆಚ್ಚದಲ್ಲಿ ಶಾಸಕ ಬೈರತಿ ಸುರೇಶ್ ಅವರು ಹೆಬ್ಬಾಳದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಕಾಮಗಾರಿಯ ಭೂಮಿ ಪೂಜೆಯನ್ನು ಗುರುವಾರ ನೆರವೇರಿಸಿದರು. ಕಾಂಗ್ರೆಸ್ ಮುಖಂಡರಾದ ಅಬ್ದುಲ್ ವಾಜಿದ್, ಆನಂದ್ ಕುಮಾರ್, ಹೆಬ್ಬಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಾಜಿ, ಆರ್‌.ಟಿ. ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಜಾಮಿಲ್ ಅಹ್ಮದ್ ಇದ್ದರು.

ಪೊಲೀಸರ ನೋಡಿ ಪರಾರಿಯಾದ ಸವಾರರು

ಬೈಕ್‌ನಲ್ಲಿ ಸಾಗಿಸುತ್ತಿದ್ದ ₹ 17 ಲಕ್ಷ ಪತ್ತೆ

ಅಳವಂಡಿ: ವಾಹನಗಳ ದಾಖಲಾತಿ ಪರಿಶೀಲಿಸುತ್ತಿದ್ದ ಪೊಲೀಸರನ್ನು ಕಂಡ ಸವಾರರು ತಮ್ಮ ಬೈಕ್ ಬಿಟ್ಟು ಪರಾರಿಯಾಗಿದ್ದು, ಅದರಲ್ಲಿ ₹ 17 ಲಕ್ಷ ನಗದು ಹಾಗೂ ಒಂದು ಮೊಬೈಲ್ ಫೋನ್ ಪತ್ತೆಯಾಗಿದೆ.

ಅಳವಂಡಿ ಠಾಣೆ ವ್ಯಾಪ್ತಿಯಲ್ಲಿ ಪೊಲೀಸರು ಗುರುವಾರ ವಾಹನಗಳ ತಪಾಸಣೆ ಮಾಡುತ್ತಿದ್ದರು. ಈ ವೇಳೆ ಮೂರು ಬೈಕ್‌ಗಳಲ್ಲಿ 6 ಜನರು ಆ ಮಾರ್ಗದಲ್ಲಿ ಬಂದರು.ಪೊಲೀಸರನ್ನು ನೋಡಿದ ತಕ್ಷಣ ಎರಡು ಬೈಕ್‌ಗಳವರು ವೇಗವಾಗಿ ಚಾಲನೆ ಮಾಡುತ್ತ ಮುಂಡರಗಿಯತ್ತ ತೆರಳಿದರು. ಇನ್ನೊಂದು ಬೈಕ್‌ನಲ್ಲಿದ್ದ ಇಬ್ಬರು, ಬೈಕ್ ಬಿಟ್ಟು ಕಬ್ಬಿನ ಗದ್ದೆಯತ್ತ ಓಡಿ ಹೋದರು.

ಅನುಮಾನಗೊಂಡ ಪೊಲೀಸರು ಅಳವಂಡಿ ಸುತ್ತಮುತ್ತಲಿನ ಹೊಲಗಳಲ್ಲಿ ಶೋಧ ನಡೆಸಿದರು. ಆದರೂ ಅವರು ಪತ್ತೆಯಾಗಲಿಲ್ಲ. ಬೈಕ್‌ನಲ್ಲಿದ್ದ ಬ್ಯಾಗ್‌ನಲ್ಲಿದ್ದ ₹17 ಲಕ್ಷ ನಗದನ್ನು ಪೊಲೀಸರು ವಶಪಡಿಸಿ ಕೊಂಡಿದ್ದಾರೆ.

ಎಸ್‌ಪಿ ಟಿ.ಶ್ರೀಧರ್ ಸ್ಥಳಕ್ಕೆ ಧಾವಿಸಿದರು. ಡಿವೈಎಸ್‌ಪಿ ಗೀತಾ ನೇತೃತ್ವದಲ್ಲಿ 150 ಪೊಲೀಸರನ್ನು ಒಳಗೊಂಡ ನಾಲ್ಕು ತಂಡಗಳನ್ನು ರಚಿಸಿ, ಪರಾರಿಯಾದವರ ಪತ್ತೆಗೆ ಅಳವಂಡಿ-ಕಂಪ್ಲಿ ಭಾಗದ ಹೊಲ ಗದ್ದೆಗಳಲ್ಲಿ ಶ್ವಾನ ದಳದೊಂದಿಗೆ ಹುಡುಕಾಟ ನಡೆಸಲಾಯಿತು.

'ದರೋಡೆ ಮಾಡಿಕೊಂಡು ಬಂದಿರುವ ಹಣ ಇದಾಗಿರಬಹುದು. ತಪ್ಪಿಸಿಕೊಂಡವರ ಗುರುತು ಪತ್ತೆಯಾಗಿದ್ದು, ಶೀಘ್ರವೇ ಅವರನ್ನು ಪತ್ತೆಹಚ್ಚಲಾಗುವುದು' ಎಂದು ಎಸ್‌ಪಿ ಟಿ.ಶ್ರೀಧರ ತಿಳಿಸಿದರು. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಅಳವಂಡಿಯ ಜಮೀನಿಗಳಲ್ಲಿ ಪರಾರಿಯಾದವರ ಪತ್ತೆಗಾಗಿ ಪೊಲೀಸರು ಕಾರ್ಯಾಚರಣೆ ನಡೆಸಿದರು

ಸುರದೇನುಪುರ ಗ್ರಾಮದಲ್ಲಿ ಶಾಸಕ ಎಸ್‌.ಆರ್‌. ವಿಶ್ವನಾಥ್ ಚಾಲನೆ

₹1.50 ಕೋಟಿ ವೆಚ್ಚದ ಕಾಮಗಾರಿ

ಪ್ರಜಾವಾಣಿ ವಾರ್ತೆ

ಯಲಹಂಕ: ಅರಕೆರೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಪಂಚಾಯಿತಿ ಅನುದಾನದಲ್ಲಿ ₹1.50 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಸುರದೇನುಪುರ ಗ್ರಾಮದಲ್ಲಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಈ ಪಂಚಾಯಿತಿಯ ವತಿಯಿಂದ ಕಡತನಮಲೆ ಗ್ರಾಮದ ಕೆರೆಯನ್ನು ಅಭಿವೃದ್ಧಿಪಡಿಸಲಾಗಿದ್ದು, ಅತಿಕಡಿಮೆ ಅವಧಿಯಲ್ಲಿ ಹೆಚ್ಚಿನತೆರಿಗೆ ಸಂಗ್ರಹಿಸಲಾಗಿದೆ. ಕಸಮುಕ್ತ ಪಂಚಾಯಿತಿಯನ್ನಾಗಿ ಮಾರ್ಪಡಿಸಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಎಲ್ಲ ಪಂಚಾಯಿತಿಗಳು ಇದೇರೀತಿಯ ಮಾದರಿಯನ್ನು ಅನುಸರಿಸಿದರೆ ಗ್ರಾಮಗಳ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ' ಎಂದು ತಿಳಿಸಿದರು.

'ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ, ಸಿಮೆಂಟ್ ಚರಂಡಿ ನಿರ್ಮಾಣ, ಸ್ಲ್ಯಾಬ್ ಮತ್ತು ಕುಡಿಯುವ ನೀರಿನ ಕೊಳವೆಮಾರ್ಗ ಅಳವಡಿಸುವ ಹಾಗೂ ತ್ಯಾಜ್ಯ ವಿಲೇವಾರಿ ಘಟಕದ ಶೆಡ್‌ಗೆ ಗೋಡೆ ಮತ್ತು ಗ್ರಿಲ್ ನಿರ್ಮಾಣ ಮತ್ತಿತರ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ' ಎಂದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರಿಗೆ 3000 ಕಸದ ಬುಟ್ಟಿಗಳನ್ನು ವಿತರಿಸಲಾಯಿತು. ಸಾರ್ವಜನಿಕ ಸ್ಥಳಗಳಲ್ಲಿ ಘನ ಮತ್ತು ದ್ರವತ್ಯಾಜ್ಯ ಸಂಗ್ರಹಣೆಗಾಗಿ 50 ದೊಡ್ಡ ಕಸದಬುಟ್ಟಿಗಳನ್ನು ಅಳವಡಿಸಲಾಯಿತು.

ಗ್ರಾಮಪಂಚಾಯಿತಿ ಅಧ್ಯಕ್ಷ ಕೆ.ಆರ್. ತಿಮ್ಮೇಗೌಡ, ಉಪಾಧ್ಯಕ್ಷೆ ಮಂಜುಳಮ್ಮ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಪ್ಪ, ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಕೋಶಾಧ್ಯಕ್ಷ ಸತೀಶ್ ಕಡತನಮಲೆ, ಮುಖಂಡರಾದ ಎಸ್.ಎನ್.ರಾಜಣ್ಣ, ಎಂ.ಮೋಹನ್ ಕುಮಾರ್, ಹನುಮಯ್ಯ, ನಂಜೇಗೌಡ ಇದ್ದರು.

ಶಾಸಕ ಎಸ್‌.ಆರ್‌.ವಿಶ್ವನಾಥ್, ಕಡತನಮಲೆ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ ನಂತರ, ಕಸ ಸಂಗ್ರಹಿಸಲು ಗ್ರಾಮಸ್ಥರಿಗೆ ಕಸದಬುಟ್ಟಿ ವಿತರಿಸಿದರು.

ನಿಯಮ ಉಲ್ಲಂಘಿಸಿ ಮಗನ ಹುಟ್ಟುಹಬ್ಬ ಆಚರಿಸಿದ ಮಂಡ್ಯ ತಹಶೀಲ್ದಾರ್

ಪ್ರಜಾವಾಣಿ ವಾರ್ತೆ

ಮಂಡ್ಯ: ಕೋವಿಡ್ ನಿಯಮ ಉಲ್ಲಂಘಿಸಿ ಮಂಡ್ಯ ತಹಶೀಲ್ದಾರ್ ಚಂದ್ರಶೇಖರ ಶಂ ಗಾಳಿ ತಮ್ಮ ಪುತ್ರನ 1ನೇ ವರ್ಷದ ಜನ್ಮದಿನವನ್ನು ಶ್ರೀರಂಗಪಟ್ಟಣ ತಾಲ್ಲೂಕು, ಕೆಆರ್‌ಎಸ್‌ನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ಅದ್ದೂರಿಯಾಗಿ ಆಚರಿಸಿದ್ದಾರೆ.

ಚಂದ್ರಶೇಖರ್ ಅವರ ಕುಟುಂಬ ಸದಸ್ಯರು, ಆಪ್ತರು ಪಾಲ್ಗೊಂಡಿದ್ದರು. ಈ ವೇಳೆ ಯಾರೂ ಮಾಸ್ಕ್ ಧರಿಸಿರಲಿಲ್ಲ. ಕೋವಿಡ್ ಕಾರ್ಯಸೂಚಿ ಪಾಲನೆ ಮಾಡಿರಲಿಲ್ಲ, ಪರಸ್ಪರ ಅಂತರ ಕಾಯ್ದುಕೊಂಡಿರಲಿಲ್ಲ. ಕಾರ್ಯಕ್ರಮ ಆಯೋಜನೆ ಕುರಿತು ಪೊಲೀಸರಿಂದ ಯಾವುದೇ ಅನುಮತಿ ಪಡೆದಿರಲಿಲ್ಲ. ಮಧ್ಯರಾತ್ರಿವರೆಗೂ ಪಾರ್ಟಿ ಮಾಡಿ ನಿಯಮ ಉಲ್ಲಂಘನೆ ಮಾಡಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಈ ಕುರಿತು ಕೆಆರ್‌ಎಸ್ ಪೊಲೀಸರು ಪ್ರಕರಣ ದಾಖಲು ಮಾಡದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರಕರಣ ಕುರಿತು ವರದಿ ನೀಡುವಂತೆ ಜಿಲ್ಲಾಧಿಕಾರಿ ಎಸ್.ಅಶ್ವತಿ, ಶ್ರೀರಂಗಪಟ್ಟಣ ತಹಶೀಲ್ದಾರ್‌ಗೆ ಸೂಚನೆ ನೀಡಿದ್ದಾರೆ.

ಮಂಡ್ಯ ತಹಶೀಲ್ದಾರ್ ಚಂದ್ರಶೇಖರ ಶಂ ಗಾಳಿ ಆಯೋಜಿಸಿದ್ದ ಪಾರ್ಟಿಯಲ್ಲಿ ಜನಸಂದಣಿ

ಉತ್ತರ ಪ್ರದೇಶ: ಬಿಜೆಪಿ ವಿರುದ್ಧ ಕಾಂಗ್ರೆಸ್ ಅಭಿಯಾನ

ಲಖನೌ(ಪಿಟಿಐ): ಉತ್ತರ ಪ್ರದೇಶದಲ್ಲಿನ ಬಿಜೆಪಿ ಸರ್ಕಾರದ ವಿರುದ್ಧ 'ಬಿಜೆಪಿ ಅಧಿಕಾರ ಬಿಡಲಿ' ಎನ್ನುವ ಅಭಿಯಾನವನ್ನು ಆಗಸ್ಟ್ 9 ಮತ್ತು 10 ರಂದು ರಾಜ್ಯದಾದ್ಯಂತ ಕಾಂಗ್ರೆಸ್ ಹಮ್ಮಿಕೊಂಡಿದೆ.

ಈ ಅಭಿಯಾನದ ಪ್ರಯುಕ್ತ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿಭಟನೆ, ಮೆರವಣಿಗೆ, ಸಮಾವೇಶ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಇದರ ನೇತೃತ್ವವನ್ನು ಉತ್ತರ ಪ್ರದೇಶ ಕಾಂಗ್ರೆಸ್ ಉಸ್ತುವಾರಿ ಹೊಣೆ ಹೊತ್ತಿರುವ ಪ್ರಿಯಾಂಕಾ ಗಾಂಧಿ ವಾದ್ರಾ ವಹಿಸಿಕೊಳ್ಳಲಿದ್ದಾರೆ' ಎಂದು ಕಾಂಗ್ರೆಸ್ ನಾಯಕ ಅಜಯ್ ಕುಮಾರ್ ಲಲ್ಲು ತಿಳಿಸಿದ್ದಾರೆ.

'5 ವರ್ಷಗಳಲ್ಲಿ ಉತ್ತರ ಪ್ರದೇಶದ ಎಲ್ಲ ಸಮುದಾಯ ಬಿಜೆಪಿ ಆಡಳಿತ ಕಂಡು ತೀವ್ರ ನಿರಾಸೆಯಾಗಿವೆ. ಎಲ್ಲೆಡೆ ಜಂಗಲ್ ರಾಜ್ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಲಲ್ಲು ಹೇಳಿದರು.

‘ಜಮ್ಮು–ಕಾಶ್ಮೀರದಲ್ಲಿ ಈಗ ನಿಜವಾದ ಪ್ರಜಾಪ್ರಭುತ್ವ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿ ಎರಡು ವರ್ಷ ಪೂರ್ಣಗೊಳಿಸಿದ್ದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಟ್ವಿಟರ್ ಮೂಲಕ ಹರ್ಷ ವ್ಯಕ್ತಪಡಿಸಿದ್ದಾರೆ.

‘ಆಗಸ್ಟ್ 5 ವಿಶೇಷ ದಿನವಾಗಿದೆ. ಜಮ್ಮು ಮತ್ತು ಕಾಶ್ಮೀರದ ಎಲ್ಲ ನಾಗರಿಕರಿಗೂ ಸಮಾನ ಹಕ್ಕುಗಳು ದೊರೆತಿವೆ. ಸರ್ಕಾರದ ಎಲ್ಲ ಸೌಲಭ್ಯಗಳು ದೊರೆಯುತ್ತಿವೆ’ ಎಂದು ಪ್ರಧಾನಿ ಟ್ವೀಟ್ ಮಾಡಿದ್ದಾರೆ.

‘ಜಮ್ಮು ಮತ್ತು ಕಾಶ್ಮೀರದಲ್ಲಿ ನಿಜವಾದ ಪ್ರಜಾಪ್ರಭುತ್ವ ಅಭಿವೃದ್ಧಿ, ಉತ್ತಮ ಆಡಳಿತ ಮತ್ತು ಉದ್ಯೋಗ ಸೃಷ್ಟಿಯಾಗಿರುವುದನ್ನು ಕಳೆದ ಎರಡು ವರ್ಷಗಳಲ್ಲಿ ಕಂಡಿದ್ದೇವೆ. ಇದರಿಂದಾಗಿ, ದೇಶದ ಏಕತೆ ಮತ್ತು ಸಮಗ್ರತೆ ಬಲಿಷ್ಠವಾಗಿದೆ’ ಎಂದು ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ವಿಶೇಷ ಸ್ಥಾನಮಾನ ರದ್ದುಪಡಿಸಿರುವ ನಿರ್ಧಾರವನ್ನು ವಾಪಸ್ ಪಡೆಯಬೇಕು ಇಸ್ಲಾಮಿಕ್ ಸಹಕಾರ ಸಂಘಟನೆ (ಒಐಸಿ) ನೀಡಿರುವ ಸಲಹೆಯನ್ನು ಭಾರತ ತಿರಸ್ಕರಿಸಿದೆ.

ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದೆ. ಈ ವಿಷಯದಲ್ಲಿ ಒಐಸಿ ಹಸ್ತಕ್ಷೇಪ ಸಲ್ಲದು. ಭಾರತದ ಆಂತರಿಕ ವಿಷಯಗಳ ಬಗ್ಗೆ ಹೇಳಿಕೆ ನೀಡಲು ಪಟ್ಟಭದ್ರ ಹಿತಾಸಕ್ತಿಗಳಿಗೆ ಅವಕಾಶ ನೀಡಬಾರದು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ.

ಪಾಕ್ ಆಕ್ಷೇಪ: ಪಾಕಿಸ್ತಾನವು ಮತ್ತೊಮ್ಮೆ ವಿಶೇಷ ಸ್ಥಾನಮಾನ ರದ್ದುಪಡಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಭಾರತವು ಜಮ್ಮು ಮತ್ತು ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಉಲ್ಲಂಘಿಸುತ್ತಿದೆ ಎಂದು ಆರೋಪಿಸಿದೆ.

ಬಸವನಪುರ ಕೆರೆ ಒಡಲಿಗೆ ಮತ್ತೆ ಸೇರುತ್ತಿದೆ ಶೌಚ ನೀರು: ಸ್ಥಳೀಯರ ಆತಂಕ

ಮಾಯವಾಯ್ತು ಕೆರೆ ಕೋಡಿ ಹರಿದ ಖುಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಬಸವನಪುರ ಕೆರೆಯು ಮಳೆ ನೀರಿನಿಂದಲೇ ತುಂಬಿ ಕೋಡಿ ಹರಿದಾಗ, ಈ ಕೆರೆ ಉಳಿಸಲು ಹೋರಾಟ ನಡೆಸಿದ್ದ ಸ್ಥಳೀಯರು ಖುಷಿಯಲ್ಲಿ ತೇಲಿದ್ದರು. ಸ್ಥಳೀಯ ಶಾಸಕ ಬೈರತಿ ಬಸವರಾಜು ಅವರನ್ನು ಕರೆಸಿ ಕೆರೆಗೆ ಸೋಮವಾರ ಬಾಗಿನವನ್ನೂ ಅರ್ಪಿಸಿ ಸಂಭ್ರಮ ಪಟ್ಟಿದ್ದರು. ಆದರೆ, ಅವರ ಈ ಸಡಗರ ಮೂರೇ ದಿನದಲ್ಲಿ ಮರೆಯಾಗಿದೆ. ಈ ಕೆರೆಗೆ ಮತ್ತೆ ಒಳಚರಂಡಿಯ ಕೊಳಚೆ ನೀರು ಸೇರಲು ಶುರುವಾಗಿರುವುದು ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

18 ಎಕರೆ ವಿಸ್ತೀರ್ಣದ ಈ ವಿಶಾಲ ಕೆರೆಯನ್ನು ಐದು ವರ್ಷಗಳ ಹಿಂದೆ ಬಿಬಿಎಂಪಿಯು ₹ 3.5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿತ್ತು. ಕೊಳಚೆ ನೀರಿನಿಂದ ಕಲುಷಿತಗೊಂಡಿದ್ದ ಈ ಜಲಕಾಯಕ್ಕೆ ಒಳಚರಂಡಿಯ ತ್ಯಾಜ್ಯ ನೀರು ಸೇರದಂತೆ ವ್ಯವಸ್ಥೆ ಕಲ್ಪಿಸಿತ್ತು. ಆ ಬಳಿಕ ಸ್ವತಂತ್ರನಗರ, ಕೊಡಿಗೆಹಳ್ಳಿ ರಸ್ತೆಗಳ ಪ್ರದೇಶದ ಮಳೆನೀರು ಮಾತ್ರ ಈ ಕೆರೆಗೆ ಹರಿದುಬರುತ್ತಿತ್ತು.

ಬಸವನಪುರ ಕೆರೆ ಒಡಲಿಗೆ ಒಳಚರಂಡಿಯ ಕೊಳಚೆ ನೀರು ಸೇರುತ್ತಿರುವುದು

‘ಕೆರೆಯು ಈ ಬಾರಿಯ ಮಳೆಗೆ ಕೋಡಿ ಹರಿದಾಗ ಬಹಳ ಖುಷಿಯಾಗಿತ್ತು. ಮಳೆಯ ನೀರು ತಿಳಿಗೊಂಡು ಸ್ವಚ್ಛ ನೀರಿನಿಂದ ಕಂಗೊಳಿಸುತ್ತಿದ್ದ ಈ ಕೆರೆಯನ್ನು ಕಂಡು ಪುಳಕಗೊಂಡಿದ್ದೆವು. ಆದರೆ, ಎರಡು ದಿನಗಳಿಂದ ಒಳಚರಂಡಿಯ ಕೊಳಚೆ ನೀರು ಜಲಕಾಯಕ್ಕೆ ಹರಿದು ಬರುತ್ತಿದೆ. ನೀರಿನ ತಿಳಿ ಬಣ್ಣ ನಿಧಾನವಾಗಿ ಮತ್ತೆ ನೀಲಿ ಬಣ್ಣಕ್ಕೆ ತಿರುಗುತ್ತಿದೆ’ ಎಂದು ಸ್ಥಳೀಯರಾದ ಬಾಲಾಜಿ ರಘೋತ್ತಮ್ ಬಾಲಿ ಬೇಸರ ವ್ಯಕ್ತಪಡಿಸಿದರು.

‘ಈ ಕೆರೆ ಅಭಿವೃದ್ಧಿಗಾಗಿ ಸ್ಥಳೀಯರೆಲ್ಲ ಸೇರಿ ಸಾಕಷ್ಟು ಹೋರಾಟ ನಡೆಸಿದ್ದೇವೆ. ಕೆರೆಗೆ ಕೊಳಚೆ ನೀರು ಸೇರಬಾರದು ಎಂಬುದೇ ಸ್ಥಳೀಯರ ಮಹದಾಸೆಯಾಗಿತ್ತು. ಏನು ಆಗಬಾರದು ಎಂದು ಬಯಸಿದ್ದೆವೋ ಅದೇ ಆಗಿದೆ. ಕೆರೆಗೆ ಕೊಳಚೆ ನೀರು ಸೇರದಂತೆ ತಡೆಯಲು ಪ್ರತ್ಯೇಕ ಕಾಲುವೆ ನಿರ್ಮಿಸುವಾಗ ಅಧಿಕಾರಿಗಳು ಎಚ್ಚರ ವಹಿಸಬೇಕಿತ್ತು’ ಎಂದು ಅವರು ಅಭಿಪ್ರಾಯಪಟ್ಟರು.

ಈ ಕೆರೆ ಭರ್ತಿಯಾದ ಬಳಿಕ ಇದರ ನೀರು ಸೀಗೇಹಳ್ಳಿ ಕೆರೆಗೆ ಸೇರಬೇಕು. ಆದರೆ, ಈ ಕೆರೆಗೆ ನೀರು ಸಾಗಿಸಬೇಕಾದ ರಾಜಕಾಲುವೆಗಳು ಮುಚ್ಚಿಹೋಗಿವೆ. ಈ ಕೆರೆಗೆ ಈ ಹಿಂದೆ ಯಾವ ದಿಕ್ಕಿನಲ್ಲಿ ಕೋಡಿ ಇತ್ತು ಎಂಬ ಬಗ್ಗೆಯೂ ಗೊಂದಲಗಳಿವೆ. ಸದ್ಯಕ್ಕೆ ಆಗ್ನೇಯ ಹಾಗೂ ನೈರುತ್ಯ ದಿಕ್ಕುಗಳಲ್ಲಿ ಕೆರೆ ಒಡಲಿಗೆ ನೀರು ತರುವ ಕಾಲುವೆಗಳಿವೆ. ಈ ಜಲಕಾಯದ ನೀರು ಹರಿವಿಗೆ ಹಿಂದೆ ಯಾವ ವ್ಯವಸ್ಥೆ ಇತ್ತು ಎಂಬುದನ್ನು ಕಂದಾಯ ದಾಖಲೆಗಳನ್ನು ಪರಿಶೀಲಿಸಿ ತಿಳಿದುಕೊಳ್ಳಬೇಕು. ಅದಕ್ಕೆ ಅನುಗುಣವಾಗಿ ಇಲ್ಲಿ ಈ ಹಿಂದೆ ಇದ್ದ ರಾಜಕಾಲುವೆಗಳನ್ನು ಪುನರುಜ್ಜೀವನಗೊಳಿಸಬೇಕು ಎಂಬುದು ಈ ಕೆರೆ ಉಳಿಸುವ ಕಳಕಳಿ ಹೊಂದಿರುವವರ ಒತ್ತಾಯ.

‘ಲೋಪ ಸರಿಪಡಿಸಲು ಶೀಘ್ರ ಕ್ರಮ’

‘ಈ ಕೆರೆಗೆ ಒಳಚರಂಡಿಯ ಕೊಳಚೆ ನೀರು ಹೇಗೆ ಸೇರುತ್ತಿದೆ ಎಂಬುದು ತಿಳಿಯುತ್ತಿಲ್ಲ. ಸ್ಥಳೀಯರಿಂದ ಈ ಕುರಿತು ದೂರು ಬಂದ ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಜೆಸಿಬಿ ತರಿಸಿ ಅಗೆಸುವ ಮೂಲಕ ಲೋಪ ಪತ್ತೆ ಹಚ್ಚುವ ಪ್ರಯತ್ನ ನಡೆಸಿದ್ದೇವೆ. ಜಲಮಂಡಳಿಯ ಎಂಜಿನಿಯರ್‌ಗಳನ್ನು ಕರೆಸಿ ಶುಕ್ರವಾರ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಲಿದ್ದೇವೆ. ಈ ಕೆರೆ ಒಡಲಿಗೆ ಮತ್ತೆ ಕೊಳಚೆ ನೀರು ಸೇರದಂತೆ ತಡೆಯಲು ಶೀಘ್ರವೇ ಕ್ರಮ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ಕೆರೆ ವಿಭಾಗದ ಎಂಜಿನಿಯರ್ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಬಾರಿ ಮಳೆಯಾದ ಬಳಿಕ ಕೆರೆಯ ಮೇಲ್ಭಾಗದಲ್ಲಿ ಕೆಲವು ಕಡೆ ಒಳಚರಂಡಿ ತುಂಬಿ ನೀರುಹೊರಕ್ಕೆ ಹರಿಯುತ್ತಿತ್ತು. ಒಳಚರಂಡಿ ಕೊಳವೆ ಕಟ್ಟಿಕೊಂಡು ಸಮಸ್ಯೆ ಸೃಷ್ಟಿ ಆಗಿರಬಹುದು’ ಎಂದು ಅವರು ಅಭಿಪ್ರಾಯಪಟ್ಟರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.14 ಕೋಟಿ ▲	3.18 ಕೋಟಿ
ಸಕ್ರಿಯ ಪ್ರಕರಣ	1.58 ಕೋಟಿ ▲	4.08 ಲಕ್ಷ ▲
ಗುಣಮುಖ	18.12 ಕೋಟಿ ▲	3.10 ಕೋಟಿ ▲
ಸಾವು	42.75 ಲಕ್ಷ ▲	4.26 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.84 ಲಕ್ಷ ▲	44,943 ▲
ಗುಣಮುಖ	4.39 ಲಕ್ಷ ▼	40,568 ▼
ಸಾವು	10,120 ▲	462 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರೆಜಿಲ್	ಇರಾನ್
1.12 ಲಕ್ಷ ▲	40,460 ▲	39,357 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
57.57 ▲	6.65 ▼	12.54 ▲

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.33 ಲಕ್ಷ
ತಮಿಳುನಾಡು	34,230 ▲
ದೆಹಲಿ	25,060 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	63.36 ▲
ಕೇರಳ	34.93 ▲
ತಮಿಳುನಾಡು	25.69 ▲

ಪ್ರಜಾವಾಣಿ ಗ್ರಾಫಿಕ್ಸ್

‘ಕ್ವಾಡ್’ ಮೂಲಕ ಭಾರತದಲ್ಲಿ 100 ಕೋಟಿ ಡೋಸ್ ಲಸಿಕೆ ಉತ್ಪಾದನೆ

ವಾಷಿಂಗ್ಟನ್ (ಪಿಟಿಐ): ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ‘ಕ್ವಾಡ್’ ದೇಶಗಳು 2022ರ ಅಂತ್ಯದ ವೇಳೆಗೆ ಭಾರತದಲ್ಲಿ ಕನಿಷ್ಠ 100 ಕೋಟಿ ಡೋಸ್‌ಗಳನ್ನು ಉತ್ಪಾದಿಸಲಿವೆ ಎಂದು ಹೇಳಿರುವ ಶ್ವೇತಭವನ, ವಿಶ್ವದಾದ್ಯಂತ ಅಗತ್ಯವಿರುವವರಿಗೆ ಉಚಿತವಾಗಿ ಲಸಿಕೆ ನೀಡುವ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ.

‘ಕ್ವಾಡ್’ ಗುಂಪು ಆಸ್ಟ್ರೇಲಿಯಾ, ಭಾರತ, ಜಪಾನ್ ಮತ್ತು ಅಮೆರಿಕ ದೇಶಗಳನ್ನು ಒಳಗೊಂಡಿದೆ.

ಕ್ವಾಡ್ ನಾಯಕರು ಮಾರ್ಚ್‌ನಲ್ಲಿ ನಡೆದಿದ್ದ ಮೊದಲ ವರ್ಚುವಲ್ ಶೃಂಗ ಸಭೆಯಲ್ಲಿ ಆಗ್ನೇಯ ಏಷ್ಯಾ ದೇಶಗಳಿಗೆ 100 ಕೋಟಿ ಡೋಸ್ ಲಸಿಕೆ ಒದಗಿಸಲು ಒಪ್ಪಿಕೊಂಡಿದ್ದರು ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಮೆರಿಕ ಇಲ್ಲಿಯವರೆಗೆ ಜಗತ್ತಿಗೆ 11 ಕೋಟಿ ಲಸಿಕೆಗಳನ್ನು ನೀಡಿದೆ. ಇಷ್ಟು ಪ್ರಮಾಣದ ಲಸಿಕೆಯನ್ನು ಬೇರೆ ಯಾವುದೇ ದೇಶಗಳು ಇಲ್ಲಿಯವರೆಗೂ ಇತರರೊಂದಿಗೆ ಹಂಚಿಕೊಂಡಿಲ್ಲ. ಇದಿನ್ನೂ ಆರಂಭವಷ್ಟೆ. ಅಮೆರಿಕವು ಫೈಜರ್ ಲಸಿಕೆಯ 50 ಕೋಟಿ ಡೋಸ್‌ಗಳನ್ನು ದಾನ ಮಾಡಲಿದ್ದು, ಈ ತಿಂಗಳ ಕೊನೆಯಲ್ಲಿ ಅದಕ್ಕೆ ಚಾಲನೆ ಸಿಗಲಿದೆ ಎಂದರು.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು (12,28,926 ನಿನ್ನೆಯ ವಿವರ)	12,29,340 ▲
ಸಕ್ರಿಯ ಪ್ರಕರಣಗಳು	8,560 ▼
ಗುಣಮುಖರಾದವರು	12,04,878 ▲
ಒಟ್ಟು ಸಾವು	15,901 ▲

ಗುರುವಾರದ ಏರಿಕೆ

ಹೊಸ ಪ್ರಕರಣ	414 ▲
ಗುಣಮುಖ	554 ▼
ಸಾವು	05 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಮೀನುಗಾರಿಕೆಗೆ ತೆರಳುತ್ತಿದ್ದ ಪರ್ಸಿನ್ ಬೋಟ್ ಮುಳುಗಡೆ

9 ಮಂದಿ ರಕ್ಷಣೆ, ಒಬ್ಬ ನಾಪತ್ತೆ

ಪ್ರಜಾವಾಣಿ ವಾರ್ತೆ

ಉಳ್ಳಾಲ: ಆಳ ಸಮುದ್ರ ಮೀನುಗಾರಿಕೆಗೆ ತೆರಳುತ್ತಿದ್ದ ಪರ್ಸಿನ್ ಬೋಟೊಂದು ಈ ಹಿಂದೆ ಸಮುದ್ರದಲ್ಲಿ ಮುಳುಗಿದ್ದ ಕಂಟೈನರ್‌ಗೆ ಡಿಕ್ಕಿ ಹೊಡೆದು ಸಮುದ್ರಪಾಲಾಗಿದೆ. ಆ ಬೋಟ್‌ನಲ್ಲಿದ್ದ 10 ಮೀನುಗಾರರಲ್ಲಿ 9 ಮಂದಿಯನ್ನು ಮತ್ತೊಂದು ಬೋಟ್‌ನವರು ರಕ್ಷಿಸಿದ್ದಾರೆ. ಆದರೆ, ಒಬ್ಬರು ನಾಪತ್ತೆಯಾಗಿದ್ದಾರೆ.

ತಮಿಳುನಾಡಿನ ರಾಮನಾಥ ಜಿಲ್ಲೆಯ ಕನ್ನದಾಸ ನಾಪತ್ತೆಯಾಗಿರುವ ಮೀನುಗಾರ. ತಮಿಳುನಾಡಿನ ಹತ್ತು ಮೀನುಗಾರರು ಉಳ್ಳಾಲ ಮೊಗವೀರಪಟ್ಟದ ಭಾನುಪ್ರಕಾಶ್ ಮಾಲೀಕತ್ವದ ‘ಆದ್ಯ -2’ ಪರ್ಸಿನ್ ಬೋಟ್‌ನಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ಮಂಗಳೂರಿನ ಮೀನುಗಾರಿಕಾ ಬಂದರಿನಿಂದ ಹೊರಟಿದ್ದರು.

ಸಮುದ್ರಪಾಲಾದ ಆದ್ಯ 2 ಬೋಟ್

ಆಳ ಸಮುದ್ರದ 10 ನಾಟಿಕಲ್ ಮೈಲ್ ದೂರ ತಲುಪುತ್ತಿದ್ದಂತೆ ಈ ಹಿಂದೆ ಮುಳುಗಿದ್ದ ಕಂಟೈನರ್ ಬೋಟ್‌ಗೆ ಈ ಬೋಟ್‌ನ ಅಡಿಭಾಗ ಡಿಕ್ಕಿ ಹೊಡೆದಿದೆ. ಕೆಲವೇ ಕ್ಷಣಗಳಲ್ಲಿ ಆದ್ಯ -2 ಸಮುದ್ರ ಪಾಲಾಗಿದೆ. ಈ ಬೋಟ್‌ನೊಂದಿಗೆ ಹೊರಟಿದ್ದ ಇದೇ ಮಾಲೀಕತ್ವದ ಇನ್ನೊಂದು ‘ಆದ್ಯ’ ಪರ್ಸಿನ್ ಬೋಟ್‌ನಲ್ಲಿದ್ದ ಮೀನುಗಾರರು 9 ಮಂದಿ ಮೀನುಗಾರರನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕನ್ನದಾಸ ಮಾತ್ರ ನಾಪತ್ತೆಯಾಗಿದ್ದಾರೆ.

ಮೂರು ವರ್ಷಗಳಲ್ಲಿ ಹಲವು ಬೋಟ್‌ಗಳಿಗೆ ಹಾನಿ: ಮೂರು ವರ್ಷದ ಹಿಂದೆ ಉಳ್ಳಾಲದಿಂದ 10 ನಾಟಿಕಲ್ ಮೈಲು ದೂರದಲ್ಲಿ ಕಂಟೈನರ್ ಮುಳುಗಿತ್ತು. ಕಂಟೈನರ್ ಮುಳುಗಿದ್ದ ಪ್ರದೇಶದಲ್ಲಿ ಮೀನುಗಾರರಿಗೆ ಅಪಾಯದ ಸೂಚನೆಯಂತೆ ತಾತ್ಕಾಲಿಕ ಮಾರ್ಕ್ ಮಾಡಿದ್ದರೂ ಮಳೆಗಾಲ ಮತ್ತು ಹೆಚ್ಚು ಗಾಳಿ ಬೀಸುವಾಗ ಈ ಮಾರ್ಕ್ ಕಣ್ಮರೆಯಾಗಿದ್ದು ಮೀನುಗಾರರಿಗೆ ಇಲ್ಲೊಂದು ಕಂಟೈನರ್ ಮುಳುಗಿದೆ ಎಂಬ ಮಾಹಿತಿ ಇರುವುದಿಲ್ಲ. ಮೂರು ವರ್ಷದಲ್ಲಿ ಅನೇಕ ಮೀನುಗಾರಿಕಾ ಬೋಟ್‌ಗಳಿಗೆ ಈ ಕಂಟೈನರ್‌ನಿಂದ ಹಾನಿಯಾಗಿದ್ದರೂ ಸಂಬಂಧಪಟ್ಟ ಇಲಾಖೆ ಈ ಕಂಟೈನರ್ ತೆರವು ಕಾರ್ಯಕ್ಕೆ ಇನ್ನೂ ಮುಂದಾಗಿಲ್ಲ ಎಂದು ಸ್ಥಳೀಯರು ದೂರುತ್ತಾರೆ.

ಪ್ರಾರಂಭದಲ್ಲೇ ಸಮುದ್ರಪಾಲು: ಆದ್ಯ -2 ಬೋಟ್ ನಿರ್ಮಾಣದ ಬಳಿಕ ಇದು ಮೂರನೇ ಮೀನುಗಾರಿಕಾ ಋತು ಆಗಿತ್ತು. ಈ ಹಿಂದೆ ಎರಡು ಋತು ಕೋವಿಡ್ ಹಿನ್ನೆಲೆಯಲ್ಲಿ ಸಮುದ್ರಕ್ಕೆ ಇಳಿದಿರಲಿಲ್ಲ. ಆದರೆ, ಮೂರನೇ ಋತುವಿನ ರಂಭದಲ್ಲೇ ಬೋಟ್ ಅವಘಡಕ್ಕೀಡಾಗಿ ಮಾಲೀಕರಿಗೆ ಸುಮಾರು ₹ 1.25 ಕೋಟಿ ನಷ್ಟ ಆಗಿದೆ ಎಂದು ಅಂದಾಜಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಮೇಲುಕೋಟೆ: ವಾರಾಂತ್ಯದಲ್ಲಿ ಪ್ರವೇಶ ನಿರ್ಬಂಧ

ಮೇಲುಕೋಟೆ: ಮೇಲುಕೋಟೆ ಚೆಲುವನಾರಾಯಣಸ್ವಾಮಿ ಮತ್ತು ಯೋಗನರಸಿಂಹಸ್ವಾಮಿ ದೇವಾಲಯಗಳಿಗೆ ಆ.7 ಮತ್ತು 8 ಸೇರಿದಂತೆ ಎಲ್ಲ ಶ್ರಾವಣ ಶನಿವಾರ ಮತ್ತು ಭಾನುವಾರ ಹಾಗೂ ಸರ್ಕಾರಿ ರಜಾದಿನಗಳಲ್ಲಿ ಭಕ್ತರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳಮ್ಮ ತಿಳಿಸಿದ್ದಾರೆ.

ಶನಿವಾರ –ಭಾನುವಾರ ರಾಜ್ಯದ ವಿವಿಧ ಭಾಗಗಳಿಂದ ಚೆಲುವನಾರಾಯಣಸ್ವಾಮಿಯ ಒಕ್ಕಲಿನ ಭಕ್ತರು ಬರುವ ಸಂಪ್ರದಾಯವಿದೆ. ಕೊರೊನಾ 3ನೇ ಅಲೆಯ ನಿಯಂತ್ರಣಕ್ಕಾಗಿ ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಆದೇಶ ಸ್ಥಳೀಯ ನಾಗರಿಕರಿಗೂ ಅನ್ವಯವಾಗಲಿದೆ. ಆದರೆ, ದೇವಾಲಯದಲ್ಲಿ ನಿತ್ಯ ಪೂಜಾ ಕಾರ್ಯಗಳು ನಡೆಯಲಿದೆ ಎಂದು ತಿಳಿಸಿದ್ದಾರೆ.

ಶ್ರೀನಗರದ ಜಾಮಿಯಾ ಮಸೀದಿ ಬಳಿ ಸ್ಫೋಟ

ಶ್ರೀನಗರ (ಪಿಟಿಐ): ನಗರದ ನೌಹಾತ್ವ ಪ್ರದೇಶದ ಜಾಮಿಯಾ ಮಸೀದಿ ಸಮೀಪದಲ್ಲಿ ಗುರುವಾರ ಭಾರಿ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ಯಾವುದೇ ಜೀವಹಾನಿ ಆಗಿರುವ ಅಥವಾ ಗಾಯಗೊಂಡಿರುವ ಕುರಿತು ವರದಿಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಮಧ್ಯಾಹ್ನ ಸಂಭವಿಸಿದ ಈ ಘಟನೆಯಲ್ಲಿ ಸುಧಾರಿತ ಸ್ಫೋಟಕಗಳನ್ನು (ಐಇಡಿ) ಬಳಸಿರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸೌದಿಯಲ್ಲಿ ಸಿಲುಕಿದ್ದ ಸಿಕ್ಕಿಂನ ಇಬ್ಬರು ಮಹಿಳೆಯರ ಬಿಡುಗಡೆ

ದಾವಣಗೆರೆ: ಸೌದಿ ಅರೇಬಿಯಾದಲ್ಲಿ ಸಿಲುಕಿದ್ದ ಸಿಕ್ಕಿಂನ ಇಬ್ಬರು ಮಹಿಳೆಯರು ಸೌದಿಯಲ್ಲಿರುವ ಕನ್ನಡಿಗರ ನೆರವಿನಿಂದ ಗುರುವಾರ ಬಿಡುಗಡೆಗೊಂಡು ಭಾರತಕ್ಕೆ ಮರಳಿದ್ದಾರೆ.

ಪಶ್ಚಿಮ ಸಿಕ್ಕಿಂನ ಪೇಕಿ ಬೂಟಿಯ ಮತ್ತು ಮೇನುಕಾ ರಾಯ್ ಬಿಡುಗಡೆಗೊಂಡ ಮಹಿಳೆಯರು. ಮನೆ ಕೆಲಸಕ್ಕೆಂದು ಹೋದವರನ್ನು ದೇಶಕ್ಕೆ ಮರಳಲು ಬಿಡದೇ ಗೃಹಬಂಧನದಲ್ಲೇ ಇಟ್ಟು ದುಡಿಸಿಕೊಳ್ಳಲಾಗುತ್ತಿತ್ತು.

ದಾವಣಗೆರೆಯ ಫೈರೂಜಾಬಾನು ಮತ್ತು ತುಮಕೂರಿನ ಸಬಿಹಾ ಅವರೂ ಇದೇ ರೀತಿ ಹೋಗಿ ಗೃಹಬಂಧನದಲ್ಲಿ ಇದ್ದರು. ಈ ಬಗ್ಗೆ ‘prajavani.net’ ವರದಿ ಆಧರಿಸಿ ಸೌದಿಯಲ್ಲಿದ್ದ ಹಮೀದ್ ಪಡುಬಿದ್ರಿ ಸಹಿತ ಕನ್ನಡಿಗರು ಅವರ ಬಿಡುಗಡೆಗೆ ಪ್ರಯತ್ನಿಸಿ ಯಶಸ್ವಿಯಾಗಿದ್ದರು. ಆಗ ದೇಶದ ವಿವಿಧ ಭಾಗಗಳ ಮಹಿಳೆಯರು ಹೀಗೇ ಇರುವುದು ಗೊತ್ತಾಗಿತ್ತು. ಸೌದಿಯ ಮಾನವ ಹಕ್ಕುಗಳ ಆಯೋಗ, ಭಾರತ ಸರ್ಕಾರ, ಸೌದಿ ಸರ್ಕಾರದ ಸಹಕಾರದಿಂದಾಗಿ ಅವರನ್ನು ಬಿಡುಗಡೆಗೊಳಿಸಲು ಸಾಧ್ಯವಾಯಿತು. ಇದೇ ರೀತಿ ಭಾರತದ ಇನ್ನೂ ಅನೇಕ ಮಹಿಳೆಯರು ಸಿಲುಕಿಕೊಂಡಿದ್ದು, ಅವರ ಬಿಡುಗಡೆಗೆ ಪ್ರಯತ್ನಿಸಲಾಗುವುದು ಎಂದು ಹಮೀದ್ ತಿಳಿಸಿದ್ದಾರೆ.

ಸುಶಾಂತ್ ಪ್ರಕರಣ: ತನಿಖೆಯ ಪ್ರಗತಿ ಪ್ರಶ್ನಿಸಿದ ಕಾಂಗ್ರೆಸ್

ಮುಂಬೈ (ಪಿಟಿಐ): ಕೇಂದ್ರೀಯ ತನಿಖಾ ದಳ (ಸಿಬಿಐ), ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ತನಿಖೆ ವಹಿಸಿಕೊಂಡು ಒಂದು ವರ್ಷವಾದರೂ ಯಾವುದೇ ಪ್ರಗತಿ ಸಾಧಿಸಿಲ್ಲ‘ ಎಂದು ಮಹಾರಾಷ್ಟ್ರದ ಕಾಂಗ್ರೆಸ್ ಘಟಕ ಆರೋಪಿಸಿದೆ.

ಪ್ರಕರಣದ ಬಗೆಗಿನ ಸಿಬಿಐನ ಮೌನವನ್ನು ಮಹಾರಾಷ್ಟ್ರ ಕಾಂಗ್ರೆಸ್‌ನ ವಕ್ತಾರ ಸಚಿನ್ ಸಾವಂತ್ ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ. ಅಷ್ಟೇ ಅಲ್ಲ, ‘ಕೇಂದ್ರ ಸರ್ಕಾರ, ಎಲ್ಲ ರಾಷ್ಟ್ರೀಯ ತನಿಖಾ ಸಂಸ್ಥೆಗಳನ್ನು ತನ್ನ ರಾಜಕೀಯ ಕಾರ್ಯಸೂಚಿಗಾಗಿ ಬಳಸಿಕೊಳ್ಳುತ್ತಿದೆ‘ ಎಂದು ಆರೋಪಿಸಿದ್ದಾರೆ.

‘ಸುಶಾಂತ್ ಸಿಂಗ್ ರಜಪೂತ್ (34) 2020ರ ಜೂನ್ 14ರಂದು ಮುಂಬೈನ ಬಾಂದ್ರಾ ಪ್ರದೇಶದ ತನ್ನ ಅಪಾರ್ಟ್‌ಮೆಂಟ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಶವವಾಗಿ ಪತ್ತೆಯಾಗಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರದಲ್ಲಿ ದೂರು ದಾಖಲಾಗಿತ್ತು. ಕಳೆದ ವರ್ಷ ಆಗಸ್ಟ್‌ನಲ್ಲಿ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿತ್ತು. ಪ್ರಕರಣದ ಬಗ್ಗೆ ಮುಂಬೈ ಪೊಲೀಸರು ನಡೆಸುತ್ತಿದ್ದ ತನಿಖೆ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ತೃಪ್ತಿ ವ್ಯಕ್ತಪಡಿಸಿತ್ತು' ಎಂದು ಸಾವಂತ್ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

‘ಈ ಪ್ರಕರಣದ ತನಿಖೆ ವಿಷಯದಲ್ಲಿ ಸಿಬಿಐ ಉದ್ದೇಶಪೂರ್ವಕವಾಗಿ ಮೌನವನ್ನು ಕಾಪಾಡಿಕೊಂಡಿದೆ. ಇದು, ಮೋದಿ ಸರ್ಕಾರ ಹೇಗೆ ರಾಷ್ಟ್ರೀಯ ತನಿಖಾ ಸಂಸ್ಥೆಗಳನ್ನು ತಮ್ಮ ರಾಜಕೀಯ ಕಾರ್ಯಸೂಚಿಗೆ ಬಳಸುತ್ತಿದೆ ಎಂಬುದಕ್ಕೆ ಸೂಕ್ತ ಉದಾಹರಣೆಯಾಗಿದೆ‘ ಎಂದು ಸಾವಂತ್ ಆರೋಪಿಸಿದ್ದಾರೆ.

ವಾಜೆ ಜಾಮೀನು ಅರ್ಜಿ ತಿರಸ್ಕಾರ

ಮುಂಬೈ (ಪಿಟಿಐ): ಉದ್ಯಮಿ ಮುಖೇಶ್ ಅಂಬಾನಿ ನಿವಾಸದ ಸಮೀಪ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣಕ್ಕೆ ಸಂಬಂಧಿಸಿ, ಜಾಮೀನು ಕೋರಿದ್ದ ಮಾಜಿ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅರ್ಜಿಯನ್ನು ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ. ದೋಷಾರೋಪ ಪಟ್ಟಿಯನ್ನು ಇನ್ನೊಂದು ತಿಂಗಳಲ್ಲಿ ದಾಖಲಿಸಬೇಕು ಎಂದೂ ಎನ್‌ಐಎಗೆ ಸೂಚಿಸಿದೆ.

ದೋಷಾರೋಪ ಪಟ್ಟಿ ಸಲ್ಲಿಸಲು ರಾಷ್ಟ್ರೀಯ ತನಿಖಾ ಸಂಸ್ಥೆಗೆ ಎರಡು ತಿಂಗಳ ಸಮಯ ನೀಡಿ ಜೂನ್ 9ರಂದು ಆದೇಶಿಸಿತ್ತು. ತನಿಖೆ ಪ್ರಗತಿಯಲ್ಲಿದ್ದು, ಅವಧಿ ವಿಸ್ತರಿಸಲು ಕೋರಿ ತನಿಖಾ ಸಂಸ್ಥೆಯು ಮತ್ತೊಮ್ಮೆ ಅರ್ಜಿಯನ್ನು ಸಲ್ಲಿಸಿತ್ತು.

ನಿಗದಿತ ಅವಧಿಯಲ್ಲಿ ಆರೋಪ ಪಟ್ಟಿ ದಾಖಲಿಸಲು ತನಿಖಾ ಸಂಸ್ಥೆಯು ವಿಫಲವಾಗಿದೆ ಎಂಬ ಕಾರಣವನ್ನೇ ನೀಡಿ ವಾಜೆ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಪ್ರಕರಣ ಸಂಬಂಧ ಮಾರ್ಚ್ 13, 2021ರಲ್ಲಿ ಇವರನ್ನು ಬಂಧಿಸಲಾಗಿತ್ತು.

ದೇಶಮುಖ್‌ಗೆ ಸಂಬಂಧಿಸಿದ ದಾಖಲೆಗಳ ಹಸ್ತಾಂತರ ಕೋರಿ ಅರ್ಜಿ

ಮುಂಬೈ(ಪಿಟಿಐ): ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧದ ತನಿಖೆಗೆ ಅಗತ್ಯವಿರುವ ದಾಖಲೆಗಳನ್ನು ಒದಗಿಸಲು ನಿರ್ದೇಶನ ನೀಡುವಂತೆ ಸಿಬಿಐ ಅರ್ಜಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೆ ಬಾಂಬೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಎಸ್.ಎಸ್.ಶಿಂಧೆ ಹಾಗೂ ಎನ್.ಜೆ.ಜಮಾದಾರ್ ಅವರಿರುವ ವಿಭಾಗೀಯ ನ್ಯಾಯಪೀಠ ಅರ್ಜಿಯ ವಿಚಾರಣೆ ನಡೆಸಿತು.

‘ತನಿಖೆಗೆ ಅಗತ್ಯವಿರುವ ದಾಖಲೆಗಳನ್ನು ಸಂಗ್ರಹಿಸಲು ತೆರಳಿದ್ದ ಸಂಸ್ಥೆಯ ಸಿಬ್ಬಂದಿಗೆ ಪೊಲೀಸರು ಬೆದರಿಕೆ ಹಾಕಿದ್ದಾರೆ. ಹೀಗಾಗಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಸಿಬಿಐ ಪರ ವಕೀಲ ಅನಿಲ್ ಸಿಂಗ್ ಹೈಕೋರ್ಟ್‌ಗೆ ತಿಳಿಸಿದರು.

ತನ್ನ ಅಧಿಕಾರಿಗಳಿಗೆ ಎಸಿಪಿಯೊಬ್ಬರು ಬೆದರಿಕೆ ಹಾಕಿದ್ದಾರೆ ಎಂಬ ಸಿಬಿಐನ ದೂರುಗಳ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಪಬ್ಲಿಕ್ ಪ್ರಾಸಿಕ್ಯೂಟರ್ ಅರುಣಾ ಕಾಮತ್ ಅವರಿಗೆ ನ್ಯಾಯಪೀಠ ಸೂಚಿಸಿತು.

‘ಈ ವಿಷಯಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡುತ್ತೇವೆ. ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಪರಿಸ್ಥಿತಿ ಉದ್ಭವವಾಗದಂತೆ ನೋಡಿಕೊಳ್ಳಿ’ ಎಂದು ಹೇಳಿದ ನ್ಯಾಯಪೀಠ, ಅರ್ಜಿಯ ವಿಚಾರಣೆಯನ್ನು ಆ. 11ಕ್ಕೆ ಮುಂದೂಡಿತು.


ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳಿಗೆ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರು ದಿನಸಿ ಕಿಟ್‌ಗಳನ್ನು ಗುರುವಾರ ವಿತರಿಸಿದರು. ಶಾಸಕ ಕೃಷ್ಣಬೈರೇಗೌಡ ಹಾಗೂ ಸ್ಥಳೀಯ ಮುಖಂಡರು ಇದ್ದರು.

ಜಮ್ಮು–ಕಾಶ್ಮೀರಕ್ಕೆ ನುಸುಳಲು ಕಾಯುತ್ತಿರುವ 140ಕ್ಕೂ ಹೆಚ್ಚು ಉಗ್ರರು

ಶ್ರೀನಗರ(ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ನುಸುಳಲು ಸುಮಾರು 140 ಭಯೋತ್ಪಾದಕರು ಗಡಿ ನಿಯಂತ್ರಣ ರೇಖೆಯ ಲಾಂಚ್ ಪ್ಯಾಡ್‌ಗಳಲ್ಲಿ ಕಾಯುತ್ತಿದ್ದಾರೆ.

‘ಫೆಬ್ರುವರಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದರೂ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಉದ್ದಕ್ಕೂ ಭಯೋತ್ಪಾದಕರ ಅನುಕೂಲಕ್ಕಾಗಿ ಕಲ್ಪಿಸಿರುವ ಮೂಲಸೌಕರ್ಯಗಳು ಹಾಗೆಯೇ ಉಳಿದಿವೆ’ ಎಂದು ಹಿರಿಯ ಭದ್ರತಾ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

‘ಪಾಕಿಸ್ತಾನಕ್ಕೆ ಕದನ ವಿರಾಮ ಒಪ್ಪಂದವು ಹೆಚ್ಚು ಮಹತ್ವದ್ದಾಗಿದೆ. ಏಕೆಂದರೆ ಅದು ಹಣಕಾಸಿನ ಕಾರ್ಯಪಡೆ (ಎಫ್‌ಎಟಿಎಫ್)ಯ ‘ಬೂದು ಪಟ್ಟಿ’ಯಿಂದ ಹೊರಬರಲು ತೀವ್ರವಾಗಿ ಪ್ರಯತ್ನಿಸುತ್ತಿದೆ. ಭಯೋತ್ಪಾದನೆ ಮೂಲಸೌಕರ್ಯವನ್ನು ನಾಶಪಡಿಸದಿದ್ದರೆ ಇಸ್ಲಾಮಾಬಾದ್‌ನ ಪ್ರಾಮಾಣಿಕತೆ ಬಗ್ಗೆ ಮಾತನಾಡಬಹುದಿತ್ತು’ ಎಂದು ಹೇಳಿದ್ದಾರೆ.

‘ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಲಾಂಚ್ ಪ್ಯಾಡ್‌ಗಳಲ್ಲಿ ಸುಮಾರು 140 ಭಯೋತ್ಪಾದಕರು ಇರುವುದನ್ನು ಸೇನೆ ಗಮನಿಸಿದೆ. ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ನುಸುಳಲು ಕಾಯುತ್ತಿರಬಹುದು, ಆದರೆ, ನಮ್ಮ ಸೇನೆಯ ತಡೆಯೊಡ್ಡುವ ಪ್ರಯತ್ನದಿಂದಾಗಿ ಇದುವರೆಗೆ ಉಗ್ರರು ನುಸುಳಲು ಸಾಧ್ಯವಾಗಿಲ್ಲ’ ಎಂದು ಹೇಳಿದ್ದಾರೆ.

‘ಉಗ್ರರು ಈ ಹಿಂದೆ ಒಳನುಸುಳುವ ಪ್ರಯತ್ನ ನಡೆಸಿದ್ದರು. ಆದರೆ, ನಮ್ಮ ಸೇನೆ ಅವರ ಯತ್ನವನ್ನು ವಿಫಲಗೊಳಿಸಿದೆ. ಹಾಗಾಗಿ, ಮತ್ತೆ ಅವರು ಲಾಂಚ್ ಪ್ಯಾಡ್‌ಗಳಿಗೆ ಕಾಯುತ್ತಿದ್ದಾರೆ’ಎಂದಿದ್ದಾರೆ.

‘ಪಾಕಿಸ್ತಾನವು ಕದನ ವಿರಾಮದ ಅವಕಾಶವನ್ನು ಎಲ್‌ಒಸಿಯ ಉದ್ದಕ್ಕೂ ಭಯೋತ್ಪಾದಕರ ಮೂಲ ಸೌಕರ್ಯ ಬಲಪಡಿಸಲು ಬಳಸುತ್ತಿದೆ’ ಎಂದು ಸೇನಾಧಿಕಾರಿ ದೂರಿದ್ದಾರೆ.

‘ಶೀಘ್ರ ಆಮ್ಲಜನಕ ಘಟಕ ಕಾರ್ಯಾರಂಭ’

ಪ್ರಜಾವಾಣಿ ವಾರ್ತೆ

ರಾಮನಗರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪುಟಕ್ಕೆ ಸೇರ್ಪಡೆಯಾದ ಮರುದಿನವೇ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ರಾಮನಗರ ಜಿಲ್ಲೆಯ ಕೋವಿಡ್ ಪರಿಸ್ಥಿತಿಯನ್ನು ಅವಲೋಕನ ಮಾಡಿದರು.

ಬೆಂಗಳೂರಿನ ತಮ್ಮ ಕಚೇರಿಯಲ್ಲಿ ಜಿಲ್ಲೆಯ ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದ ಅವರು, ಮೂರನೇ ಅಲೆಯನ್ನು ಪರಿಣಾಮಕಾರಿಯಾಗಿ ತಡೆಯುವುದು ಸೇರಿ ಇಡೀ ಜಿಲ್ಲೆಯಲ್ಲಿ ಕೈಗೊಂಡಿರುವ ಲಸಿಕಾ ಅಭಿಯಾನ, ಆರೋಗ್ಯ ಮೂಲ ಸೌಕರ್ಯಗಳ ಅಭಿವೃದ್ಧಿ ಇನ್ನಿತರೆ ಕ್ರಮಗಳ ಬಗ್ಗೆ ವ್ಯಾಪಕ ಪರಿಶೀಲನೆ ನಡೆಸಿದರು. ಬಾಕಿ ಯಾವುದಾದರೂ ಕೆಲಸ ಇದ್ದರೆ ಅದನ್ನು ವೇಗವಾಗಿ ಮುಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ಮಾತನಾಡಿದ ಸಚಿವರು, ‘ಜಿಲ್ಲೆಯಲ್ಲಿ ಕೋವಿಡ್ ಪಾಸಿಟಿವಿಟಿ ದರ ಶೇ 0.22 ರಷ್ಟಿದೆ. ಹೀಗಾಗಿ ಆತಂಕ ಪಡುವ ಅಗತ್ಯವಿಲ್ಲ. ಹಾಗೆಂದು ಎಚ್ಚರ ತಪ್ಪುವುದೂ ಬೇಡ. ಪರೀಕ್ಷೆ, ಲಸಿಕೆ ಹಾಗೂ ಆರೋಗ್ಯ ಮೂಲ ಸೌಕರ್ಯಗಳ ಬಗ್ಗೆ ನಿತ್ಯವೂ ಗಮನವಿಟ್ಟು ಕೆಲಸ ಮಾಡಬೇಕು’ ಎಂದು ಅವರು ಹೇಳಿದರು.

ಆ.15ರ ಒಳಗೆ ಮುಕ್ತ: ರಾಮನಗರ ಜಿಲ್ಲಾಸ್ಪತ್ರೆ ಹಾಗೂ ಚನ್ನಪಟ್ಟಣ, ಮಾಗಡಿ ತಾಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದಕ ಘಟಕಗಳನ್ನು ಸ್ಥಾಪಿಸುವ ಕಾಮಗಾರಿ ಭರದಿಂದ ಸಾಗುತ್ತಿದೆ. ಈ ಘಟಕಗಳಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ಇದೇ 15ರ ಹೊತ್ತಿಗೆ ಬಳಕೆ ಮಾಡಿಕೊಳ್ಳಲಾಗುವುದು. ಆ ದಿನದೊಳಗೆ ಬಾಕಿ ಇರುವ ಎಲ್ಲ ಕೆಲಸಗಳನ್ನು ಮುಗಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಅವರು ಹೇಳಿದರು.

ಕೊಚ್ಚಿ ಹೋದ ಸೇತುವೆಗಳು • 30 ಸಾವಿರಕ್ಕೂ ಹೆಚ್ಚು ಮಂದಿ ಸ್ಥಳಾಂತರ

ಮಧ್ಯಪ್ರದೇಶದಲ್ಲಿ ಭಾರಿ ಮಳೆ; 12 ಸಾವು

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಗ್ವಾಲಿಯರ್-ಚಂಬಲ್ ಕಣಿವೆ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, ಹಲವು ಸೇತುವೆಗಳು ಕೊಚ್ಚಿ ಹೋಗಿವೆ. ಮಳೆಯಿಂದಾಗಿ 12 ಮಂದಿ ಮೃತಪಟ್ಟಿದ್ದಾರೆ.

23 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಕ್ಷಣೆ ಮತ್ತು ಪರಿಹಾರ ಕಾರ್ಯಗಳನ್ನು ಚುರುಕುಗೊಳಿಸಲಾಗಿದೆ. ಗ್ವಾಲಿಯರ್ ಮತ್ತು ಚಂಬಲ್ ವಿಭಾಗದಲ್ಲಿನ 30,790ಕ್ಕೂ ಹೆಚ್ಚು ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. 126 ಮಂದಿ ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದಾರೆ. ಭಿಂಡ್‌ನಲ್ಲಿ ಹೆಲಿಕಾಪ್ಟರ್ ಮೂಲಕ ಮೂವರನ್ನು ರಕ್ಷಿಸಲಾಗಿದೆ.


ಮಧ್ಯಪ್ರದೇಶದ ಗ್ವಾಲಿಯರ್‌ನ ಮೋಹನಾ ಹಳ್ಳಿಯಲ್ಲಿ ಪ್ರವಾಹದಲ್ಲಿ ಸಿಲುಕಿರುವ ಜನರನ್ನು ಎನ್‌ಡಿಆರ್‌ಎಫ್ ತಂಡದವರು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು —ಪಿಟಿಐ ಚಿತ್ರ

ಮಳೆಯಿಂದಾಗಿ 18 ಸಾವಿರಕ್ಕೂ ಹೆಚ್ಚು ಮನೆಗಳು ಹಾಗೂ 25 ಸೇತುವೆಗಳು ಹಾನಿಗೊಳಗಾಗಿವೆ.

ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಪ್ರವಾಹ ಪೀಡಿತ ಪ್ರದೇಶಗಳಾದ ಗ್ವಾಲಿಯರ್, ದಾಟಿಯಾ, ಮತ್ತು ಶಿವಪುರಿ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು.

‘ಕಳೆದ 70 ವರ್ಷಗಳಲ್ಲಿ ರಾಜ್ಯ ಎಂದೂ ಇಂತಹ ಮಳೆ ಹಾನಿ ಕಂಡಿಲ್ಲ‘ ಎಂದು ಚೌಹಾಣ್ ತಿಳಿಸಿದ್ದಾರೆ.

ಚೌಹಾಣ್ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಮಳೆ ಅನಾಹುತದ ಬಗ್ಗೆ ಮಾಹಿತಿ ನೀಡಿದ್ದಾರೆ. ಪ್ರವಾಹ ಪರಿಸ್ಥಿತಿ ಎದುರಿಸಲು ಬೇಕಾದ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಇಬ್ಬರೂ ಭರವಸೆ ನೀಡಿದ್ದಾಗಿ ಚೌಹಾಣ್ ಹೇಳಿದರು.

350 ಸ್ಥಾನಗಳಲ್ಲಿ ಜಯ: ಅಖಿಲೇಶ್ ವಿಶ್ವಾಸ

ಲಖನೌ: ಉತ್ತರ ಪ್ರದೇಶದಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪಕ್ಷವು 350ರಿಂದ 400 ಸ್ಥಾನಗಳಲ್ಲಿ ಜಯ ಸಾಧಿಸಲಿದೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ.

‘2022ರ ವಿಧಾನಸಭೆ ಚುನಾವಣೆಯಲ್ಲಿ ನಾವು 350 ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಹೇಳುತ್ತಿದ್ದೆ. ಕಳೆದ ಚುನಾವಣೆ ವೇಳೆ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವ ಬಿಜೆಪಿ ಸರ್ಕಾರದ ವಿರುದ್ಧ ಜನರು ಹೊಂದಿರುವ ಆಕ್ರೋಶವನ್ನು ಗಮನಿಸಿದರೆ ನಾವು 400 ಸ್ಥಾನಗಳನ್ನು ಗೆಲ್ಲಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಏಷ್ಯಾ ಅಮೆರಿಕನ್ನರು ಬಳಸುವ 5 ಭಾಷೆಗಳಲ್ಲಿ ಹಿಂದಿಗೆ ಸ್ಥಾನ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿರುವ ಏಷ್ಯಾ ಮೂಲದವರು ಮಾತನಾಡುವ ಪ್ರಮುಖ ಐದು ಭಾಷೆಗಳಲ್ಲಿ ಹಿಂದಿ ಸಹ ಒಂದು ಎಂದು ತಜ್ಞರೊಬ್ಬರು ಹೇಳಿದ್ದಾರೆ.

ಏಷ್ಯಾ ಅಮೆರಿಕನ್ನರ ಪೈಕಿ ಮೂರನೇ ಎರಡರಷ್ಟು ಜನರು ವಲಸಿಗರಾಗಿದ್ದು, ಅವರಲ್ಲಿ ಶೇ 52ರಷ್ಟು ಜನರು ಇಂಗ್ಲಿಷ್ ಭಾಷೆಯ ಸೀಮಿತ ಪ್ರಾವೀಣ್ಯತೆ (ಎಲ್‌ಇಪಿ) ಹೊಂದಿದ್ದಾರೆ. ಏಷ್ಯಾ ಅಮೆರಿಕನ್ ಸಮುದಾಯಗಳ ನಡುವೆ ಎಲ್‌ಇಪಿ ದರದಲ್ಲಿ ವ್ಯತ್ಯಾಸವಿದೆ. ಈ ಸಮುದಾಯಗಳು ಮಾತನಾಡುವ ಪ್ರಮುಖ ಐದು ಭಾಷೆಗಳು; ಚೈನೀಸ್, ಟ್ಯಾಗಲಾಗ್, ವಿಯೆಟ್ನಾಮೀಸ್, ಕೊರಿಯನ್ ಹಾಗೂ ಹಿಂದಿ ಎಂದು ಏಷಿಯನ್ ಅಮೆರಿಕನ್ ಅಡ್ವಾನ್ಸಿಂಗ್ ಜಸ್ಟಿಸ್ (ಎಎಜೆಸಿ) ಅಧ್ಯಕ್ಷ ಜಾನ್ ಯಾಂಗ್ ತಿಳಿಸಿದ್ದಾರೆ.

ಚೀನಾದಿಂದ ವಲಸೆ ಬಂದಿರುವವರ ಪೈಕಿ ಶೇ 66ರಷ್ಟು ಜನರಿಗೆ ಇಂಗ್ಲಿಷ್‌ನಲ್ಲಿ ಸೀಮಿತಿ ಪ್ರಾವಿಣ್ಯತೆ ಇದೆ. ಫಿಲಿಪ್ಪೀನ್ಸ್‌ನ ಶೇ 35, ವಿಯೆಟ್ನಾಂನ ಶೇ 72, ಕೊರಿಯಾದ ಶೇ 64 ಹಾಗೂ ಭಾರತದ ಶೇ 29ರಷ್ಟು ಜನರಲ್ಲಿ ಇಂಗ್ಲಿಷ್ ಭಾಷೆಯ ಕೊರತೆಯನ್ನು ಗುರುತಿಸಿದ್ದಾರೆ.

ಏಷ್ಯಾ ಅಮೆರಿಕನ್ನರ ಪೈಕಿ ಬರ್ಮಾದಿಂದ ಬಂದವರಲ್ಲಿ ಎಲ್‌ಇಪಿ ದರವು ಅತಿ ಹೆಚ್ಚು ಶೇ 79ರಷ್ಟಿದೆ. ಏಷ್ಯಾ ಅಮೆರಿಕನ್ ಸಮುದಾಯದವರಲ್ಲಿ ಮೂರನೇ ಒಂದು ಭಾಗದಷ್ಟು ಜನರು ಇಂಗ್ಲಿಷ್‌ನಲ್ಲಿ ಸಂವಹನ ನಡೆಸುವಾಗ ಹಲವು ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂದು ಜಾನ್ ಯಾಂಗ್ ಸಂಸತ್ತಿನ ಸದಸ್ಯರಿಗೆ ತಿಳಿಸಿದ್ದಾರೆ.

ಹಲವು ತಪ್ಪು ತಿಳಿವಳಿಕೆಗಳು ಹಾಗೂ ಹಾದಿ ತಪ್ಪಿಸುವ ಸಮೀಕ್ಷೆಗಳಿಂದಾಗಿ ಏಷ್ಯಾ ಅಮೆರಿಕನ್ನರ ಎಲ್‌ಇಪಿ ವಿಚಾರಗಳನ್ನು ಕಡೆಗಣಿಸಲಾಗಿದೆ ಎಂದಿದ್ದಾರೆ.

ಕೋವಿಡ್–19 ವ್ಯಾಪಿಸಲು ಏಷ್ಯಾ ಮೂಲದ ಅಮೆರಿಕನ್ನರು ಕಾರಣವೆಂದು ಕೆಂಡಕಾರುವ ಸನ್ನಿವೇಶಗಳು ಕಂಡು ಬಂದಿವೆ. ಕಪ್ಪು ವರ್ಣೀಯರು ಮತ್ತು ಏಷ್ಯಾ ಅಮೆರಿಕನ್ನರು ಅತಿ ಹೆಚ್ಚು ದ್ವೇಷಪೂರಿತ ಆಕ್ರೋಶಗಳ ಸಂತ್ರಸ್ತರಾಗಿದ್ದಾರೆ ಎಂದು ಯಾಂಗ್ ಹೇಳಿದ್ದಾರೆ.

ಅಕ್ರಮ ಎಸಗಿದವರ ಮೇಲಷ್ಟೇ ಇ.ಡಿ ದಾಳಿ : ಬೊಮ್ಮಾಯಿ

ಬೆಂಗಳೂರು: 'ಅಕ್ರಮ ಎಸಗಿದವರ ಮನೆಯ ಮೇಲಷ್ಟೇ ಆದಾಯ ತೆರಿಗೆ (ಐ.ಟಿ) ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ಗಳು ದಾಳಿ ಮಾಡುತ್ತವೆ. ಅದರಲ್ಲಿ ವಿಶೇಷ ಏನಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಐ.ಟಿ, ಇ.ಡಿ ಇಲಾಖೆಗಳು ಎಲ್ಲರ ಮನೆಯ ಮೇಲೆ ದಾಳಿ ಮಾಡುವುದಿಲ್ಲ. ಖಚಿತ ಮಾಹಿತಿ ಆಧರಿಸಿ, ತಪ್ಪು ಮಾಡಿದವರ ವಿರುದ್ಧ ಕ್ರಮ ಜರುಗಿಸುತ್ತಾರೆ' ಎಂದು ಹೇಳಿದರು.

'ತಮ್ಮವರ ತಪ್ಪುಗಳನ್ನು ಮುಚ್ಚಿಕೊಳ್ಳಲು ಕಾಂಗ್ರೆಸ್‌ನವರು ಎಲ್ಲದಕ್ಕೂ ರಾಜಕೀಯ ಪ್ರೇರಿತ ಎಂದು ಹೇಳುವುದು ರೂಢಿಯಾಗಿದೆ. ಅವರ ಮನೆ ಮೇಲೆ ಏಕೆ ದಾಳಿ ಮಾಡಿಲ್ಲ, ಇವರ ಮನೆ ಮೇಲೆ ಏಕೆ ದಾಳಿ ಮಾಡಿಲ್ಲ ಎಂದು ಕೇಳಲು ಕಾಂಗ್ರೆಸ್‌ನವರು ಯಾರು? ಅಧಿಕಾರಿಗಳು ಅವರ ಕೆಲಸ ಮಾಡುತ್ತಾರೆ' ಎಂದು ಬೊಮ್ಮಾಯಿ ತಿಳಿಸಿದರು.

'ಇ.ಡಿ ಅಥವಾ ಐ.ಟಿಯವರು ಏನು ಮಾಡಿದರೂ ಉತ್ತರ ಕೊಡಲು ನಾನು ಇ.ಡಿ, ಐ.ಟಿ ಅಧಿಕಾರಿಯಲ್ಲ. ಇವೆಲ್ಲದಕ್ಕೂ ಉತ್ತರ ಕೊಡಲು ಕಾಂಗ್ರೆಸ್‌ನವರು ಪರಿಣಿತರಾಗಿದ್ದಾರೆ. ಅವರಿಗೆ ಅದರಲ್ಲಿ ಬಹಳ ಅನುಭವ ಇದೆ' ಎಂದು ವ್ಯಂಗ್ಯವಾಡಿದರು.

ಆಪ್ತರು, ಸಂಬಂಧಿಕರ ಮನೆಗಳ ಮೇಲೂ ದಾಳಿ: ಮುಂದುವರಿದ ಶೋಧ

ಶಾಸಕ ಜಮೀರ್, ಬೇಗ್‌ಗೆ ಇ.ಡಿ ಕಂಟಕ

ಪ್ರಜಾವಾಣಿ ವಾರ್ತೆ

ಇ.ಡಿ ಅಧಿಕಾರಿಗಳು ಶೋಧ ನಡೆಸಿದ ರೋಷನ್ ಬೇಗ್ ಅವರ ಫ್ರೇಜರ್ ಟೌನ್‌ನ ಮನೆ –ಪ್ರಜಾವಾಣಿ ಚಿತ್ರಗಳು

ಜಮೀರ್ ಅಹ್ಮದ್ ಖಾನ್

ರೋಷನ್ ಬೇಗ್

ಬೆಂಗಳೂರು: ಐಎಂಎ ಹಗರಣ ಮಾಜಿ ಸಚಿವ ರೋಷನ್ ಬೇಗ್ ಮತ್ತು ಶಾಸಕ ಜಮೀರ್ ಅಹಮದ್ ಖಾನ್ ಅವರಿಗೆ ಕಂಟಕವಾಗಿ ಕಾಡುತ್ತಿದ್ದು, ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ಬೆಳಿಗ್ಗೆ ಈ ಇಬ್ಬರ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿದ್ದಾರೆ.

ಕಂಟೋನ್ಮೆಂಟ್ ರೈಲು ನಿಲ್ದಾಣದ ಬಳಿ ಇರುವ ಜಮೀರ್ ಅಹಮದ್ ಖಾನ್ ಅವರ ಭವ್ಯ ಬಂಗಲೆ, ಯು.ಬಿ. ಸಿಟಿಯಲ್ಲಿರುವ ಫ್ಲ್ಯಾಟ್, ಕಲಾಸಿಪಾಳ್ಯದಲ್ಲಿನ ನ್ಯಾಷನಲ್ ಟ್ರಾವೆಲ್ಸ್ ಕಚೇರಿ, ರಿಚ್‌ಮಂಡ್ ಟೌನ್ ಹಾಗೂ ಬೆನ್ಸನ್ ಟೌನ್‌ನಲ್ಲಿರುವ ಮನೆ, ಕಚೇರಿ, ಸದಾಶಿವನಗರದಲ್ಲಿನ ಆಪ್ತರ ಮನೆ ಸೇರಿ ಐದು ಕಡೆ ದಾಳಿ ನಡೆದಿದೆ.

ದೆಹಲಿಯಿಂದ ಬಂದ 46 ಅಧಿಕಾರಿಗಳಿದ್ದ ಇ.ಡಿ ತಂಡ ಬೆಳಿಗ್ಗೆ 6 ಗಂಟೆಯಿಂದ ಶೋಧ ಕಾರ್ಯಾಚರಣೆ ಆರಂಭಿಸಿದೆ. ಪತ್ನಿ ಮತ್ತು ಮಕ್ಕಳ ಜೊತೆಯಲ್ಲಿ ಜಮೀರ್ ಕೂಡ ಮನೆಯಲ್ಲಿ ಇದ್ದರು. ಇವರೆಲ್ಲರ ಸಮ್ಮುಖದಲ್ಲೇ ಶೋಧ ಕಾರ್ಯವನ್ನು ಇ.ಡಿ ಅಧಿಕಾರಿಗಳು ನಡೆಸಿದರು.

2018 ಚುನಾವಣೆ ವೇಳೆ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಆಸ್ತಿ ವಿವರದ ಪ್ರಕಾರ ₹40.34 ಕೋಟಿ ಆಸ್ತಿಯನ್ನು ಜಮೀರ್ ಹೊಂದಿದ್ದು, ₹22.75 ಕೋಟಿ ಸಾಲವನ್ನೂ ತೋರಿಸಿದ್ದರು. ಇವೆಲ್ಲಾ ದಾಖಲೆಗಳನ್ನು ಮೊದಲೇ ಸಂಗ್ರಹಿಸಿದ್ದ ಇ.ಡಿ ಅಧಿಕಾರಿಗಳು, ಐ ಮಾನಿಟರಿ ಅಡ್ವೈಸರಿ (ಐಎಂಎ) ಹಗರಣದ ಪ್ರಮುಖ ಆರೋಪಿ ಮನ್ಸೂರ್ ಖಾನ್ ಜತೆ ಹಣಕಾಸಿನ ವ್ಯವಹಾರ ನಡೆಸಿರುವ ಆರೋಪದಲ್ಲಿ ತನಿಖೆ ಆರಂಭಿಸಿದ್ದಾರೆ.

'ರಿಚ್‌ಮಂಡ್ ಸರ್ಕಲ್‌ನಲ್ಲಿ ಒಂದು ಆಸ್ತಿಯನ್ನು ಮನ್ಸೂರ್‌ಗೆ ಕೊಟ್ಟಿದ್ದ, ಆ ವಿಷಯದಲ್ಲಷ್ಟೇ ವ್ಯವಹಾರ ಇಟ್ಟುಕೊಂಡಿದ್ದೆ' ಎಂದು ಜಮೀರ್ ಈ ಹಿಂದೆ ಸ್ಪಷ್ಟನೆ ನೀಡಿದ್ದರು. ಆದರೆ, ಹಣಕಾಸು ವ್ಯವಹಾರ ನಡೆದಿರುವ ಮಾಹಿತಿಯನ್ನು ಅಲ್ಲಗಳೆಯಲಾಗದು ಎಂಬ ಮಾಹಿತಿಯನ್ನು ಇ.ಡಿ ಅಧಿಕಾರಿಗಳು ಪಡೆದುಕೊಂಡಿದ್ದಾರೆ ಎಂದು ಹೇಳಲಾಗಿದೆ.

'ರಿಚ್‌ಮಂಡ್ ರಸ್ತೆಯಲ್ಲಿದ್ದ ಆಸ್ತಿಯೊಂದನ್ನು ₹90 ಕೋಟಿಗೆ ಮಾರಾಟ ಮಾಡಿದ್ದ ಆಸ್ತಿಯ ಮೊತ್ತವನ್ನು ಕೇವಲ ₹9 ಕೋಟಿ ಎಂದು ತೋರಿಸಿದ್ದರು. ಇದು ಅವ್ಯವಹಾರವಾಗಿದ್ದು, ತನಿಖೆ ನಡೆಸಬೇಕು' ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಅವರು ಈ ಹಿಂದೆ ಇ.ಡಿಗೂ ದೂರು ನೀಡಿದ್ದರು.

ಸಹೋದರನ ವಿಚಾರಣೆ: ಜಮೀರ್ ಸಹೋದರ ಮುಜಮ್ಮಿಲ್ ಅಹಮದ್ ಖಾನ್ ಅವರನ್ನು ಮನೆಯಿಂದ ಕರೆದೊಯ್ದಿರುವ ಇ.ಡಿ ಅಧಿಕಾರಿಗಳು ರಹಸ್ಯ ಸ್ಥಳದಲ್ಲಿ ವಿಚಾರಣೆ ನಡೆಸಿದರು. ಇನ್ನೊಂದೆಡೆ ಜಮೀರ್ ಆಪ್ತ ಮುಜಾಹಿದ್ ಮನೆ ಮೇಲೂ ದಾಳಿ ನಡೆದಿದೆ.

ಶೋಧ ಕಾರ್ಯ ಮುಗಿದ ಬಳಿಕ ಜಮೀರ್ ಅಹಮದ್ ಅವರನ್ನು ವಿಚಾರಣೆಗೆ ನವದೆಹಲಿಗೆ ಕರೆದೊಯ್ಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ರೋಷನ್ ಬೇಗ್ ಅಳಿಯ ವಶಕ್ಕೆ

ಐಎಂಎ ಬಹುಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಫ್ರೇಜರ್ ಟೌನ್‌ನಲ್ಲಿರುವ ಮಾಜಿ ಸಚಿವ ಆರ್.ರೋಷನ್ ಬೇಗ್ ಅವರ ಮನೆ, ಸಂಜಯನಗರದ ಮನೆ, ಭೂಪಸಂದ್ರದ ಮಗಳ ಮನೆ, ಇಂದಿರಾ ನಗರದಲ್ಲಿನ ಮಗಳ ಮನೆಗಳ ಮೇಲೆ ಏಕಕಾಲದಲ್ಲೇ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಳಿಗ್ಗೆಯಿಂದ ರಾತ್ರಿ ತನಕವೂ ಶೋಧ ಕಾರ್ಯಾಚರಣೆಯನ್ನು ಮುಂದುವರಿಸಿದರು. ಬೇಗ್ ಅವರ ಅಳಿಯ ಸಮೀರ್, ಆಪ್ತ ಎಸ್ಸಾನ್ ಅವರನ್ನು ಇ.ಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಐಎಂಎ ಹಗರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಬೇಗ್ ಅವರು, ಆರೋಗ್ಯದ ಕಾರಣ ನೀಡಿ ಜಾಮೀನು ಪಡೆದುಕೊಂಡಿದ್ದಾರೆ. ಈ ನಡುವೆ, ರೋಷನ್ ಬೇಗ್ ಆಸ್ತಿ ಜಪ್ತಿ ಮಾಡುವಂತೆ ರಾಜ್ಯ ಸರ್ಕಾರದ ಸಕ್ಷಮ ಪ್ರಾಧಿಕಾರಕ್ಕೆ ಹೈಕೋರ್ಟ್ ಆದೇಶ ನೀಡಿತ್ತು, ಅದನ್ನು ಆಧರಿಸಿ ಆಸ್ತಿ ಮುಟ್ಟುಗೋಲಿಗೆ ಸರ್ಕಾರ ಕೂಡ ಆದೇಶ ಹೊರಡಿಸಿತ್ತು.

ಬೆಂಬಲಿಗರ ಪ್ರತಿಭಟನೆ

ಜಮೀರ್ ಅಹಮದ್ ಖಾನ್ ಅವರ ಮನೆ ಮೇಲೆ ಇ.ಡಿ ನಡೆಸಿರುವ ದಾಳಿ ಖಂಡಿಸಿ ಬೆಂಬಲಿಗರು ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು. ಮನೆಯ ಒಳಗೆ ಇ.ಡಿ ಅಧಿಕಾರಿಗಳು ಶೋಧ ನಡೆಸುತ್ತಿದ್ದರೆ, ಹೊರಗೆ ಬೆಂಬಲಿಗರು ಘೋಷಣೆ ಕೂಗಿದರು. ಈ ದಾಳಿ ರಾಜಕೀಯ ಪ್ರೇರಿತ, ಕಾಂಗ್ರೆಸ್‌ನಲ್ಲಿ ಪ್ರಭಾವಿ ನಾಯಕನಾಗಿ ಜಮೀರ್ ಅವರು ಬೆಳೆಯುತ್ತಿರುವುದನ್ನು ಸಹಿಸದೆ ಈ ದಾಳಿ ನಡೆಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

> ಜಮೀರ್ ಅಹ್ಮದ್ ನಿವಾಸದ ಮೇಲೆ ನಡೆದಿರುವ ಇ.ಡಿ ದಾಳಿ ರಾಜಕೀಯ ಪ್ರೇರಿತ ಅಲ್ಲ. ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ ತಪ್ಪು
> **ಜೆ.ಸಿ.ಮಾಧುಸ್ವಾಮಿ,** ಸಚಿವ

ಇ.ಡಿ ದಾಳಿ ರಾಜಕೀಯ ಪ್ರೇರಿತ–ಸಿದ್ದರಾಮಯ್ಯ

ಬೆಂಗಳೂರು: 'ಶಾಸಕ ಜಮೀರ್ ಅಹ್ಮದ್ ಖಾನ್ ಅವರ ಮನೆಯ ಮೇಲಿನ ಜಾರಿ ನಿರ್ದೇಶನಾಲಯ (ಇ.ಡಿ) ನಡೆಸಿರುವ ದಾಳಿ ರಾಜಕೀಯ ಪ್ರೇರಿತ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

'ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ, ತನ್ನ ಅಧಿಕಾರ ದುರುಪಯೋಗಪಡಿಸಿಕೊಂಡು ವಿರೋಧ ಪಕ್ಷಗಳನ್ನು ಹೆದರಿಸುವ ಕೆಲಸ ಮಾಡುತ್ತಿದೆ' ಎಂದು ಅವರು ಹೇಳಿದ್ದಾರೆ.

ರಾಜಕೀಯ ದುರುದ್ದೇಶ: ಡಿಕೆಶಿ

ನವದೆಹಲಿ: 'ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಆದಾಯ ತೆರಿಗೆ (ಐ.ಟಿ) ಇಲಾಖೆಗಳಿಗೆ ಕಾಂಗ್ರೆಸ್, ಮತ್ತಿತರ ವಿರೋಧ ಪಕ್ಷಗಳ ಮುಖಂಡರ ಹಣಕಾಸು ಅವ್ಯವಹಾರಗಳು ಮಾತ್ರ ಕಾಣಿಸುತ್ತಿವೆಯೇ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಬಿಜೆಪಿ ಮುಖಂಡರ ಅವ್ಯವಹಾರಗಳ ಬಗ್ಗೆ ಕೇಂದ್ರ ಸರ್ಕಾರದ ಈ ಸಂಸ್ಥೆಗಳು ತನಿಖೆ ನಡೆಸುವುದೇ ಇಲ್ಲ ಎಂದರು.

ಶಾಸಕ ಜಮೀರ್ ಅಹಮದ್ ಖಾನ್ ಹಾಗೂ ಮಾಜಿ ಸಚಿವ ರೋಷನ್ ಬೇಗ್ ಅವರ ನಿವಾಸಗಳ ಮೇಲೆ ನಡೆಸಿದ ದಾಳಿಯು ಖಂಡಿತ ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ದೂರಿದರು.

ಸಚಿವೆ ಶಶಿಕಲಾ ಜೊಲ್ಲೆ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿ ಬಂದರೂ ತನಿಖೆಗೆ ಆದೇಶ ನೀಡದೆ, ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಆರೋಪಿಸಿದರು.

ಕರ್ನಾಟಕ ಸರ್ಕಾರ

ನಗರಸಭಾ ಕಾರ್ಯಾಲಯ, ಹೊಸಪೇಟೆ

ಕ್ರ.ಸಂ.: ನಸಹೊ/ತಾಂತ್ರಿಕ/ಕಾಮಗಾರಿ/15ನೇಹಣಕಾಸು/ಟೆಂಡರ್/2020–21 ದಿನಾಂಕ: 04.08.2021

ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ.)
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

2020–21ನೇ ಸಾಲಿನ 15ನೇ ಹಣಕಾಸು ಅನುದಾನದ ಯೋಜನೆಯಡಿಯಲ್ಲಿ ಈ ಕೆಳಗಿನ ಕೆಲಸಕ್ಕಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೊಕ್ಯೂರ್‌ಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. (1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **21.08.2021 ಸಂಜೆ 5:00 ಗಂಟೆವರೆಗೆ.** (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23.08.2021 ಸಂಜೆ 5:10 ಗಂಟೆಗೆ.** (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **24.08.2021 ಸಂಜೆ 5:10 ಗಂಟೆ.** (4) ಟೆಂಡರ್‌ಗಳನ್ನು ತೆರೆಯುವ ಸ್ಥಳ: **ನಗರಸಭೆ, ಹೊಸಪೇಟೆ.**
(1) **DMA/2021-22/OW/WORK_INDENT_118098.** ಅಂದಾಜು ಮೊತ್ತ: **ರೂ.75.00** ಲಕ್ಷಗಳು. ಟೆಂಡರ್ ಪ್ರೊಸೆಸ್ಸಿಂಗ್ ಫೀ, ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂಧನೆಗಳಿಗೆ ನಗರಸಭೆ ಕಾರ್ಯಾಲಯ, ಹೊಸಪೇಟೆ ಕಛೇರಿ ಕೆಲಸದ ದಿನದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ, ಹೊಸಪೇಟೆ
ಸಹಿ/– ಪೌರಾಯುಕ್ತರು, ನಗರಸಭೆ, ಹೊಸಪೇಟೆ

ವಾಸಾಸಂಇ/ಹೊಸಪೇಟೆ/ವಿಜಯನಗರ ಜಿಲ್ಲೆ/ಅಲಕ್‌ನಂದ/28/2021–22

रजिस्ट्री सं. डी. एल.-33004/99 REGD. No. D.L.-33004/99

सत्यमेव जयते

भारत का राजपत्र
The Gazette of India

सी.जी.-डी.एल.-अ.-23062021-227797
CG-DL-E-23062021-227797

असाधारण
EXTRAORDINARY
भाग II-खण्ड 3–उप-खण्ड (II)
PART II-Section 3–Sub-Section (ii)
प्राधिकार से प्रकाशित
PUBLISHED BY AUTHORITY

सं. 2737 नई दिल्ली, सोमवार, जुलाई 26, 2021 / श्रावण 4, 1943
No. 2737 NEW DELHI, MONDAY, JULY 26, 2021 / SRAVANA 4, 1943

ಭಾರತ ಸರ್ಕಾರದ ಗೆಜೆಟ್ ಅಸಾಧಾರಣ ಭಾಗ–II ವಿಭಾಗ–3 ಹಾಗೂ ಉಪವಿಭಾಗ (ii) ದಿನಾಂಕ: 26.07.2021 ರಂದು ಹಿಂದಿ ಮತ್ತು ಇಂಗ್ಲೀಷ್‌ನಲ್ಲಿ ಪ್ರಕಟಣೆಯಾದ ಅಧಿಸೂಚನೆ ನಂ. ಎಸ್.ಓ.2943(ಇ) ದಿನಾಂಕ: 26.07.2021.

ಸಾರ್ವಜನಿಕ ತಿಳುವಳಿಕೆ ಪತ್ರ

ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997 ರ ಸೆಕ್ಷನ್ 3(ಡಿ)(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ದಿನಾಂಕ: 26.07.2021ರ ತಮ್ಮ ಗೆಜೆಟ್‌ನಲ್ಲಿ ಪ್ರಕಟಿಸಲಾಗಿರುವ ಅಧಿಸೂಚನೆ ನಂ: ಎಸ್.ಓ. 2943(ಇ) ದಿನಾಂಕ: 26.07.2021 ರಂತೆ ಈ ಕೆಳಗೆ ಪ್ರಕಟಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದ, ಬಳ್ಳಾರಿ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ನಂ. 50 (ಹಳೆ ಎನ್.ಎಚ್: 13) ರಸ್ತೆ ಕಿ.ಮೀ. 299.000 ರಿಂದ ಕಿ.ಮೀ. 418.750 (ಹೊಸಪೇಟೆ – ಚಿತ್ರದುರ್ಗ ವಿಭಾಗ) ರ ವರೆಗೆ ರಸ್ತೆ ನಿರ್ಮಾಣ, (ಅಗಲೀಕರಣಗೊಳಿಸಲು, ನಾಲ್ಕು ಪಥಗಳ ರಸ್ತೆ ನಿರ್ಮಾಣ, ವಗೈರೆ), ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಪ್ರಕ್ರಿಯೆಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಂಡಿರುತ್ತದೆ.

ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಕಾಯ್ದೆಯ ಸೆಕ್ಷನ್ 3ಜಿ(1)(2)(3) ಮತ್ತು (4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿದ ಜಮೀನುದಾರರಿಗೆ ಹಾಗೂ ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸು ವುದೇನೆಂದರೆ – ಷೆಡ್ಯೂಲ್‌ನಲ್ಲಿ ಕಂಡ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶ ಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿರ್ಧರಿಸಿ ಪಾವತಿಸಲು ಸಂಬಂಧಪಟ್ಟ ಅಧಿಕೃತ ದಾಖಲೆಗಳನ್ನು ಅಂದರೆ (1) ಮೂಲ ದಾಖಲೆ ಪತ್ರ (2) ಕ್ರಯ, ಪಾಲು ವಿಭಾಗ ಮುಂತಾದ ಪತ್ರಗಳು (3) ಚಾಲ್ತಿಸಾಲಿನ ಆರ್.ಟಿ.ಸಿ (4) ಗ್ರಾಮ ಪಂಚಾಯಿತಿ ಸ್ವತ್ತಿಗೆ ಸಂಬಂಧಿಸಿದಂತೆ ಇ–ಸ್ವತ್ತು ದಾಖಲೆ (ನಿವೇಶನಗಳಿಗೆ) (5) ಕಂದಾಯ ಪಾವತಿ ರಸೀದಿ (6) ಮ್ಯುಟೇಷನ್ ಪ್ರತಿಗಳನ್ನು ಹಾಗೂ ನೀವು ಅಪೇಕ್ಷಿಸುವ ಪರಿಹಾರ ಧನ (ಸೂಕ್ತ ಸಮರ್ಥನೆಯೊಂದಿಗೆ) ಈ ಪ್ರಕಟಣೆಯ ದಿನಾಂಕದಿಂದ **21 ದಿನಗಳೊಳಗಾಗಿ** ನೀವಾಗಲಿ ಅಥವಾ ನಿಮ್ಮ ಅಧಿಕೃತ ಪ್ರತಿನಿಧಿಯ ಮೂಲಕವಾಗಲೀ ಕಛೇರಿಯ ವೇಳೆಯಲ್ಲಿ ಖುದ್ದಾಗಿ ಹಾಜರು ಪಡಿಸತಕ್ಕದ್ದು, ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಅರ್ಹತಾನುಸಾರ ಪರಿಹಾರ ನಿಗಧಿಪಡಿಸಿ ವಿತರಿಸಲಾಗುವುದು."

ಸಹಿ/–
ಡಾ. ಎಸ್.ಎಸ್. ಮಧುಕೇಶ್ವರ, ಕೆ.ಎ.ಎಸ್., ವಿಶೇಷ ಭೂಸ್ವಾಧೀನಾಧಿಕಾರಿಗಳು
ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾ.ಹೆ. 50, ಚಿತ್ರದುರ್ಗ.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 26ನೇ ಜುಲೈ, 2021

ಎಸ್.ಓ.2943(ಇ).–ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಇವರು ಭಾರತ ಸರ್ಕಾರದ ಗೆಜೆಟ್ ಅಸಾಧಾರಣ ಭಾಗ–II, ವಿಭಾಗ–3 ಹಾಗೂ ಉಪವಿಭಾಗ(ii) ರಲ್ಲಿ ಪ್ರಕಟವಾಗಿರುವ ನಂ. ಎಸ್.ಓ.1913(ಇ) ದಿನಾಂಕ: 17.05.2021 ರ ಅಧಿಸೂಚನೆಯಲ್ಲಿ ಕೆಳಕಂಡ ಜಮೀನುಗಳನ್ನು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ನಂ. 50 (ಹಳೆ ಎನ್.ಎಚ್.ನಂ. 13) ರಸ್ತೆಯಲ್ಲಿ ಕಿ.ಮೀ. 299.000 ರಿಂದ ಕಿ.ಮೀ. 418.750 ರ ವರೆಗೆ ರಸ್ತೆ ನಿರ್ಮಾಣ, (ಅಗಲಗೊಳಿಸಲು, 4–ಪಥಗಳ ರಸ್ತೆ ನಿರ್ಮಾಣ, ವಗೈರೆ), ಸಂರಕ್ಷಣೆ, ಕಾರ್ಯ ನಿರ್ವಹಣೆ ಮತ್ತು ಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಘೋಷಿಸಿ ರಾಷ್ಟ್ರೀಯ ಹೆದ್ದಾರಿ ಅಧಿನಿಯಮ 1956 (48 ರ 1956) ಸೆಕ್ಷನ್ 3(ಎ)(1) ರಂತೆ ಪ್ರಕಟಣೆ ಹೊರಡಿಸಲಾಗಿತ್ತು.

ಅಲ್ಲದೇ ಇದೇ ಅಧಿನಿಯಮದ ಸೆಕ್ಷನ್ 3(ಎ)(3)ರಂತೆ ಈ ಅಧಿಸೂಚನೆಯನ್ನು ಸ್ಥಳೀಯ ದಿನಪತ್ರಿಕೆಗಳಾದ **"ಪ್ರಜಾವಾಣಿ"** (ಕನ್ನಡ) ಮತ್ತು **"ದಿ ಟೈಮ್ಸ್ ಆಫ್ ಇಂಡಿಯಾ"** (ಇಂಗ್ಲೀಷ್) ನಲ್ಲಿ ದಿನಾಂಕ: 9ನೇ ಜೂನ್ 2021 ರಂದು ಪ್ರಚುರ ಪಡಿಸಲಾಗಿದ್ದಿತು.

ಪ್ರತಿಯಾಗಿ ಬಂದಿದ್ದ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಗಳವರು ತಿರಸ್ಕರಿಸಿದ್ದು ಅದರಂತೆ ಸಕ್ಷಮ ಪ್ರಾಧಿಕಾರಿಗಳು ಇದೇ ಅಧಿನಿಯಮ ಕಲಂ 3ಡಿ(1)ರಂತೆ ದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ವರದಿಯನ್ನು ಸ್ವೀಕರಿಸಿರುವ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಅಧಿನಿಯಮದ ಕಲಂ 3ಡಿ(1) ರಂತೆ ಕೆಳಕಂಡ ಅಧಿಸೂಚನೆಯ ಷೆಡ್ಯೂಲ್‌ರಲ್ಲಿ ನಮೂದಿಸಿದಂತೆ ಮೇಲಿನ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುತ್ತದೆ.

ಮುಂದುವರೆದು, ರಾಷ್ಟ್ರೀಯ ಹೆದ್ದಾರಿ ಅಧಿನಿಯಮದ ಸೆಕ್ಷನ್ 3(ಡಿ)(2) ರನ್ವಯ ಈ ಅಧಿಸೂಚನೆಯ ರಾಜ್ಯ ಪತ್ರದಲ್ಲಿ ಪ್ರಕಟವಾದಾಗಿನಿಂದ ಷೆಡ್ಯೂಲ್‌ನಲ್ಲಿ ಕಂಡ ಜಮೀನುಗಳು ಯಾವುದೇ ಋಣ ಭಾರವಿಲ್ಲದೇ ಕೇಂದ್ರ ಸರ್ಕಾರದ ಸಂಪೂರ್ಣ ಸ್ವಾಧೀನಕ್ಕೆ ಒಳಪಟ್ಟಿರುತ್ತವೆ ಎಂದು ಕೇಂದ್ರ ಸರ್ಕಾರವು ಘೋಷಿಸಿದೆ.

ಷೆಡ್ಯೂಲ್

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ನಂ. 50 (ಹಳೆ ಎನ್.ಎಚ್.ನಂ. 13) ಕಿ.ಮೀ. 299.000 ರಿಂದ ಕಿ.ಮೀ. 418.750 ರ ಪರಿಧಿಯೊಳಗೆ ಬರುವ ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುವ ಕಟ್ಟಡ ಹೊಂದಿರುವ ಅಥವಾ ಹೊಂದದೇ ಇರುವ ಭೂಮಿಯ ಸಂಕ್ಷಿಪ್ತ ವಿವರ.

ರಾಜ್ಯ: ಕರ್ನಾಟಕ ಜಿಲ್ಲೆ: ಬಳ್ಳಾರಿ

ಕ್ರ. ಸಂ.	ಸರ್ವೆ ನಂಬರ್	ಭೂಮಿಯ ಸ್ವರೂಪ	ಭೂಮಿಯ ತರಹೆ	ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ಆಸಕ್ತಿಯುಳ್ಳ ವ್ಯಕ್ತಿಗಳ ಹೆಸರು / ಜಮೀನು ಖಾತೆದಾರರ ಹೆಸರುಗಳು / ಸ.ನಂ.
1	2	3	4	5	6
ತಾಲ್ಲೂಕು: ಕೂಡ್ಲಿಗಿ					
ಗ್ರಾಮ: ಆಲೂರು					
1	204/1	ಖಾಸಗಿ	ಖುಷ್ಕಿ	0.526091	ಕೆ.ಎಂ. ಸುರೇಶ್ ತಂದೆ ತಿಪ್ಪೇಸ್ವಾಮಿ ಸರೋಜಮ್ಮ ಕೋಂ ಲೇಟ್ ಕೆ.ಎಂ. ಮಲ್ಲಪ್ಪ ಕೆ.ಎಂ. ಶರಣಪ್ಪ ತಂದೆ ಕೆ.ಎಂ. ಮಲ್ಲಿಕಾರ್ಜುನಪ್ಪ ಕೆ.ಎಂ. ನಂಜುಂಡಪ್ಪ ತಂದೆ ಕೆ.ಎಂ. ಮಲ್ಲಿಕಾರ್ಜುನಪ್ಪ ಕೆ.ಎಂ. ಪರ್ವತಪ್ಪ ತಂದೆ ಕೆ.ಎಂ. ಮಲ್ಲಿಕಾರ್ಜುನಪ್ಪ ಕೆ.ಟಿ. ಪುಷ್ಪಾವತಿ ಕೋಂ ಲೇಟ್ ಕೆ.ಎಂ. ತಿಪ್ಪೇರುದ್ರಪ್ಪ ಕೆ.ಎಂ. ರೇವಣಸಿದ್ದಪ್ಪ ತಂದೆ ಕೆ.ಎಂ. ಮಲ್ಲಿಕಾರ್ಜುನಪ್ಪ
ಗ್ರಾಮ: ಬಣವಿಕಲ್ಲು					
1	469	ಖಾಸಗಿ	ಕೃಷಿಯೇತರ	0.2347	ಎಸ್. ಬಸವರಾಜ ತಂದೆ ಎಸ್.ಬಸಪ್ಪ
			ಮೊತ್ತ	0.760791	

[ಎಫ್.ಸಂ. ಎನ್‌ಹೆಚ್‌ಎಐ/ಪಿಐಯು–ಸಿಟಿಐ/ಹೆಚ್‌ಎಸ್‌ಟಿ–ಸಿಟಿಐ/ಎನ್‌ಹೆಚ್–50/3ಡಿ]
ರಾಜೇಶ್ ಗುಪ್ತಾ, ನಿರ್ದೇಶಕರು

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಾರ್ಪೊರೇಟ್ ಕಛೇರಿ, ಬಿಜೈ, ಮಂಗಳೂರು – 575 004. ದೂರವಾಣಿ: 0824–2885795
CIN: U40109 KA 2002 SGC 030425
ಸಂಖ್ಯೆ: ಮಂ.ವಿ.ಸ.ಕಂ/ಅ.ಇಂ(ಖ)/ಕಾನಿಇಂ(ಕಾ)/599 ದಿನಾಂಕ: 04.08.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಲ್ಲಿ ಮಾತ್ರ)

ಮ.ವಿ.ಸ.ಕಂ.ಯು **Site Survey, System Design, Engineering, Supply, Installation, Testing and Commissioning of Integrated SCADA System at newly commissioned 33/11kV Sub-stations, Dismantling of existing SCADA System & shifting, erection, wiring, testing and successful commissioning of released SCADA System, Providing additional SCADA wiring and Replacement of existing Battery System on as is basis in MESCOM jurisdiction** ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಬಿಡ್ ವಿಚಾರಣಾ ಸಂಖ್ಯೆ: **MESCOM/2021-22/OW/WORK_INDENT1667** ಅನ್ವಯ ಟೆಂಡರನ್ನು ಆಹ್ವಾನಿಸುತ್ತಿದೆ.
ಆಸಕ್ತಿಯುಳ್ಳ ಅರ್ಹ ಬಿಡ್ದುದಾರರು ವೆಬ್‌ಸೈಟ್ **www.eproc.karnataka.gov.in**ಗೆ ದಿನಾಂಕ **10.08.2021** ಅಥವಾ ನಂತರ ಲಾಗ್‌ಆನ್ ಮಾಡಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಕಾರ್ಪೊರೇಟ್ ಕಛೇರಿ, ಮಂಗಳೂರು

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್. ಸರ್ಕಲ್, ಶೇಷಾದ್ರಿ ರಸ್ತೆ, ಬೆಂಗಳೂರು–560 001. ದೂರವಾಣಿ ಸಂಖ್ಯೆ: +91–80–29619801
ಇ–ಮೇಲ್: latha.mdksmscl@gmail.com

No: HFW/KSMSCL/TND/Empl/11/2021-22 Date: 05-08-2021

ಟೆಂಡರ್ ಪ್ರಕಟಣೆ

ಉಲ್ಲೇಖ: 1) ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/Empl/11/2021-22 Dated: 05.08.2021 (IND-819). 2) ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/NVBDCP/15/ 2021-22 Dated: 05.08.2021 (IND-824). 3) ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/TND/10Drugs/16/ 2021-22, Dated: 05.08.2021 (IND-818). 4) ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/Lab Eqpt/ 25/2021-22, Date: 05.08.2021 (IND-820). 5) ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/Eqpt(2)/ TND/F.B.Mannequins/41/2021-22, Dated: 05.08.2021 (IND-822). 6) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/ Covid-19/IFQ/42/ 2021-22, Dated: 05.08.2021.

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಕೆ.ಟಿ.ಪಿ.ಪಿ. ನಿಯಮಾನುಸಾರ ಈ ಕೆಳಕಂಡ ರಾಷ್ಟ್ರವ್ಯಾಪ್ತಿ ಇ–ಟೆಂಡರ್ ಮತ್ತು ದರಪಟ್ಟಿಯನ್ನು ಕರೆಯಲಾಗಿದೆ.

1) ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಗುಣವಿಶ್ಲೇಷಣಾ ಪರೀಕ್ಷೆಗೆ ಒಳಪಡಿಸಲು ಟೆಂಡರ್ ಕರೆಯುವ ಬಗ್ಗೆ. 2) ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. 3) ಔಷಧ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ. 4) ಎನ್‌ಹೆಚ್‌ಎಂ ಅನುದಾನದ ಟಿಬಿಆರ್‌ಎನ್‌ಟಿಸಿಪಿ ಅವಶ್ಯವಿರುವ Laboratory Equipments ಗಳನ್ನು ಖರೀದಿಸಿ ಪೂರೈಸುವ ಇ–ಟೆಂಡರ್ ಕರೆಯುವ ಬಗ್ಗೆ. 5) ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ಕಾರ್ಯಕ್ರಮದಡಿಯಲ್ಲಿ ಅವಶ್ಯವಿರುವ Mannequins ಗಳನ್ನು ಖರೀದಿಸಿ ಪೂರೈಸಲು ಇ–ಟೆಂಡರ್ ಕರೆಯುವ ಬಗ್ಗೆ. 6) ಕೋವಿಡ್–19 ಸಾಂಕ್ರಾಮಿಕ ರೋಗಕ್ಕೆ ಅವಶ್ಯಕತೆ ಇರುವ 09 ಔಷಧಿಗಳನ್ನು ಖರೀದಿಸಿ ಪೂರೈಸಲು ದರಪಟ್ಟಿ ಕರೆಯುವ ಬಗ್ಗೆ.

ತಾಂತ್ರಿಕ ವಿವರಣೆ, ಇ.ಎಂ.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://eproc.karnataka.gov.in** ನಲ್ಲಿ ದಿನಾಂಕ: **05–08–2021** ರಿಂದ ಔಷದಿ ಟೆಂಡರ್‌ಗಳ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಕೆ.ಎಸ್.ಎಂ.ಎಸ್.ಸಿ.ಎಲ್ ವೆಬ್‌ಸೈಟ್ ಮುಖಾಂತರ: **http://www.kdlws.kar.nic.in** ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಕ್ರಮ ಸಂಖ್ಯೆ (6) ನ್ನು ದಿನಾಂಕ: **05–08–2021 ರಿಂದ 10–08–2021ರ ಒಳಗಾಗಿ** ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು Password Protected PDF ನಲ್ಲಿ ಇ–ಮೇಲ್ ಐಡಿ **ksdlwscovid19.procurement@gmail.com** ಗೆ ದಿನಾಂಕ: **10–08–2021ರ ಸಂಜೆ 5.00 ಗಂಟೆಯೊಳಗೆ** ದರಪಟ್ಟಿಯನ್ನು ಸಲ್ಲಿಸಬಹುದು. ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ವಾಸಾಸಂಇ/ಬೆಂ.ನ/ಅಡ್ವರ್ಟೋ/1066/2021–22 ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಂ.ಎಸ್.ಸಿ.ಎಲ್

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.4, ಹೊಸದುರ್ಗ, ಚಿತ್ರದುರ್ಗ (ಜಿ)
Ph/Fax: 08199-230018, E-Mail: eeubpdvn4@gmail.com
ಸಂಖ್ಯೆ: ಕಾಇಂ/ವಿಜನಿನಿ/ಭಮೇಯೋ/ವಿ–4/ಹೊ/ಟೆಂಡರ್–07&08/2021–22/ ದಿನಾಂಕ: 28.07.2021

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲೆಕ್ಕ ಶೀರ್ಷಿಕೆ 4701 ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರುವ ತುಮಕೂರು ಶಾಖಾ ಕಾಲುವೆ ಕಿಮೀ 76.00 ರಿಂದ 160.00 ರವರೆಗಿನ ಹನಿ ನೀರಾವರಿ ಮತ್ತು ಕೆರೆ ತುಂಬುವ ಕಾಮಗಾರಿಗೆ ತಾಂತ್ರಿಕ ಸಮಾಲೋಚಕರುನ್ನು ನೇಮಿಸಲು ಟೆಂಡರ್ ಆಹ್ವಾನಿಸಿದ್ದು, ಸದರಿ ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ.

(1) "Consultancy Services for survey, investigation, Detailed Engineering, Preparation of Designs, Drawings, Estimates, Draft Tender Documents including preparation of necessary land acquisition proposals for Implementation of Drip Irrigation and tank filling scheme under Tumkur Branch Canal of Upper Bhadra Project (Block No.4 & 5)-26412.70 Ha in TBC under UBP (Indent No.1686)" (2) "Consultancy Services for survey, investigation, Detailed Engineering, Preparation of Designs, Drawings, Estimates, Draft Tender Documents including preparation of necessary land acquisition proposals for Implementation of Drip Irrigation and tank filling scheme under Tumkur Branch Canal of Upper Bhadra Project (Block No.6,7&8) 29787.90 Ha in TBC under UBP (Indent No.1687)"

ಸದರಿ 2 ಕಾಮಗಾರಿಗಳಿಗೆ ದ್ವಿಲಕೋಟೆ ಪದ್ಧತಿ ಮೂಲಕ ಅರ್ಹ ತಾಂತ್ರಿಕ ಸಮಾಲೋಚಕರಿಂದ ಶೇಕಡಾವಾರು ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 31.07.2021 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಗುತ್ತಿಗೆದಾರರ ಅರ್ಹತೆ/ ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: **16.08.2021**ರ ಮಧ್ಯಾಹ್ನ **3:00** ಗಂಟೆಯವರೆಗೆ ಸಂಪರ್ಕಿಸಬಹುದು. ಸದರಿ ಕಾಮಗಾರಿಗಳಿಗೆ ಪ್ರೀ–ಬಿಡ್ ಸಭೆಯನ್ನು ಮುಖ್ಯ ಇಂಜಿನೀಯರರು, ವಿಜನಿನಿ, ಭ.ಮೇ. ಯೋ. ವಲಯ, ಚಿತ್ರದುರ್ಗ ಇವರ ಕಚೇರಿಯಲ್ಲಿ ದಿನಾಂಕ: **05.08.2021**ರಂದು ಬೆಳಿಗ್ಗೆ **11:30** ಗಂಟೆಗೆ ನಡೆಸಲಾಗುವುದು. ಸದರಿ ಕಾಮಗಾರಿಯ ಟೆಂಡರ್‌ನ್ನು ದಿನಾಂಕ: **16.08.2021**ರ ಅಪರಾಹ್ನ **4.00** ಗಂಟೆಯವರೆಗೆ ಸಲ್ಲಿಸಬಹುದು. ಸದರಿ ಕಾಮಗಾರಿಗಳಿಗೆ ಸ್ವೀಕೃತವಾದ ಟೆಂಡರ್‌ಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: **17.08.2021**ರಂದು ಸಂಜೆ **4.30** ಗಂಟೆಯ ನಂತರ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗರವರ ಕಛೇರಿಯಲ್ಲಿ ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್‌ನಲ್ಲಿ ಅನುಮೋದನೆಯಾದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು.

RO No. 334: DIPR/CTA/MCA/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ.
Telephones: 08392 -276250 e-mail: dhobellari@gmail.com
NO.DHOB/ACCTS2/OUTSOURCEDRIVERS/02/2021-22 Date: 04.08.2021.

ಇ–ಟೆಂಡರ್ ಪ್ರಕಟಣೆ

2021–22ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವ್ಯಾಪ್ತಿಯಲ್ಲಿ ಬರುವ ವಿವಿಧ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿದೆ, ಇ–ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ http://e-proc.karnataka.gov.in ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯವಿರುತ್ತದೆ. (ಆನ್ ಲೈನ್‌ನಲ್ಲಿ ಇ–ಟೆಂಡರ್‌ನ್ನು ಅಪ್ಲೋಡ್ ಮಾಡಲು ಕೊನೆಯ **ದಿನಾಂಕ:19–08–2021 ಸಂಜೆ: 16:00** ಗಂಟೆಯವರೆಗೆ ನಿಗಧಿಪಡಿಸಲಾಗಿದೆ ಇ–ಟೆಂಡರ್ ಮೊತ್ತ **ರೂ.57.17 ಲಕ್ಷಗಳು**, ಟೆಂಡರ್ ಸಂಖ್ಯೆ: DHOB/ACCTS2/OUTSOURCE DRIVERS/02/ 2021-22.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/244/ಎಂಸಿಎ/2021–22

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
No:EE/RWSS/Dvn/SMG/JE/JJM/E-proc/1054/2021-22
Date: 04.08.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇಂಡೆಂಟ್ ಸಂಖ್ಯೆ :** 1) 27811/call3, 2) 29203/call4, 3) 33749/call2, 4) 32006, 5) 34462, 6) 34471, 7) 34466

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https://www.eproc.karnataka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ದುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು. **ಟೆಂಡರ್‌ನ ಕೆಲವು ಷರತ್ತುಗಳು : 1.** ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 10.08.2021 ರ ಸಂಜೆ 5.30 **2.** ಏಕ–ಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.08.2021 **3.** ದ್ವಿ–ಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.08.2021 **4.** ದ್ವಿ–ಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.08.2021 **5.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ: 2 ತಿಂಗಳು(60 ದಿನಗಳು)

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ&ನೈ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–20/08/ಎಂಸಿಎ/21–22/463

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ, ರಾರಾನಗರ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು–560 002.
ಸಂಖ್ಯೆ: ಕಾಪಾಅ/ರಮೂಸೌ–ರಾರಾನ/ಟೆಂಡರ್/02/2021–22 (2ನೇ ಕರೆ)ದಿನಾಂಕ: 05.08.2021

ಟೆಂಡರ್ ಪ್ರಕಟಣೆಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ (ರಾಜರಾಜೇಶ್ವರಿನಗರ ವಿಭಾಗ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (₹ ಲಕ್ಷ ಗಳಲ್ಲಿ)	ಇಎಂಡಿ (₹ ಲಕ್ಷಗಳಲ್ಲಿ)
ಮುತ್ಯಾಲನಗರದಲ್ಲಿ ಶಂಕರ್‌ನಾಗ್ ರೈಲ್ವೇ ಕೆಳಸೇತುವೆಯ ದಕ್ಷಿಣ ಭಾಗದಲ್ಲಿ ಅಪ್ರೋಚ್ ರಸ್ತೆ ನಿರ್ಮಾಣ (ಎಲ್‌ಸಿ–5) ಮತ್ತು ರೈಲು ಮಾರ್ಗದ ಕಡೆಗೆ (ಎಲ್‌ಸಿ–4ಎ) ವರೆಗೆ ರೈಲ್ವೇ ಕಾಂಪೌಂಡ್ ಗೋಡೆ ನಿರ್ಮಾಣ ಮಾಡುವುದು.	434.40	[illegible]

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **06.08.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **19.08.2021**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ, ರಾ.ರಾ.ನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ ಇಲ್ಲಿ ಟೆಂಡರ್ ವಿಚಾರಣೆ ಸ್ವೀಕರಿಸಲು ಕೊನೆಯ ದಿನಾಂಕ: **12.08.2021**ರ ಸಂಜೆ **4:30** ಗಂಟೆಯವರೆಗೆ. (4) ಪೂರ್ವ–ಟೆಂಡರ್ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತಸೌಕರ್ಯ) 4ನೇ ಮಹಡಿ, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೆಂಗಳೂರು ಇಲ್ಲಿ ದಿನಾಂಕ **13.08.2021**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತ–ಸೌಕರ್ಯ–ರಾ.ರಾ. ನಗರ ವಿಭಾಗ) ಇಲ್ಲಿ ದಿನಾಂಕ **21.08.2021**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ– ರಾರಾನ ವಿಭಾಗ

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
3ನೇ ಮಹಡಿ, 5ನೇ ಹಂತ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ಸಂಖ್ಯೆ: ಮಾಹಆ 64 ಆಡಳಿತ 2021 ದಿನಾಂಕ:03.08.2021

ಅಧಿಸೂಚನೆ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಮಂಜೂರಾದ ಅಪರ ನಿಬಂಧಕರು 01 ಹುದ್ದೆ, ಸಹಾಯಕ ನಿಬಂಧಕರು 01 ಹುದ್ದೆ, ಕೋರ್ಟ್ ಅಧಿಕಾರಿ 01 ಹುದ್ದೆ, ತೀರ್ಪು ಬರಹಗಾರರು 01 ಹುದ್ದೆ, ಕಾನೂನು ಸಹಾಯಕರು / ಸಂಶೋಧನಾ ಸಹಾಯಕರು 02 ಹುದ್ದೆ, ಶೀಘ್ರಲಿಪಿಗಾರರು 02 ಹುದ್ದೆ, ಸಹಾಯಕರು 01 ಹುದ್ದೆ ಮತ್ತು ವಾಹನ ಚಾಲಕರು 01 ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಪ್ರಥಮತಃ 06 ತಿಂಗಳ ಅವಧಿಗೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಯೋಗದ ವೆಬ್‌ಸೈಟ್ www.kshrc.karnataka.gov.in ನಲ್ಲಿ ಅಧಿಸೂಚನೆ ಹಾಗೂ ಅರ್ಜಿ ಪ್ರಪತ್ರದ ವಿವರಗಳನ್ನು ಪ್ರಕಟಿಸಲಾಗಿದೆ. ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ : **04.09.2021.**

ಸಹಿ/– ಕಾರ್ಯದರ್ಶಿಗಳು
ವಾಸಾಸಂಇ/ಬೆಂನ/ಜಿಎ/1059/2021–22

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.
ಸಂ:ಆ.ಅ./ತೋವಿವಿಬಾ/ಸಖಕ/ಟೆ.ನಂ–137/2021–22 ದಿನಾಂಕ:05/08/2021

ಮರು ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮುಖಾಂತರ)

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸುರಗೆ ಬೇಕಾಗಿರುವ laboratory equipments ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರಮೆಂಟ್ ಮುಖಾಂತರ ಮರು ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://eproc. karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	15–08–2021	@	14.00 ಘಂ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	21–08–2021	@	16.00 ಘಂ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	23–08–2021	@	10.00 ಘಂ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	25–08–2021	@	12.00 ಘಂ

ಬಿಡ್‌ದಾರರು ಇ–ಪ್ರೊಕ್ಯೂರಮೆಂಟ್‌ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು.

ಸಹಿ/–ಆಸ್ತಿ ಅಧಿಕಾರಿಗಳು, ತೋ.ವಿ.ವಿ, ಬಾಗಲಕೋಟ
DIPR/BGK/RO-NO-195/MCA/2021-22

ಕರ್ನಾಟಕ ಸರ್ಕಾರ
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15–03–2013
Website : www.kimskoppal.com
email :directorkimskoppal@gmail.com.
Office: 08539 225522 Office : 08539 225523
ಸಂ.ಕಿಮ್ಸ್/ಕೊಪ್ಪಳ/ಸರಬರಾಜು/ಟೆಂಡರ್/10,11&12/2021–22 ದಿನಾಂಕ: 04/08/2021

ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಧ್ಯಾರ್ಥಿಗಳಿಗೆ ಅವಶ್ಯವಿರುವ ವೈದ್ಯಕೀಯ ಪುಸ್ತಕಗಳು, ಸ್ಟೇಥಸ್ಕೋಪ್, ಬಿ.ಪಿ.ಆಪರೇಟರ್, ಎಮರ್‌ಜೆನ್ಸಿ ಲೈಟ್ ಮತ್ತು ಇನ್ನಿತರ ಸಾಮಾಗ್ರಿಗಳನ್ನು ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಸರಬರಾಜು ಮಾಡಲು ಹಾಗೂ ಕಿಮ್ಸ್ ಸಂಸ್ಥೆಯ ಜಿಲ್ಲಾ ಬೋಧಕ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ಔಷಧಿ, ಪರಿಕರಗಳನ್ನು ಹಾಗೂ A.S.V Injection ಗಳನ್ನು ಖರೀದಿಸಿ ಪೂರೈಸಲು ಕೆಟಿಪಿಪಿ ಕಾಯ್ದೆ 1999 ನಿಯಮ 2000 ರನ್ವಯ ಕರ್ನಾಟಕ ಸರ್ಕಾರದ ಇ–ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ 15 ದಿನಗಳ ಕಾಲಾವಕಾಶ ನೀಡಿ ಇ–ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿರುತ್ತದೆ.

ಟೆಂಡರ್ ಸಂಖ್ಯೆ: 1. ಸಂ: ಕಿಮ್ಸ್/ಕೊಪ್ಪಳ/ಡಯಾಲಿಸಿಸ್/10 2021–22 ದಿ:04/08/2021. **ವಿವರ:** ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ಔಷಧಿ, ಪರಿಕರಗಳನ್ನು ಹಾಗೂ A.S.V Injection ಗಳನ್ನು ಪೂರೈಸುವ ಕುರಿತು. **ಅಂದಾಜು ಮೊತ್ತ: ರೂ. 66.53 ಲಕ್ಷಗಳು.** 2. ಸಂ: ಕಿಮ್ಸ್/ಕೊಪ್ಪಳ/ಎಸ್.ಸಿ.ಪಿ–ಟಿ.ಎಸ್.ಪಿ/ ಬುಕ್ಸ್/11/2021–22 ದಿ:04/08/2021. **ವಿವರ:** ವೈದ್ಯಕೀಯ ಪುಸ್ತಕಗಳ ಪೂರೈಕೆ. **ಅಂದಾಜು ಮೊತ್ತ: ರೂ. 36.00 ಲಕ್ಷಗಳು.** 3. ಸಂ: ಕಿಮ್ಸ್/ಕೊಪ್ಪಳ/ ಎಸ್.ಸಿ.ಪಿ–ಟಿ.ಎಸ್.ಪಿ /12/2021–22 ದಿ:04/08/2021. **ವಿವರ:** ಸ್ಟೇಥಸ್ಕೋಪ್, ಬಿ.ಪಿ.ಆಪರೇಟರ್,ಎಮರ್‌ಜೆನ್ಸಿ ಲೈಟ್ ಮತ್ತು ಇನ್ನತರ ಸಾಮಾಗ್ರಿಗಳ ಪೂರೈಕೆ. **ಅಂದಾಜು ಮೊತ್ತ: ರೂ. 14.00 ಲಕ್ಷಗಳು**

1.ಟೆಂಡರ್‌ಗಳನ್ನು ದಿನಾಂಕ : 06/08/2021 ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೋಳ್ಳಬಹುದು. 2. ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21/08/2021 ಸಾಯಂಕಾಲ 05:30 ಗಂಟೆ ವರೆಗೆ. 3. ತಾಂತ್ರಿಕ ಲಕೋಟೆ(ಮೊದಲನೆಯ ಕವರ್) ತೆರೆಯುವ ದಿನಾಂಕ : 23/08/2021 ಬೆಳಿಗ್ಗೆ 11:30 ಗಂಟೆಗೆ,

ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http// www.kimskoppal.kar.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/193/ಎಂಸಿಎ/2021–22

‘ಗೊಂಬೆಗಳ ಲವ್’, ‘ಜಟ್ಟ’ ಸಿನಿಮಾ ಮುಖಾಂತರ ಖ್ಯಾತಿ ಪಡೆದಿದ್ದ ನಟಿ ಪಾವನಾ ಗೌಡ ಅವರಿಗೆ ಇದೀಗ ಚಂದನವನದಲ್ಲಿ ಹೊಸ ಅವಕಾಶಗಳ ಬಾಗಿಲು ತೆರೆಯುತ್ತಿದೆ. ಶ್ರೀನಗರ ಕಿಟ್ಟಿ ಅಭಿನಯದ ‘ಗೌಳಿ’ ಚಿತ್ರಕ್ಕೆ ನಾಯಕಿಯಾಗಿ ಇವರು ಆಯ್ಕೆಯಾಗಿದ್ದು, ರವಿಚಂದ್ರನ್ ನಟನೆಯ 6T ಚಿತ್ರದಲ್ಲಿ ಗ್ಲ್ಯಾಮರಸ್ ರೋಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಸಿನಿ ಪಯಣದ ಬಗ್ಗೆ ಪಾವನಾ ‘ಸಿನಿಮಾ ಪುರವಣಿ’ ಜೊತೆ ಮಾತಿಗಿಳಿದರು.

ಪಾವನಾಗೆ ಸಿಕ್ಕಿದೆ ಗ್ಲ್ಯಾಮರಸ್ ಪಟ್ಟ!

ಪಾವನಾ ಗೌಡ

ಅಭಿಲಾಷ್ ಪಿ.ಎಸ್

• ಲಾಕ್‌ಡೌನ್ ಬಳಿಕದ ಮೊದಲ ಚಿತ್ರವಾಗಿ ನಿಮ್ಮ ನಟನೆಯ ‘ಕಲಿವೀರ’ ತೆರೆಗೆ ಬರುತ್ತಿದೆ. ನಿಮ್ಮ ನಿರೀಕ್ಷೆ ಏನಿದೆ?

ಎರಡನೇ ಲಾಕ್‌ಡೌನ್ ಬಳಿಕ ಬಿಡುಗಡೆ ಆಗುತ್ತಿರುವ ಮೊದಲ ಸಿನಿಮಾ ‘ಕಲಿವೀರ’. ಮೊದಲನೇ ಲಾಕ್‌ಡೌನ್ ನಂತರ ಸಿನಿಮಾ ಬಿಡುಗಡೆಯಾದಾಗ ಒಳ್ಳೆಯ ಸಿನಿಮಾಗಳನ್ನು ಜನ ಪ್ರೋತ್ಸಾಹಿಸಿದರು. ಎಲ್ಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡಿ, ಹಲವು ಚಿತ್ರಗಳನ್ನು ಬ್ಲಾಕ್‌ಬಸ್ಟರ್ ಕೂಡಾ ಮಾಡಿದರು. ಈ ನಿಟ್ಟಿನಲ್ಲಿ ‘ಕಲಿವೀರ’ ಗೆದ್ದೇಗೆಲ್ಲುತ್ತದೆ ಎನ್ನುವ ನಂಬಿಕೆ ನನಗೆ ಇದೆ. ಕಥೆಯಲ್ಲಿ ನಂಬಿಕೆ ಇಟ್ಟಿರುವ ತಂಡವಿದು. ಒಳ್ಳೆಯ ಕೆಲಸ ಮಾಡಿದ್ದೇವೆ ಎನ್ನುವ ನಂಬಿಕೆಯೂ ಇದೆ. ಇದೇ ನಮ್ಮ ಚಿತ್ರತಂಡಕ್ಕೆ ಶಕ್ತಿ. ಪ್ರೇಕ್ಷಕರ ಮೇಲಿನ ನಂಬಿಕೆ ಮೇಲೆಯೇ, ಚಿತ್ರಮಂದಿರಗಳಲ್ಲಿ ಕೇವಲ ಶೇ 50 ಆಸನ ಭರ್ತಿಯ ನಿಯಮ ಇದ್ದರೂ ನಾವು ಚಿತ್ರಮಂದಿರಕ್ಕೆ ಬರುವ ಧೈರ್ಯ ಮಾಡಿದ್ದೇವೆ. ನಾನು ಈ ಚಿತ್ರದಲ್ಲಿ ವಕೀಲೆಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಚಿತ್ರದ ನಾಯಕ ಆದಿವಾಸಿ ಜನಾಂಗದವನು. ತನ್ನ ಸಮುದಾಯಕ್ಕೆ ಆಗುವ ಅನ್ಯಾಯದ ವಿರುದ್ಧ ಸಿಡಿದು ದ್ವೇಷ ತೀರಿಸಿಕೊಳ್ಳುವ ಕಥಾಹಂದರವನ್ನು ಚಿತ್ರ ಹೊಂದಿದ್ದು, ನಾನು ನಾಯಕನ ಬೆಂಬಲಕ್ಕೆ ನಿಲ್ಲುವ ಪಾತ್ರದಲ್ಲಿ ನಟಿಸಿದ್ದೇನೆ. ನಾಯಕನ ಯಶಸ್ಸಿನ ದಾರಿಯಲ್ಲಿ ಸಾಗುವ ವಿಶೇಷ ಪಾತ್ರ ನನ್ನದು. ಇಡೀ ಚಿತ್ರತಂಡ ಉತ್ತರ ಕರ್ನಾಟಕದ ಪ್ರತಿಭೆಗಳಿಂದ ಕೂಡಿದೆ.

• ಶ್ರೀನಗರ ಕಿಟ್ಟಿ ಅವರ ಜೊತೆ ‘ಗೌಳಿ’ಯಲ್ಲಿ ತೆರೆಹಂಚಿಕೊಳ್ಳಲು ಹೇಗಿದೆ ಸಿದ್ಧತೆ?

ಶ್ರೀನಗರ ಕಿಟ್ಟಿ ಅವರ ಜೊತೆ ನಟಿಸಲು ನಾನೂ ಕುತೂಹಲದಿಂದ ಕಾಯುತ್ತಿದ್ದೇನೆ. ನಾನು ಅವರ ಎಲ್ಲ ಸಿನಿಮಾಗಳನ್ನೂ ನೋಡಿದ್ದೇನೆ. ಅವರ ಅಭಿನಯ ಅದ್ಭುತ. ಹೀಗಾಗಿ ಅವರ ಜೊತೆ ತೆರೆಹಂಚಿಕೊಳ್ಳುವ ಖುಷಿ ನನಗಿದೆ. ಆಗಸ್ಟ್ ಮಧ್ಯದಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಸೋಹನ್ ಫಿಲ್ಮ್ ಫ್ಯಾಕ್ಟರಿಯು ಇದನ್ನು ನಿರ್ಮಾಣ ಮಾಡುತ್ತಿದೆ. ಸೂರಾ ಎಸ್. ಅವರ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದ್ದು, ಬಹಳ ಇಂಟೆನ್ಸ್ ಆಗಿರುವ ಕಥಾಹಂದರವನ್ನು ಹೊಂದಿದೆ. ಸಿನಿಮಾ ಹೇಗಿರುತ್ತದೆ ಎನ್ನುವುದನ್ನು ಶ್ರೀನಗರ ಕಿಟ್ಟಿ ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ನೋಡಿದರೆ ತಿಳಿಯುತ್ತದೆ. ನೈಜ ಘಟನೆಗಳನ್ನಾಧರಿಸಿರುವ ಸಿನಿಮಾ ಇದಾಗಿದ್ದು, ಇದರ ಭಾಗವಾಗಲು ಕಾತುರದಿಂದ ಕಾಯುತ್ತಿದ್ದೇನೆ.

• ‘ಕನ್ನಡಿಗ’ ಬಹಳ ನಿರೀಕ್ಷೆ ಹುಟ್ಟಿಸಿರುವ ಸಿನಿಮಾ. ಅದರಲ್ಲಿನ ನಿಮ್ಮ ಪಾತ್ರ ಹೇಗಿದೆ?

ಈ ಸಿನಿಮಾ ಕೇವಲ ಕಲಾವಿದರಿಗೆ, ನಿರ್ಮಾಣ ಮಾಡಿದ ಸಂಸ್ಥೆಗಷ್ಟೇ ಅಲ್ಲ, ಇಡೀ ಕನ್ನಡಿಗರಿಗೆ ವಿಶೇಷ ಸಿನಿಮಾ ಆಗಿರಲಿದೆ. ಕನ್ನಡ ಭಾಷೆ, ಲಿಪಿಯ ಬಗ್ಗೆ ಹಾಗೂ ಇದನ್ನು ಹೇಗೆ ಉಳಿಸಿಕೊಂಡು ಬಂದಿದ್ದೇವೆ, ಬೆಳೆಸುವುದು ಹೇಗೆ ಎನ್ನುವ ವಿಷಯವನ್ನು ಇಟ್ಟುಕೊಂಡು ನಿರ್ದೇಶಕರಾದ ಬಿ.ಎಂ.ಗಿರಿರಾಜ್ ಅವರು ಕಥೆ ಹೆಣೆದಿದ್ದಾರೆ. ರವಿಚಂದ್ರನ್ ಅವರು ಲಿಪಿಕಾರನ ಪಾತ್ರಕ್ಕೆ ಬಣ್ಣಹಚ್ಚಿದ್ದು, ನಾನು ಸಂಕಮ್ಮಬ್ಬೆ ಪಾತ್ರವನ್ನು ನಿಭಾಯಿಸುತ್ತಿದ್ದೇನೆ. ನಮ್ಮ ಭಾಷೆಯ ಮೇಲೆ ಅಷ್ಟೊಂದು ಪ್ರೀತಿ ಇರುವುದರಿಂದ ಭಾಷಾ ಪ್ರೇಮಿಗಳೆಲ್ಲರಿಗೂ ಚಿತ್ರ ಇಷ್ಟವಾಗಲಿದೆ. 1950ರಲ್ಲಿ ನಡೆಯುವ ಕಥೆ ಇದು. ಇಡೀ ಸಿನಿಮಾ ಈ ಕಾಲದ ಮೂಡ್‌ನಲ್ಲೇ ಇರುತ್ತದೆ.

• ‘6T’ ಚಿತ್ರದಿಂದಾಗಿ ಪಾವನಾ ಗೌಡ ಅವರಿಗೆ ಗ್ಲ್ಯಾಮರಸ್ ಬೆಡಗಿ ಪಟ್ಟ ಸಿಕ್ಕಿದೆ ಅಲ್ಲವೇ?

ರವಿಚಂದ್ರನ್ ಅವರ ಜೊತೆ ನಟಿಸುವ ಸಂದರ್ಭದಲ್ಲಿ, ಚಿತ್ರೀಕರಣದ ಮೊದಲ ದಿನ ಬಹಳ ಒತ್ತಡದಲ್ಲಿದ್ದೆ. ಆದರೆ ಕ್ರಮೇಣವಾಗಿ ನನಗೆ ಅವರ ಜೊತೆ ಕೆಲಸ ಮಾಡುವುದು ಖುಷಿ ಎನಿಸಿತು. ಅವರು ತಮ್ಮ ಅನುಭವದ ಬುತ್ತಿಯಿಂದ ನಮಗೆ ನಟನೆಯನ್ನು ಹೇಳಿಕೊಡುತ್ತಾ, ನನ್ನಲ್ಲಿದ್ದ ಆತಂಕವನ್ನು ದೂರಗೊಳಿಸಿದರು. ನಾನು ಒಬ್ಬ ಹಿರಿಯ ನಟನ ಜೊತೆ ಇದ್ದೇನೆ ಎನ್ನುವ ಭಾವನೆ ಬರದಂತೆ ಅವರು ನಮ್ಮೊಂದಿಗೆ ಬೆರೆಯುತ್ತಿದ್ದರು. ಚಿತ್ರತಂಡದ ಜೊತೆ ಹರಟೆ ಹೊಡೆಯುತ್ತಿದ್ದರು. ಕಥೆ ಹೇಳುತ್ತಿದ್ದರು. ನಾನು ‘ಕನ್ನಡಿಗ’ ಚಿತ್ರಕ್ಕೂ ಮುನ್ನವೇ ರವಿಚಂದ್ರನ್ ಅವರ ‘6T’ ಸಿನಿಮಾಗೆ ಆಯ್ಕೆಯಾಗಿದ್ದೆ. ರವಿಚಂದ್ರನ್ ಅವರು ನನ್ನ ಫೋಟೋಶೂಟ್ ನೋಡಿ ಚಿತ್ರಕ್ಕೆ ಆಯ್ಕೆ ಮಾಡಿಕೊಂಡಿದ್ದರು. ‘ಕನ್ನಡಿಗ’ ಸಿನಿಮಾದಲ್ಲೂ ‘ಜಟ್ಟ’ ಸಿನಿಮಾದ ಅದೇ ಭಾಷೆ ಹಾಗೂ ಮೂಡ್ ಇದ್ದ ಕಾರಣ ಗಿರಿರಾಜ್ ಅವರು ನನ್ನನ್ನು ಆಯ್ಕೆ ಮಾಡಿದರು. ರವಿಚಂದ್ರನ್ ಅವರ ಸಿನಿಮಾಗಳಿಗೆ ಆಯ್ಕೆಯಾಗುವುದು ಸುಲಭದ ಮಾತಲ್ಲ. ರವಿಚಂದ್ರನ್ ಅವರ ನಿರ್ದೇಶನದಲ್ಲಿ ಮೂಡಿಬಂದ ಚಿತ್ರದ ಎಲ್ಲ ನಟಿಯರೂ ತೆರೆಯ ಮೇಲೆ ಬಹಳ ಆಕರ್ಷಕವಾಗಿ, ಗ್ಲ್ಯಾಮರಸ್ ಆಗಿ ಕಾಣಿಸಿಕೊಳ್ಳುತ್ತಾರೆ. ‘6T’ ಚಿತ್ರದಲ್ಲೂ ಇದೇ ರೀತಿ ಗ್ಲ್ಯಾಮರ್ ಇದೆ. ಪಾವನಾಗೆ ಗ್ಲ್ಯಾಮರ್ ಪಾತ್ರ ಹಿಡಿಸುವುದಿಲ್ಲ ಎನ್ನುವ ಭಾವನೆ ಈ ಹಿಂದೆ ಇತ್ತು. ರವಿಚಂದ್ರನ್ ಅವರು ನನ್ನನ್ನು ಆಯ್ಕೆ ಮಾಡಿದಾಗ ‘ಗ್ಲ್ಯಾಮರಸ್’ ಎನ್ನುವ ಗುರುತು ನನಗೆ ಬಂತು. ಈ ಪಾತ್ರವನ್ನೂ ನಿಭಾಯಿಸುವ ಸಾಮರ್ಥ್ಯ ನನಗಿದೆ ಎನ್ನುವುದು ಇತರರಿಗೆ ತಿಳಿಯಿತು.

• ಮುಂದೆ ಒಪ್ಪಿಕೊಂಡಿರುವ ಸಿನಿಮಾಗಳು?

ಲಾಕ್‌ಡೌನ್ ಮುಂಚಿತವಾಗಿ ಒಪ್ಪಿಕೊಂಡ ಆರೇಳು ಸಿನಿಮಾಗಳು ಬಿಡುಗಡೆಗೆ ಬಾಕಿ ಇವೆ. ‘ಗೌಳಿ’ ಚಿತ್ರದ ಚಿತ್ರೀಕರಣ ಶೀಘ್ರದಲ್ಲೇ ಆರಂಭವಾಗಲಿದೆ. ಮರ್ಡರ್ ಮಿಸ್ಟರಿ ಕಥಾಹಂದರ ಹೊಂದಿರುವ ‘ಸದ್ದು ವಿಚಾರಣೆ ನಡೆಯುತ್ತಿದೆ’ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ‘ಕನ್ನಡಿಗ’ ಚಿತ್ರದ ಚಿತ್ರೀಕರಣವೂ ಮುಗಿದಿದೆ. ಇನ್ನೊಂದು ಸಿನಿಮಾ ಒಪ್ಪಿಕೊಂಡಿದ್ದೇನೆ. ಅದರ ಬಗ್ಗೆ ಮುಂದೆ ತಿಳಿಸುತ್ತೇನೆ. ❖

ಪ್ರಜಾವಾಣಿ ವಿಡಿಯೊ
ಸಂದರ್ಶನದ ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

ಇಂದು ಬೆಳ್ಳಿತೆರೆಗೆ ‘ಕಲಿವೀರ’


ಕಲಿವೀರ
ಏಕಲವ್ಯ, ಚಿರಶ್ರೀ

ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿ ಚಿತ್ರಮಂದಿರಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡಿದೆ. ಪ್ರೇಕ್ಷಕರ ಸಂಖ್ಯೆ ನಿರ್ಬಂಧದಿಂದ ಆಗುವ ನಷ್ಟದ ಭೀತಿ ಹಾಗೂ ಕೋವಿಡ್ ಮೂರನೇ ಅಲೆಯ ಆತಂಕದ ನಡುವೆಯೇ ಕ್ರಮೇಣ ಹೊಸ ಚಿತ್ರಗಳು ಬಿಡುಗಡೆಗೆ ಸಜ್ಜಾಗಿವೆ. ಈ ಸಾಲಿನಲ್ಲಿ ಮೊದಲನೇ ಚಿತ್ರವಾಗಿ ಆ.6ರಂದು ‘ಕಲಿವೀರ’ ತೆರೆಕಾಣಲಿದೆ.

ಈ ಹಿಂದೆ ‘ಕನ್ನಡ ದೇಶದೊಳ್’ ಎಂಬ ಚಿತ್ರ ನಿರ್ದೇಶನ ಮಾಡಿದ್ದ ಅವಿ ಅವರು ಈ ಚಿತ್ರದ ನಿರ್ದೇಶಕರಾಗಿದ್ದಾರೆ. ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ ಏಕಲವ್ಯ ಎನ್ನುವವರು ಚಿತ್ರದ ನಾಯಕ. ‘ನಾಯಕ ‘ಕಲಿ’ ಆದಿವಾಸಿ ಜನಾಂಗದವನು. ತನ್ನ ಸಮುದಾಯಕ್ಕೆ ಆಗುವ ಅನ್ಯಾಯದ ವಿರುದ್ಧ ಸಿಡಿದು ದ್ವೇಷ ತೀರಿಸಿಕೊಳ್ಳುವ ರೋಚಕ ಕಥಾಹಂದರವನ್ನು ಕಲಿವೀರ ಹೊಂದಿದೆ’ ಎನ್ನುತ್ತಾರೆ ನಿರ್ದೇಶಕ ಅವಿ. ಚಿತ್ರದಲ್ಲಿ ಪಾವನಾ ಗೌಡ ಹಾಗೂ ಚಿರಶ್ರೀ ಅಂಚನ್ ನಾಯಕಿಯರಾಗಿ ಅಭಿನಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವಿ, ‘ಎರಡನೇ ಲಾಕ್‌ಡೌನ್ ಬಳಿಕ ಮೊದಲ ಚಿತ್ರವಾಗಿ ಕಲಿವೀರ ಬಿಡುಗಡೆಯಾಗುತ್ತಿದೆ. ಮುಂದೆ ಸಾಲುಸಾಲು ಸಿನಿಮಾಗಳು ಬಿಡುಗಡೆಗೆ ಕಾದಿರುವ ಕಾರಣ ನಾವು ಮುಂಚಿತವಾಗಿ ಬಂದರೆ ಸ್ವಲ್ಪ ಕಾಲಾವಕಾಶ ಸಿಗುತ್ತದೆ, ಇನ್ನಷ್ಟು ಜನರನ್ನು ತಲುಪಬಹುದೆಂದು ಬೇಗ ಚಿತ್ರಬಿಡುಗಡೆ ಮಾಡುತ್ತಿದ್ದೇವೆ. ಮೊದಲಿಗೆ ಉತ್ತರ ಕರ್ನಾಟಕದಲ್ಲಿ ಮಾತ್ರ ಚಿತ್ರಬಿಡುಗಡೆಗೆ ನಿರ್ಧರಿಸಿದ್ದೆವು. ಇದೀಗ ರಾಜ್ಯದಾದ್ಯಂತ ಇರುವ 40ಕ್ಕೂ ಅಧಿಕ ಏಕಪರದೆ ಚಿತ್ರಮಂದಿರಗಳಲ್ಲಿ ಚಿತ್ರ ತೆರೆ ಕಾಣಲಿದೆ. ಮುಂದೆ ಜನರ ಪ್ರತಿಕ್ರಿಯೆ ನೋಡಿಕೊಂಡು ಮತ್ತಷ್ಟು ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆ ಮಾಡುತ್ತೇವೆ. ಈಗಾಗಲೇ ಹಿಂದಿ ಡಬ್ಬಿಂಗ್ ಹಕ್ಕು ಉತ್ತಮ ಬೆಲೆಗೆ ಮಾರಾಟವಾಗಿದೆ’ ಎಂದರು.

ನಿರ್ಮಾಪಕ ಕೆಎಂಪಿ ಶ್ರೀನಿವಾಸ್ ಮಾತನಾಡಿ, ‘ಚಿತ್ರವನ್ನು ಎಷ್ಟು ದಿನ ಎಂದು ಬತ್ತಳಿಕೆಯಲ್ಲಿಟ್ಟುಕೊಂಡು ಕೂರಲು ಸಾಧ್ಯ. ಕಳೆದ ಮಾರ್ಚ್‌ನಲ್ಲೇ ಚಿತ್ರ ಬಿಡುಗಡೆಯಾಗಬೇಕಿತ್ತು. ಇನ್ನಷ್ಟು ದಿನ ಕಾಯದೆ ಚಿತ್ರ ಬಿಡುಗಡೆಗೆ ಧೈರ್ಯ ಮಾಡಿದ್ದೇವೆ’ ಎಂದರು. ❖

ಸಿನಿ ಸಂಕ್ಷಿಪ್ತ

ಕ್ಲೈಮ್ಯಾಕ್ಸ್ ಹಂತದಲ್ಲಿ ‘ಉಗ್ರಾವತಾರ’

ಗುರುಮೂರ್ತಿ ನಿರ್ದೇಶನದ, ಪ್ರಿಯಾಂಕ ಉಪೇಂದ್ರ ನಟಿಸುತ್ತಿರುವ ‘ಉಗ್ರಾವತಾರ’ ಚಿತ್ರದ ಚಿತ್ರೀಕರಣ ಕೊನೆಯ ಹಂತ ತಲುಪಿದ್ದು, ಕ್ಲೈಮ್ಯಾಕ್ಸ್‌ನ ಫೈಟ್‌ಗೆ ನೆಲಮಂಗಲ ಬಳಿ ಇರುವ ರೆಸಾರ್ಟ್‌ವೊಂದರಲ್ಲಿ ಸೆಟ್ ಹಾಕಲಾಗುತ್ತಿದೆ.

ಚಿತ್ರದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಪ್ರಿಯಾಂಕ ಕಾಣಿಸಿಕೊಂಡಿದ್ದು, ಇತ್ತೀಚೆಗೆ ಲಕ್ಷ್ಮೀಪುರದಲ್ಲಿರುವ ‘ರಾಜಲಕ್ಷ್ಮಿ’ ಆಸ್ಪತ್ರೆಯಲ್ಲಿ ಚಿತ್ರದ ಚಿತ್ರೀಕರಣ ನಡೆಯಿತು. ‘ಕ್ಲೈಮ್ಯಾಕ್ಸ್ ಫೈಟ್ ಮಾಡಿ ಕುಂಬಳಕಾಯಿ ಒಡೆಯಲಾಗುತ್ತದೆ. ಇದಕ್ಕಾಗಿ ನೆಲಮಂಗಲ ಬಳಿ ಇರುವ ರೆಸಾರ್ಟ್‌ನಲ್ಲಿ ಸೆಟ್ ಹಾಕಲಾಗುತ್ತಿದೆ. ಪ್ರಸಕ್ತ ಸಾಮಾಜಿಕ ವಿಷಯಗಳು, ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ, ಅಪರಾಧ ಮುಂತಾದ ಗಂಭೀರ ವಿಷಯಗಳನ್ನು ಇಟ್ಟುಕೊಂಡು ಕಥೆ ಹೆಣೆಯಲಾಗಿದೆ’ ಎನ್ನುತ್ತಾರೆ ನಿರ್ದೇಶಕ ಗುರುಮೂರ್ತಿ.

‘ಇದೊಂದು ಆ್ಯಕ್ಷನ್ ಚಿತ್ರ. ಸವಾಲಾಗಿ ಈ ಪಾತ್ರವನ್ನು ಸ್ವೀಕರಿಸಿದ್ದೇನೆ. ಮೊದಲ ಬಾರಿ ಇನ್‌ಸ್ಪೆಕ್ಟರ್ ಪಾತ್ರವನ್ನು ನಿಭಾಯಿಸುತ್ತಿದ್ದು, ಡ್ಯೂಪ್ ಬಳಸದೆ ಫೈಟ್ ಮಾಡಿದ್ದೇನೆ. ಇದಕ್ಕಾಗಿ ತರಬೇತಿ ಪಡೆಯಬೇಕಾಯಿತು. ನಾನು ನಟಿಸಿದ ‘1980’, ‘ಲೈಫ್ ಈಸ್ ಬ್ಯೂಟಿಫುಲ್’ ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿದೆ. ಮುಂದೆ ನಮ್ಮದೇ ಪ್ರೊಡಕ್ಷನ್ ಹೌಸ್‌ನಿಂದ ಚಿತ್ರ ನಿರ್ಮಾಣ ಮಾಡುವ ಯೋಜನೆ ಇದೆ’ ಎಂದರು ಪ್ರಿಯಾಂಕ ಉಪೇಂದ್ರ. ❖

ಮೈಸೂರಿನತ್ತ ‘ಬೈರಾಗಿ’ ತಂಡ

ನಟ ಶಿವರಾಜ್‌ಕುಮಾರ್ ನಟನೆಯ 123ನೇ ಸಿನಿಮಾ ‘ಬೈರಾಗಿ’ಯ ಚಿತ್ರೀಕರಣ ಅಂತಿಮ ಹಂತಕ್ಕೆ ತಲುಪಿದ್ದು, ಬಾಕಿ ಉಳಿದುಕೊಂಡಿರುವ ಹಾಡಿನ ಚಿತ್ರೀಕರಣಕ್ಕೆ ಸದ್ಯದಲ್ಲೇ ಮೈಸೂರಿಗೆ ಚಿತ್ರತಂಡ ತೆರಳಲಿದೆ.

ನಿರ್ದೇಶಕ ವಿಜಯ್ ಮಿಲ್ಟನ್ ನಿರ್ದೇಶನವಿರುವ ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ಹಲವು ಅವತಾರ ಎತ್ತಿದ್ದಾರೆ. ಈಗಾಗಲೇ ಅವರ ಹುಲಿವೇಷ ಹಾಕಿರುವ ಮುಖದ ಪೋಸ್ಟರ್‌ಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ಟಗರು ಯಶಸ್ಸಿನ ಬಳಿಕ ಶಿವರಾಜ್‌ಕುಮಾರ್ ಹಾಗೂ ‘ಡಾಲಿ’ ಧನಂಜಯ್ ಒಟ್ಟಿಗೆ ಕಾಣಿಸಿಕೊಳ್ಳುತ್ತಿರುವ ಈ ಸಿನಿಮಾ ಮೇಲೆ ಜನರ ನಿರೀಕ್ಷೆ ಬಹಳಷ್ಟಿದೆ. ಶಿವರಾಜ್‌ಕುಮಾರ್ ಅವರ ಹುಲಿವೇಷದ ಗೆಟಪ್ ಎಲ್ಲೆಡೆ ವೈರಲ್ ಆಗಿದ್ದು, ಆಟೊ ಹಾಗೂ ಕಾರುಗಳ ಮೇಲೆ ಪೋಸ್ಟರ್‌ಗಳು ರಾರಾಜಿಸುತ್ತಿವೆ.

ಅಂಜಲಿ ಈ ಚಿತ್ರದ ನಾಯಕಿ. ‘ದಿಯಾ’ ಖ್ಯಾತಿಯ ಪೃಥ್ವಿ ಅಂಬರ್ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿದ್ದಾರೆ. ಹಿರಿಯ ನಟ ಶಶಿಕುಮಾರ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಕೃಷ್ಣ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಕೃಷ್ಣ ಸಾರ್ಥಕ್ ಅದ್ದೂರಿಯಾಗಿ ನಿರ್ಮಿಸಿರುವ ಈ ಚಿತ್ರದಲ್ಲಿ ಸಾಕಷ್ಟು ನುರಿತ ಕಲಾವಿದರಿದ್ದಾರೆ. ❖

ಬಿಡುಗಡೆ ಗೊಂದಲದಲ್ಲಿ ಬಿಗ್‌ಬಜೆಟ್ ಚಿತ್ರಗಳು!

‘ಸಲಗ’ ಚಿತ್ರದಲ್ಲಿ ದುನಿಯಾ ವಿಜಯ್

ದುನಿಯಾ ವಿಜಯ್ ನಟನೆಯ ‘ಸಲಗ’, ಶಿವರಾಜ್‌ಕುಮಾರ್ ನಟನೆಯ ‘ಭಜರಂಗಿ–2’ ಮುಂತಾದ ಬಿಗ್‌ಬಜೆಟ್ ಚಿತ್ರಗಳು ಚಿತ್ರಮಂದಿರಕ್ಕೆ ಲಗ್ಗೆ ಇಡಲು ಸಜ್ಜಾಗಿವೆ. ಆದರೆ ಚಿತ್ರಮಂದಿರಗಳಲ್ಲಿ ಶೇ 100 ಪ್ರೇಕ್ಷಕರ ಭರ್ತಿಗೆ ಸರ್ಕಾರ ಇನ್ನೂ ಆದೇಶ ಹೊರಡಿಸದೇ ಇರುವುದು ಚಿತ್ರಗಳ ಬಿಡುಗಡೆಗೆ ಅಡ್ಡಿಯಾಗುವ ಸಾಧ್ಯತೆ ಇದೆ.

ಆ.20ರಂದು ‘ಸಲಗ’ ಹಾಗೂ ‘ನಿನ್ನ ಸನಿಹಕೆ’, ಗಣೇಶ ಚತುರ್ಥಿಗೆ(ಸೆ.10) ‘ಭಜರಂಗಿ–2’, ಸೆ.24ಕ್ಕೆ ಡಾಲಿ ಧನಂಜಯ್ ನಟನೆಯ ‘ಬಡವ ರಾಸ್ಕಲ್’ ಚಿತ್ರವು ಬಿಡುಗಡೆಯಾಗಲಿದೆ. ಪ್ರಸ್ತುತ ರಾಜ್ಯದ ಚಿತ್ರಮಂದಿರಗಳಲ್ಲಿ ಶೇ 50ರಷ್ಟು ಪ್ರೇಕ್ಷಕರಿಗಷ್ಟೇ ಅವಕಾಶವಿದ್ದು, ನೆರೆ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸರ್ಕಾರವು ಈ ನಿರ್ಬಂಧವನ್ನು ಮತ್ತಷ್ಟು ಸಡಿಲಿಸುವ ಕುರಿತು ಇನ್ನೂ ನಿರ್ಧರಿಸಿಲ್ಲ. ಹೊಸ ಸಚಿವ ಸಂಪುಟ ರಚನೆಯಾಗಿರುವುದರಿಂದ ಸರ್ಕಾರವು ಹೊಸ ಕೋವಿಡ್ ಕಾರ್ಯಪಡೆಯನ್ನು ರಚಿಸಬೇಕಷ್ಟೇ. ಇಲ್ಲಿ ಚರ್ಚೆಯಾದ ಬಳಿಕವಷ್ಟೇ ಪ್ರೇಕ್ಷಕರ ಸಂಖ್ಯೆಯ ಕುರಿತು ಮುಖ್ಯಮಂತ್ರಿ ಮುಂದಿನ ತೀರ್ಮಾನ ಕೈಗೊಳ್ಳಲಿದ್ದಾರೆ. ವಾರದ ಹಿಂದೆ ಚಿತ್ರಮಂದಿರಗಳಲ್ಲಿ ಶೇ.100 ಆಸನಗಳ ಭರ್ತಿಗೆ ಅವಕಾಶ ನೀಡಬೇಕೆಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿತ್ತು.

‘ಶನಿವಾರ ಅಥವಾ ಸೋಮವಾರ ಶಿವರಾಜ್‌ಕುಮಾರ್ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಶೇ 100 ಆಸನಗಳ ಭರ್ತಿಗೆ ಅವಕಾಶ ಕೋರಿ ಮನವಿ ಸಲ್ಲಿಸಲಿದ್ದೇವೆ. ಆ.20ಕ್ಕೆ ‘ಸಲಗ’ ಬಿಡುಗಡೆಯಾಗಲಿದೆ ಎಂದು ನಾವು ಘೋಷಿಸಿದ್ದೆವು. ಸರ್ಕಾರವು ಪ್ರೇಕ್ಷಕರ ಸಂಖ್ಯೆ ನಿರ್ಬಂಧ ಸಡಿಲಿಸದೇ ಹೋದರೆ ಸಿನಿಮಾ ಬಿಡುಗಡೆಯೂ ಮುಂದಕ್ಕೆ ಹೋಗಲಿದೆ. ಶೇ 50 ಪ್ರೇಕ್ಷಕರಿಗಷ್ಟೇ ಅವಕಾಶ ನೀಡಿದರೆ, ನಮಗೆ ನಷ್ಟವಾಗಲಿದೆ. ಮುಖ್ಯಮಂತ್ರಿಗಳ ಜೊತೆಗಿನ ಸಭೆಯ ಬಳಿಕ ಮುಂದಿನ ನಿರ್ಧಾರ ತಿಳಿಸುತ್ತೇವೆ’ ಎಂದು ‘ಸಲಗ’ ನಿರ್ಮಾಪಕ ಕೆ.ಪಿ.ಶ್ರೀಕಾಂತ್ ಹೇಳಿದರು. ❖

ಒಟಿಟಿ

ಡಿಸ್ಕವರಿ ಪ್ಲಸ್‌ನಲ್ಲಿ ವೀರಾಂಗನೆಯಾಗಿ ಸಾರಾ ಅಲಿ ಖಾನ್

ಒಟಿಟಿ ಪ್ರಸಾರ ವೇದಿಕೆ ಡಿಸ್ಕವರಿ ಪ್ಲಸ್‌ನಲ್ಲಿ ‘ಮಿಷನ್ ಫ್ರಂಟ್‌ಲೈನ್ ವಿದ್ ಸಾರಾ ಅಲಿ ಖಾನ್’, ‘ಸ್ಟಾರ್ ವರ್ಸಸ್ ಫುಡ್’ ಮತ್ತು ‘ಸೇ ಎಸ್ ಟು ದಿ ಡ್ರೆಸ್’ (ವಿವಿಧ ಸ್ವರೂಪದ ಉಡುಗೆಗಳನ್ನು ಭಾರತೀಯ ಸಮಾಜ ಸ್ವೀಕರಿಸಿದ ಪರಿ) ಹೆಸರಿನ ಹೊಸ ವಿಷಯಾಧಾರಿತ ಸರಣಿಗಳನ್ನು ಪ್ರಸಾರ ಮಾಡಲಿದೆ.

ಸೆಲೆಬ್ರಿಟಿಗಳು ನಡೆಸಿಕೊಡುವ ‘ಸ್ಟಾರ್ ವರ್ಸಸ್ ಫುಡ್’ನ 2ನೇ ಆವೃತ್ತಿ ಈ ಬಾರಿ ಪ್ರಸಾರಗೊಳ್ಳಲಿದೆ. ಬಾಲಿವುಡ್ ನಟರಾದ ಅನಿಲ್ ಕಪೂರ್, ಅನನ್ಯಾ ಪಾಂಡೆ, ನೋರಾ ಫತೇಗಿ, ರ್‍ಯಾಪರ್ ಬಾದ್‌ಶಾ ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ‘ಮಿಷನ್ ಫ್ರಂಟ್‌ಲೈನ್ ವಿತ್ ಸಾರಾ ಅಲಿ ಖಾನ್’ನಲ್ಲಿ, ಮಹಿಳೆಯರ ವಿರುದ್ಧದ ಅಪರಾಧಗಳನ್ನು ತಡೆಯಲು ಸ್ಥಾಪಿತವಾದ ಭಾರತದ ಮೊದಲ ಮಹಿಳಾ ಕಮಾಂಡೋ ಘಟಕವಾದ ‘ವೀರಾಂಗನಾ ಪಡೆ’ಯ ಜೊತೆ ಸಾರಾ ಕಾಣಿಸಿಕೊಳ್ಳಲಿದ್ದಾರೆ.

ಕನ್ನಡಿಯಲ್ಲಿ ನಾಳೆಯ ಭವಿಷ್ಯ!

ನಾಳಿನ ಭವಿಷ್ಯವನ್ನು ಇಂದೇ ತಿಳಿದರೆ ಇಂದಿನ ಕ್ಷಣವನ್ನು ಅನುಭವಿಸಲಾಗುವುದಿಲ್ಲ ಎನ್ನುವ ಸಾರಾಂಶವನ್ನು ಇಟ್ಟುಕೊಂಡು ಹೊಸಬರ ತಂಡವೊಂದು ‘ಎಂ.ಆರ್.ಎಫ್’ ಕಿರುಚಿತ್ರವೊಂದನ್ನು ಬಿಡುಗಡೆ ಮಾಡಿದೆ.

ಗೌರೀಶ್ ಅಕ್ಕಿ ಸ್ಟುಡಿಯೋ ಯೂಟ್ಯೂಬ್ ಚಾನೆಲ್‌ನಲ್ಲಿ ಈ ಚಿತ್ರವು ಬಿಡುಗಡೆಯಾಗಿದ್ದು, ನಮ್ಮ ಜೀವನದಲ್ಲಿ ನಾಳೆ ನಡೆಯುವ ಘಟನೆಗಳು ಇಂದೇ ತಿಳಿದರೆ ನಮ್ಮ ಪರಿಸ್ಥಿತಿ ಹೇಗಿರುವುದು ಮತ್ತು ಅದನ್ನು ತಿಳಿಯುವುದು ಒಳ್ಳೆಯದೇ, ಕೆಟ್ಟದೇ ಎನ್ನುವ ವಿಷಯವನ್ನು ಇರಿಸಿಕೊಂಡು ಯುವ ನಿರ್ದೇಶಕ ಕ್ರಿತ್ವಿಕ್ ಅಚ್ಚುಕಟ್ಟಾಗಿ ಕಥೆ ಹೆಣೆದಿದ್ದಾರೆ. ನಾಯಕನ ಪಾತ್ರದಲ್ಲಿ ಮುಕುಂದ ರಾಮಸ್ವಾಮಿ ನಟಿಸಿದ್ದು ಅವರೇ ಈ ಕಿರುಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ‘ಫ್ರೆಂಚ್ ಬಿರಿಯಾನಿ’ ಸಿನಿಮಾ ಖ್ಯಾತಿಯ ಮಾಂತೇಶ್ ಅವರೂ ಇದರಲ್ಲಿ ವಿಭಿನ್ನವಾದ ಪಾತ್ರ ನಿರ್ವಹಿಸಿದ್ದಾರೆ. ಆಶಿಕ್ ಅವರ ಛಾಯಾಗ್ರಹಣ, ವಿಜಯ್ ಅವರ ಸಂಕಲನ ಚಿತ್ರಕ್ಕಿದೆ. ವಿನು ಈ ಕಿರುಚಿತ್ರಕ್ಕೆ ಸಂಗೀತ ನೀಡಿದ್ದಾರೆ. ❖

‘ದ್ವಿತ್ವ’ದಲ್ಲಿ ಮತ್ತೆ ಒಂದಾದ ‘ಪವರ್’ ಜೋಡಿ



‘ಪವರ್’ ಸಿನಿಮಾದಲ್ಲಿ ಸಿನಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದ್ದ ಪುನೀತ್ ರಾಜ್‌ಕುಮಾರ್ ಹಾಗೂ ತ್ರಿಶಾ ಕೃಷ್ಣನ್ ಜೋಡಿ ಇದೀಗ ಮತ್ತೆ ತೆರೆ ಮೇಲೆ ಒಂದಾಗಲಿದೆ. ನಿರ್ದೇಶಕ ಪವನ್ ಕುಮಾರ್ ಅವರು ಆ್ಯಕ್ಷನ್ ಕಟ್ ಹೇಳಲಿರುವ, ಪುನೀತ್ ನಾಯಕರಾಗಿ ನಟಿಸಲಿರುವ ‘ದ್ವಿತ್ವ’ದ ನಾಯಕಿಯಾಗಿ ತ್ರಿಶಾ ಆಯ್ಕೆಯಾಗಿದ್ದಾರೆ.

ಸೋಮವಾರ ಸಂಜೆ ಹೊಂಬಾಳೆ ಫಿಲ್ಮ್ಸ್ ಇದನ್ನು ಟ್ವಿಟರ್‌ನಲ್ಲಿ ಘೋಷಿಸಿದ್ದು, ‘ದ್ವಿತ್ವದ ನಾಯಕಿ ಇಲ್ಲಿದ್ದಾರೆ. ಚಿತ್ರತಂಡಕ್ಕೆ ಪ್ರತಿಭಾನ್ವಿತ ತ್ರಿಶಾಗೆ ಸ್ವಾಗತ’ ಎಂದು ಉಲ್ಲೇಖಿಸಿದೆ. 2014ರಲ್ಲಿ ತೆರೆಕಂಡ ‘ಪವರ್’ ತ್ರಿಶಾ ನಟಿಸಿದ ಮೊದಲ ಕನ್ನಡ ಚಿತ್ರವಾಗಿತ್ತು. ಇದಾದ ನಂತರ ಅವರು ಕನ್ನಡ ಸಿನಿಮಾದಲ್ಲಿ ನಟಿಸಿರಲಿಲ್ಲ. ಇದೀಗ ‘ದ್ವಿತ್ವ’ ಮುಖಾಂತರ ಮತ್ತೆ ಚಂದನವನಕ್ಕೆ ಹೆಜ್ಜೆ ಇರಿಸಿದ್ದಾರೆ ತ್ರಿಶಾ. ‘ದ್ವಿತ್ವ’ದ ಪೋಸ್ಟರ್‌ನಲ್ಲೇ ಪುನೀತ್ ಅವರ ಪಾತ್ರದ ಬಗ್ಗೆ ಮಾಹಿತಿಯಿತ್ತು. ಚಿತ್ರವು ಸೈಕಲಾಜಿಕಲ್ ಡ್ರಾಮಾ ಥ್ರಿಲ್ಲರ್ ಕಥೆ ಹೊಂದಿದೆ. ಇದೀಗ ಇದೇ ಮಾದರಿಯ ವಿಭಿನ್ನವಾದ ಪೋಸ್ಟರ್ ಮೂಲಕವೇ ತ್ರಿಶಾ ಅವರ ಫಸ್ಟ್‌ಲುಕ್ ಬಿಡುಗಡೆ ಮಾಡಲಾಗಿದೆ.

‘ರಾಜಕುಮಾರ’, ‘ಯುವರತ್ನ’ ಯಶಸ್ಸಿನ ಬಳಿಕ ಪುನೀತ್ ಮತ್ತೆ ಹೊಂಬಾಳೆ ಫಿಲ್ಮ್ಸ್ ಜೊತೆ ಕೈಜೋಡಿಸಿದ್ದಾರೆ. ವಿಜಯ್ ಕಿರಗಂದೂರ್ ನಿರ್ಮಾಣದ ಈ ಚಿತ್ರದ ಚಿತ್ರೀಕರಣ ಸೆಪ್ಟೆಂಬರ್‌ನಲ್ಲಿ ಆರಂಭವಾಗಲಿದೆ. ❖

ಕಿರುತೆರೆ

‘ಹಿಟ್ಲರ್ ಕಲ್ಯಾಣ’ ಪರ್ಫೆಕ್ಟ್ ಎಡವಟ್ಟುಗಳ ಸಂಘರ್ಷ

ಶರತ್ ಹೆಗ್ಡೆ

ಸೊಸೆಯಂದಿರೇ ಸೇರಿ ಮಾವನಿಗೆ ಹೆಣ್ಣು ಹುಡುಕುವ ಕಥೆ ‘ಹಿಟ್ಲರ್ ಕಲ್ಯಾಣ’. ಜೀ ಕನ್ನಡ ವಾಹಿನಿಯಲ್ಲಿ ಆಗಸ್ಟ್ 9ರಿಂದ ಈ ಹೊಸ ಧಾರಾವಾಹಿ ಪ್ರಸಾರ ಆರಂಭವಾಗಲಿದೆ.

‘ಹಿಟ್ಲರ್’ಗಂತೂ ಎಲ್ಲವೂ ಅಚ್ಚುಕಟ್ಟಾಗಿರಬೇಕು ಎಂಬ ನಿಯಮ. ಇಂಥ ವ್ಯಕ್ತಿಗೆ ಮೂವರು ಸೊಸೆಯಂದಿರು ಹೆಣ್ಣು ಹುಡುಕುತ್ತಾರೆ. ಹೆಂಡತಿಯಾಗಿ ಬಂದ ಹುಡುಗಿಯೋ ಮಹಾ ಎಡವಟ್ಟು. ಪರ್ಫೆಕ್ಟ್– ಎಡವಟ್ಟುಗಳ ಸಂಘರ್ಷವನ್ನು ನವಿರಾಗಿ ಕಚಗುಳಿ ಇಡುತ್ತಾ ತೋರಿಸುತ್ತಿದೆ ಈ ಕಥೆ ಎಂದಿದೆ ಧಾರಾವಾಹಿಯ ತಂಡ.

ಕಥೆಯ ಪ್ರಧಾನ ಪಾತ್ರಧಾರಿ ದಿಲೀಪ್‌ರಾಜ್ ಮಾತಿಗೆ ಸಿಕ್ಕರು. ಪಾತ್ರದ ಪರಕಾಯ ಪ್ರವೇಶವನ್ನು ತೆರೆದಿಟ್ಟರು.

‘ಪಾತ್ರದ ಆಲೋಚನೆಗಳು ತುಂಬಾ ದೊಡ್ಡದಿವೆ. ಹಾಗೇ ಆ ಬಗ್ಗೆ ಯೋಚಿಸುತ್ತಾ ‘ಹಿಟ್ಲರ್’ನ ಶಿಸ್ತನ್ನು ನಿಜ ಜೀವನದಲ್ಲೂ ಅಳವಡಿಸಿಕೊಳ್ಳುತ್ತೇವೆ. ಇಲ್ಲಿ ಹಾಗೇ ಆಗಿಬಿಟ್ಟಿತು. ಈ ಪಾತ್ರಸೃಷ್ಟಿಯ ವೇಳೆ ಸಾಕಷ್ಟು ಟ್ರಯಲ್ ಆ್ಯಂಡ್ ಎರರ್ ಆಗಿದೆ. ಪಾತ್ರ ಮಧ್ಯವಯಸ್ಕನದ್ದು. ಆದರೆ ಅವನು ಯುವಜನರಿಗೂ ಹೆಚ್ಚು ಹತ್ತಿರವಾಗಬೇಕು. ಅಂಥ ಸ್ಟೈಲಿಷ್ ಲುಕ್‌ಗೆ ಬೇಕಾದ ಹಾಗೆ ಈ ಪಾತ್ರವನ್ನು ರೂಪಿಸಿದ್ದೇವೆ’ ಎಂದರು.

‘ಇಲ್ಲಿ ಹಿಟ್ಲರ್ (ಎ–ಜೆ ಅಭಿರಾಮ್ ಜೈಶಂಕರ್) ಪಾತ್ರ ಸೃಷ್ಟಿಯೇ ತುಂಬಾ ಭಿನ್ನವಾದದ್ದು. ಅವನ ರೀತಿಯ ವರ್ತನೆ ಬೇರೆ ಧಾರಾವಾಹಿಗಳಲ್ಲಿ ಇಲ್ಲ. ತನಗಿಂತ ಚಿಕ್ಕವಯಸ್ಸಿನ ಹುಡುಗಿಯನ್ನು ಏಕೆ ಮದುವೆಯಾಗುತ್ತಾನೆ ಎಂಬುದಕ್ಕೆ ಸಮರ್ಥನೆಯೂ ಇದೆ’ ಎಂದರು ದಿಲೀಪ್.

ಕಥೆಯ ಮೇಲ್ನೋಟ: ಪ್ರೊಮೊ ತುಣುಕು ಟಿವಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಸದ್ದು ಮಾಡಿದೆ. ಹಿಟ್ಲರ್‌ನ ಪಾತ್ರ ಪರಿಚಯ, ಸೊಸೆಯಂದಿರು ಮಾವನಿಗೆ ಹೆಣ್ಣು ಹುಡುಕಲು ಮಾಡುವ ಪ್ಲ್ಯಾನ್ ಇಲ್ಲಿ ತೋರಿಸಿದ್ದಾರೆ. ಎಡವಟ್ಟಿನ ಘಾಟಿ ಹುಡುಗಿ ಲೀಲಾ ಪಾತ್ರಧಾರಿಯ ಪಂಚಿಂಗ್ ಡೈಲಾಗ್ ಕೂಡಾ ಗಮನ ಸೆಳೆದಿದೆ.

ನಾಯಕಿ ಲೀಲಾ ಯಾವ ಕೆಲಸ ಮಾಡಿದರೂ ಅದಕ್ಕೆ ಹತ್ತಾರು ಸಮಸ್ಯೆಗಳು ಎದುರಾಗುತ್ತವೆ. ಅಂಥಾ ಪರ್ಫೆಕ್ಟ್ ವ್ಯಕ್ತಿಗೆ ಈ ಎಡವಟ್ಟಿನ ಹುಡುಗಿ ಜೋಡಿಯಾಗುತ್ತಾಳಾ ಎನ್ನುವುದು ಕುತೂಹಲ. ಎ.ಜೆ.ಯ ಗಂಭೀರ ಸ್ವಭಾವಕ್ಕೆ ತದ್ವಿರುದ್ಧವಾದ ಹುಡುಗಿ ಲೀಲಾ. ಆಕೆ ತನ್ನ ಕಿರಿಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡಿರುತ್ತಾಳೆ. ತಂದೆಯ ಪ್ರೀತಿಯಲ್ಲಿ ಬೆಳೆದಿರುತ್ತಾಳೆ. ಆದರೆ ಆಕೆಯ ಮಲತಾಯಿಗೆ ಲೀಲಾ ಮೇಲೆ ಪ್ರೀತಿ ಇದ್ದರೂ ಏನೋ ಹೇಳಿಕೊಳ್ಳಲಾಗದ ಆತಂಕವಿದೆ. ಎಡವಟ್ಟು ಅನಿಶ್ಚಿತತೆಗಳಿಗೆ ತನ್ನನ್ನು ತಾನು ಒಗ್ಗಿಸಿಕೊಂಡು ‘ಪರಿಪೂರ್ಣ’ತೆಯ ಪರಿಕಲ್ಪನೆಯನ್ನೇ ಲೀಲಾ ಪ್ರಶ್ನಿಸುತ್ತಾಳಾ ಎನ್ನುವುದು ಹಿಟ್ಲರ್ ಕಲ್ಯಾಣ್ ಧಾರಾವಾಹಿಯ ಬೆಚ್ಚನೆಯ ಪ್ರೇಮಕಥೆ ಅನ್ನುವುದು ಝೀ ವಾಹಿನಿಯ ವಿವರಣೆ.

‘ಹಿಟ್ಲರ್ ಕಲ್ಯಾಣ’ ಧಾರಾವಾಹಿಯ ಪೋಸ್ಟರ್

ಅಂದಹಾಗೆ ಈ ಧಾರಾವಾಹಿಯನ್ನು ದಿಲೀಪ್‌ರಾಜ್ ಅವರದೇ ನಿರ್ಮಾಣ ಸಂಸ್ಥೆ ನಿರ್ಮಿಸಿದೆ.

‘8 ವರ್ಷಗಳ ಬಳಿಕ ಕಿರುತೆರೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತಿದ್ದೇನೆ. ನನ್ನ ತಂಡದವರು, ಸ್ನೇಹಿತರು ಮತ್ತು ಪತ್ನಿಯ ಒತ್ತಾಯ, ಬೆಂಬಲದಿಂದ ಈ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ’ ಎಂದರು ದಿಲೀಪ್.

ಜೀ ಕನ್ನಡ ಮತ್ತು ಜೀ ಕನ್ನಡ ಎಚ್.ಡಿ.ಯಲ್ಲಿ ಆಗಸ್ಟ್ 9ರಿಂದ ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 7 ಗಂಟೆಗೆ ‘ಹಿಟ್ಲರ್ ಕಲ್ಯಾಣ’ ಪ್ರಸಾರವಾಗಲಿದೆ. ❖

ಅಸಮತೋಲನ ಸಂಪುಟ: ರಾಜಕೀಯ ಲೆಕ್ಕಾಚಾರ

ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೂತನ ಸಚಿವ ಸಂಪುಟ ರಚನೆಯಾಗಿದೆ. ಬೊಮ್ಮಾಯಿ ಅವರದ್ದೂ ಬಿಜೆಪಿ ಸರ್ಕಾರವೇ ಆದರೂ, ಜನರಲ್ಲಿ ಹೊಸ ಸರ್ಕಾರದ ಮೇಲೆ ಹೊಸ ಭರವಸೆಗಳು ಹುಟ್ಟಿಕೊಂಡಿವೆ. ಬೊಮ್ಮಾಯಿ ಸಚಿವ ಸಂಪುಟ ಹೊಸ ದಾರಿ ಹಿಡಿಯಬಹುದೇ? 'ಪ್ರಜಾವಾಣಿ' ಹಮ್ಮಿಕೊಂಡಿದ್ದ ಸಂವಾದದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣಗೌಡ, ಹಿರಿಯ ಪತ್ರಕರ್ತ ಎಂ.ಕೆ. ಭಾಸ್ಕರರಾವ್, ರಾಜಕೀಯ ವಿಶ್ಲೇಷಕ ಡಿ. ಉಮಾಪತಿ, ಕಾಂಗ್ರೆಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಅವರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ವಿವರ ಇಲ್ಲಿದೆ.

ಧರ್ಮ ಧ್ರುವೀಕರಣಕ್ಕೆ ಒತ್ತು

ರಾಜಕೀಯ ಪಕ್ಷಗಳಿಗೆ ಜನ ಹಿತದ ಲೆಕ್ಕಾಚಾರಕ್ಕಿಂತ ರಾಜಕೀಯ ಲಾಭ–ನಷ್ಟದ ಲೆಕ್ಕಾಚಾರವೇ ಮುಖ್ಯವಾಗಿರುತ್ತದೆ. ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಮುಂದೆ ಇರುವ ಇತಿಮಿತಿಯೊಳಗೆ ಇದಕ್ಕಿಂತ ಉತ್ತಮ ಮಾಡಲು ಸಾಧ್ಯವಿರಲಿಲ್ಲ.

ಈ ಪ್ರಹಸನದ ಮುಖ್ಯ ಗುರಿ ನಾಯಕತ್ವ ಬದಲಾವಣೆಯಾಗಿತ್ತು. ಸುರೇಶ್ ಕುಮಾರ್ ಅವರಂತಹ ಸೌಮ್ಯವಾದಿಯನ್ನು ಬದಿಗಿರಿಸಿ ಸುನಿಲ್ ಕುಮಾರ್ ಅವರನ್ನು ಸೇರಿಸಿಕೊಳ್ಳಲಾಗಿದೆ. ಇದು ಹೈಕಮಾಂಡ್ ಸಂಪುಟವಾಗಿದೆ.

ಅಲ್ಪಸಂಖ್ಯಾತರಿಲ್ಲದೇ ರಾಜಕಾರಣ ಮಾಡುತ್ತೇವೆ, ಅಲ್ಪಸಂಖ್ಯಾತರು ಎರಡನೇ ದರ್ಜೆಯ ನಾಗರಿಕರಂತೆ ಬದುಕಬೇಕು ಎಂಬ ಸಂದೇಶ ಅವರದ್ದಾಗಿದೆ. ಸಿಎಎ, ಎನ್‌ಆರ್‌ಸಿ ಅವರನ್ನೇ ಗುರಿಯಾಗಿಸಿಕೊಂಡು ಜಾರಿಗೆ ತರಲಾಗಿದೆ. ಬಿಜೆಪಿ ಕೋಮು ಧ್ರುವೀಕರಣದ ರಾಜಕೀಯ ಮಾಡುತ್ತಿದೆ.

ಯಡಿಯೂರಪ್ಪ ಅವರ ಮೊದಲ ಆದ್ಯತೆ ಬೊಮ್ಮಾಯಿ ಆಗಿರಲಿಲ್ಲ. ಲಿಂಗಾಯತ ಸಮಾಜದ ನಾಯಕತ್ವ ತಮ್ಮಲ್ಲಿಯೇ ಇರಬೇಕು ಎಂದು ಬಯಸಿದ್ದರು. ಆದರೆ, ಹೈಕಮಾಂಡ್ ಆ ಮಾತನ್ನು ನಡೆಸಿಕೊಡಲಿಲ್ಲ.

ಯಡಿಯೂರಪ್ಪ ಅವರಿಗೆ ಬೇರೆ ದಾರಿ ಇಲ್ಲ. 2012ರ ಯಡಿಯೂರಪ್ಪ ಇವರಲ್ಲ. ಆವತ್ತಿನ ಹೈಕಮಾಂಡೇ ಬೇರೆ, ಇವತ್ತಿನ ಹೈಕಮಾಂಡ್‌ನಲ್ಲಿ ಮೋದಿ, ಶಾ ಅಂತಹ ಗಟ್ಟಿಗರಿದ್ದಾರೆ. ಬೊಮ್ಮಾಯಿ ಬಹಳ ಸ್ಮಾರ್ಟ್ ಪಾಲಿಟಿಷಿಯನ್, ಸದಾನಂದಗೌಡ, ಶೆಟ್ಟರ್‌ಗಿಂತ ಉತ್ತಮರು. ಕೆಲಸ ಮಾಡುವ ತುಡಿತ ಇದೆ. ಆದರೆ ಪಕ್ಷವು ಜಾತಿ ಧರ್ಮ ಧ್ರುವೀಕರಣಕ್ಕೆ ಒತ್ತು ನೀಡುತ್ತಿದೆ.

ಡಿ. ಉಮಾಪತಿ, ರಾಜಕೀಯ ವಿಶ್ಲೇಷಕ

ಸಂಘಟನೆಯ ದೃಷ್ಟಿಯಿಂದ ಸಂಪುಟ

ಪ್ರಾದೇಶಿಕ, ಸಾಮಾಜಿಕ ನ್ಯಾಯದ ಆಧಾರದ ಮೇಲೆ ಸಂಪುಟ ರಚನೆ ಮಾಡಲಾಗಿದೆ. ಪಕ್ಷ ಸಂಘಟನೆಯನ್ನೂ ಗಮನದಲ್ಲಿಟ್ಟು ಯುವಕರು ಹಾಗೂ ಹೊಸಬರು ಹಾಗೂ ಅನುಭವಿಗಳಿಗೆ ಅವಕಾಶ ಮಾಡಿಕೊಡಲಾಗಿದೆ.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಹೊರಗಿನಿಂದ ಬಂದವರಿಗೆ ಅವಕಾಶ ಕೊಟ್ಟು, ಉಳಿದವರಲ್ಲಿ ಪಕ್ಷದವರಿಗೆ ಅವಕಾಶ ನೀಡಬೇಕಾದ ಅನಿವಾರ್ಯ ಇತ್ತು. ಮೂರನೇ ಅಲೆಯು ಮಕ್ಕಳಿಗೆ ಬರುತ್ತದೆ ಎಂದು ವರದಿ ಎಲ್ಲಿದೆ? ಮೂರನೇ ಅಲೆ ತಡೆಯಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರ ಪ್ರಗತಿಪಥದಲ್ಲಿ ಸಾಗಲಿದೆ.

ಸಿದ್ದರಾಮಯ್ಯ ಮಂಡಿಸಿರುವ 11 ಬಜೆಟ್‌ಗಳಲ್ಲಿ ಯಾವುದಾದರೂ ಹೆಜ್ಜೆ ಗುರುತುಗಳಿವೆಯೇ? ಜನಪರ ಯೋಜನೆ, ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ.

ಅಶ್ವತ್ಥ ನಾರಾಯಣಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ದಲಿತರಿಗೆ ಅನ್ಯಾಯ

ಬಿಜೆಪಿಯಲ್ಲಿ ನೈತಿಕ ದಿವಾಳಿತನ ಎದ್ದು ಕಾಣುತ್ತಿದೆ. ಹೊಸ ಸಚಿವ ಸಂಪುಟದಲ್ಲಿ ಸಾಮಾಜಿಕ ನ್ಯಾಯ ಪಾಲನೆಗೆ ಅವಕಾಶವಿದ್ದರೂ, ಪಾಲನೆ ಮಾಡಿಲ್ಲ. ಮಹಿಳೆಯರಿಗೆ ಪ್ರಾತಿನಿಧ್ಯ ಕೊಡುವಲ್ಲಿ ಎಡವಿದೆ. ಒಳ್ಳೆಯವರಿಗೆ, ಮಹಿಳೆಯರಿಗೆ ಇನ್ನಷ್ಟು ಅವಕಾಶ ಕೊಡಬಹುದಿತ್ತು. ಪ್ರಾದೇಶಿಕ ಅಸಮತೋಲನ ಎದ್ದು ಕಾಣುತ್ತಿದೆ.

ಬೆಂಗಳೂರಿಗೆ ಹೆಚ್ಚು ಪ್ರಾತಿನಿಧ್ಯ, ಗ್ರಾಮೀಣ, ಕಲ್ಯಾಣ ಕರ್ನಾಟಕ, ಮೈಸೂರು ಭಾಗಕ್ಕೆ ಅನ್ಯಾಯ ಯಾಕೆ? ಕಾಂಗ್ರೆಸ್ ಪಕ್ಷವು ದಲಿತ ಮುಖ್ಯಮಂತ್ರಿ ಮಾಡಲಿಲ್ಲ ಎಂದು ದೂರುವ ಬಿಜೆಪಿ, ದಲಿತರಿಗೆ ಅನ್ಯಾಯ ಮಾಡಿದೆ.

ಕೋವಿಡ್, ಪ್ರವಾಹ ನಿರ್ವಹಣೆ ಅಧಿಕಾರದಲ್ಲಿರುವವರ ಕೆಲಸ. ಜನರ ಸಂಕಷ್ಟಗಳಿಗೆ ಹೇಗೆ ಸ್ಪಂದಿಸುತ್ತಾರೆ ಎಂಬ ಸರಿಯಾದ ಚಿತ್ರಣವಿಲ್ಲ. 'ಹೇಳುವುದು ಒಂದು, ಮಾಡುವುದು ಒಂದು' ಎಂಬುದೇ ಅವರ ನೀತಿ. ಅಧಿಕಾರ ನೀಡುವ ವಿಷಯ ಬಂದಾಗ ಹೆಣ್ಣುಮಕ್ಕಳೆಲ್ಲರನ್ನು ದಲಿತರಂತೆ ಪರಿಗಣಿಸಲಾಗುತ್ತದೆ. ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವಾಗಲೂ ಮೇಲ್ಜಾತಿಯವರಿಗೆ ಅವಕಾಶ ನೀಡಲಾಗುತ್ತದೆ.

ಪುಷ್ಪಾ ಅಮರನಾಥ್, ಅಧ್ಯಕ್ಷೆ, ರಾಜ್ಯ ಮಹಿಳಾ ಕಾಂಗ್ರೆಸ್

ಪ್ರಜಾವಾಣಿ ಸಂವಾದ

ಒಳಿತಿನ ದಾರಿಯೇ?



ಹೊಸ ಸಚಿವ ಸಂಪುಟದಲ್ಲಿ 13 ಜಿಲ್ಲೆಗಳಲ್ಲಿ ಪ್ರಾತಿನಿಧ್ಯ ಇಲ್ಲ. ಶಾಸಕರಿದ್ದ ಜಿಲ್ಲೆಗಳಲ್ಲಿ ಏನಾಗಿದೆ ಎಂಬುದನ್ನು ಬಿಜೆಪಿಯವರೇ ಹೇಳಬೇಕು. ಬಿಜೆಪಿಯವರ ನೈತಿಕತೆ ಬಗ್ಗೆ ಟೀಕೆ ಮಾಡುವ ನೈತಿಕತೆ ಕಾಂಗ್ರೆಸ್‌ನವರಿಗೂ ಇಲ್ಲ. 23 ಹಳೆಯ ಮುಖಗಳಲ್ಲಿ ಕೆಲವು ಮುಖಗಳ ಬಗ್ಗೆ ಜನರು ಬೇಸರ ಪಟ್ಟುಕೊಂಡಿದ್ದಾರೆ. ಅವರನ್ನು ಪಕ್ಕಕ್ಕೆ ಇಡಲಾಗದ್ದು ಬೊಮ್ಮಾಯಿ ಅವರ ಅಸಹಾಯಕತನ ತೋರಿಸುತ್ತದೆ.

ಯಡಿಯೂರಪ್ಪ ಅವರನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು ಎನ್ನುವ ಹೈಕಮಾಂಡ್ ನಿರೀಕ್ಷೆ ಸುಳ್ಳಾಗಿದೆ. ಒಳ ಜಗಳವು ಜನ ಹಿತದ ಕಲ್ಯಾಣ ಕಾರ್ಯಕ್ರಮಗಳಿಗೆ ದೊಡ್ಡ ತಡೆಯೊಡ್ಡಲಿದೆ. ಒಳ್ಳೆಯ ದಾರಿ ಹಿಡಿಯಬಹುದು ಎಂಬುದು ಪ್ರಶ್ನೆಯಾಗಿಯೇ ಉಳಿಯುವ ಆತಂಕವಿದೆ.

ಮೋದಿ ಅವರು ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ಮಹಿಳೆಯರಿಗೆ ಅವಕಾಶ ನೀಡಿದ್ದಾರೆ. ಅದನ್ನು ರಾಜ್ಯ ಮಾದರಿಯಾಗಿಸಿಕೊಳ್ಳಬೇಕಿತ್ತು. ಅಧಿಕಾರ ಅನುಭವಿಸಲೆಂದೇ ಇರುವ ಮನೋಭಾವದ ಸಮುದಾಯಗಳನ್ನು ಪಕ್ಷ ಸಂಘಟನೆಗೆ ಬಳಸಿಕೊಳ್ಳಬೇಕು.

ಸಚಿವ ಸಂಪುಟದಲ್ಲಿ ಸುರೇಶ್ ಕುಮಾರ್, ಜಗದೀಶ ಶೆಟ್ಟರ್ ಅವರಂತವರಿಗೆ ಅವಕಾಶವಿಲ್ಲದಂತಾಗಿದೆ. ಯಡಿಯೂರಪ್ಪ ಅವರು ಸುಮ್ಮನೇ ಕುಳಿತುಕೊಳ್ಳುವ ಜಾತಕದವರಲ್ಲ. ಅವರಿಗೆ ಗೆಲ್ಲುವ ಶಕ್ತಿ ಇರದಿದ್ದರೂ, ಸೋಲಿಸುವ ಶಕ್ತಿ ಇದೆ..

ಎಂ.ಕೆ. ಭಾಸ್ಕರರಾವ್, ಹಿರಿಯ ಪತ್ರಕರ್ತ

ಸಂವಾದವನ್ನು ವೀಕ್ಷಿಸಲು: https://youtu.be/Th3N-wLIUZQ https://www.facebook.com/prajavani.net/videos/354660242822503

ಸುದ್ದಿ 2 ನಿಮಿಷ

ಬಿಎಸ್‌ವೈ, ವಿಜಯೇಂದ್ರಗೆ ಹೈಕೋರ್ಟ್ ನೋಟಿಸ್ ಜಾರಿ

ಬೆಂಗಳೂರು: ಶಾಸಕ ಬಿ.ಎಸ್. ಯಡಿಯೂರಪ್ಪ, ಅವರ ಮಗ ಬಿ.ವೈ. ವಿಜಯೇಂದ್ರ ಅವರಿಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ. ಆ.17ರಂದು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ಹಾಜರಾಗಿ ವಿವರಣೆ ನೀಡುವಂತೆ ತಿಳಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಸತಿ ಯೋಜನೆ ಅನುಷ್ಠಾನ ಮಾಡುವಾಗ ಯಡಿಯೂರಪ್ಪ ಮತ್ತು ಅವರ ಕುಟುಂಬ ಸದಸ್ಯರು ಲಂಚ ಸಂಗ್ರಹಿಸಿದ್ದಾರೆ ಎಂದು ಆರೋಪಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಖಾಸಗಿ ದೂರು ಸಲ್ಲಿಸಿದ್ದರು.

ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ವಿಚಾರಣೆ ನಡೆಸಲು ರಾಜ್ಯಪಾಲರ ಪೂರ್ವಾನುಮತಿ ಬೇಕಿತ್ತು. ಅನುಮತಿ ನೀಡಲು ರಾಜ್ಯಪಾಲರು ನಿರಾಕರಿಸಿದ್ದರಿಂದ ವಿಶೇಷ ನ್ಯಾಯಾಲಯ ಖಾಸಗಿ ದೂರನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿದ್ದ ಅಬ್ರಹಾಂ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆ ಆರಂಭಿಸಿರುವ ಹೈಕೋರ್ಟ್, ಈಗ ಸಚಿವರಾಗಿರುವ ಎಸ್.ಟಿ. ಸೋಮಶೇಖರ್, ಯಡಿಯೂರಪ್ಪ ಅವರ ಮೊಮ್ಮಗ ಶಶಿಧರ ಮರಡಿ, ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ, ಪುತ್ರಿ ಪದ್ಮಾವತಿ, ಅಳಿಯ ಸಂಜಯ್ ಶ್ರೀ, ಉದ್ಯಮಿ ಚಂದ್ರಕಾಂತ ರಾಮಲಿಂಗಂ ಅವರಿಗೂ ನೋಟಿಸ್ ನೀಡಲು ಮಂಗಳವಾರ ಆದೇಶಿಸಿತ್ತು.

ಸೆಪ್ಟೆಂಬರ್ ಮೊದಲ ವಾರ ವಿಧಾನ ಮಂಡಲ ಅಧಿವೇಶನ?

ಬೆಂಗಳೂರು: ವಿಧಾನ ಮಂಡಲದ ಉಭಯ ಸದನಗಳ ಅಧಿವೇಶನ ಸೆಪ್ಟೆಂಬರ್ ಮೊದಲ ವಾರದಲ್ಲಿ ನಡೆಯುವ ಸಾಧ್ಯತೆ ಇದೆ.

ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆಯ ಆತಂಕವೂ ಇದೆ. ಹೀಗಾಗಿ, ಈ ತಿಂಗಳಲ್ಲಿ ಅಧಿವೇಶನ ನಡೆಯುವುದು ಅನುಮಾನ. ಮುಂದಿನ ತಿಂಗಳ ಆರಂಭದಲ್ಲಿ ಸಮಾವೇಶಗೊಳ್ಳಲು ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ.

'ಸಂವಿಧಾನದ ಅನುಚ್ಛೇದ 174 (1)ರ ಪ್ರಕಾರ ರಾಜ್ಯಪಾಲರು ಸೂಕ್ತ ಸಮಯದಲ್ಲಿ ಮತ್ತು ಸ್ಥಳದಲ್ಲಿ ಉಭಯ ಸದನಗಳ ಅಧಿವೇಶನ ಕರೆಯಬೇಕು ಅಲ್ಲದೆ, ಒಂದು ಅಧಿವೇಶನದ ನಂತರ ಮುಂದಿನ ಅಧಿವೇಶನ 6 ತಿಂಗಳ ಒಳಗೇ ಕರೆಯಬೇಕು' ಎಂದು ಸಂಸದೀಯ ಇಲಾಖೆಯ ಮೂಲಗಳು ತಿಳಿಸಿವೆ.

ವಿಧಾನ ಮಂಡಲದ ಅಧಿವೇಶನ ಇದೇ ಮಾರ್ಚ್ 24ರಂದು ಕೊನೆಯದಾಗಿ ಸಮಾವೇಶಗೊಂಡಿದೆ. ಅದರ ಲೆಕ್ಕಾಚಾರದಲ್ಲಿ ಸೆ.24ರೊಳಗೆ ಅಧಿವೇಶನ ನಡೆಯಬೇಕಾಗಿದೆ. ಇಷ್ಟೇ ದಿನ ಅಧಿವೇಶನ ನಡೆಯಬೇಕೆಂದೇನೂ ಇಲ್ಲ' ಎಂದೂ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

21ರಿಂದ ರಾಯರ ಆರಾಧನಾ ಮಹೋತ್ಸವ

ರಾಯಚೂರು: ಮಂತ್ರಾಲಯದಲ್ಲಿ ಇದೇ 21 ರಿಂದ 27 ರವರೆಗೆ ರಾಘವೇಂದ್ರಸ್ವಾಮಿಗಳ 350ನೇ ಆರಾಧನಾ ಮಹೋತ್ಸವ ಜರುಗಲಿದೆ.

ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿ ಕಾರ್ಯಕ್ರಮಗಳು ನಡೆಯಲಿದೆ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.

ಆರಾಧನಾ ಮಹೋತ್ಸವ ನಿಮಿತ್ತ ವರ್ಷವಿಡೀ ವಿಶೇಷ ಪೂಜಾ ವಿಧಿವಿಧಾನ ಜರುಗಲಿವೆ. ಆ.24ರಂದು ರಾಯರ ಮಧ್ಯಾರಾಧನೆ ದಿನದಂದು ತಿರುಪತಿ ಶ್ರೀನಿವಾಸ ದೇಗುಲದಿಂದ ಶೇಷವಸ್ತ್ರ ಸಮರ್ಪಣೆ ಮಾಡಲಾಗುವುದು.

ಸಿಗಂದೂರು: ವಾರಾಂತ್ಯದಲ್ಲಿ ಪ್ರವೇಶ ನಿಷೇಧ

ಶಿವಮೊಗ್ಗ: ವಾರಾಂತ್ಯದಲ್ಲಿ ಕ್ಷೇತ್ರ ಸಿಗಂದೂರು ಚೌಡೇಶ್ವರಿ ದೇಗುಲಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸಲಾಗಿದೆ. ಕೊರೊನಾ 3ನೇ ಅಲೆ ಕಾರಣ ಜಿಲ್ಲಾಡಳಿತ ಪ್ರವಾಸಿ ಹಾಗೂ ಧಾರ್ಮಿಕ ಕ್ಷೇತ್ರಗಳಿಗೆ ಮಾರ್ಗಸೂಚಿ ನಿಗದಿ ಮಾಡಿ, ಆದೇಶ ಹೊರಡಿಸಿದೆ.

ದೇವಸ್ಥಾನದಲ್ಲಿ ವಾರಾಂತ್ಯದಲ್ಲಿ ಹೆಚ್ಚಿನ ಭಕ್ತರು ಬರುವ ಕಾರಣ ಭಕ್ತರ ಸುರಕ್ಷತೆಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ದೇವಸ್ಥಾನದ ಧರ್ಮದರ್ಶಿ ಡಾ.ಎಸ್.ರಾಮಪ್ಪ ತಿಳಿಸಿದ್ದಾರೆ. ಆ.6ರಿಂದ 13ರವರೆಗೆ ದೇವಸ್ಥಾನದಲ್ಲಿ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಉಳಿದ ಎಲ್ಲ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ.

ಸಂಪುಟಕ್ಕೆ ನಾಗೇಶ್ ಪೌರಾಯುಕ್ತರಿಂದ ಉರುಳು ಸೇವೆ

ತಿಪಟೂರು: ಶಾಸಕ ಬಿ.ಸಿ. ನಾಗೇಶ್ ಅವರಿಗೆ ಸಚಿವ ಸ್ಥಾನ ದೊರೆತಿದ್ದರಿಂದಾಗಿ ಗ್ರಾಮದೇವತೆ ಕೆಂಪಮ್ಮ ದೇವಿಗೆ ಇಲ್ಲಿನ ನಗರಸಭೆಯ ಪೌರಾಯುಕ್ತ ಉಮಾಕಾಂತ್ ವಿಶೇಷ ಪೂಜೆ ಸಲ್ಲಿಸಿ ಉರುಳು ಸೇವೆ ಮಾಡಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ವಿಶೇಷ ಪೂಜೆ, ಉರುಳು ಸೇವೆ ನಂತರ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡುತ್ತಿದ್ದ ಸ್ಥಳಕ್ಕೆ ತೆರಳಿ ಎಲ್ಲರಿಗೂ ಪ್ರಸಾದ, ಸಿಹಿ ಹಂಚಿದ್ದಾರೆ. ಜೊತೆಗೆ ಕಚೇರಿ ಸಿಬ್ಬಂದಿಗೂ ಸಿಹಿ ಹಂಚಿ ಸಂಭ್ರಮಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕಂದಾಯ, ಲೋಕೋಪಯೋಗಿ, ಜಲಸಂಪನ್ಮೂಲ, ಇಂಧನದ ಮೇಲೆ ಕಣ್ಣು

ಆಯಕಟ್ಟಿನ ಖಾತೆಗೆ ಸಚಿವರ ಬೇಡಿಕೆ

ಪ್ರಜಾವಾಣಿ ವಾರ್ತೆ

ಆರ್.ಅಶೋಕ

ವಿ ಸೋಮಣ್ಣ

ಅಶ್ವತ್ಥನಾರಾಯಣ

ಬೆಂಗಳೂರು: ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸಂಪುಟದ ಹಿರಿಯ ಸಹೋದ್ಯೋಗಿಗಳ ಜತೆ ಚರ್ಚೆ ಗುರುವಾರ ನಡೆಸಿದ್ದು, ತಮಗೆ ಇಂತಹದ್ದೇ ಆಯಕಟ್ಟಿನ ಖಾತೆ ಬೇಕು ಎಂದು ಕೆಲವು ಸಚಿವರು ಬೇಡಿಕೆ ಮಂಡಿಸಿದ್ದಾರೆ.

ಕಂದಾಯ, ಜಲಸಂಪನ್ಮೂಲ, ಲೋಕೋಪಯೋಗಿ, ಬೃಹತ್ ಕೈಗಾರಿಕೆ, ಇಂಧನದಂತಹ ಪ್ರಮುಖ ಖಾತೆಗಳ ಮೇಲೆ ಹಿರಿಯ ಸಚಿವರು ಕಣ್ಣಿಟ್ಟಿದ್ದಾರೆ. 'ವಲಸಿಗ' ಗುಂಪಿನ ಸಚಿವರು ತಮ್ಮ ಆಸಕ್ತಿ ಖಾತೆಗಳನ್ನೇ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಸಚಿವ ಸಂಪುಟ ರಚನೆಯ ವೇಳೆ ಪಕ್ಷದ ವರಿಷ್ಠರ ಸೂಚನೆಯಂತೆಯೇ ನಡೆದುಕೊಂಡಿದ್ದ ಬೊಮ್ಮಾಯಿ, ಖಾತೆ ಹಂಚಿಕೆ ಹೊತ್ತಿನಲ್ಲೂ ವರಿಷ್ಠರ ಒಪ್ಪಿಗೆ ಪಡೆದೇ ಅಂತಿಮ ನಿರ್ಣಯ ಕೈಗೊಳ್ಳುವ ಚಿಂತನೆಯಲ್ಲಿದ್ದಾರೆ.

ಖಾತೆ ಹಂಚಿಕೆ ವಿಚಾರವಾಗಿ ಕುಮಾರಕೃಪಾ ಅತಿಥಿಗೃಹದಲ್ಲಿ ಸಚಿವರ ಜತೆ ಬೊಮ್ಮಾಯಿ ಸಮಾಲೋಚನೆ ನಡೆಸಿದರು. ಯಾವುದೇ ಸಚಿವರೂ ಮುಖ್ಯಮಂತ್ರಿ ಮೇಲೆ ಖಾತೆಗಳಿಗಾಗಿ ಒತ್ತಡ ಹೇರುವ ಕೆಲಸ ಮಾಡಿಲ್ಲ. ಬದಲಿಗೆ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಹೀಗಾಗಿ ಇದು ಕಗ್ಗಂಟಿನ ಸ್ವರೂಪ ಪಡೆದಿಲ್ಲ. ಹಿರಿಯರ ಇಷ್ಟಾನಿಷ್ಟವನ್ನು ಅರಿತು ಖಾತೆ ಹಂಚಿಕೆಯ ಬಗ್ಗೆ ಬೊಮ್ಮಾಯಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

ಬಾಲಚಂದ್ರ ಜಾರಕಿಹೊಳಿ ಅವರು ಜಲಸಂಪನ್ಮೂಲ ಖಾತೆಗಾಗಿ ಪಟ್ಟು ಹಿಡಿದ ಪರಿಣಾಮ ಅವರಿಗೆ ಸಚಿವ ಸ್ಥಾನ ಕೈತಪ್ಪಿತು. ಇದರಿಂದ ಎಚ್ಚೆತ್ತಿರುವ ಉಳಿದ ಸಚಿವರು ಖಾತೆಗಳಿಗಾಗಿ ಒತ್ತಡದ ತಂತ್ರ ಅನುಸರಿಸಲು ಹೋಗಿಲ್ಲ .

ಬೊಮ್ಮಾಯಿ ಅವರು ಹಣಕಾಸು ಮತ್ತು ಜಲಸಂಪನ್ಮೂಲವನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವ ಇಂಗಿತ ವ್ಯಕ್ತಪಡಿಸಿದ್ದಾರೆ. ಖಾತೆ ಹಂಚಿಕೆಯ ಪಟ್ಟಿ ಶುಕ್ರವಾರಬಿಡುಗಡೆ ಆಗಲಿದೆ ಎಂದು ಮೂಲಗಳು ತಿಳಿಸಿವೆ.

'ಆರ್.ಅಶೋಕ ಅವರಿಗೆ ಗೃಹ ಮತ್ತು ಬೆಂಗಳೂರು ಅಭಿವೃದ್ಧಿ ಖಾತೆಯನ್ನು ವಹಿಸಿಕೊಳ್ಳುವಂತೆ ಮುಖ್ಯಮಂತ್ರಿಯವರು ಸಲಹೆ ನೀಡಿದಾಗ, ಬೇಡವೇ ಬೇಡ ಎಂದು ಅಶೋಕ ಹೇಳಿದರು. 'ನನ್ನ ಹಿರಿತನಕ್ಕೆ ಬೆಂಗಳೂರು ಅಭಿವೃದ್ಧಿ ಖಾತೆ ಚಿಕ್ಕದು. ಕಂದಾಯವೇ ಇರಲಿ. ಇದರ ಮೂಲಕ ಜನರ ಜತೆ ಸಂಪರ್ಕದಲ್ಲಿ ಇರಲು ಸಾಧ್ಯ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು' ಎಂದು ಮೂಲಗಳು ತಿಳಿಸಿವೆ.

ಕಂದಾಯದ ಜತೆ ಗೃಹ ಖಾತೆ ನಿರ್ವಹಿಸುವಂತೆ ಆರ್‌ಎಸ್‌ಎಸ್‌ನ ಕೆಲವು ಪ್ರಮುಖರು ಅಶೋಕ ಅವರಿಗೆ ಹೇಳಿದಾಗಲೂ ಒಪ್ಪಲಿಲ್ಲ ಎನ್ನಲಾಗಿದೆ.

ಬೆಂಗಳೂರು ಅಭಿವೃದ್ಧಿ ಖಾತೆಗೆ ವಿ.ಸೋಮಣ್ಣ ಬೇಡಿಕೆ ಸಲ್ಲಿಸಿದ್ದು, ಜಲಸಂಪನ್ಮೂಲ ಅಥವಾ ಇಂಧನ ಖಾತೆಯ ಬಗ್ಗೆ ಕೆ.ಎಸ್.ಈಶ್ವರಪ್ಪ ಒಲವು ಹೊಂದಿದ್ದಾರೆ. 'ಕಳೆದ ಬಾರಿ ಮಹತ್ವವಲ್ಲದ ಖಾತೆಗಳನ್ನು ನೀಡಲಾಗಿತ್ತು. ಈಗ ತಮಗೆ ಉತ್ತಮ ಖಾತೆಗಳನ್ನು ನೀಡಬೇಕು' ಎಂದು 'ವಲಸಿಗ' ಸಚಿವರು ಮುಖ್ಯಮಂತ್ರಿಯವರಲ್ಲಿ ತಮ್ಮ ಅಹವಾಲು ತೋಡಿಕೊಂಡಿದ್ದಾರೆ.

ಡಾ.ಸಿ.ಎನ್.ಅಶ್ವತ್ಥನಾರಾಯಣ, ಶಶಿಕಲಾ ಜೊಲ್ಲೆ ಅವರಿಗೆ ಈ ಹಿಂದೆ ಇದ್ದ ಖಾತೆಗಳನ್ನೇ ಮುಂದುವರಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕೋವಿಡ್: 135 ದೇಶಗಳಲ್ಲಿ ವ್ಯಾಪಿಸಿರುವ ಡೆಲ್ಟಾ

ವಿಶ್ವಸಂಸ್ಥೆ: ಕೋವಿಡ್–19ರ ಡೆಲ್ಟಾ ರೂಪಾಂತರ ತಳಿಯು ವಿಶ್ವದ 135 ದೇಶಗಳಲ್ಲಿ ವರದಿಯಾಗಿದ್ದು, ಜಾಗತಿಕವಾಗಿ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳ ಸಂಖ್ಯೆ ಮುಂದಿನ ವಾರದ ವೇಳೆಗೆ 20 ಕೋಟಿ ದಾಟಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ.

ಡಬ್ಲ್ಯುಎಚ್‌ಒ ಬಿಡುಗಡೆ ಮಾಡಿರುವ ಕೋವಿಡ್ ಸಾಪ್ತಾಹಿಕ ವರದಿಯಲ್ಲಿ, ಜಾಗತಿಕವಾಗಿ 132 ದೇಶಗಳಲ್ಲಿ ಬೀಟಾ ರೂಪಾಂತರ ವೈರಸ್, 81 ದೇಶಗಳಲ್ಲಿ ಗಾಮಾ ವೈರಸ್‌ನ ಪ್ರಕರಣಗಳು ವರದಿಯಾಗಿವೆ ಎಂದು ತಿಳಿಸಿದೆ.

182 ದೇಶಗಳಲ್ಲಿ ಆಲ್ಫಾ ರೂಪಾಂತರ ವೈರಸ್ ಹಾಗೂ 135 ದೇಶಗಳಲ್ಲಿ ಡೆಲ್ಟಾ ತಳಿಗಳು ವರದಿಯಾಗಿವೆ. ಡೆಲ್ಟಾ ವೈರಸ್ ಮೊದಲಿಗೆ ಗುರುತಿಸಲಾಗಿದ್ದು ಭಾರತದಲ್ಲಿ.

ಜಾಗತಿಕವಾಗಿ ಹೊಸ ಪ್ರಕರಣಗಳ ಸಂಖ್ಯೆ ತಿಂಗಳಿಂದ ಏರುಗತಿಯಲ್ಲಿ ಸಾಗಿದ್ದು, ಜುಲೈ 26ರಿಂದ ಆಗಸ್ಟ್ 1ರ ಅವಧಿಯಲ್ಲಿ 40 ಲಕ್ಷ ಪ್ರಕರಣಗಳು ವರದಿಯಾಗಿವೆ.

ಎಸ್ಸೆಸ್ಸೆಲ್ಸಿ ಫಲಿತಾಂಶ ಶೀಘ್ರ

ಬೆಂಗಳೂರು: 2020–21ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟಿಸಲು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಸಿದ್ಧತೆ ಪೂರ್ಣಗೊಳಿಸಿದೆ. ಶೀಘ್ರದಲ್ಲಿ ಫಲಿತಾಂಶ ಪ್ರಕಟಗೊಳ್ಳುವ ಸಾಧ್ಯತೆ ಇದೆ.

ಕೋವಿಡ್ ಕಾರಣ, ಜುಲೈ 19 ಮತ್ತು 22ರಂದು ಸರಳೀಕೃತ ವ್ಯವಸ್ಥೆಯಲ್ಲಿ ಎರಡು ದಿನ ಕೋರ್ ವಿಷಯ ಮತ್ತು ಭಾಷಾ ವಿಷಯಗಳಿಗೆ ಬಹು ಆಯ್ಕೆಯ ಮಾದರಿಯಲ್ಲಿ ಪರೀಕ್ಷೆ ನಡೆಸಲಾಗಿತ್ತು. ವಿದ್ಯಾರ್ಥಿಗಳು ಒಎಂಆರ್ ಸೀಟ್‌ನಲ್ಲಿ ಉತ್ತರಿಸಿದ್ದು, ಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಂಡಿದೆ.

ಫಲಿತಾಂಶ ಪ್ರಕಟಿಸುವ ಮತ್ತು ಪೂರಕ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮಂಡಳಿಯ ಸಭೆ ಗುರುವಾರ ನಡೆದಿದೆ. ಈ ಸಭೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ವಿ. ಅನ್ಬುಕುಮಾರ್, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ದೇಶಕಿ ವಿ. ಸುಮಂಗಳಾ, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

'ಅತಿ ಶೀಘ್ರದಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಲಿದೆ. ಕೋವಿಡ್ ಪರಿಸ್ಥಿತಿಯನ್ನು ನೋಡಿಕೊಂಡು ಸೆಪ್ಟೆಂಬರ್‌ನಲ್ಲಿ ಪೂರಕ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಈ ಹಿಂದೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದ ಎಸ್. ಸುರೇಶ್‌ಕುಮಾರ್ ಅವರು ಆಗಸ್ಟ್ 10 ಒಳಗೆ ಫಲಿತಾಂಶ ಪ್ರಕಟಿಸಲಾಗುವುದು ಎಂದು ಹೇಳಿದ್ದರು. ಅದರಂತೆ, ಫಲಿತಾಂಶ ಪ್ರಕಟಿಸಲು ತಯಾರಿ ನಡೆದಿದೆ' ಎಂದು ಮಂಡಳಿಯ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ತವರು ಜಿಲ್ಲೆಯಲ್ಲೇ ಅಸಮಾಧಾನ ಸ್ಫೋಟ?

'ಅತೃಪ್ತ ಶಾಸಕರ ತಂಡ ರಚನೆಯಾಗಲಿದೆ'

ಪ್ರಜಾವಾಣಿ ವಾರ್ತೆ

ಹಾವೇರಿ: 'ಸಚಿವ ಸ್ಥಾನ ಕೈತಪ್ಪಿದ ಅತೃಪ್ತ ಶಾಸಕರ ಜೊತೆ ಸಂಪರ್ಕದಲ್ಲಿದ್ದೇನೆ. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಇಂದಿನಿಂದಲೇ ಚರ್ಚೆ ನಡೆಯಲಿದೆ. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಉಳಿದ ದಿನಗಳನ್ನು ಪೂರೈಸುತ್ತದೆಯೋ ಇಲ್ಲವೋ ಎಂಬುದನ್ನು ಕಾದು ನೋಡಿ' ಎಂದು ಶಾಸಕ ನೆಹರು ಓಲೇಕಾರ ಅಸಮಾಧಾನ ಹೊರಹಾಕಿದರು.

ನೆಹರು ಓಲೇಕಾರ

ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಅತೃಪ್ತ ಶಾಸಕರ ತಂಡ ರಚನೆಯಾಗಲಿದೆ. ಹಿಂದುಳಿದ ವರ್ಗದವರನ್ನು ಕಡೆಗಣಿಸಿರುವುದರಿಂದ ಸಂಪುಟದಲ್ಲಿ ಸಮತೋಲನ ಇಲ್ಲದಂತಾಗಿದೆ. ಕಳೆದ ಬಾರಿ ಸಚಿವ ಸ್ಥಾನ ಕೈತಪ್ಪಿದಾಗಲೂ ಸುಮ್ಮನಿದ್ದೆ. ಈ ಬಾರಿ ಸುಮ್ಮನಿರುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

'ಪರಿಶಿಷ್ಟ ಜಾತಿಯವರನ್ನು ಕಡೆಗಣಿಸಲಾಗಿದೆ. ಹಾಗಾದರೆ ಅವರ ಬೆಂಬಲ, ಮತಗಳು ಬೇಡವೇ?' ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ತವರು ಜಿಲ್ಲೆಯಿಂದಲೇ ಅಸಮಾಧಾನ ಸ್ಫೋಟಗೊಳ್ಳಲಿದೆ ಎಂಬುದನ್ನು ಪರೋಕ್ಷವಾಗಿ ತಿಳಿಸಿದರು.

'ನನ್ನನ್ನು ಉದ್ದೇಶಪೂರ್ವಕವಾಗಿಯೇ ಕೈ ಬಿಡಲಾಗಿದೆ. ಮೂರು ಬಾರಿ ಶಾಸಕನಾಗಿದ್ದೇನೆ. ಹಿಂದುಳಿದ ವರ್ಗದ ಬಲಗೈ ವರ್ಗಕ್ಕೆ ಅನ್ಯಾಯ ಮಾಡಲಾಗಿದೆ. ಬಿ.ಎಸ್. ಯಡಿಯೂರಪ್ಪ ನೀಡಿದ್ದ ಭರವಸೆಯೂ ಹುಸಿಯಾಗಿದೆ. ಸಚಿವ ಸ್ಥಾನ ಕೈ ತಪ್ಪಲು ಬಸವರಾಜ ಬೊಮ್ಮಾಯಿ ಅವರೇ ಕಾರಣ' ಎಂದು ನೇರವಾಗಿ ಆರೋಪ ಮಾಡಿದರು.

'ಪಕ್ಷದ ಚೌಕಟ್ಟಿನಲ್ಲಿ ಸಹಿಸಿಕೊಳ್ಳುತ್ತೇನೆ'

ಅರವಿಂದ ಬೆಲ್ಲದ

ಧಾರವಾಡ: 'ಸಚಿವ ಸಂಪುಟದಲ್ಲಿ ಸ್ಥಾನಮಾನ ಸಿಗದಿರುವುದು ಬೇಸರ ತರಿಸಿದೆ. ಆದರೆ ಪಕ್ಷದ ಚೌಕಟ್ಟಿನಲ್ಲಿ ನಾನು ಎಲ್ಲವನ್ನೂ ಸಹಿಸಿಕೊಳ್ಳುತ್ತೇನೆ' ಎಂದು ಶಾಸಕ ಅರವಿಂದ ಬೆಲ್ಲದ ಹೇಳಿದ್ದಾರೆ. ಈ ಕುರಿತು ಹೇಳಿಕೆಯಲ್ಲಿ ಅವರು, 'ಎರಡು ಅವಧಿಯಿಂದ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇನೆ. ಈ ಬಾರಿ ಮುಖ್ಯಮಂತ್ರಿ ಸ್ಥಾನಕ್ಕೂ ಪರಿಗಣನೆಯಾಗಿ, ಪ್ರಧಾನಿ ನರೇಂದ್ರ ಮೋದಿ ಅವರ ಗಮನಕ್ಕೆ ಬರುವಂತಾಗಿದ್ದು ನನ್ನ ಸೌಭಾಗ್ಯ' ಎಂದಿದ್ದಾರೆ.'ಸಚಿವ ಸ್ಥಾನ ಸಿಗದಿರುವುದರಿಂದ ಜನರ ಸೇವೆಗೆ ಅಡೆತಡೆ ಬಾರದು. ಕ್ಷೇತ್ರದ ಕೆಲಸವನ್ನು ಮೊದಲಿನಂತೆ ಮಾಡಲು ಸದಾ ಸಿದ್ದನಿದ್ದೇನೆ' ಎಂದು ಕಾರ್ಯಕರ್ತರಿಗೆ ಹೇಳಿದ್ದಾರೆ.

'ರಾಷ್ಟ್ರವಾದಿಯೇ ಮುಂದಿನ ಮುಖ್ಯಮಂತ್ರಿ'


ಕೆ.ಎಸ್.ಈಶ್ವರಪ್ಪ

ಮೈಸೂರು: 'ಮುಂದಿನ ಬಾರಿ ಬಿಜೆಪಿಯಿಂದ ರಾಷ್ಟ್ರವಾದಿಯೊಬ್ಬರು ಮುಖ್ಯಮಂತ್ರಿಯಾಗುತ್ತಾರೆ' ಎಂದು ಸಚಿವ ಕೆ.ಎಸ್.ಈಶ್ವರಪ್ಪ ಇಲ್ಲಿ ಹೇಳಿದರು.

'ಬರಲಿರುವ ಚುನಾವಣೆಯಲ್ಲಿ ಬಿಜೆಪಿಗೆ ಸಂಪೂರ್ಣ ಬಹುಮತ ಸಿಗುತ್ತದೆ. ಆಗ ಜಾತಿ ವಿಚಾರ ಬರುವುದಿಲ್ಲ' ಎಂದು ಇಲ್ಲಿ ಸುದ್ದಿಗಾರರಿಗೆ ಹೇಳಿದರು.

'ನಾನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆಗಬೇಕೆಂದು ಬೆಂಬಲಿಗರು ಬಯಸಿದ್ದರು. ಆದರೆ, ಸಚಿವನೂ ಆಗುವುದಿಲ್ಲ ಅಂತ ಬಿಂಬಿಸಲಾಯಿತು. ಹೈಕಮಾಂಡ್ ನನ್ನನ್ನು ಹೇಗೆ ಪರಿಗಣಿಸಿದೆ ಎಂದು ಎಲ್ಲರಿಗೂ ಗೊತ್ತಾಗಿದೆ' ಎಂದರು.

'ಅಂಬಿಗರ ಸಮಾಜಕ್ಕೆ ಸಚಿವ ಸ್ಥಾನ ಕೊಡದಿದ್ದರೆ ಪಾಠ ಕಲಿಸುತ್ತೇವೆ'

ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ

ಗುತ್ತಲ (ಹಾವೇರಿ ಜಿಲ್ಲೆ): 'ರಾಜ್ಯದಲ್ಲಿ 50 ರಿಂದ 60 ಲಕ್ಷ ಜನಸಂಖ್ಯೆ ಇರುವ ಅಂಬಿಗ ಸಮುದಾಯಕ್ಕೆ ಸಚಿವ ಸ್ಥಾನ ಕೊಡದೆ ಇದ್ದರೆ ಮುಂದಿನ ದಿನಗಳಲ್ಲಿ ಪಕ್ಷಕ್ಕೆ ನಮ್ಮ ಸಮಾಜದಿಂದ ತಕ್ಕ ಪಾಠ ಕಲಿಸಬೇಕಾಗುತ್ತದೆ' ಎಂದು ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯನ ಗುರುಪೀಠದ ಪೀಠಾಧ್ಯಕ್ಷ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಗುರುವಾರ ಅಂಬಿಗರ ಚೌಡಯ್ಯ ಗುರುಪೀಠದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ, ಗಂಗಾಮತ,ಮೋಗವಿರ ಮುಂತಾದ 39 ಪರ್ಯಾಯ ಪದಗಳಿಂದ ಗುರುತಿಸಲಾಗುವ ಹಿಂದುಳಿದ ಅಂಬಿಗ ಸಮುದಾಯಕ್ಕೆ ಸಂಪುಟದಲ್ಲಿ ಸಚಿವ ಸ್ಥಾನ ನೀಡದಿರುವುದು ಸಮುದಾಯಕ್ಕೆ ಅತ್ಯಂತ ಅಸಮಾಧಾನ ಮೂಡಿಸಿದೆ' ಎಂದರು.

'ಅಂಬಿಗ ಸಮಾಜದಲ್ಲಿ ಇಬ್ಬರು ವಿಧಾನಪರಿಷತ್ ಸದಸ್ಯರು ಮತ್ತು ಒಬ್ಬರು ಶಾಸಕರಿದ್ದಾರೆ. ಒಬ್ಬರಿಗೆ ಕಡ್ಡಾಯವಾಗಿ ಸಚಿವ ಸ್ಥಾನ ಕೊಡಿ. ಸಚಿವ ಸ್ಥಾನ ನೀಡದಿರುವುದು ಸಮಾಜದವರಿಗೆ ಅನ್ಯಾಯ ಮಾಡಿದಂತಾಗಿದೆ' ಎಂದರು.

ಗದ್ಗದಿತರಾದ ಶಾಸಕ ತಿಪ್ಪಾರೆಡ್ಡಿ

ಜಿ.ಎಚ್. ತಿಪ್ಪಾರೆಡ್ಡಿ

ಚಿತ್ರದುರ್ಗ: ಸಚಿವ ಸ್ಥಾನ ಕೈತಪ್ಪಿದ್ದರಿಂದ ನೊಂದಿರುವ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುವಾಗ ಗದ್ಗದಿತರಾದರು. ದುಃಖವನ್ನು ನುಂಗಿಕೊಳ್ಳುತ್ತ ತುಂಬಿದ ಕಣ್ಣಾಲಿಗಳಲ್ಲಿ ಮೌನಕ್ಕೆ ಶರಣಾದರು.

'ಹಿರಿತನದ ಆಧಾರದಲ್ಲಿ ಅವಕಾಶ ಸಿಗುವ ನಿರೀಕ್ಷೆ ಇತ್ತು, ಮನಸ್ಸಿಗೆ ತುಂಬಾ ನೋವಾಗಿದೆ. ಕೆ.ಎಸ್. ಈಶ್ವರಪ್ಪ, ಗೋವಿಂದ ಕಾರಜೋಳ ಅವರಿಗೆ ಸಚಿವ ಸ್ಥಾನ ನೀಡಲಾಗಿದೆ. ಕಾರಜೋಳ ಅವರು ನನ್ನಷ್ಟು ಗೆಲುವು ಸಾಧಿಸಿಲ್ಲ' ಎಂದು ಹೇಳಿದರು.

'ಲಾಬಿಕೋರ'ರಿಗೆ ಸಚಿವ ಸ್ಥಾನ: ಸಿದ್ದು ಸವದಿ

ತೇರದಾಳ(ಬಾಗಲಕೋಟೆ): 'ಮೂರು ಬಾರಿ ಶಾಸಕನಾಗಿರುವ ನಾನು ಕೂಡ ಹಿರಿಯ ಶಾಸಕರಲ್ಲಿ ಒಬ್ಬ. ನನಗೆ ಸಚಿವ ಸ್ಥಾನ ತಪ್ಪಲು ಪಕ್ಷದಲ್ಲಿನ ಹಿತಶತ್ರುಗಳೇ ಕಾರಣ' ಎಂದು ತೇರದಾಳ ಶಾಸಕ ಸಿದ್ದು ಸವದಿ ಬೇಸರ ವ್ಯಕ್ತಪಡಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನಗಿಂತ ಚಿಕ್ಕವರಿಗೆ ಸಚಿವ ಸ್ಥಾನ ನೀಡಲಾಗಿದೆ. ನಾಲ್ಕಾರು ಬಾರಿ ಸಚಿವರಾದವರಿಗೂ ಕೂಡ ಮತ್ತೆ ಸ್ಥಾನ ನೀಡಿದ್ದಾರೆ. ಪಕ್ಷ ವಿರೋಧಿ ಚಟುವಟಿಕೆ ಮಾಡದಿರುವ, ಪಕ್ಷನಿಷ್ಠನಾಗಿರುವ ನನಗೆ ಸಚಿವ ಸ್ಥಾನ ನೀಡಿಲ್ಲ. ಅಧಿಕಾರಕ್ಕಾಗಿ ಲಾಬಿ ಮಾಡಿಲ್ಲವಾದ್ದರಿಂದ ನೀಡಿಲ್ಲವೆನಿಸುತ್ತದೆ' ಎಂದರು.

ಭದ್ರಾ ಜಲಾಶಯದಿಂದ ಗುರುವಾರ ನದಿಗೆ ನೀರು ಹರಿಸಲಾಯಿತು. ಚಿತ್ರ: ಶಿವಮೊಗ್ಗ ನಾಗರಾಜ್

ಕರಾವಳಿ, ಮಲೆನಾಡಿನಲ್ಲಿ ಉತ್ತಮ ಮಳೆ

ಭದ್ರಾ ಭರ್ತಿ: ನೀರು ಬಿಡುಗಡೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಭದ್ರಾ ಜಲಾಶಯ ಭರ್ತಿಯಾಗಿದ್ದು, ಗುರುವಾರ ನಾಲ್ಕು ಕ್ರಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ ನೀರು ಹರಿಸಲಾಯಿತು.

186 ಅಡಿ ಸಾಮರ್ಥ್ಯದ ಜಲಾಶಯದಲ್ಲಿ ಪ್ರಸ್ತುತ 184.5 ಅಡಿ ನೀರು ಸಂಗ್ರಹವಿದೆ. ಒಳಹರಿವು 15,206 ಕ್ಯುಸೆಕ್ ಇದ್ದು, ಮುಂಜಾಗ್ರತೆಯಾಗಿ 1,600 ಕ್ಯುಸೆಕ್ ನೀರು ಬಿಡಲಾಗಿದೆ.

ಸಾಧಾರಣ ಮಳೆ: ಜಿಲ್ಲೆಯಲ್ಲಿ ಗುರುವಾರ ಹಲವೆಡೆ ಸಾಧಾರಣ ಮಳೆಯಾಗಿದೆ. ಹೊಸನಗರದಲ್ಲಿ ಉತ್ತಮ ಅಂದರೆ, 12.70 ಸೆಂ.ಮೀ. ಮಳೆಯಾಗಿರುವುದು ದಾಖಲಾಗಿದೆ. ಲಿಂಗನಮಕ್ಕಿ ಜಲಾಶಯಕ್ಕೆ 27 ಸಾವಿರ ಕ್ಯುಸೆಕ್, ತುಂಗಾ ಜಲಾಶಯಕ್ಕೆ 32 ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿದೆ. ಅಷ್ಟೇ ಪ್ರಮಾಣದ ನೀರನ್ನು ನದಿಗೆ ಬಿಡಲಾಗುತ್ತಿದೆ.

ಮಂಗಳೂರು ವರದಿ: ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಉತ್ತಮ ಮಳೆಯಾಗುತ್ತಿದೆ. ಉಜಿರೆಯ ಪೆರ್ಲ ಬೇಬಿ ಗೋಪಾಲ ಪೂಜಾರಿ ಅವರ ಮನೆಗೆ ಹಾನಿಯಾಗಿದೆ. ಮಂಗಳೂರು ನಗರ ಹಾಗೂ ಬಂಟ್ವಾಳ, ಪುತ್ತೂರು, ಸುಳ್ಯ ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ಗುರುವಾರ ಸಾಧಾರಣ ಮಳೆಯಾಗಿದೆ. ಬುಧವಾರ ರಾತ್ರಿ ಬಿರುಸಾಗಿ ಸುರಿದಿತ್ತು. ಹೆಬ್ರಿಯ ಮುದ್ರಾಡಿಯಲ್ಲಿ ಗರಿಷ್ಠ 7.4 ಸೆಂ.ಮೀ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಭದ್ರಾ, ತುಂಗಾ, ಹೇಮಾವತಿ ನದಿಗಳಲ್ಲಿನ ಹರಿವು ಹೆಚ್ಚಾಗಿದೆ. ಕೊಪ್ಪ, ಕಳಸ, ಮೂಡಿಗೆರೆ, ಶೃಂಗೇರಿ, ಎನ್.ಆರ್. ಪುರ ಭಾಗದಲ್ಲಿ ಬಿರುಸಾಗಿ ಮಳೆ ಸುರಿದಿದೆ. ಬಯಲುಸೀಮೆ ಭಾಗದ ತರೀಕೆರೆ, ಅಜ್ಜಂಪುರ, ಕಡೂರು ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಕೆರೆಕಟ್ಟೆಯಲ್ಲಿ 5.8, ಕಿಗ್ಗಾದಲ್ಲಿ 5.6, ಹರಿಹರಪುರದಲ್ಲಿ 4.3 ಸೆಂ.ಮೀ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.00	12,139	5,362
ಹಾರಂಗಿ	2,859	2,856.94	4,518	7,500
ಕಬಿನಿ	2284.00	2,281.05	6,133	1,000
ಹೇಮಾವತಿ	2,922	2,919.75	11,978	8,380
ಲಿಂಗನಮಕ್ಕಿ	1,819	1,809.65	27,850	-
ಸೂಪಾ (ಮೀ)	564	553.30	21,498	709
ಮಾಣಿ	594	583.38	4568	-
ತುಂಗಭದ್ರಾ	1,633	1,632.01	29,112	39,512
ಮಲಪ್ರಭಾ	2079.5	2,075.90	6,185	1,694
ಘಟಪ್ರಭಾ	2175	2173.58	12,438	4,525
ಭದ್ರಾ	186	184.1	15,206	3,609
ಆಲಮಟ್ಟಿ (ಮೀ)	519.6	518.69	90,414	1,68,912
ನಾರಾಯಣಪುರ (ಮೀ)	492.25	491.52	1,75,000	1,86,700

* ನೆಲಮಟ್ಟದಿಂದ

ಮೇಕೆದಾಟು: ಲೋಕಸಭೆಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್ ಹೇಳಿಕೆ

‘ಕಾವೇರಿ ಪ್ರಾಧಿಕಾರದ ಸಮ್ಮತಿ ಅಗತ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಯೋಜನೆ ಆರಂಭಿಸಲು ಕರ್ನಾಟಕ ಸರ್ಕಾರ ಸಲ್ಲಿಸಿರುವ ಸಮಗ್ರ ಯೋಜನಾ ವರದಿ (ಡಿಪಿಆರ್)ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅನುಮತಿಯ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್, ಯೋಜನೆಗೆ ಕಾವೇರಿ ಕಣಿವೆಯ ಕೆಳಗಿನ ರಾಜ್ಯಗಳ ಸಮ್ಮತಿಯೂ ಬೇಕು ಎಂದರು.

ಕರ್ನಾಟಕ ಸರ್ಕಾರವು 2018ರಲ್ಲಿ ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ)ದ ಪರಿಶೀಲನಾ ಸಮಿತಿಗೆ ಯೋಜನೆ ಕುರಿತ ಕಾರ್ಯಸಾಧ್ಯತೆ ವರದಿ ಸಲ್ಲಿಸಿ ಡಿಪಿಆರ್‌ಗೆ ಅನುಮತಿ ಕೋರಿದ್ದರಿಂದ ಷರತ್ತುಗಳನ್ನು ವಿಧಿಸಿ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು ಅವರು ಹೇಳಿದರು.

ಈ ಡಿಪಿಆರ್‌ಗೆ ಅನುಮತಿ ಕೋರಿ ಕರ್ನಾಟಕ ಸಲ್ಲಿಸಿರುವ ಅರ್ಜಿಯ ಕುರಿತು ಕಾವೇರಿ ನೀರು ನಿರ್ವಹಣಾ ಮಂಡಳಿ ಸಭೆ ನಡೆಸಿದಾಗ ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಒಮ್ಮತದ ನಿಲುವು ತಾಳದೇ ಯಾವುದೇ ನಿರ್ಧಾರ ಕೈಗೊಳ್ಳಲಾಗಿಲ್ಲ ಎಂದು ವಿವರಿಸಿದರು.

ತಮಿಳುನಾಡು ಮತ್ತು ಪುದುಚೇರಿ ಸರ್ಕಾರಗಳ ಸಮ್ಮತಿ ಪಡೆಯುವುದು ಅಗತ್ಯ ಎಂದು ಕರ್ನಾಟಕವು ಡಿಪಿಆರ್ ಸಲ್ಲಿಸಿದಾಗಲೇ ತಿಳಿಸಲಾಗಿದೆ ಎಂದೂ ಸಚಿವರು ಹೇಳಿದರು.

ತಮಿಳುನಾಡಿನ ವಿರೋಧದಿಂದಾಗಿ ಯೋಜನೆಗೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವೂ ಅನುಮತಿ ನೀಡಿಲ್ಲ. ಒಮ್ಮತದ ನಿರ್ಧಾರ ಕೈಗೊಂಡಲ್ಲಿ ಅನುಮತಿ ನೀಡಲಾಗುವುದು ಎಂದೂ ಸಚಿವಾಲಯವು ಉಭಯ ರಾಜ್ಯಗಳಿಗೆ ತಿಳಿಸಿತ್ತುಎಂದರು.

‘ಅನುಮತಿ ಕೋರಿ ಅರ್ಜಿ ಸಲ್ಲಿಸಿದ 6 ತಿಂಗಳೊಳಗೆ ಕೇಂದ್ರ ಸರ್ಕಾರ ಪ್ರತಿಕ್ರಿಯೆ ನೀಡದಿದ್ದರೆ, ತಾತ್ವಿಕ ಒಪ್ಪಿಗೆ ದೊರೆತಿದೆ ಎಂದು ಭಾವಿಸಬಹುದಲ್ಲವೇ?’ ಎಂಬ ಪ್ರಜ್ವಲ್ ಅವರ ಪೂರಕ ಪ್ರಶ್ನೆಗೆ ಉತ್ತರಿಸಿದ ಸಚಿವರು, ತಾತ್ವಿಕ ಒಪ್ಪಿಗೆ ದೊರೆತಿದೆ ಎಂದು ಭಾವಿಸುವುದು ಸಹಜ. ಆದರೆ, ಕಾವೇರಿ ಜಲ ವಿವಾದ ನ್ಯಾಯಮಂಡಳಿ ನೀಡಿದ್ದ ಐತೀರ್ಪನ್ನು ಪ್ರಶ್ನಿಸಲಾದ ಕಣಿವೆ ರಾಜ್ಯಗಳ ಮೇಲ್ಮನವಿಯ ವಿಚಾರಣೆ ನಡೆಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಅನ್ವಯ, ಯಾವುದೇ ಯೋಜನೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅನುಮತಿ ಅಗತ್ಯವಿದೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಮನವೊಲಿಸಲಿ: ಪ್ರಜ್ವಲ್

‘ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಬಿಜೆಪಿ ಆಡಳಿತವೇ ಇದೆ. ಮೇಕೆದಾಟು ಯೋಜನೆಗೆ ಅನುಮತಿ ನೀಡದಂತೆ ಉಪವಾಸ ಸತ್ಯಾಗ್ರಹ ಆರಂಭಿಸಿರುವ ಬಿಜೆಪಿಯ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಅವರ ಮನವೊಲಿಸುತ್ತಿಲ್ಲ ಏಕೆ’ ಎಂದು ಸಂಸದ ಪ್ರಜ್ವಲ್ ರೇವಣ್ಣ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

ಅತ್ತ ತಮಿಳುನಾಡಿನಲ್ಲಿ ಅಣ್ಣಾಮಲೈ ಹೋರಾಟ ನಡೆಸುತ್ತಾರೆ. ಇತ್ತ ಯೋಜನೆ ಆರಂಭಿಸಿಯೇ ತೀರುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಾರೆ. ಇದು ಬಿಜೆಪಿಯ ದ್ವಿಮುಖ ನೀತಿ ಎಂದು ಅವರು ಆರೋಪಿಸಿದರು.

‘ನಮ್ಮ ಪಾಲಿನ ನೀರು ನಮ್ಮ ಹಕ್ಕು. ಕಾವೇರಿ ಕಣಿವೆಯಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ನಾವು ಬಳಸಿಕೊಳ್ಳುವುದರಲ್ಲಿ ತಪ್ಪಿಲ್ಲ. ರಾಮನಗರ ಜಿಲ್ಲೆ ಮತ್ತು ಬೆಂಗಳೂರಿನ ಜನತೆಗೆ ಕುಡಿಯುವ ನೀರು ಪೂರೈಸಲು ಈ ಯೋಜನೆಗೆ ರಾಜ್ಯ ಸರ್ಕಾರ ಕೂಡಲೇ ಚಾಲನೆ ನೀಡಬೇಕು ಎಂದು ಮನವಿ ಮಾಡಿದರು.

‘ಭೂಸ್ವಾಧೀನ ಪ್ರಕ್ರಿಯೆ ಶುರುಮಾಡಿ’

ಡಿ.ಕೆ. ಶಿವಕುಮಾರ್

ರಾಜ್ಯ ಸರ್ಕಾರ ಮೊದಲು ಯೋಜನೆಯನ್ನು ಕೈಗೆತ್ತಿಕೊಂಡು, ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಹೆಚ್ಚುವರಿ ನೀರಿನ ಮೇಲೆ ಕರ್ನಾಟಕದ ಹಕ್ಕು ಇದ್ದು, ಯೋಜನೆಗೆ ಅನುಮತಿ ದೊರೆಯುವ ಕುರಿತು ಸಂಶಯವಿಲ್ಲ. ಹಾಗಾಗಿ ಅನುಮತಿ ದೊರೆಯುವ ಮೊದಲೇ ಕಾಮಗಾರಿ ಆರಂಭಿಸಬಹುದಾಗಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದೋಣಿ ಸಾಗಲಿ... ಕೋಲ್ಕತ್ತದಿಂದ 65 ಕಿ.ಮೀ ದೂರದಲ್ಲಿರುವ ಹೌರಾ ಜಿಲ್ಲೆಯ ಅಮ್ತಾ ನಗರದ ಪ್ರವಾಹ ಪೀಡಿತ ಪ್ರದೇಶದಲ್ಲಿ ನವ ದಂಪತಿ ಕುಟುಂಬದ ಸದಸ್ಯರೊಂದಿಗೆ ದೋಣಿಯಲ್ಲಿ ಮನೆಗೆ ತೆರಳುತ್ತಿರುವುದು — ಎಎಫ್‌ಪಿ ಚಿತ್ರ

‘ಅಣ್ಣಾಮಲೈ ವಿರೋಧ–ಐ ಡೋಂಟ್ ಕೇರ್’

ರಾಜಿ ಇಲ್ಲ, ಮಾಡಿಯೇ ತೀರುತ್ತೇವೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ‘ತಮಿಳುನಾಡು ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ರಾಜಕೀಯ ಕಾರಣಕ್ಕಾಗಿ ಮೇಕೆದಾಟು ಯೋಜನೆ ವಿರುದ್ಧ ಪ್ರತಿಭಟನೆ ಮಾಡಲು ಹೊರಟಿದ್ದಾರೆ. ಅವರನ್ನು ದೊಡ್ಡ ಮನುಷ್ಯ ಮಾಡಬೇಕಾಗಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಇಂತಹ ಪ್ರತಿಭಟನೆಗಳ ಬಗ್ಗೆ ‘ಐ ಡೋಂಟ್ ಕೇರ್’ ಎಂದು ಕಿಡಿ ಕಾರಿದರು.

ಬೆಂಗಳೂರು ನಗರಕ್ಕೆ ಕುಡಿಯುವ ಉದ್ದೇಶಕ್ಕಾಗಿ 6 ಟಿಎಂಸಿ ಅಡಿಯಷ್ಟು ಹೆಚ್ಚುವರಿ ನೀರನ್ನು ಸುಪ್ರೀಂಕೋರ್ಟ್ ಹಂಚಿಕೆ ಮಾಡಿದೆ. ಹೆಚ್ಚುವರಿ ನೀರಿನ ಬಳಕೆಗಾಗಿ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದು ವಿವರಿಸಿದರು.

‘ಅಣ್ಣಾಮಲೈ ರಾಜಕೀಯ ಕಾರಣಕ್ಕೆ ಅವರು ಪ್ರತಿಭಟನೆ ಮಾಡುತ್ತಾರೆ. ನಾವು ಎಲ್ಲ ರೀತಿಯ ಅನುಮತಿ ತೆಗೆದುಕೊಂಡೇ ಈ ಯೋಜನೆ ಅನುಷ್ಠಾನ ಮಾಡುತ್ತೇವೆ. ತಮಿಳುನಾಡು ಹಿಂದಿನಿಂದಲೂ ಕರ್ನಾಟಕದ ಎಲ್ಲ ನೀರಾವರಿ ಯೋಜನೆಗಳಿಗೂ ಅಡ್ಡಿ ಮಾಡುತ್ತಲೇ ಬಂದಿದೆ’ ಎಂದರು.

‘ಮೇಕೆದಾಟು ವಿಚಾರದಲ್ಲಿ ಯಾವುದೇ ರೀತಿಯ ರಾಜಿ ಇಲ್ಲ, ಯೋಜನೆಯನ್ನು ಮಾಡಿಯೇ ತೀರುತ್ತೇವೆ’ ಎಂದೂ ಅವರು ಸ್ಪಷ್ಟಪಡಿಸಿದರು.

‘ತಮಿಳುನಾಡಿನಲ್ಲಿ ಯಾವುದೇ ಪಕ್ಷದವರು ಇರಬಹುದು, ಅವರು ರಾಜಕಾರಣಕ್ಕಾಗಿ ನಮ್ಮ ಯೋಜನೆಗಳನ್ನು ವಿರೋಧ ಮಾಡುತ್ತಲೇ ಬರುತ್ತಿದ್ದಾರೆ’ ಎಂದರು.

‘ಮೇಕೆದಾಟು ಯೋಜನೆಯು ಕುಡಿಯುವ ನೀರು, ವಿದ್ಯುಚ್ಛಕ್ತಿ ಮತ್ತು ಕಷ್ಟ ಕಾಲದಲ್ಲಿ ನೀರನ್ನು ಬಳಸಲು ಅವಕಾಶ ಇರುವ ಯೋಜನೆ ಎಂಬುದು ಎಲ್ಲರಿಗೂ ಗೊತ್ತಿದೆ. ಇತ್ತೀಚೆಗೆ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಯೋಜನೆಯ ಬಗ್ಗೆ ತಿಳಿಸಿದ್ದೇನೆ. ರಾಜ್ಯದ ಸಂಸದರ ನಿಯೋಗದ ಜತೆಗೂ ಭೇಟಿ ಮಾಡಿ ಒತ್ತಾಯಿಸಿದ್ದೇನೆ’ ಎಂದರು.

‘ಯೋಜನೆಯ ವಿಸ್ತೃತ ಯೋಜನೆಗೆ (ಡಿಪಿಆರ್) ಶೀಘ್ರದಲ್ಲಿ ಅನುಮತಿ ಸಿಗುವ ವಿಶ್ವಾಸವಿದೆ. ಅನುಮತಿ ಸಿಕ್ಕಿದ ತಕ್ಷಣ ಕಾಮಗಾರಿ ಆರಂಭಿಸುವುದು ಶತಸಿದ್ಧ’ ಎಂದರು.

ತಮಿಳುನಾಡು ರೈತರೊಂದಿಗೆ ಚರ್ಚೆ: ಬಡಗಲಪುರ ನಾಗೇಂದ್ರ

ಮೈಸೂರು: ‘ಮೇಕೆದಾಟು ಯೋಜನೆ ಕುರಿತು ತಮಿಳುನಾಡಿನ ರೈತ ಸಂಘಟನೆಗಳೊಂದಿಗೆ ಆಗಸ್ಟ್ 21 ಮತ್ತು 22ರಂದು ಚರ್ಚೆ ನಡೆಸಲಾಗುವುದು’ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

‘ಕೃಷಿ ಮಸೂದೆಗಳ ವಿರುದ್ಧ ಹೋರಾಟ ರೂಪಿಸಲು ದಕ್ಷಿಣ ಭಾರತದ ರೈತ ಸಂಘಟನೆಗಳ ಸಭೆ ತಮಿಳುನಾಡಿನಲ್ಲಿ ನಡೆಯಲಿದೆ. ಆ ವೇಳೆ ತಮಿಳುನಾಡಿನ 7 ರೈತ ಸಂಘಟನೆಗಳ ಮುಖಂಡರಿಗೆ ಯೋಜನೆಯ ಕುರಿತು ಮನವರಿಕೆ ಮಾಡಿಕೊಡಲಾಗುವುದು’ ಎಂದು ಅವರು ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಯೋಜನೆ ಜಾರಿ ಸಂಬಂಧ ರಾಜ್ಯದ 28 ಸಂಸದರೂ ಸಂಸತ್ತಿನಲ್ಲಿ ಧ್ವನಿ ಎತ್ತಬೇಕು. ಕನ್ನಡದ ಅನ್ನ ತಿಂದಿರುವ ಅಣ್ಣಾಮಲೈ ನಾಡಿಗೆ ದ್ರೋಹ ಬಗೆಯದೇ ನಿಷ್ಪಕ್ಷಪಾತವಾಗಿ ವರ್ತಿಸಬೇಕು’ ಎಂದು ಒತ್ತಾಯಿಸಿದರು.

‘ವಿದ್ಯುತ್ ಪೂರೈಕೆಯ ಖಾಸಗೀಕರಣ ಸರಿಯಲ್ಲ. ಪಂಪ್‌ಸೆಟ್‌ಗಳಿಗೆ ವಿದ್ಯುತ್ ಮೀಟರ್ ಅಳವಡಿಸಿದರೆ ಅದನ್ನು ಕಿತ್ತು ಹಾಕುವ ಚಳವಳಿಯನ್ನು ಆರಂಭಿಸಲಾಗುವುದು’ ಎಂದರು.

ಮೇಕೆದಾಟು ವಿರೋಧಿಸಿ ತಮಿಳುನಾಡು ಬಿಜೆಪಿ ಧರಣಿ

ಅಣ್ಣಾಮಲೈ

ತಂಜಾವೂರು (ಪಿಟಿಐ): ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆಯನ್ನು ಕೈಬಿಡಬೇಕು ಎಂದು ಕರ್ನಾಟಕವನ್ನು ಒತ್ತಾಯಿಸಿ ಬಿಜೆಪಿ ತಮಿಳುನಾಡು ಘಟಕದ ನೇತೃತ್ವದಲ್ಲಿ ಕಾರ್ಯಕರ್ತರು ಗುರುವಾರ ಉಪವಾಸ ಸತ್ಯಾಗ್ರಹ ನಡೆಸಿದರು.

ಹಸಿರುಶಾಲು ಧರಿಸಿ, ಎತ್ತಿನಗಾಡಿ ಮೆರವಣಿಗೆ ನಡೆಸಿದ ಮುಖಂಡರು, ಕಾರ್ಯಕರ್ತರು, ಕರ್ನಾಟಕ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕುಡಿಯುವ ನೀರು ಪೂರೈಕೆ, ವಿದ್ಯುತ್ ಉತ್ಪಾದನೆ ಉದ್ದೇಶದ ಈ ಯೋಜನೆ ಕೈಬಿಡಬೇಕು ಎಂದು ಆಗ್ರಹಿಸಿದರು.

ಮೇಕೆದಾಟುವಿಗೆ ಸಂಬಂಧಿಸಿ ಕರ್ನಾಟಕದ ಬಿಜೆಪಿ ಸರ್ಕಾರ ಬೆಂಬಲಿಸುವ ವಿರೋಧಪಕ್ಷಗಳ ನಿಲುವನ್ನು ಟೀಕಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ, ‘ಕಾನೂನು ಸ್ಪಷ್ಟವಾಗಿ ನದಿಯ ಕೆಳಹಂತದ ರಾಜ್ಯಗಳ ಪರವಾಗಿದೆ’ ಎಂದರು.

ಕೆಳಹಂತದ ರಾಜ್ಯವಾದ ತಮಿಳುನಾಡು ಸಹಮತವಿಲ್ಲದೆ ಅಣೆಕಟ್ಟು ನಿರ್ಮಿಸುವುದು ಸಾಧ್ಯವೇ ಇಲ್ಲ. ಅಂತರರಾಜ್ಯ ನದಿ ವಿವಾದ ಕಾಯ್ದೆಯೂ ಸ್ಪಷ್ಟವಾಗಿದೆ. ಬಿಜೆಪಿಯು ಎಂದಿಗೂ ರೈತರ ಪರವಾಗಿರಲಿದ್ದು, ಅಣೆಕಟ್ಟು ನಿರ್ಮಿಸಲು ಅವಕಾಶ ಕೊಡುವುದಿಲ್ಲ. ಕರ್ನಾಟಕ ಸರ್ಕಾರ ಇದನ್ನು ಕೈಬಿಡಬೇಕು ಎಂದು ಪ್ರತಿಪಾದಿಸಿದರು.

ಸೆಪ್ಟೆಂಬರ್‌ನಿಂದ ಲಭ್ಯ: ಬಿಬಿಐಎಲ್ ಹೇಳಿಕೆ

ಮಾಲೂರಿನಲ್ಲಿ ಕೋವ್ಯಾಕ್ಸಿನ್ ಲಸಿಕೆ ತಯಾರಿಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೋಲಾರ ಜಿಲ್ಲೆಯ ಮಾಲೂರು ಮತ್ತು ಗುಜರಾತ್‌ನ ಅಂಕ್ಲೇಶ್ವರ್‌ದಲ್ಲಿ ತಯಾರಿಸುತ್ತಿರುವ ಕೋವ್ಯಾಕ್ಸಿನ್ ಲಸಿಕೆಯ ಡೋಸ್‌ಗಳು ಸೆಪ್ಟೆಂಬರ್‌ನಿಂದ ಲಭ್ಯವಾಗಲಿವೆ ಎಂದು ಭಾರತ್ ಬಯೋಟೆಕ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಬಿಬಿಐಎಲ್) ತಿಳಿಸಿದೆ.

ಹೈದರಾಬಾದ್ ಮೂಲದ ಈ ಕಂಪನಿ, ಮಾಲೂರು ಮತ್ತು ಅಂಕ್ಲೇಶ್ವರ್‌ದಲ್ಲಿ ಜೂನ್‌ನಿಂದ ಲಸಿಕೆ ತಯಾರಿಸುವ ಕಾರ್ಯವನ್ನು ಆರಂಭಿಸಿತ್ತು.

ಲಸಿಕೆಯನ್ನು ಸಾರ್ವಜನಿಕ ಬಳಕೆಗೆ ಬಿಡುಗಡೆ ಮಾಡಲು ಮೂರು ತಿಂಗಳು ಬೇಕಾಗುತ್ತದೆ. ತಯಾರಿಸಿದ ಬಳಿಕ ಪರೀಕ್ಷೆ ಕೈಗೊಳ್ಳಬೇಕು ಮತ್ತು ಸಂಬಂಧಿಸಿದ ಪ್ರಾಧಿಕಾರಗಳ

ಅನುಮೋದನೆ ಹಾಗೂ ವಿತರಣೆಗೆ 120 ದಿನಗಳ ಅಗತ್ಯವಿದೆ ಎಂದು ಕಂಪನಿ ತಿಳಿಸಿದೆ.

ಇದುವರೆಗೆ ಏಳು ಕೋಟಿ ಕೋವ್ಯಾಕ್ಸಿನ್ ಡೋಸ್‌ಗಳನ್ನು ಪೂರೈಸಲಾಗಿದೆ. ಗುಣಮಟ್ಟದ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಂಡಿಲ್ಲ ಎಂದು ಬಿಬಿಐಎಲ್ ಸ್ಪಷ್ಟಪಡಿಸಿದೆ.

‘ಕೋವ್ಯಾಕ್ಸಿನ್‌ನ ಪ್ರತಿ ಬ್ಯಾಚ್ ಅನ್ನು ಕಂಪನಿಯ ಪ್ರಯೋಗಾಲಯದಲ್ಲಿ 200ಕ್ಕೂ ಹೆಚ್ಚು ಗುಣಮಟ್ಟದ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ನಂತರ ಕೇಂದ್ರೀಯ ಔಷಧ ಪ್ರಯೋಗಾಲಯಕ್ಕೆ (ಸಿಡಿಎಲ್) ಸಲ್ಲಿಸಲಾಗುತ್ತದೆ. ಸಿಡಿಎಲ್ ಅನುಮೋದನೆ ಬಳಿಕವೇ ಲಸಿಕೆಯ ಬ್ಯಾಚ್‌ಗಳನ್ನು ವಾಣಿಜ್ಯ ಬಳಕೆಗೆ ಬಿಡುಗಡೆ ಮಾಡಲಾಗುತ್ತದೆ’ ಎಂದು ತಿಳಿಸಿದೆ.

ಐಸಿಎಂಆರ್‌ನ ರಾಷ್ಟ್ರೀಯ ವೈರಾಣು ಸಂಸ್ಥೆ ಮತ್ತು ಭಾರತ್ ಬಯೋಟೆಕ್ ಅಭಿವೃದ್ಧಿಸಿರುವ ಕೋವ್ಯಾಕ್ಸಿನ್‌ನ ತುರ್ತು ಬಳಕೆಗೆ ಜನವರಿಯಲ್ಲಿ ಅನುಮೋದನೆ ನೀಡಲಾಗಿತ್ತು. ಆದರೆ, ಲಸಿಕೆಯ ಸುರಕ್ಷತೆ ಮತ್ತು ಸಾಮರ್ಥ್ಯದ ಮೂರನೇ ಹಂತದ ಪ್ರಯೋಗದ ಫಲಿತಾಂಶಗಳು ಜುಲೈ ತಿಂಗಳಲ್ಲಿ ಲಭ್ಯವಾಗಿತ್ತು. ಕೋವಿಡ್–19 ವಿರುದ್ಧ ಕೋವ್ಯಾಕ್ಸಿನ್ ಲಸಿಕೆಯು ಒಟ್ಟಾರೆಯಾಗಿ ಶೇಕಡ 77.8ರಷ್ಟು ಪರಿಣಾಮಕಾರಿಯಾಗಿದೆ. ಸೋಂಕಿನ ತೀವ್ರ ಗಂಭೀರ ಪ್ರಕರಣಗಳಲ್ಲಿ ಶೇಕಡ 93.4ರಷ್ಟು ಪರಿಣಾಮಕಾರಿಯಾಗಿದೆ ಎಂದು ಕಂಪನಿ ಪ್ರತಿಪಾದಿಸಿದೆ.

ಮೊಟ್ಟೆ ಹಗರಣ: ವರದಿ ಸಲ್ಲಿಕೆಗೆ ಪಿಎಸಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾತೃಪೂರ್ಣ’ ಯೋಜನೆಯಡಿ ಏಕ ಟೆಂಡರ್ ಮೂಲಕ ಕೋಳಿ ಮೊಟ್ಟೆ ಖರೀದಿಗೆ ಮುಂದಾಗಿದ್ದು ಶಂಕೆ ಮೂಡಿಸಿದೆ. ಆದ್ದರಿಂದ, ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಾಗದ ಪತ್ರಗಳನ್ನು ಒಳಗೊಂಡ ಸಮಗ್ರ ವರದಿ ಸಲ್ಲಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಸೂಚನೆ ನೀಡಿದೆ.

‘ಪ್ರಜಾವಾಣಿ’ ಜತೆ ಮಾತನಾಡಿದ ಸಮಿತಿಯ ಅಧ್ಯಕ್ಷ ರಾಮಲಿಂಗಾರೆಡ್ಡಿ ಅವರು, ಕೋಳಿ ಮೊಟ್ಟೆ ಹಗರಣದ ಬಗ್ಗೆ ಸಮಿತಿಯ ಸಭೆಯಲ್ಲಿ ಪ್ರಸ್ತಾಪಿಸಿ ಇಲಾಖೆ ಅಧಿಕಾರಿಗಳಿಂದ ವಿವರ ಕೇಳಲಾಯಿತು ಎಂದು ಹೇಳಿದರು.

ಶಶಿಕಲಾ ಜೊಲ್ಲೆ ಇಲಾಖೆಯ ಸಚಿವೆಯಾಗಿದ್ದಾಗ ಕೋಳಿ ಮೊಟ್ಟೆ ಖರೀದಿ ಟೆಂಡರ್‌ನಲ್ಲಿ ಕಮಿಷನ್ ಕೇಳಿದ್ದರೆನ್ನಲಾದ ಕುಟುಕು ಕಾರ್ಯಾಚರಣೆಯ ವಿಡಿಯೊ ಬಹಿರಂಗವಾಗಿತ್ತು. ಏಕ ಟೆಂಡರ್‌ಗೆ ಸಚಿವ ಸಂಪುಟದಲ್ಲಿ ಪ್ರಸ್ತಾವವನ್ನೂ ಇಟ್ಟಿದ್ದರು. ಆದರೆ, ವಿಡಿಯೊ ಬಹಿರಂಗಗೊಂಡ ಬಳಿಕ ಸಂಪುಟಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಹಿಂದಕ್ಕೆ ಪಡೆಯಲಾಯಿತು. ಆ ಬಳಿಕ ಅವರು ಸ್ಥಳೀಯ ಮಟ್ಟದಲ್ಲೇ ಖರೀದಿಗೆ ನಿರ್ಧರಿಸಿದರು ಎಂದು ತಿಳಿಸಿದರು.

ಆದ್ದರಿಂದ ಈ ಎಲ್ಲ ವಿಚಾರಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಒದಗಿಸಬೇಕು ಎಂದು ಸಭೆಯಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದ್ದೇವೆ ಎಂದರು.

ನಿಯಮದ ಪ್ರಕಾರ ‘ಸೃಷ್ಟಿ’ ಮತ್ತು ‘ಮಾತೃಪೂರ್ಣ’ ಯೋಜನೆಗಳಡಿ ಅಂಗನವಾಡಿ ಕೇಂದ್ರಗಳ ಮೂಲಕ ನೀಡಲಾಗುವ ಕೋಳಿ ಮೊಟ್ಟೆಯನ್ನು ಅಂಗನವಾಡಿ ಕಾರ್ಯಕರ್ತೆಯರೇ ಸ್ಥಳೀಯವಾಗಿ ಖರೀದಿಸಿ ಫಲಾನುಭವಿಗಳಿಗೆ ಒದಗಿಸಬೇಕು. ಖರೀದಿಸಲಾದ ಮೊಟ್ಟೆಯ ಹಣವನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬಾಲ ವಿಕಾಸ ಸಮಿತಿಯ ಜಂಟಿ ಖಾತೆಗೆ ಜಮೆ ಮಾಡುತ್ತಾರೆ.

ಆದರೆ, ಸಚಿವರು ಈ ನಿಯಮವನ್ನು ಉಲ್ಲಂಘಿಸಿ ಕೋಳಿ ಮೊಟ್ಟೆ ಪೂರೈಕೆಗೆ ಏಕ ಟೆಂಡರ್ ಕರೆದಿದ್ದರು. ಇದು ಸಾಕಷ್ಟು ಅನುಮಾನಗಳಿಗೆ ಕಾರಣವಾಗಿದೆ ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಕೊಳ್ಳೇಗಾಲ ಕ್ಷೇತ್ರದ ಬಿಎಸ್‌ಪಿ ಶಾಸಕ ಎನ್‌. ಮಹೇಶ್ ಬಿಜೆಪಿ ಸೇರ್ಪಡೆ

ಗಣೇಶ ಹಬ್ಬದ ಬಳಿಕ ಯಡಿಯೂರಪ್ಪ ರಾಜ್ಯ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷದ ಸಂಘಟನೆಗಾಗಿ ರಾಜ್ಯಾದ್ಯಂತ ಪ್ರವಾಸ ಮಾಡಲಿದ್ದು, ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸಿ ಮತ್ತೆ ಅಧಿಕಾರಕ್ಕೆ ತರುವ ತನಕ ವಿಶ್ರಮಿಸುವುದಿಲ್ಲ’ ಎಂದು ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಬಿಜೆಪಿ ಕಾರ್ಯಾಲಯದಲ್ಲಿ ಗುರುವಾರ ನಡೆದ ಕೊಳ್ಳೇಗಾಲ ಕ್ಷೇತ್ರದ ಬಿಎಸ್‌ಪಿ ಶಾಸಕ ಎನ್.ಮಹೇಶ್ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಗಣೇಶ ಹಬ್ಬದ ಬಳಿಕ ರಾಜ್ಯ ಪ್ರವಾಸ ಆರಂಭಿಸುವರು ಎಂದು ಮೂಲಗಳು ತಿಳಿಸಿವೆ.

‘ರಾಜ್ಯದಲ್ಲಿ ಪಕ್ಷದ ಸಂಘಟನೆ ದುರ್ಬಲವಾಗಿರುವ ಭಾಗದಲ್ಲಿ ಓಡಾಡಿ ಬಲಪಡಿಸುತ್ತೇನೆ. ಸಾಕಷ್ಟು ಜನ ಬಿಜೆಪಿ ತತ್ವ, ಸಿದ್ಧಾಂತಗಳನ್ನು ಒಪ್ಪಿ ಪಕ್ಷವನ್ನು ಸೇರುತ್ತಿದ್ದಾರೆ. ಪರಿಶಿಷ್ಟರು ಮತ್ತು ಹಿಂದುಳಿದವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಕ್ಕೆ ಕರೆ ತರುವ ಕೆಲಸ ಆಗಬೇಕು’ ಎಂದು ಹೇಳಿದರು.

ಶಾಸಕ ಎನ್‌.ಮಹೇಶ್ ಅವರನ್ನು ಪಕ್ಷದ ಧ್ವಜ ನೀಡುವ ಮೂಲಕ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಬಿಜೆಪಿಗೆ ಬರಮಾಡಿಕೊಂಡರು. ಬಿ.ವೈ.ವಿಜಯೇಂದ್ರ, ಸಚಿವ ಆರ್‌.ಅಶೋಕ, ಮಾಜಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಎಸ್‌.ಟಿ.ಸೋಮಶೇಖರ್ ಮತ್ತು ಗೋವಿಂದ ಕಾರಜೋಳ ಇದ್ದರು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಮಹೇಶ್ ಅವರು ಚಳವಳಿ ಹಿನ್ನೆಲೆಯಿಂದ ಬಂದವರು. ಅವರ ಸಂಘಟನಾ ಶಕ್ತಿ ದೊಡ್ಡ ಪ್ರಮಾಣದಲ್ಲಿದೆ. ಹೀಗಾಗಿ ಅವರು ಶಾಸಕರಾಗುವ ಮೊದಲೇ ದಲಿತ ಸಮುದಾಯದ ಹೃದಯವನ್ನು ಗೆದ್ದವರು. ಕೊಳ್ಳೇಗಾಲದಲ್ಲಿ ಎಲ್ಲ ಜನಾಂಗದವರು ಸೇರಿ ಅವರನ್ನು ಶಾಸಕರನ್ನಾಗಿ ಆರಿಸಿದ್ದಾರೆ’ ಎಂದರು.

‘ಮಹೇಶ್ ಅವರ ಚಿಂತನೆ ಮತ್ತು ಬಿಜೆಪಿ ಚಿಂತನೆ ವಿಭಿನ್ನ ಅಲ್ಲ. ಸರ್ವೇಜನ ಸುಖಿನೋ ಭವಂತು ಎಂಬ ನಮ್ಮ ಪಕ್ಷದ ಚಿಂತನೆ ಮನವರಿಕೆ ಆದ ಮೇಲೆಯೇ ಯಡಿಯೂರಪ್ಪ ಮುಖ್ಯಮಂತ್ರಿ ಆಗುವ ಸಂದರ್ಭದಲ್ಲಿ ಸ್ವಯಂ ಬೆಂಬಲ ನೀಡಿದರು’ ಎಂದರು.

ಬಿಜೆಪಿ ಸೇರ್ಪಡೆ ಬಳಿಕ ಮಾತನಾಡಿದ ಮಹೇಶ್, ‘ಬಿಜೆಪಿ ಸಿದ್ಧಾಂತವನ್ನು ಮುಕ್ತ ಮನಸ್ಸಿನಿಂದ ಒಪ್ಪಿದ್ದೇನೆ. ಪ್ರಧಾನಿ ಮೋದಿ ಮತ್ತು ಯಡಿಯೂರಪ್ಪ ಅವರ ನಾಯಕತ್ವ ಮೆಚ್ಚಿ ಪಕ್ಷ ಸೇರಿದ್ದೇನೆ. ಡಾ.ಅಂಬೇಡ್ಕರ್ ನನ್ನ ಪ್ರೇರಣಾ ಶಕ್ತಿ’ ಎಂದು ಹೇಳಿದರು.

ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಮಹೇಶ್ ಅವರಿಗೆ ಪಕ್ಷದ ಧ್ವಜ ನೀಡಿ ಸ್ವಾಗತಿಸಿದರು.

ಚಾಮರಾಜನಗರದ ಕಡೆ ವಿಜಯೇಂದ್ರ ನಡೆ: ‘ಚಾಮರಾಜನಗರ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಮಹೇಶ್ ಮತ್ತು ವಿಜಯೇಂದ್ರ ಅವರ ಶಕ್ತಿ ಒಟ್ಟಾದರೆ ಮುಂದಿನ ಚುನಾವಣೆಯಲ್ಲಿ ಎಲ್ಲ ಕ್ಷೇತ್ರಗಳನ್ನು ಗೆಲ್ಲಬಹುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಭಿಪ್ರಾಯಪಟ್ಟರು.

‘ಮೈಸೂರು ಮತ್ತು ಚಾಮರಾಜನಗರ ಭಾಗದಲ್ಲಿ ವಿಜಯೇಂದ್ರ ಯುವ ಶಕ್ತಿಯಾಗಿ ಹೊಮ್ಮಿದ್ದು, ಪಕ್ಷವನ್ನು ಕಟ್ಟುತ್ತಿದ್ದಾರೆ. ಈ ಎಲ್ಲ ಕಾರಣಗಳಿಗೆ ಬಿಜೆಪಿ ಸೇರಿದ್ದೇನೆಯೇ ಹೊರತು ಅಧಿಕಾರದ ಆಸೆಯಿಂದ ಅಲ್ಲ’ ಎಂದು ಎನ್.ಮಹೇಶ್ ಹೇಳಿದರು.

ಎಐಸಿಸಿಗೆ ಕಾಂಗ್ರೆಸ್ ನಿಯೋಗ ಆಗ್ರಹ

ಮಾದಿಗರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೆಚ್ಚಿನ ಸಂಖ್ಯೆಯಲ್ಲಿರುವ ಮಾದಿಗ ಸಮುದಾಯಕ್ಕೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಾರ್ಯಾಧ್ಯಕ್ಷ ಸ್ಥಾನ ನೀಡುವಂತೆ ಸಮುದಾಯದ ಕಾಂಗ್ರೆಸ್ ಮುಖಂಡರ ನಿಯೋಗ ಎಐಸಿಸಿ ವರಿಷ್ಠರಲ್ಲಿ ಮನವಿ ಮಾಡಿತು.

ಮಾಜಿ ಸಚಿವರಾದ ಎಚ್. ಆಂಜನೇಯ, ಆರ್.ಬಿ. ತಿಮ್ಮಾಪುರ, ರಾಜ್ಯಸಭೆ ಸದಸ್ಯ ಡಾ.ಎಲ್. ಹನುಮಂತಯ್ಯ, ಮಾಜಿ ಸಂಸದ ಕೆ.ಬಿ. ಕೃಷ್ಣಮೂರ್ತಿ ನೇತೃತ್ವದ ನಿಯೋಗವು ಗುರುವಾರ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಈ ಮನವಿ ಸಲ್ಲಿಸಿತು.

ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮಾದಿಗ ಸಮುದಾಯದ ಏಳ್ಗೆಗಾಗಿ ಪಕ್ಷ ಪ್ರಾತಿನಿಧ್ಯ ನೀಡಿ, ವಿಶೇಷ ಯೋಜನೆ ಜಾರಿಗೊಳಿಸಿದೆ. ಆದರೆ, ಆಡಳಿತಾರೂಢ ಬಿಜೆಪಿಯು ಸಮುದಾಯದ ಮತಗಳನ್ನು ಸೆಳೆಯಲು ವಿಶಿಷ್ಟ ತಂತ್ರ ರೂಪಿಸುತ್ತಿದೆ ಎಂದು ಅವರು ಹೇಳಿದರು.

ಬಿಜೆಪಿಯು ಮಾದಿಗ ಮುಖಂಡರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಸಚಿವ ಸ್ಥಾನ ಹಾಗೂ ವಿವಿಧ ಮಂಡಳಿಗಳ ಸದಸ್ಯತ್ವ ನೀಡಿ ಸೆಳೆಯುತ್ತಿದೆ. ಪಕ್ಷವು ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಮುದಾಯದ ಮುಖಂಡರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ಹಾಗೂ ಜಿಲ್ಲಾಮಟ್ಟದ ಪದಾಧಿಕಾರಿಗಳ ನೇಮಕಾತಿಯಲ್ಲೂ ಅವಕಾಶ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದರು.

ಅಸ್ಪೃಶ್ಯ ವರ್ಗಕ್ಕೆ ಸೇರುವ ಮಾದಿಗ ಸಮುದಾಯವು ಕಾಂಗ್ರೆಸ್‌ನ ಬಗ್ಗೆ ವಿಶ್ವಾಸ ಹೊಂದಿದೆ. ರಾಜಕೀಯ ಪ್ರಾತಿನಿಧ್ಯ ನೀಡುವ ಮೂಲಕ ಈ ನಿರ್ಲಕ್ಷಿತ ಸಮುದಾಯದ ಬೆಂಬಲ ಮುಂದುವರಿಯುವಂತೆ ನೋಡಿಕೊಳ್ಳಬೇಕು ಎಂದು ನಿಯೋಗದ ಮುಖಂಡರು ಮನವರಿಕೆ ಮಾಡಿದರು.

ಬಿಜೆಪಿಯು ವಿವಿಧ ರೀತಿಯ ಆಮಿಷವೊಡ್ಡಿ ಸಮುಯದಾಯದ ಯುವಕರನ್ನು ತನ್ನಡೆಗೆ ಸೆಳೆದೊಕೊಳ್ಳುವ ಪ್ರಯತ್ನ ನಡೆಸಿದೆ. ಆದರೆ ಅದಕ್ಕೆ ಬಲಿಯಾಗದ ಶೇ 95ರಷ್ಟು ಜನ ಪಕ್ಷ ನಿಷ್ಠೆ ಮುಂದುವರಿಸಿದ್ದಾರೆ. ಸಮುದಾಯದ ಬದ್ಧತೆ ಗುರುತಿಸಿ ಪ್ರಮುಖ ಹುದ್ದೆ ನೀಡಬೇಕು ಎಂದು ಅವರು ಮನವಿ ಮಾಡಿದರು.



ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರನ್ನು ರಾಜ್ಯಸಭೆ ಸದಸ್ಯ ಡಾ.ಎಲ್‌.ಹನುಮಂತಯ್ಯ ಅವರು ಗುರುವಾರ ನವದೆಹಲಿಯಲ್ಲಿ ಗೌರವಿಸಿದರು. ಕೆ.ಬಿ.ಕೃಷ್ಣಮೂರ್ತಿ, ಎಚ್‌.ಆಂಜನೇಯ, ಆರ್‌.ಬಿ.ತಿಮ್ಮಾಪುರ ಚಿತ್ರದಲ್ಲಿದ್ದಾರೆ

ಮುಖ್ಯಮಂತ್ರಿಗೆ ಮಂಜುನಾಥ್ ಪ್ರಸಾದ್ ಕಾರ್ಯದರ್ಶಿ

ಬೆಂಗಳೂರು: ಮುಖ್ಯಮಂತ್ರಿಯಾದ ಕೂಡಲೇ ಹಿಂದೆ ಆ ಸಚಿವಾಲಯದಲ್ಲಿದ್ದ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆ ಮಾಡಿಸಿದ್ದ ಬಸವರಾಜ ಬೊಮ್ಮಾಯಿ, ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಎನ್. ಮಂಜುನಾಥ್ ಪ್ರಸಾದ್ ಅವರನ್ನು ನೇಮಿಸಿಕೊಂಡಿದ್ದಾರೆ.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಇ.ವಿ. ರಮಣ ರೆಡ್ಡಿ ನೇಮಕ ಮಾಡಲಾಗಿತ್ತು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾದಾಗಲೂ ಅವರನ್ನೇ ಮುಂದುವರಿಸಿದ್ದರು.

ರೆಡ್ಡಿ ಅವರನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಮಂಜುನಾಥ್ ಪ್ರಸಾದ್ ಅವರನ್ನು ಮುಖ್ಯಮಂತ್ರಿ ಅವರ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ತರಲಾಗಿದೆ. ಜತೆಗೆ, ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಜಲ ಸಂಪನ್ಮೂಲ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಬಿಬಿಎಂಪಿ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ರಾಕೇಶ್ ಸಿಂಗ್ ಅವರನ್ನು ರಮಣರೆಡ್ಡಿ ಅವರ ಜಾಗ ನೇಮಿಸಲು ಸಿದ್ಧತೆ ನಡೆಯುತ್ತಿದೆ ಎಂದು ಹೇಳಲಾಗಿತ್ತು.

ಜಾವೇದ್ ಅಖ್ತರ್ ವರ್ಗಾವಣೆ: ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರನ್ನು ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಆರೋಗ್ಯ ಮತ್ತು ಕುಟುಂಬ ಇಲಾಖೆಯ ಹೊಣೆಯನ್ನು ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರನ್ನು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದೆ. ಅಲ್ಲದೆ, ವಿಪತ್ತು ನಿರ್ವಹಣೆ, ಭೂಮಿ ನಿರ್ವಹಣೆಯ ಹೊಣೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜ್ ಕುಮಾರ್ ಖತ್ರಿ ಅವರನ್ನು ಕೃಷಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2021–22/2310 ದಿನಾಂಕ: 04.08.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ **ಕೆ.ಕೆ.ಆರ್.ಡಿ.ಬಿ, ಯೋಜನೆಯಡಿ (04)** ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: **137441, 139163, 140354, 140318,** 2) ಕಾಮಗಾರಿ ಅಂದಾಜು ಮೊತ್ತ : ರೂ. ಕನಿಷ್ಟ **64.13 ಲಕ್ಷಗಳು ಗರಿಷ್ಠ 147.74 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಪ್ರೀ ಬಿಡ್ ಸಭೆ ದಿನಾಂಕ : **11.08.2021 (11.00 ಗಂಟೆ),** 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **12.08.2021 (17.30 ಗಂಟೆ),** 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **13.08.2021 (16.00 ಗಂಟೆ),** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **16.08.2021 (16.30 ಗಂಟೆ),** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **18.08.2021 (11.30 ಗಂಟೆ),** 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ. 10) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು. 11) ಅಂತರ್ಜಾಲ ತಾಣದ ವಿಳಾಸ : www.e-proc.Karnatak.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/503/ಎಂ.ಸಿ&ಎ/2021–22

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, “ಸಂಪರ್ಕ ಸೌಧ”, ಡಾ. ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇಮೇಲ್: cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕೆಆರ್‌ಡಿಸಿಎಲ್/ಐಎಫ್‌ಬಿ/2021–22/04 ದಿನಾಂಕ: 05.08.2021

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)

(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

1) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆಆರ್‌ಡಿಸಿಎಲ್), ಐಟಂದರದ ಟೆಂಡರ್ ಆಧಾರದ ಮೇಲೆ ದ್ವಿಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) (ಜಿಎಸ್‌ಟಿ ಸೇರಿ)	ಇಎಂಡಿ ಮೊತ್ತ (1.0% ಎಪಿಟಿ)	ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿದಂತೆ)
1	ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ನ್ಯಾಮತಿ ಪಟ್ಟಣದಲ್ಲಿ ಕುಂಬಾರ ಸ್ಟ್ರೀಟ್‌ನಿಂದ ಮತ್ತು ಆಂಜನೇಯ ದೇವಸ್ಥಾನ ರಸ್ತೆಯ 1.17 ಕಿ.ಮೀ. ಉದ್ದಕ್ಕೆ ರಸ್ತೆ ಸುಧಾರಣೆಗಳು ಮತ್ತು ರಾ.ಹೆ–48 & ರಾಹೆ–26ರ ಮುಖ್ಯರಸ್ತೆಗಳಿಗೆ ಬೀದಿದೀಪಗಳನ್ನು ಒದಗಿಸುವುದು ಹಾಗೂ ನ್ಯೂ ಜರ್ಸಿ ಬ್ಯಾರಿಯರ್‌ಗಳನ್ನು ಒದಗಿಸುವುದು.	2102.25	ಇ–ಪ್ರೊಕ್ ಮೂಲಕ ರೂ.1.00 ಲಕ್ಷ ಮತ್ತು ಬಿಡ್ಡಿಂಗ್ ದಾಖಲೆಯಲ್ಲಿ ಒದಗಿಸಲಾದ ಅನುಬಂಧದ ಪ್ರಕಾರ ಘೋಷಣೆಯನ್ನು ಒದಗಿಸಬೇಕು.	9 ತಿಂಗಳು

2) ಆಸಕ್ತ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಬಿಡ್ಡಿಂಗ್ ದಸ್ತಾವೇಜುಗಳನ್ನು ಪಡೆಯಬಹುದು ಹಾಗೂ ಜೊತೆಗೆ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ.

3) ಇಎಂಡಿಯೊಂದಿಗೆ ತಾಂತ್ರಿಕ ಬಿಡ್‌ಗಳನ್ನು ಹಾಗೂ ಆರ್ಥಿಕ ಬಿಡ್‌ಗಳನ್ನು ಬಿಡ್ಡಿಂಗ್ ದಸ್ತಾವೇಜಿನಲ್ಲಿರುವ ಸೂಚನೆಯಂತೆ ಸಲ್ಲಿಸಬೇಕು.

4) ವಿವಿಧ ಚಟುವಟಿಕೆಗಳ ಟೆಂಡರ್ ದಿನಾಂಕಗಳು ಈ ಕೆಳಗಿನಂತಿವೆ:

ಎ) ಬಿಡ್ ಪೂರ್ವ ಸಭೆಯನ್ನು **ದಿನಾಂಕ: 19.08.2021ರಂದು 15.00 ಗಂಟೆಗೆ ಕೆಆರ್‌ಡಿಸಿಎಲ್ ಕೇಂದ್ರ ಕಚೇರಿ, ಬೆಂಗಳೂರು** ಇಲ್ಲಿ ನಡೆಸಲಾಗುವುದು ಹಾಗೂ ಬಿಡ್ ಪೂರ್ವ ಆಕ್ಷೇಪಣೆಗಳನ್ನು ಬಿಡ್ ಪೂರ್ವ ಸಭೆಗೆ ಮುಂಚಿತವಾಗಿ ಸಲ್ಲಿಸಬೇಕಾಗಿರುತ್ತದೆ.

ಬಿ) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು **ದಿನಾಂಕ: 06.09.2021ರ 17.30 ಗಂಟೆವರೆಗೆ** ಸಲ್ಲಿಸಬಹುದು.

ಸಿ) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **08.09.2021ರಂದು 11.00 ಗಂಟೆಗೆ ಕೆಆರ್‌ಡಿಸಿಎಲ್ ಕೇಂದ್ರ ಕಚೇರಿಯಲ್ಲಿ** ತೆರೆಯಲಾಗುವುದು.

ಸೂಚನೆ: ಟೆಂಡರ್ ಷೆಡ್ಯೂಲ್‌ನಲ್ಲಿ ಯಾವುದೇ ಬದಲಾವಣೆ, ತಿದ್ದುಪಡಿ ಇದ್ದಲ್ಲಿ ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೇವಲ ಇ–ಪೋರ್ಟಲ್/ಕೆಆರ್‌ಡಿಸಿಎಲ್ ವೆಬ್‌ಸೈಟ್: http://www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

DIPR/DDU/YC/1063/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ಮುಖ್ಯ ಅಭಿಯಂತರರು
ಕೆಆರ್‌ಡಿಸಿಎಲ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನಾನು ನನ್ನನ್ನು ಯಾರೊಂದಿಗಾದರೂ ಹೋಲಿಸಿಕೊಳ್ಳುವ ಪ್ರಯತ್ನವನ್ನು ಎಂದಿಗೂ ಮಾಡಿಲ್ಲ.
–ಸಚಿನ್ ತೆಂಡೂಲ್ಕರ್

ಹಾಕಿ ತಂಡದ ಸಾಧನೆ ಸುವರ್ಣಯುಗಕ್ಕೆ ಬುನಾದಿಯಾಗಲಿ

ಭಾರತದ ಕ್ರೀಡಾಪ್ರೇಮಿಗಳ ನಾಲ್ಕು ದಶಕಗಳ ಕಾಯುವಿಕೆಗೆ ಸಿಹಿಫಲ ಲಭಿಸಿದೆ. ಒಲಿಂಪಿಕ್ಸ್‌ನಲ್ಲಿ ಭಾರತ ಹಾಕಿ ತಂಡವು ದೀರ್ಘಕಾಲದಿಂದ ಎದುರಿಸಿದ್ದ ಪದಕಗಳ ಬರವನ್ನು ಮನಪ್ರೀತ್ ಸಿಂಗ್ ಬಳಗವು ಟೋಕಿಯೊದಲ್ಲಿ ಕಂಚಿನ ಪದಕ ಜಯಿಸುವ ಮೂಲಕ ನೀಗಿಸಿದೆ. ಜರ್ಮನಿ ಎದುರಿನ ರೋಚಕ ಹಣಾಹಣಿಯಲ್ಲಿ ನಮ್ಮ ತಂಡ ಗೆಲುವು ದಾಖಲಿಸಿದೆ. ಈ ಸಾಧನೆಯು ಕ್ರೀಡಾಪ್ರೇಮಿಗಳಲ್ಲಿ ಪುಳಕ ಮೂಡಿಸಿದೆ. ಸಂಭ್ರಮಾಚರಣೆಗೆ ಕಾರಣವಾಗಿದೆ. ಇದು, ಹಾಕಿಯೊಂದಿಗೆ ನಾವು ಹೊಂದಿರುವ ಭಾವನಾತ್ಮಕ ನಂಟಿಗೆ ಸಾಕ್ಷಿ. ಈ ಕ್ರೀಡೆಯಲ್ಲಿ ಎಂಟು ಒಲಿಂಪಿಕ್ ಚಿನ್ನ ಗೆದ್ದ ದಾಖಲೆ ಮಾಡಿದ ಏಕೈಕ ರಾಷ್ಟ್ರ ಭಾರತ. ಆದರೆ 1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ ನಂತರ ಹಾಕಿ ಕ್ರೀಡೆಯಲ್ಲಿ ದೇಶದ ಸಾಧನೆಯು ಪಾತಾಳಕ್ಕೆ ಇಳಿಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಬದಲಾದ ನಿಯಮಗಳು, ಆಸ್ಟ್ರೋಟರ್ಫ್ ಬಳಕೆ, ಯುರೋಪಿಯನ್ನರ ವೇಗದ ಆಟ ಮತ್ತು ಭಾರತದ ಹಾಕಿ ಫೆಡರೇಷನ್‌ನ ಆಂತರಿಕ ಸಮಸ್ಯೆಗಳು ಆಟವನ್ನು ನಿಸ್ತೇಜಗೊಳಿಸಿದ್ದು ಸುಳ್ಳಲ್ಲ. ಅದರಲ್ಲೂ 2008ರ ಬೀಜಿಂಗ್ ಒಲಿಂಪಿಕ್ಸ್‌ಗೆ ತಂಡ ಅರ್ಹತೆಯನ್ನೇ ಗಳಿಸಲು ವಿಫಲವಾಗಿತ್ತು. ತದನಂತರ ತಂಡವನ್ನು ಮರಳಿ ಕಟ್ಟುವ ಪ್ರಯತ್ನ ಆರಂಭವಾಯಿತು. ಈಗ ಪದಕದ ಫಲ ದೊರೆತಿದೆ. ಭಾರತ ತಂಡದ ಸಾಧನೆ ನಿಜಕ್ಕೂ ಅಭಿನಂದನಾರ್ಹ. ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಕಳೆದ ಒಂದೂವರೆ ವರ್ಷದಿಂದ ಹಾಕಿ ಆಟಗಾರರಿಗೆ ಅಭ್ಯಾಸಕ್ಕೆ ಹೆಚ್ಚು ಅವಕಾಶಗಳು ದೊರೆತಿಲ್ಲ. ವಿದೇಶ ಪ್ರವಾಸಗಳು, ಟೂರ್ನಿಗಳೂ ಹೆಚ್ಚು ನಡೆದಿಲ್ಲ. ಈ ಅವಧಿಯಲ್ಲಿ ಪುರುಷ ಮತ್ತು ಮಹಿಳಾ ಹಾಕಿ ತಂಡಗಳು ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದ ವಸತಿ ನಿಲಯದಲ್ಲಿ ಹೆಚ್ಚು ಸಮಯ ಕಳೆದವು. ಕೆಲವರಿಗೆ ಕೊರೊನಾ ಸೋಂಕು ಕೂಡ ಕಾಡಿತ್ತು. ಈ ಎಲ್ಲ ಸವಾಲುಗಳ ನಡುವೆ ತಮ್ಮ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಕಾಪಾಡಿಕೊಂಡು ಪದಕ ಗೆದ್ದಿರುವುದು ಕಡಿಮೆ ಸಾಧನೆಯಲ್ಲ. 1972ರಲ್ಲಿ ಕಂಚು ಗೆದ್ದ ನಂತರ ಸೆಮಿಫೈನಲ್ ಪ್ರವೇಶಿಸಲೂ ತಂಡಕ್ಕೆ ಸಾಧ್ಯವಾಗಿರಲಿಲ್ಲ. 1980ರ ಒಲಿಂಪಿಕ್ಸ್‌ನಲ್ಲಿ ಕೇವಲ ಆರು ತಂಡಗಳು ಸ್ಪರ್ಧಿಸಿದ್ದವು. ಆದ್ದರಿಂದ ನಾಕೌಟ್ ಹಂತ ಆಯೋಜನೆ ಆಗಿರಲಿಲ್ಲ. ಲೀಗ್ ಸುತ್ತಿನಲ್ಲಿ ಅಗ್ರ ಎರಡು ಸ್ಥಾನ ಗಳಿಸಿದ್ದ ತಂಡಗಳು ಫೈನಲ್ ಆಡಿದ್ದವು. ಈ ಬಾರಿ ಆ ಕೊರಗು ಕೂಡ ಕಳೆದುಹೋಯಿತು. ಫೈನಲ್ ಪ್ರವೇಶಿಸುವ ಆಸೆಯೂ ಚಿಗುರಿತ್ತು. ಆದರೆ ನಾಲ್ಕರ ಘಟ್ಟದಲ್ಲಿ ಸೋಲು ಎದುರಾಯಿತು. ಆ ಬಳಿಕ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಆಟಗಾರರು ಪುಟಿದೆದ್ದ ರೀತಿ ಅಮೋಘವಾದದ್ದು. 2012ರಿಂದ ತಂಡದಲ್ಲಿರುವ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರ ಅನುಭವ ತಂಡಕ್ಕೆ ಬಹಳಷ್ಟು ನೆರವಾಯಿತು. ಅನುಭವಿ ಮತ್ತು ಯುವ ಆಟಗಾರರ ನಡುವಿನ ಸಮನ್ವಯವು ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿತು. ಈ ಸಲ ಘಟಾನುಘಟಿ ತಂಡಗಳನ್ನು ದಿಟ್ಟತನದಿಂದ ಎದುರಿಸಲು ಮುಖ್ಯ ಕೋಚ್, ಆಸ್ಟ್ರೇಲಿಯಾದ ಗ್ರಹಾಂ ರೀಡ್, ದಕ್ಷಿಣ ಆಫ್ರಿಕಾದ ಅನಾಲಿಟಿಕಲ್ ಕೋಚ್ ಗ್ರೆಗ್ ಕ್ಲಾರ್ಕ್ ಮತ್ತು ಸಹಾಯಕ ಕೋಚ್ ಶಿವೇಂದ್ರ ಸಿಂಗ್ ಅವರ ಮಾರ್ಗದರ್ಶನ ನೆರವಾಯಿತು. ವಿದೇಶಿ ಕೋಚ್‌ಗಳಿಂದ ಭಾರತ ಹಾಕಿಯ ಪುನರುತ್ಥಾನ ಸಾಧ್ಯವಿಲ್ಲವೆಂಬ ಮಾತುಗಳನ್ನು ರೀಡ್ ಸುಳ್ಳು ಮಾಡಿ ತೋರಿಸಿದ್ದಾರೆ.

ಮಹಿಳೆಯರ ಹಾಕಿ ತಂಡದ ಐತಿಹಾಸಿಕ ಸಾಧನೆಯಲ್ಲಿಯೂ ವಿದೇಶಿ ಕೋಚ್ ಸ್ಯೋರ್ಡ್ ಮರೈನ್ ಅವರ ಕೊಡುಗೆ ಇದೆ. ರಾಣಿ ರಾಂಪಾಲ್ ನಾಯಕಿಯಾಗಿರುವ ತಂಡವು ಇಂದು (ಆ. 6) ನಡೆಯಲಿರುವ ಪಂದ್ಯದಲ್ಲಿ ಕಂಚಿನ ಪದಕಕ್ಕಾಗಿ ಸೆಣಸಲಿದೆ. ಬಡತನದ ಬೇಗೆ, ಸಾಮಾಜಿಕ ಕಟ್ಟಳೆಗಳನ್ನೆಲ್ಲ ಮೀರಿ ಬಂದಿರುವ ಹೆಣ್ಣುಮಕ್ಕಳು ಈ ತಂಡದಲ್ಲಿದ್ದಾರೆ. ಅವರೆಲ್ಲರೂ ತಮ್ಮ ಪ್ರತಿಭೆ ಮತ್ತು ಛಲದ ಮೂಲಕ ಮಹಿಳೆಯರಿಗೆ ಪ್ರೇರಣೆಯಾಗಿ ಹೊರಹೊಮ್ಮಿದ್ದಾರೆ. ಹಾಕಿ ಆಟವು ಈ ಮಟ್ಟಕ್ಕೆ ಬೆಳೆಯಲು ಒಡಿಶಾ ರಾಜ್ಯದ ಕಾರ್ಯವೂ ಗಮನಾರ್ಹ. ಕಳೆದ ಆರು ವರ್ಷಗಳಲ್ಲಿ ಅಲ್ಲಿ ವಿಶ್ವಕಪ್ ಹಾಕಿ ಟೂರ್ನಿ ಸೇರಿದಂತೆ ಪ್ರಮುಖ ಅಂತರರಾಷ್ಟ್ರೀಯ ಟೂರ್ನಿಗಳು ಆಯೋಜನೆಯಾದವು. ಬುಡಕಟ್ಟು ಸಮುದಾಯದ ಪ್ರತಿಭೆಗಳನ್ನು ಆಯ್ಕೆ ಮಾಡಿ ತರಬೇತಿ ನೀಡಲಾಯಿತು. ಬೇರೆ ರಾಜ್ಯಗಳಿಗೂ ಇದು ಮಾದರಿಯಾಗಬಲ್ಲದು. ಸತತ ಎರಡು ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ ದೇಶದ ಮೊದಲ ಮಹಿಳೆ, ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು, ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದ ಮಣಿಪುರದ ಮೀರಾಬಾಯಿ ಚಾನು, ಬಾಕ್ಸಿಂಗ್‌ನಲ್ಲಿ ಲವ್ಲಿನಾ ಬೋರ್ಗೊಹೈನ್, ಡಿಸ್ಕಸ್ ಥ್ರೋನಲ್ಲಿ ಆರನೇ ಸ್ಥಾನ ಗಳಿಸಿದ ಕಮಲ್‌ಪ್ರೀತ್ ಕೌರ್, ಬೆಳ್ಳಿ ಪದಕ ವಿಜೇತ ಕುಸ್ತಿಪಟು ರವಿಕುಮಾರ ದಹಿಯಾ ಅವರ ಸಾಧನೆಗಳು ಯುವಸಮೂಹಕ್ಕೆ ಹೊಸ ಪ್ರೇರಣೆ ನೀಡಬಲ್ಲವು. ಈ ಎಲ್ಲ ಸಾಧನೆಗಳ ಜೊತೆಗೆ 'ರಾಷ್ಟ್ರೀಯ ಕ್ರೀಡೆ' ಹಾಕಿ ಪುನರುತ್ಥಾನದ ಹಾದಿ ಹಿಡಿದಿರುವುದು ಆಶಾದಾಯಕ. ಮತ್ತೊಂದು ಸುವರ್ಣಯುಗಕ್ಕೆ ಇದು ಮುನ್ನುಡಿಯಾಗಬೇಕು. ಯಶಸ್ಸಿನ ಶ್ರೇಯ ಹಂಚಿಕೊಳ್ಳಲು ಮುಗಿಬೀಳುವ ಪಟ್ಟಭದ್ರ ಹಿತಾಸಕ್ತಿಗಳನ್ನು ದೂರವಿಡಬೇಕು. ಕ್ರೀಡಾ ಆಡಳಿತದಲ್ಲಿ ವೃತ್ತಿಪರತೆ ಮತ್ತು ಪಾರದರ್ಶಕತೆ ತರಬೇಕು. ಆಗಮಾತ್ರ ಭವಿಷ್ಯದಲ್ಲಿ ಭಾರತವನ್ನು ಕ್ರೀಡಾರಾಷ್ಟ್ರವನ್ನಾಗಿ ಮಾಡುವ ಸಂಕಲ್ಪ ಈಡೇರಲು ಸಾಧ್ಯ. ದೇಶದಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ಪ್ರತಿಭಾನ್ವಿತರನ್ನು ಬೆಳೆಸುವ ಇಚ್ಛಾಶಕ್ತಿ ಬೇಕಷ್ಟೇ. ಆಗಮಾತ್ರ ಒಲಿಂಪಿಕ್ ಸಾಧಕರ ಶ್ರಮಕ್ಕೆ ತಕ್ಕ ಗೌರವ ನೀಡಿದಂತಾಗುತ್ತದೆ.

ಭವಿಷ್ಯದಲ್ಲಿ ಭಾರತವನ್ನು ಕ್ರೀಡಾರಾಷ್ಟ್ರವನ್ನಾಗಿ ಮಾಡುವ ಸಂಕಲ್ಪ ಈಡೇರಬೇಕಾದರೆ, ಕ್ರೀಡಾ ಆಡಳಿತದಲ್ಲಿ ವೃತ್ತಿಪರತೆ ಮತ್ತು ಪಾರದರ್ಶಕತೆಯನ್ನು ತರಲೇಬೇಕು

ದಿನದ ಟ್ವೀಟ್

ನಾಚಿಕೆಗೇಡಿನ ಕೃತ್ಯ

ಕೊರೊನಾದಂಥ ವೈರಸ್‌ಗಿಂತಲೂ ಅತಿ ಹೆಚ್ಚು ಅಪಾಯಕಾರಿಯಾಗಿರುವ ಮತ್ತು ಶತಮಾನಗಳ ಬಳಿಕವೂ ವಿನಾಶಕಾರಿಯಾಗಿರುವ ವೈರಸ್ ಅಂದರೆ ಅದು ಜಾತಿ ವೈರಸ್! ವಂದನಾ ಕಟಾರಿಯಾ ಅವರನ್ನು ದಲಿತೆ ಎಂಬ ಕಾರಣಕ್ಕೆ ನಿಂದಿಸುವುದೇ?! ಈ ಕ್ರೀಡಾಪಟು ಪ್ರಶಂಸೆಗೆ ಮಾತ್ರ ಅರ್ಹರಾಗಿದ್ದಾರೆಯೇ ವಿನಾ ಖಂಡಿತವಾಗಿಯೂ ಜಾತಿ ಆಧಾರಿತ ಅವಮಾನ ಅಥವಾ ನಿಂದನೆಗೆ ಅಲ್ಲ! ಅಂಥ ಜಾತಿವಾದಿಗಳಿಂದ ಭಾರತ ನಾಚಿಕೆಪಡಬೇಕಾಗಿದೆ.

ರಾಕೇಶ್ ಶರ್ಮಾ, ಸಾಕ್ಷ್ಯಚಿತ್ರ ನಿರ್ದೇಶಕ

ಕಿಡಿನುಡಿ

ದೇಶದ ಯುವಕರು ಸತ್ಯವನ್ನು ಮಾತನಾಡಲು ಆರಂಭಿಸಿದ ದಿನವೇ ಮೋದಿ ನೇತೃತ್ವದ ಸರ್ಕಾರ ಕುಸಿಯುತ್ತದೆ. ಮೋದಿ ಪ್ರಧಾನಿ ಆಗಿರುವವರೆಗೂ ಈ ದೇಶದ ಯುವಕರಿಗೆ ಉದ್ಯೋಗ ಸಿಗುವುದಿಲ್ಲ.

ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 6-8-1996

• ಕಾವೇರಿ ವಿವಾದ: ಲಭ್ಯ ನೀರು ಹಂಚಿಕೆಗೆ 'ತಾತ್ಕಾಲಿಕ ಒಪ್ಪಂದ'

ಮದ್ರಾಸ್, ಆ. 5– ಉಭಯ ರಾಜ್ಯಗಳ ರೈತರ ಹಿತಾಸಕ್ತಿ ರಕ್ಷಣೆ ದೃಷ್ಟಿಯಿಂದ ಇರುವ ನೀರನ್ನು ಎರಡೂ ಕಡೆಯವರು ಪರಸ್ಪರ ಲಾಭದಾಯಕವಾಗಿ ಹಂಚಿಕೊಳ್ಳುವ 'ತಾತ್ಕಾಲಿಕ ವ್ಯವಸ್ಥೆ'ಗೆ ಕರ್ನಾಟಕ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹಾಗೂ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಇಂದು ಇಲ್ಲಿ ಒಪ್ಪುವ ಮೂಲಕ, ಶತಮಾನದಷ್ಟು ಹಳೆಯ ಶೀತಲ ಸಮರಕ್ಕೆ ತೆರೆ ಎಳೆದರು.

ಕಾವೇರಿ ವಿವಾದ ಬಗೆಹರಿಸಿಕೊಳ್ಳುವ ವಿಚಾರದಲ್ಲಿ ಇಬ್ಬರೂ ಮುಖ್ಯಮಂತ್ರಿಗಳು ಮಾತುಕತೆ ನಡೆಸುವಂತೆ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶಕ್ಕೆ ತಕ್ಕಂತೆ ಇಂದಿನ ಸಭೆ ನಡೆಯಿತು ಎಂದು ಪಟೇಲ್ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

• ಸಿಬಿಐ ತನಿಖೆಗೆ ಪ್ರಧಾನಿ ಆದೇಶ

ನವದೆಹಲಿ, ಆ. 5 (ಯುಎನ್ಐ)– ರಾಜಕೀಯ ನಾಯಕರ ದೂರವಾಣಿ ಕರೆಗಳನ್ನು ಕದ್ದಾಲಿಸಲಾಗುತ್ತಿದೆ ಎಂಬ ಆರೋಪದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಪ್ರಧಾನಿ ಎಚ್.ಡಿ. ದೇವೇಗೌಡರು ಕೇಂದ್ರ ತನಿಖಾ ದಳಕ್ಕೆ (ಸಿಬಿಐ) ಆದೇಶಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 6-8-1971

• ಅಪಮೌಲ್ಯಕ್ಕೆ ಮುನ್ನ ಬಿರ್ಲಾರಿಂದ ವಿನಿಮಯ ನಿಯಮ ಉಲ್ಲಂಘನೆ

ನವದೆಹಲಿ, ಆ. 5– ಬಿರ್ಲಾ ಸ್ವಾಮ್ಯಕ್ಕೆ ಸೇರಿದ ಹಿಂದೂಸ್ತಾನ್ ಮೋಟಾರ್ಸ್ ಕಂಪನಿಯು 1966ರ ಜೂನ್ 6ರಂದು 'ರೂಪಾಯಿ ಮೌಲ್ಯ ಇಳಿತವಾಗುವುದಕ್ಕೆ ಸ್ವಲ್ಪ ಮೊದಲು' ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ಮೂಲಕ ವಿದೇಶಿ ವಿನಿಮಯದ ವಹಿವಾಟೊಂದನ್ನು ನಡೆಸಿತೆಂದು ರಾಜ್ಯಸಭೆಗೆ ಇಂದು ತಿಳಿಸಲಾಯಿತು.

ಗೃಹ ಶಾಖೆಯ ರಾಜ್ಯ ಮಂತ್ರಿ ಶ್ರೀ ಆರ್. ಎನ್. ಮಿರ್ಧಾ ಅವರು ಶ್ರೀ ಕಲ್ಯಾಣರಾಯ್ ಅವರ ಒಂದು ಪ್ರಶ್ನೆಗೆ ಉತ್ತರ ಕೊಟ್ಟು, ಬಿರ್ಲಾ ಸ್ವಾಮ್ಯದ ಕೆಲವು ಸಂಸ್ಥೆಗಳು ವಿದೇಶಿ ವಿನಿಮಯದ ನಿಯಮಗಳನ್ನು ಉಲ್ಲಂಘಿಸಿರುವುದರ ಆರೋಪದ ಕುರಿತು ನಡೆಯುತ್ತಿರುವ ವಿಚಾರಣೆಯ ಒಂದು ಭಾಗವಾಗಿ ಈ ಪ್ರಕರಣದ ಬಗ್ಗೆ 'ಎನ್‌ಫೋರ್ಸ್‌ಮೆಂಟ್ ಡೈರೆಕ್ಟೊರೇಟ್' ತನಿಖೆ ನಡೆಸುತ್ತಿದೆ ಎಂದರು.

ಭೂಮಿಯ ಜೈವಿಕ ಸಂಪನ್ಮೂಲದ ಈ ವರ್ಷದ ಪುನರುತ್ಪಾದನಾ ಬಜೆಟ್ ಈಗಾಗಲೇ ಮುಗಿದುಹೋಗಿದೆ!

ಜೀವಿಪರಿಸ್ಥಿತಿ: ಕರಗಿದ ನಿಧಿ, 'ಸಾಲ'ದ ಹೊರೆ

ವಿಶ್ಲೇಷಣೆ

ಡಾ. ಎಚ್.ಆರ್. ಕೃಷ್ಣಮೂರ್ತಿ

ವರ್ಷದ ಎಲ್ಲ ತಿಂಗಳಿನಂತೆ ಆಗಸ್ಟ್ ಮಾಸದಲ್ಲೂ ಬರುವ ಸಂಭ್ರಮಭರಿತ ರಾಷ್ಟ್ರೀಯ ದಿನಾಚರಣೆಗಳತ್ತ ಒಮ್ಮೆ ಗಮನಹರಿಸಿ. ಆಗಸ್ಟ್ 8- ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭವಾದ ದಿನ, ಆಗಸ್ಟ್ 12- ವಿಶ್ವ ಯುವ ದಿನಾಚರಣೆ, ಆಗಸ್ಟ್ 15- ಸ್ವಾತಂತ್ರ್ಯೋತ್ಸವ, ಆಗಸ್ಟ್ 20- ಸದ್ಭಾವನಾ ದಿವಸ, ಆಗಸ್ಟ್ 22- ರಕ್ಷಾ ಬಂಧನ. ಈ ಪ್ರತಿಯೊಂದು ದಿನವೂ ವರ್ಷದ ಆಯಾ ತಿಂಗಳಿನಲ್ಲಿ ನಿಗದಿತ ದಿನಾಂಕದಂದೇ ಬರುತ್ತದೆ. ಆದರೆ ಈ ಎಲ್ಲವುಗಳಿಗಿಂತ ಸಂಪೂರ್ಣವಾಗಿ ಭಿನ್ನವಾದ ದಿನವೆಂದರೆ 'ಭೂಮಿಯ ಸಂಪನ್ಮೂಲಗಳ ಬಳಕೆ ಮಿತಿಮೀರಿದ ದಿನ' (ಅರ್ಥ್ ಓವರ್‌ಶೂಟ್ ಡೇ) ಅಥವಾ 'ಜೀವಿಪರಿಸ್ಥಿತಿ ಸಾಲದ ದಿನ' (ಇಕೊಲಾಜಿಕಲ್ ಡೆಟ್ ಡೇ).

ಈ ದಿನ ಪ್ರತಿವರ್ಷ ಬರುತ್ತದಾದರೂ ನಿರ್ದಿಷ್ಟ ದಿನಾಂಕದಂದೇ ಬರುವುದಿಲ್ಲ. ಮೊದಲ ಬಾರಿ ಬಂದದ್ದು 1970ರ ಡಿಸೆಂಬರ್ 30ರಂದು. ಆನಂತರ ಈ ದಿನ 1980ರಲ್ಲಿ ನವೆಂಬರ್ 4, 1990ರಲ್ಲಿ ಅಕ್ಟೋಬರ್ 10, 2000ದಲ್ಲಿ ಸೆಪ್ಟೆಂಬರ್ 22, 2010ರಲ್ಲಿ ಆಗಸ್ಟ್ 6, 2020ರಲ್ಲಿ ಆಗಸ್ಟ್ 22ರಂದು ಬಂದಿದೆ. ಇದೀಗ 2021ರಲ್ಲಿ ಜುಲೈ 29ರಂದು ಬಂದಾಗಿದೆ. ಅಂದಹಾಗೆ ಇದು ಸಂಭ್ರಮಾಚರಣೆಯ ದಿನವಲ್ಲ. ನಮ್ಮ ಅವಿವೇಕವನ್ನು ಎತ್ತಿ ತೋರಿ, ಎಚ್ಚರಿಸುವ ದಿನ.

ಮನುಷ್ಯನೂ ಸೇರಿದಂತೆ ಈ ಜಗತ್ತಿನ ಎಲ್ಲ ಜೀವಿ ಪ್ರಭೇದಗಳಿಗೆ ಆಹಾರ, ನೆಲೆ, ರಕ್ಷಣೆಗಳನ್ನು ಒದಗಿಸುವುದು ನಮ್ಮ ಭೂಮಿ. ನಮ್ಮ ಬದುಕಿಗೆ ಬೇಕಾದ ಸರ್ವಸಮಸ್ತ ವಸ್ತುಗಳೂ ದೊರೆಯುವುದು ಪ್ರಕೃತಿಯಿಂದ. ಮರಗಿಡಗಳು, ಜಲಚರಗಳು, ವನ್ಯಜೀವಿಗಳು, ಸಾಕುಪ್ರಾಣಿಗಳು, ಕೃಷಿ ಉತ್ಪನ್ನಗಳೆಲ್ಲವೂ ಸೇರಿ ಜೈವಿಕ ಸಂಪನ್ಮೂಲ ಎನ್ನಿಸಿಕೊಳ್ಳುತ್ತವೆ. ಜೈವಿಕ ಸಂಪನ್ಮೂಲದ ಪ್ರಮುಖ ಲಕ್ಷಣವೆಂದರೆ ಅದರ ಪುನರುತ್ಪಾದನಾ ಸಾಮರ್ಥ್ಯ. ಹೀಗಾಗಿಯೇ ಇದು ನವೀಕರಿಸಬಹುದಾದ ಸಂಪನ್ಮೂಲ.

1961ರಲ್ಲಿ ಪ್ರಪಂಚದ ಒಟ್ಟು ಜನಸಂಖ್ಯೆ ಸುಮಾರು 308 ಕೋಟಿ. ಆ ಜನಸಂಖ್ಯೆ ಆ ವರ್ಷ ಬಳಸಿಕೊಂಡ ಒಟ್ಟು ಜೈವಿಕ ಸಂಪನ್ಮೂಲದ ಪ್ರಮಾಣ, ಆ ವರ್ಷ ಭೂಮಿಯ ನಿಸರ್ಗ ವ್ಯವಸ್ಥೆ ಉತ್ಪಾದಿಸಿದ ಒಟ್ಟು ಸಂಪನ್ಮೂಲದ ಶೇ 66ರಷ್ಟು ಮಾತ್ರ. ಉಳಿದ ಶೇ 34ರಷ್ಟು ಭಾಗ ಸಂಪನ್ಮೂಲ 'ಜೀವಿಪರಿಸ್ಥಿತಿ ನಿಧಿ'ಯಾಗಿ (ಇಕೊಲಾಜಿಕಲ್ ರಿಸರ್ವ್) ಪ್ರಕೃತಿಯಲ್ಲೇ ಉಳಿದಿತ್ತು. 1962ರ ಅಂತ್ಯದ ವೇಳೆಗೆ ಜನಸಂಖ್ಯೆ 314 ಕೋಟಿಗಳಿಗೇರಿತು. ಆ ವರ್ಷ ಭೂಮಿ ಉತ್ಪಾದಿಸಿದ ಒಟ್ಟು ಸಂಪನ್ಮೂಲದ ಶೇ 70ರಷ್ಟು ಭಾಗ ಬಳಕೆಯಾಗಿ, ಶೇ 30ರಷ್ಟು ಭಾಗ ಕಷ್ಟಕಾಲಕ್ಕೆ ಬೇಕಾದ ಜೀವಿಪರಿಸ್ಥಿತಿ ನಿಧಿಯಾಗಿ ಪ್ರಕೃತಿಯಲ್ಲಿ ಉಳಿಯಿತು.

'ಹೆಚ್ಚುವ ಜನಸಂಖ್ಯೆ, ಹೆಚ್ಚಿನ ಸಂಪನ್ಮೂಲದ ಬಳಕೆ, ಜೀವಿಪರಿಸ್ಥಿತಿ ನಿಧಿಯಾಗಿ ಪ್ರಕೃತಿಯಲ್ಲೇ ಉಳಿಯುವ ನೈಸರ್ಗಿಕ ಸಂಪನ್ಮೂಲದ ಪ್ರಮಾಣದಲ್ಲಿ ಇಳಿಕೆ'- ಈ ಪ್ರವೃತ್ತಿ ವರ್ಷ ವರ್ಷವೂ ಮುಂದುವರಿಯಿತು. 1970ರ ಅಂತ್ಯದ ವೇಳೆಗೆ ಪ್ರಪಂಚದ ಜನಸಂಖ್ಯೆ 354 ಕೋಟಿಯನ್ನು ಮುಟ್ಟಿದಾಗ, ಪ್ರಕೃತಿ ಆ ವರ್ಷ ಉತ್ಪಾದಿಸಿದ ಅಷ್ಟೂ ಸಂಪನ್ಮೂಲ ಆ ವರ್ಷವೇ ಬಳಕೆಯಾಗಿ, ಪ್ರತಿವರ್ಷವೂ ಜೀವಿಪರಿಸ್ಥಿತಿ ನಿಧಿಗೆ ಸೇರುತ್ತಿದ್ದ ಉಳಿತಾಯವಾದ ಸಂಪನ್ಮೂಲದ ಪ್ರಮಾಣ ಶೂನ್ಯಕ್ಕಿಳಿಯಿತು. 1971ರಿಂದ ಮುಂದೆ ನಮ್ಮ ಭೂಮಿ ಪ್ರತಿವರ್ಷ ಉತ್ಪಾದಿಸುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಾವು ಜೈವಿಕ ಸಂಪನ್ಮೂಲಗಳನ್ನು ಬಳಸುತ್ತಿದ್ದೇವೆ. 2021ರಲ್ಲಿ ನಮ್ಮ ಭೂಮಿ ಉತ್ಪಾದಿಸುವುದಕ್ಕಿಂತ ಶೇ 74ರಷ್ಟು ಹೆಚ್ಚಿನ ಸಂಪನ್ಮೂಲವನ್ನು ನಾವು ಬಳಸಲಿದ್ದೇವೆ. ಈ ಹೆಚ್ಚಿನ ಭಾಗ ನಮಗೆ ದೊರೆಯುತ್ತಿರುವುದು ಜೀವಿಪರಿಸ್ಥಿತಿ ನಿಧಿಯಿಂದ. ಹೀಗಾಗಿ, ಆಪತ್ಕಾಲಕ್ಕೆಂದು ರಕ್ಷಿಸಿ ಟ್ಟಿದ್ದ ಈ ಅಮೂಲ್ಯ ನಿಧಿ ತ್ವರಿತಗತಿಯಲ್ಲಿ ಕರಗುತ್ತಿದೆ.

ಆಧುನಿಕ ಜೀವನಶೈಲಿಯಿಂದ ನಾವು ಪ್ರಕೃತಿಗೆ ಹೊರೆಯಾಗುತ್ತಿದ್ದೇವೆ. ಪ್ರಕೃತಿಯ ಮೇಲೆ ಭಾರ ಹೊರಿಸುತ್ತಿದ್ದೇವೆ. ಪ್ರಕೃತಿ, ಪರಿಸರಗಳ ಮೇಲೆ ನಮ್ಮ ಹೆಜ್ಜೆಯ ಗುರುತು ಮೂಡಿಸುತ್ತಿದ್ದೇವೆ. ಈ ಹೆಜ್ಜೆಯ ಗುರುತು ಕಾಣಿಸುವುದಿಲ್ಲ. ಆದರೆ ಅದನ್ನು ಲೆಕ್ಕಹಾಕಬಹುದು. ಇದೇ 'ಜೀವಿಪರಿಸ್ಥಿತಿ ಹೆಜ್ಜೆ ಗುರುತು' (ಇಕೊಲಾಜಿಕಲ್ ಫುಟ್‌ಪ್ರಿಂಟ್). ಪ್ರಕೃತಿಯ ಯಾವ ಸಂಪನ್ಮೂಲಗಳನ್ನು ಯಾವ ಪ್ರಮಾಣದಲ್ಲಿ ಬಳಸಿಕೊಳ್ಳುತ್ತೇವೆ, ಯಾವ ಪ್ರಮಾಣದಲ್ಲಿ ತ್ಯಾಜ್ಯವಸ್ತುಗಳನ್ನು ಪ್ರಕೃತಿಗೆ ಸೇರಿಸುತ್ತೇವೆ ಮುಂತಾದವುಗಳನ್ನೂ ಆಧರಿಸಿ ಒಬ್ಬ ವ್ಯಕ್ತಿಯ, ಒಂದು ಕುಟುಂಬದ, ಒಂದು ಸಮುದಾಯದ, ಒಂದು ನಗರ, ದೇಶ, ಕಡೆಗೆ ಇಡೀ ಪ್ರಪಂಚದ ಒಟ್ಟು ಜನಸಂಖ್ಯೆಯ ಜೀವಿಪರಿಸ್ಥಿತಿ ಹೆಜ್ಜೆ ಗುರುತನ್ನು ಗಣನೆ ಮಾಡಬಹುದು. ಇದನ್ನು 'ಗ್ಲೋಬಲ್ ಹೆಕ್ಟೇರ್ ಪರ್ ಕ್ಯಾಪಿಟಾ' ಎಂಬ ಮಾನದಿಂದ ಅಳೆಯಲಾಗುತ್ತದೆ (ಜಿಎಚ್‌ಎ/ ಕ್ಯಾಪಿಟಾ) ವ್ಯಕ್ತಿಯೊಬ್ಬನ ಒಂದು ವರ್ಷದ ಎಲ್ಲ ಸಂಪನ್ಮೂಲಗಳ ಅಗತ್ಯವನ್ನೂ ಪೂರೈಸಲು ಬೇಕಾದ ಜೈವಿಕ ಉತ್ಪಾದನೆಯ ಸಾಮರ್ಥ್ಯವಿರುವ ನೆಲ ಮತ್ತು ನೀರಿನ ಪ್ರಮಾಣವನ್ನು ಇದು ಅಳೆಯುತ್ತದೆ. ಉದಾಹರಣೆಗೆ, ಅಮೆರಿಕದ ಪ್ರಜೆಯ ಜೀವಿಪರಿಸ್ಥಿತಿ ಹೆಜ್ಜೆ ಗುರುತಿನ ಪ್ರಮಾಣ 8 ಜಿಎಚ್‌ಎ/ ಕ್ಯಾಪಿಟಾ. ಜಪಾನ್ 5.1, ಬ್ರೆಜಿಲ್ 2.9, ಚೀನಾ 2.2, ಭಾರತ 0.9.

ಜಗತ್ತಿನ ಎಲ್ಲ ಜನರೂ ಅಮೆರಿಕದ ಪ್ರಜೆಗಳ ಜೀವನಶೈಲಿಯನ್ನೇ ಅನುಸರಿಸಿದರೆ, ಎಲ್ಲರ ಜೈವಿಕ ಸಂಪನ್ಮೂಲಗಳ ಬೇಡಿಕೆಯನ್ನು ಪೂರೈಸಲು ನಾಲ್ಕು ಭೂಮಿಗಳು ಬೇಕಾಗುತ್ತವೆ. ಆದರೆ ನಮಗಿರುವುದು ಒಂದೇ ಭೂಮಿ!

ಇಡೀ ಮಾನವ ಜನಾಂಗದ ಜೀವಿಪರಿಸ್ಥಿತಿ ಹೆಜ್ಜೆ ಗುರುತನ್ನು ಲೆಕ್ಕಹಾಕುವ ಕೆಲಸವನ್ನು 'ಗ್ಲೋಬಲ್ ಫುಟ್‌ಪ್ರಿಂಟ್ ನೆಟ್‌ವರ್ಕ್' ಎಂಬ ಸ್ವಯಂಸೇವಾ ಸಂಸ್ಥೆ ಮಾಡುತ್ತದೆ. ಜಗತ್ತಿನ 50 ದೇಶಗಳು, 30 ಬೃಹತ್ ನಗರಗಳು ಮತ್ತು 70 ಜಾಗತಿಕ ಸಂಸ್ಥೆಗಳ ವಿಜ್ಞಾನಿಗಳು, ತಂತ್ರಜ್ಞರು, ಅರ್ಥಶಾಸ್ತ್ರಜ್ಞರು ಮುಂತಾದವರ ಸಹಭಾಗಿತ್ವದಲ್ಲಿ ಕೆಲಸ ಮಾಡುವ ಈ ಸಂಸ್ಥೆ, ಪ್ರತಿವರ್ಷವೂ ಇಡೀ ಪ್ರಕೃತಿ ಒಟ್ಟಾಗಿ ಉತ್ಪಾದಿಸುವ ಸಂಪನ್ಮೂಲದ ಪ್ರಮಾಣ, ಪ್ರಕೃತಿಗೆ ಸೇರುವ ವ್ಯರ್ಥವಸ್ತುಗಳ ಪ್ರಮಾಣ ಮುಂತಾದವುಗಳನ್ನು ಲೆಕ್ಕಹಾಕಿ, ಇಡೀ ಮಾನವ ಜನಾಂಗದ ಜೀವಿಪರಿಸ್ಥಿತಿ ಹೆಜ್ಜೆ ಗುರುತನ್ನು ಗಣನೆ ಮಾಡಿ ಕಡೆಗೆ 'ಅರ್ಥ್ ಓವರ್ ಶೂಟ್ ಡೇ' ದಿನಾಂಕವನ್ನು ನಿರ್ಧರಿಸಿ, ಜಾಗತಿಕ ಮಟ್ಟದಲ್ಲಿ ಪ್ರಕಟಿಸುತ್ತದೆ.

2021ರ ಈ ವರ್ಷದಲ್ಲಿ 'ಅರ್ಥ್ ಓವರ್‌ಶೂಟ್ ಡೇ' ಜುಲೈ 29ರಂದು ಬಂದಾಗಿದೆ. ಹಾಗಾದರೆ ಏನಿದರ ಅರ್ಥ ಮತ್ತು ಮಹತ್ವ? 2021ರ ವರ್ಷದಲ್ಲಿ ಭೂಮಿ ಉತ್ಪಾದಿಸಲಿರುವ ಅಷ್ಟೂ ಜೈವಿಕ ಸಂಪನ್ಮೂಲವನ್ನು ಜುಲೈ 29ರಂದೇ, ಅಂದರೆ ವರ್ಷದ ಮೊದಲ 214 ದಿನಗಳಲ್ಲೇ ಮಾನವಜನಾಂಗ ಬಳಸಿ ಮುಗಿಸಿದೆ. ಅದು, ಭೂಮಿಯ ಜೈವಿಕ ಸಂಪನ್ಮೂಲದ ಪುನರುತ್ಪಾದನಾ ಬಜೆಟ್ ಸಂಪೂರ್ಣವಾಗಿ ಮುಗಿದ ದಿನ. ಅಲ್ಲಿಂದ ಮುಂದೆ, ಅಂದರೆ ಜುಲೈ 30ರಿಂದ ನಾವು ಬಳಸುತ್ತಿರುವ ಸಂಪನ್ಮೂಲವು ಜೀವಿಪರಿಸ್ಥಿತಿ ನಿಧಿಯಿಂದ ಎರವಲು ಪಡೆದದ್ದು! ಈ ಸಾಲಕ್ಕೆ ನಾವು ಅರಣ್ಯ ನಾಶ, ಮಣ್ಣಿನ ಸವೆತ, ಅತಿವೃಷ್ಟಿ, ಅನಾವೃಷ್ಟಿ, ಜಾಗತಿಕ ತಾಪಮಾನದ ಏರಿಕೆ, ವಾಯುಗುಣ ಬದಲಾವಣೆ ಮುಂತಾದವುಗಳ ರೂಪದಲ್ಲಿ ಬಹಳ ದುಬಾರಿ ಬಡ್ಡಿಯನ್ನು ಕಟ್ಟುತ್ತಿದ್ದೇವೆ!

ನಿಸರ್ಗ ಸಂಪನ್ಮೂಲಗಳ ಬಳಕೆ ಒಂದೇ ಸಮನೆ ಏರುತ್ತಿರುವುದರಿಂದ, ಮುಂದಿನ ವರ್ಷದ 'ಅರ್ಥ್ ಓವರ್ ಶೂಟ್ ಡೇ' ಜುಲೈ 29ಕ್ಕಿಂತ ಮುಂಚೆಯೇ ಬರುವುದರಲ್ಲಿ ಯಾವುದೇ ಸಂಶಯವಿಲ್ಲ. ಕಟ್ಟಕಡೆಗೊಮ್ಮೆ ಜನವರಿಯಲ್ಲೇ ಬರಬಹುದು! ನಮ್ಮ ಇಂದಿನ ಪರಿಸ್ಥಿತಿ ಗಾಬರಿಯಾಗುವಂತಿದೆ. ಅನೇಕ ಸಂಪನ್ಮೂಲಗಳು ಮುಗಿದುಹೋಗುವ ಸೂಚನೆಗಳು ಸ್ಪಷ್ಟವಾಗಿ ಕಂಡುಬರುತ್ತಿವೆ.

ಹಾಗೆ ಮುಗಿದುಹೋದರೆ ಮುಂದೇನು ಗತಿ? ಅಂಥ ಅಪಾಯವನ್ನು ತಪ್ಪಿಸಲು ನಮ್ಮ ಮುಂದಿರುವ ಏಕೈಕ ಮಾರ್ಗವೆಂದರೆ ನಿಸರ್ಗ ಸಂಪನ್ಮೂಲಗಳ ವಿವೇಕಯುತ ಬಳಕೆ. ನಮ್ಮ ಭೂಮಿಯ ವಾರ್ಷಿಕ ಉತ್ಪಾದನೆಯ ಮಿತಿಯೊಳಗೇ ನಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವ ಜಾಣ್ಮೆ. ಇಂತಹ ಮನೋಭಾವವನ್ನು ನಾವು ಪ್ರದರ್ಶಿಸದಿದ್ದಾಗ ಪ್ರಕೃತಿಯೇ ನಮ್ಮ ವಿರುದ್ಧ ತಿರುಗಿ ಬೀಳುತ್ತದೆ. 2020ರಲ್ಲಿ ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ಸಂಪನ್ಮೂಲದ ಬಳಕೆ ಎದ್ದುಕಾಣುವಂತೆ ಕಡಿಮೆಯಾಗಿ, ಪ್ರಕೃತಿ ಚೇತರಿಸಿಕೊಂಡಿದ್ದು ಇದಕ್ಕೊಂದು ನಿದರ್ಶನ.

ಚುರುಮುರಿ

ಝೀರೊ ಟ್ರಾಫಿಕ್!

• ಬಿ.ಎನ್.ಮಲ್ಲೇಶ್

ಬ್ರೇಕಿಂಗ್ ನ್ಯೂಸ್ ಟಿ.ವಿ ಪತ್ರಕರ್ತ ತೆಪರೇಸಿಗೆ ಅವನ ಹೆಂಡತಿ ಪಮ್ಮಿ ಕಾಫಿ ತಂದು ಕೊಡುತ್ತ ಕೇಳಿದಳು 'ರೀ... ನಿಮಗೆ ಮಿನಿಸ್ಟ್ರು, ಹೋಂ ಮಿನಿಸ್ಟ್ರು ಎಲ್ಲ ಕ್ಲೋಸಾ?'

'ಹ್ಞೂಂ, ಕ್ಲೋಸೇ... ಯಾಕೆ?'

'ಚೀಫ್ ಮಿನಿಸ್ಟ್ರೂ ಕ್ಲೋಸಾ?'

'ಕ್ಲೋಸಿದಾರೆ... ಮೊದ್ಲು ಹೋಂ ಮಿನಿಸ್ಟ್ರಾಗಿದ್ರಲ್ಲ, ಈಗ ಅವರೇ ಚೀಫ್ ಮಿನಿಸ್ಟ್ರಾಗಿದಾರೆ, ಯಾಕೆ?'

'ಹೇಳ್ತೀನಿ, ನಿಮಗೆ ಪೊಲೀಸ್ ಡಿಜಿಪಿ, ಐಜಿಪಿ ಎಲ್ಲ ಹೆಂಗೆ?'

'ಟಿ.ವಿ ರಿಪೋರ್ಟ್ರು ಅಂದ್ರೆ ಎಲ್ರೂ ಪರಿಚಯ ಇರ್ತಾರೆ, ಕ್ಲೋಸಾಗಿರ್ತಾರೆ. ಇದೆಲ್ಲ ಯಾಕೆ ಕೇಳ್ತಿದಿಯಾ?'

'ಏನಿಲ್ಲರಿ, ನಂಗೊಂದು ಆಸೆ...'

'ಆಸೆನಾ? ಏನು? ಚೀಫ್ ಮಿನಿಸ್ಟ್ರು ಜೊತೆ ಒಂದು ಸೆಲ್ಫಿ ತಗೋಬೇಕಾ?' 'ಅದಲ್ಲರೀ ಬೇರೆ...'

'ಡಿಜಿಪಿ ಅವರ ಜೊತೆ ಕಾಫಿ ಕುಡಿಬೇಕಾ?'

'ಥೂ, ಅದೆಲ್ಲ ಅಲ್ಲರಿ, ನೀವು ಬೈಯಲ್ಲ ಅಂದ್ರೆ ಹೇಳ್ತೀನಿ...' 'ಸರಿ ಅದೇನು ಹೇಳು'.

'ನಂಗೆ ಬೆಂಗಳೂರಲ್ಲಿ ನಿಮ್ ಬೈಕ್ ಮೇಲೆ ಕೂತ್ಕೊಂಡು ಝೀರೊ ಟ್ರಾಫಿಕ್ಕಲ್ಲಿ ಜುಂಯ್... ಅಂತ ಹೋಗಬೇಕು ಅಂತ ಆಸೆ. ರಸ್ತೆ ಫುಲ್ ಖಾಲಿ ಇರ್ಬೇಕು, ಸಿಗ್ನಲ್ಲು ಪಗ್ನಲ್ಲು ಏನೂ ಇರಬಾರ್ದು'.

'ಆಹಾ... ಎಂಥ ಆಸೇನೆ ನಿಂದು, ಅದೆಲ್ಲ ವಿಐಪಿಗಳಿಗೆ ಮಾತ್ರ ಇರೋದು. ಚೀಫ್ ಮಿನಿಸ್ಟ್ರು, ಹೋಂ ಮಿನಿಸ್ಟ್ರು ಮಾತ್ರ ಝೀರೊ ಟ್ರಾಫಿಕ್ಕಲ್ಲಿ ಹೋಗಬಹುದು...'

'ಸುಳ್ಳು, ಮೊನ್ನೆ ಸಂಪುಟ ವಿಸ್ತರಣೆ ಟೈಮಲ್ಲಿ ಯಾರೋ ಒಬ್ರು ಲೇಡಿ ಎಮ್ಮೆಲ್ಲೆ ಝೀರೊ ಟ್ರಾಫಿಕ್ಕಲ್ಲಿ ಹೋದ್ರು ಅಂತ ನೀವೇ ನಿಮ್ ಟೀವಿಯಲ್ಲಿ ತೋರ್ಸಿದ್ರಿ?'

'ಅದೂ... ಅದು ಹಂಗಲ್ಲ ಕಣೆ, ನಿಂಗೆ ಹೆಂಗೆ ಹೇಳ್ಬೇಕು ಗೊತ್ತಾಗ್ತಿಲ್ಲ...' ತೆಪರೇಸಿ ತಡವರಿಸಿದ.

'ಹಂಗೂ ಇಲ್ಲ ಹಿಂಗೂ ಇಲ್ಲ, ನಿಮ್ ಕೈಲಿ ಆಗುತ್ತೋ ಇಲ್ವೋ ಅಷ್ಟು ಹೇಳಿ...' ಪಮ್ಮಿ ಪಟ್ಟು ಹಿಡಿದಳು. 'ಆಯ್ತು, ಒಂದ್ ಕೆಲ್ಸ ಮಾಡು, ನಿಂಗೆ ಮೊಟ್ಟೆ ಆಮ್ಲೆಟ್ ಮಾಡೋಕೆ ಬರುತ್ತಾ?'

'ಥೂ... ಮೊಟ್ಟೇನಾ? ನಾನ್ಯಾವತ್ತು ತಿಂದಿದೀನ್ರೀ? ವಾಂತಿ ಬರುತ್ತೆ'.

'ಸರಿ ಮತ್ತೆ 'ತಿನ್ನೋಕೆ' ಬರದಿದ್ರೆ ಝೀರೊ ಟ್ರಾಫಿಕ್ ಕಷ್ಟ...' ತೆಪರೇಸಿ ಕಪ್ ಇಟ್ಟು ಮೇಲಕ್ಕೆದ್ದ.

ಸಂಗತ

ಆನ್‌ಲೈನ್ ಟ್ಯೂಷನ್: ಶಿಕ್ಷಣದ 'ಹೊಸರುಚಿ'

ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರಿಗಿರುವ ಕಾಳಜಿ ಮತ್ತು ಕಳವಳದ ಪ್ರಯೋಜನ ಪಡೆಯಲು ಎಲ್ಲೆಡೆ ಹುಟ್ಟಿಕೊಂಡಿವೆ ಆನ್‌ಲೈನ್ ಟ್ಯೂಷನ್ ಕೇಂದ್ರಗಳು

• ಡಾ. ಕೆ.ಎಸ್.ಪವಿತ್ರ

ಪರೀಕ್ಷೆ ಹೇಗೆ ನಡೆಸಬೇಕು, ಶಾಲೆ ಆರಂಭಿಸಬೇಕೇ ಬೇಡವೇ ಎಂಬ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದನ್ನು ಮುಂದುವರಿಸಿದ್ದೇವೆ. ಕಾಲೇಜುಗಳು ಭಯದಿಂದಲೇ ಆರಂಭವಾಗಿವೆ. ಇಲ್ಲಿಯವರೆಗೆ ಒಂದೇ ಗತಿಯಲ್ಲಿ ಮುಂದುವರಿದುಕೊಂಡು ಬಂದಿದ್ದ ಶಾಲೆಗಳಲ್ಲಿನ ಕಲಿಕೆ ಇದ್ದಕ್ಕಿದ್ದ ಹಾಗೆ ತನ್ನ ನಡೆ ಬದಲಿಸಿಬಿಟ್ಟಿದೆ.

ಈ ಮೊದಲು ಶಾಲೆಯ ಜೊತೆಗೆ ಟ್ಯೂಷನ್ ಆಯ್ಕೆಗಳಿರುತ್ತಿದ್ದವಷ್ಟೆ. ಈಗ ಆನ್‌ಲೈನ್ ವ್ಯವಸ್ಥೆಯಿಂದಾಗಿ ಮನೆಯಲ್ಲಿಯೇ ಕುಳಿತು ಮಕ್ಕಳನ್ನು ಯಾವ ಟ್ಯೂಷನ್‌ಗೂ ಸೇರಿಸಬಹುದು. ಒಂದೇ ಅಲ್ಲ, ಒಂದೊಂದು ವಿಷಯಕ್ಕೆ ಒಂದೊಂದು ಟ್ಯುಟೋರಿಯಲ್ಸ್‌ಗೆ ಸೇರಬಹುದು. ಅದರಲ್ಲೂ ಅಷ್ಟೆ, ಕಂಪನಿಗಳು ವಿಮೆ- ಸಾಲ ಎಂದು ಹಿಂದೆ ಬಿದ್ದಂತೆ ಇಂತಹ ಆನ್‌ಲೈನ್ ಕೋರ್ಸುಗಳ ಉದ್ಯೋಗಿಗಳು ಪೋಷಕರ ಹಿಂದೆ ಬೀಳುತ್ತಾರೆ. ಕುತೂಹಲಕ್ಕೆಂದು ನೀವೇನಾದರೂ 'ಟ್ರಯಲ್ ಕ್ಲಾಸ್' ಮಾಡಿಸಿದರೆ, ಮಕ್ಕಳು ಹೇಗಾದರೂ ಆ 'ಟ್ಯುಟೋರಿಯಲ್ ಕ್ಲಾಸ್' ಸೇರುವಂತೆ ನಿಮ್ಮ ಮನವೊಲಿಸಿಯೇ ತೀರುತ್ತಾರೆ. ಅಪ್ಪ-ಅಮ್ಮಂದಿರಿಗೆ 'ಶಾಲೆಯಿಲ್ಲದೆ ಮಕ್ಕಳು ಹಾಳಾಗುತ್ತಿದ್ದಾರಲ್ಲ' ಎಂಬ ಸಂಕಟವಂತೂ ಮನದಾಳದಲ್ಲಿ ಕೊರೆಯುತ್ತಿರುತ್ತದೆ. ಈ ಸಂಕಟದ ಪ್ರಯೋಜನ ಪಡೆಯುವುದು ಜಗತ್ತಿನ ಎಲ್ಲೆಡೆ, ಭಾರತದ ತುಂಬಾ ಹುಟ್ಟಿಕೊಂಡಿರುವ ಆನ್‌ಲೈನ್ ಟ್ಯೂಷನ್ ಕೇಂದ್ರಗಳು.

'ಶಾಲೆ ಪೂರ್ತಿಯಾಗಿ ತೆರೆಯದೆ, ಕಲಿಕೆ ಹೇಗೋ ಮುಂದುವರಿದರೆ ತಪ್ಪೇನು' ಎಂದು ನಾವು ಪ್ರಶ್ನಿಸಲು ಸಾಧ್ಯವಿದೆ. ಆದರೆ ಕೊರೊನಾ ನಮ್ಮ ಮಧ್ಯೆ ಇರುವುದು ನಮಗೆ ಅಭ್ಯಾಸವಾಗಿ, ಶಾಲೆಗಳನ್ನು ತೆರೆದರೂ ಅಪ್ಪ-ಅಮ್ಮ ಈ ಟ್ಯೂಷನ್‌ಗಳ ರುಚಿ ನೋಡಿದ್ದರೆ, ಅದನ್ನು ಬಿಡುವುದು ಕಷ್ಟ! ಶಾಲೆಯ ತರಗತಿಗಳಲ್ಲಿ ಏನು ನಡೆಯುತ್ತದೆ, ಹೇಗೆ ಪಾಠ ಮಾಡುತ್ತಾರೆ ಎಂಬ ಬಗ್ಗೆ ಅಪ್ಪ-ಅಮ್ಮ ಪಾಠ ನೋಡಲಸಾಧ್ಯ. ಆದರೆ ಆನ್‌ಲೈನ್ ಟ್ಯೂಷನ್ ತರಗತಿಯಲ್ಲಿ ಹಾಗಲ್ಲ. ಹೇಗಿದ್ದರೂ, ಆನ್‌ಲೈನ್ ಶಿಕ್ಷಕರು ರಾತ್ರಿ 8 ಗಂಟೆಗೂ ಕಲಿಸಲು ಸಿದ್ಧರಿದ್ದಾರೆ!

ಕೊರೊನಾ ನೆಪದಿಂದ ಕಲಿಕೆಯ ಹಾದಿ, ಒತ್ತಡದ ರೀತಿಗಳು ಮತ್ತಷ್ಟು ವಿಸ್ತರಿಸಿವೆ ಎನ್ನುವುದು ಇಂದಿನ ಶಿಕ್ಷಣ ಪದ್ಧತಿಯ ಸಮೀಪದೃಷ್ಟಿಗೆ ಗೋಚರಿಸುವುದು ಸಾಧ್ಯವಿಲ್ಲ. ಹಾಗೆಯೇ ಈವರೆಗಿನ ಕಲಿಕೆಯ ಕ್ರಮದಲ್ಲಿ ಇದ್ದ 'ಗಣಿತ-ವಿಜ್ಞಾನಗಳಿಗೆ ಅತಿ ಪ್ರಾಮುಖ್ಯ'ವನ್ನು ಈಗ ನಾವು ಮತ್ತೂ ಏರಿಸಿದ್ದೇವೆ. ನಾನು ಓದುವಾಗ, ಅಂದರೆ ಸುಮಾರು 20 ವರ್ಷಗಳ ಹಿಂದೆ ಪಿಯುಗೆ ಬಂದಾಗ ಮಾತ್ರ ಭಾಷಾ ವಿಷಯಗಳನ್ನು ಬದಿಗಿರಿಸಿ, ಗಣಿತ- ವಿಜ್ಞಾನಗಳ ಹಿಂದೆ ಓಡುವ ಪ್ರವೃತ್ತಿಯಿತ್ತು. ಆದರೆ ಈಗ ಒಂಬತ್ತನೇ ತರಗತಿಗಾಗಲೇ ಭಾಷಾ ವಿಷಯಗಳು ಹಿಂದೆ ಸರಿಯುತ್ತವೆ. ಕೆಲವು ಆನ್‌ಲೈನ್ ಟ್ಯೂಷನ್ ಸಂಸ್ಥೆಗಳಂತೂ ನೇರವಾಗಿ ಎಂಟನೇ ತರಗತಿಯಿಂದಲೇ ಐಐಟಿ- ಜೆಇಇ- ನೀಟ್ ಕೋಚಿಂಗ್ ಆರಂಭಿಸುತ್ತವೆ, ವಿಜ್ಞಾನ- ಗಣಿತಗಳ ಬಗ್ಗೆ ಮಾತ್ರ ಹೇಳಿಕೊಡುತ್ತವೆ.

ಇನ್ನು ಕನಿಷ್ಠ ಒಂಬತ್ತನೇ ತರಗತಿಯವರೆಗಾದರೂ ಆಟ, ಕರಕುಶಲ, ಸಂಗೀತ, ನಾಟಕಗಳ ಕಡ್ಡಾಯ ಅವಧಿಗಳು ಮಕ್ಕಳಿಗೆ ಶಾಲೆಗಳಲ್ಲಿ ದೊರೆಯುತ್ತಿದ್ದವು. ಆದರೆ ಈಗ? ಇನ್ನೂ ಮೊದಲೇ ಇವಕ್ಕೆಲ್ಲ ಕಡಿವಾಣ! ಶಾಲೆಗಳು ಆನ್‌ಲೈನ್ ಶಿಕ್ಷಣದ ಮುಖಾಂತರ, ಯುಟ್ಯೂಬ್‌ನಲ್ಲಿ ಅಥವಾ ಪೋಷಕರು ಆನ್‌ಲೈನ್ ಟ್ಯೂಷನ್‌ಗಳಿಗೆ ಸೇರಿಸಿ, ಮಕ್ಕಳು ಪಠ್ಯಪುಸ್ತಕ, ಬರೆಯುವ ನೋಟ್ಸ್‌ನಲ್ಲಿ 'ಅಪ್‌ಡೇಟ್' ಆಗಿರುವಂತೆ ಮಾಡಿದ್ದಾರೆ. ಅದೇ ಆಟದ ಬಗ್ಗೆ, ಪ್ರಾಯೋಗಿಕ ಚಟುವಟಿಕೆಗಳ ಬಗ್ಗೆ ಏನು ಕ್ರಮ ಕೈಗೊಂಡಿದ್ದೇವೆ?

ಯುನಿಸೆಫ್ 'ಜೀರೊ ಲರ್ನಿಂಗ್' (ಶೂನ್ಯ ಕಲಿಕೆ) ಬಗ್ಗೆ ಜಗತ್ತಿನ ಗಮನವನ್ನು ಸೆಳೆದಿದೆ. ಮಕ್ಕಳಲ್ಲಿ ಬರವಣಿಗೆ- ಓದಿನ ಕೌಶಲಗಳಲ್ಲಿ ಹಿನ್ನಡೆ, ಈಗಾಗಲೇ ಕಲಿತಿರುವುದನ್ನು ಮರೆಯುವುದು ಇವೆಲ್ಲವೂ 'ಜೀರೊ ಲರ್ನಿಂಗ್' ಪರಿಧಿಗೇ ಬರುತ್ತವೆ. ಪರೀಕ್ಷೆ ಬೇಕು ಅಥವಾ ಬೇಡ ಎನ್ನುವ ಚರ್ಚೆಗಿಂತ ಮುಖ್ಯವಾಗ ಬೇಕಾದದ್ದು ಇಂತಹ 'ಶೂನ್ಯ ಕಲಿಕೆ'ಯ ಅವಧಿಗಳಲ್ಲಿ ಕಲಿಕೆಯ ಮೌಲ್ಯಮಾಪನ ಹೇಗಾಗಬೇಕು ಎಂಬುದರ ಬಗ್ಗೆ ಗಂಭೀರ ಚರ್ಚೆ, ಪ್ರಾಯೋಗಿಕ ಅನುಷ್ಠಾನ, ಪರಿಶೀಲಿಸಿ ತಿದ್ದುವಿಕೆ, ಪುನರ್ ಅನುಷ್ಠಾನ. ಸುಮಾರು ಕಳೆದ ಮೂವತ್ತು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕತ್ತೆತ್ತಿ ನೋಡುವಂತಹ ಬದಲಾವಣೆಗಳಾಗಿಲ್ಲ. ಅದಕ್ಕೆ ಕಾರಣ, ವ್ಯವಸ್ಥೆಯ ಬದಲಾಗುವಿಕೆಗೆ ನಮ್ಮ ಹಿಂಜರಿಕೆ.

ಕೊರೊನಾದ ಪರಿಸ್ಥಿತಿ ನಾವ್ಯಾರೂ ಊಹಿಸದಂತಹ ಒಂದು ಸವಾಲನ್ನು, ಅವಕಾಶವನ್ನು ನಮಗೆ ನೀಡಿದೆ. ಹೀಗಿರುವಾಗ ನಮ್ಮ ಆಡಳಿತ ವ್ಯವಸ್ಥೆ ಕೇವಲ ಪರೀಕ್ಷೆಗಳ ಬಗೆಗಷ್ಟೇ ಅಲ್ಲ, ಕೊರೊನಾ ಪರಿಸ್ಥಿತಿಯ ಆನಂತರದ ದಿನಗಳ ಶಿಕ್ಷಣದ ಬಗೆಗೂ ಗಂಭೀರವಾಗಿ, ತುರ್ತಾಗಿ ಯೋಚಿಸಿ ಕೆಲವು ಹೊಸ ಸೂತ್ರಗಳನ್ನು ರೂಪಿಸಬೇಕಿದೆ.

ವಿದ್ಯಾರ್ಥಿಗಳಲ್ಲಿ ವಿವಿಧ ಮಾನಸಿಕ ಸಮಸ್ಯೆಗಳು, ಅಪ್ಪ-ಅಮ್ಮಂದಿರಲ್ಲಿ ಮಕ್ಕಳ ಕಲಿಕೆಯ ವಿಷಯದಿಂದಾಗಿಯೇ ಈ ಕೊರೊನಾ ಸಮಯದಲ್ಲಿ ಹೆಚ್ಚಿದ ಒತ್ತಡ, ಖಿನ್ನತೆಯ ವರದಿಗಳು ಈಗಾಗಲೇ ಬಲವಾಗಿ ಬರುತ್ತಿವೆ. ಹೆಚ್ಚು ಅಂಕ ಗಳಿಸಬಹುದಾಗಿದ್ದ ಬುದ್ಧಿವಂತ ವಿದ್ಯಾರ್ಥಿಗಳು ಹತಾಶೆಯಿಂದ, ಕಡಿಮೆ ಅಂಕ ಗಳಿಸುವ ವಿದ್ಯಾರ್ಥಿಗಳು ಪರೀಕ್ಷೆಯ ಆತಂಕ ತಗ್ಗಿದ್ದರೂ ಕಲಿಯಲಾರದೆ ಒದ್ದಾಡುತ್ತಿದ್ದಾರೆ. ಹೀಗಿರುವಾಗ ಕೊರೊನಾ ಸಾಂಕ್ರಾಮಿಕವು ಅಜ್ಞಾನದ ಸಾಂಕ್ರಾಮಿಕವಾಗದಿರುವಂತೆ, ಕಲಿಕೆಯಲ್ಲಿ ಇಡೀ ಸಮಾಜ ಹೊಸ ಹೊಸ ದಾರಿಗಳನ್ನು ಹುಡುಕಿ, ಅರಿವನ್ನು ಕಾಯಬೇಕಾಗಿದೆ.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಸಾವಯವ ಇಂಗಾಲ: ಮಹತ್ವ ಅರಿವಾಗಲಿ

ಹೆಚ್ಚು ಮಳೆ ಬೀಳುವ ಗುಡ್ಡ ಪ್ರದೇಶದಲ್ಲಿ ಹಸಿರು ಸೆರಗನ್ನು ನಾಶ ಮಾಡಿದ್ದರಿಂದ ಧರೆ ಕುಸಿದಿದೆ (ಪ್ರ.ವಾ., ಆ. 1). ಹಸಿರು ಸೆರಗು ಇದ್ದರೆ ಬಿದ್ದ ಮಳೆ ನೀರು ನೇರವಾಗಿ ಭೂಮಿ ಮೇಲೆ ಬೀಳದೆ ಮರಗಳ ಎಲೆ ಮೇಲೆ ಬಿದ್ದು ನಿಧಾನವಾಗಿ ಭೂಮಿಗೆ ಸೇರುತ್ತಿತ್ತು. ಹಸಿರು ಸೆರಗು ನಾಶವಾಗಿದ್ದರಿಂದ ಮಳೆ ಹನಿ ನೇರವಾಗಿ ಮಣ್ಣಿಗೆ ಬಿದ್ದಿದೆ. ಮರಗಳ ನಾಶದಿಂದ ಸಾವಯವ ಇಂಗಾಲ ಕಡಿಮೆಯಾಗಿ ಮಣ್ಣು ಕುಸಿದಿದೆ.

ಒಂದು ಘನ ಮೀಟರ್ ಮಣ್ಣಿನ ತೂಕ 1,600 ಕೆ.ಜಿ. ಇದ್ದು, ಮಳೆ ನೀರಿನಿಂದ ಅದು 2 ಸಾವಿರ ಕೆ.ಜಿ.ಗೆ ಹೆಚ್ಚುತ್ತದೆ. ಆದರೆ ಮರದಿಂದ ಬೀಳುವ ಎಲೆಯು ಮಣ್ಣಿನ ಮೇಲೆ ಸ್ಪಂಜಿನ ರೀತಿ ಸಾವಯವ ಹೊದಿಕೆ ಮಾಡಿ ಮಣ್ಣಿನ ಸವಕಳಿ ನಿಲ್ಲಿಸುತ್ತದೆ. ಮಣ್ಣಿನ ತೂಕ ಕಡಿಮೆಯಾಗಿ ನೀರು ನಿಧಾನವಾಗಿ ಇಂಗುತ್ತದೆ. ಅರಣ್ಯಕ್ಕೆ ಬೆಂಕಿ ಹಾಕುವುದರಿಂದ ಮರ ಗಿಡಗಳ ಸಾವಯವ ಇಂಗಾಲ ನಾಶವಾಗಿ ಭೂಮಿ ಕುಸಿತವಾಗಿದೆ.

ಡಾ. ಎಚ್.ಆರ್.ಪ್ರಕಾಶ್, ಮಂಡ್ಯ

ಝೀರೊ ಟ್ರಾಫಿಕ್: ಬೇಕಿದೆ ಬ್ರೇಕ್

ವೈದ್ಯಕೀಯ ಸೇವೆ ಸೇರಿದಂತೆ ತೀರಾ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೀವ ಉಳಿಸುವುದಕ್ಕೆ ಅಥವಾ ಗಣ್ಯಾತಿಗಣ್ಯರ ಆಗಮನದ ಸಂದರ್ಭದಲ್ಲಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಝೀರೊ ಟ್ರಾಫಿಕ್ (ತಡೆರಹಿತ ಸಂಚಾರ) ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತ ಬರಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ವ್ಯವಸ್ಥೆ ದುರ್ಬಳಕೆಯಾಗುವ ಮೂಲಕ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಪ್ರಮಾಣವಚನ ಸ್ವೀಕರಿಸುವುದಕ್ಕೆ ವಿಮಾನ ಏರಿ ಬಂದ ಶಾಸಕಿ ಶಶಿಕಲಾ ಜೊಲ್ಲೆ ಅವರನ್ನು ರಾಜಭವನಕ್ಕೆ ಕರೆತರುವುದಕ್ಕೆ ಇಡೀ ಪೊಲೀಸ್ ವ್ಯವಸ್ಥೆಯನ್ನು ಯುದ್ಧೋಪಾದಿಯಲ್ಲಿ ಸಜ್ಜುಗೊಳಿಸಿದ ಮುಖ್ಯಮಂತ್ರಿ ಅವರ ನಡೆ ಎಷ್ಟರಮಟ್ಟಿಗೆ ಸರಿ? ಇದು ಅಧಿಕಾರದ ದುರ್ಬಳಕೆ ಎನ್ನದೆ ವಿಧಿಯಿಲ್ಲ. ಜೊಲ್ಲೆ ಅವರು ತಡವಾಗಿ ಬಂದು ರಾಜ್ಯಪಾಲರ ಮುಂದೆ ಪ್ರಮಾಣವಚನ ಸ್ವೀಕರಿಸಲು ಸಾಧ್ಯವಿರಲಿಲ್ಲವೇ? ಜನರನ್ನು ಹೈರಾಣಾಗಿಸಿ ಝೀರೊ ಟ್ರಾಫಿಕ್ ಕಲ್ಪಿಸಿದ್ದರ ಹಿಂದೆ ನಾಡಿನ ಹಿತ ಇತ್ತೇ?

ಕಾರಿನಿಂದ ಇಳಿದು ಓಡೋಡಿ ಬಂದು ಅಷ್ಟೊಂದು ಅವಸರದಲ್ಲಿ ಸಚಿವೆಯಾಗಿ ಪ್ರಮಾಣವಚನ ಸ್ವೀಕರಿಸಿರುವುದಕ್ಕೆ ಬಹುಶಃ ಕೊನೇ ಗಳಿಗೆಯಲ್ಲಿ ಪಟ್ಟಿ ಬದಲಾಗಬಹುದು ಎಂಬ ಅಳುಕು ಕಾಡಿರಲೂಬಹುದು ಅಥವಾ ಮುಖ್ಯಮಂತ್ರಿಗೆ ಈ ವಿಷಯದಲ್ಲಿ ಮೇಲಿನವರ ಒತ್ತಡವೂ ಇರಬಹುದು. ಕೆಂಪುಗೂಟದ ಕಾರಿನ ವಿಚಾರದಲ್ಲಿ ಈ ಹಿಂದೆ ಆದೇಶ ನೀಡಿದ್ದ ಸುಪ್ರೀಂ ಕೋರ್ಟ್, ಈಗ ಝೀರೊ ಟ್ರಾಫಿಕ್ ವಿಚಾರದಲ್ಲೂ ಮಾರ್ಗದರ್ಶನ ಮಾಡಬೇಕಾದ ಅಗತ್ಯವಿದೆ ಎನಿಸುತ್ತದೆ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗ

ಧರ್ಮ– ರಾಜಕಾರಣದ ಸಂಬಂಧ: ಚರ್ಚೆ ನಡೆಯಲಿ

ಜಾಗತೀಕರಣದ ಪ್ರಭಾವವು ಎಲ್ಲ ಕ್ಷೇತ್ರಗಳಲ್ಲೂ ನಿರಂತರವಾಗಿ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಧರ್ಮವೊಂದೇ ಇವತ್ತಿನ ಮಾರುಕಟ್ಟೆ ನೀತಿಯ ಹೊರಗಿರಬೇಕೆಂದು ನಿರೀಕ್ಷಿಸುವುದು ಸಾಧ್ಯವೇ ಎಂಬ ನಡಹಳ್ಳಿ ವಸಂತ್ ಅವರ ಪ್ರಶ್ನೆ (ಸಂಗತ, ಆ. 4) ಚಿಂತನಾರ್ಹವಾಗಿದೆ. ಅನೇಕ ಧಾರ್ಮಿಕ ಮಠಗಳು ತಮ್ಮ ಐತಿಹಾಸಿಕ ಮಹತ್ವದಿಂದಲೊ, ಮಠಾಧೀಶರ ಪ್ರಭಾವದಿಂದಲೊ ಭಕ್ತರನ್ನು ಆಕರ್ಷಿಸುವ ಕೇಂದ್ರಗಳಾಗಿದ್ದವು. ಜಾಗತೀಕರಣದ ಪ್ರಭಾವದಿಂದ ಬದಲಾದ ಸನ್ನಿವೇಶದಲ್ಲಿ ಮಠಗಳು, ಧಾರ್ಮಿಕ ಕೇಂದ್ರಗಳು ಭಕ್ತರನ್ನು ಆಕರ್ಷಿಸಲು ತಮ್ಮ ಕಾರ್ಯವೈಖರಿಯನ್ನು ಬದಲಿಸಿಕೊಳ್ಳುವ ಅನಿವಾರ್ಯದಲ್ಲಿವೆ. ಇದಕ್ಕೆಲ್ಲ ಬೇಕಾಗಿರುವ ಸಂಪನ್ಮೂಲಗಳ ಕ್ರೋಡೀಕರಣಕ್ಕೆ ತಮ್ಮ ಜಾತಿಯ ಜನಪ್ರತಿನಿಧಿಗಳನ್ನು ಅವಲಂಬಿಸಿ ಅವರ ಬೆಂಬಲಕ್ಕೆ ನಿಲ್ಲುವ ಅನಿವಾರ್ಯ ಸೃಷ್ಟಿಯಾಗಿದೆ.

ಧರ್ಮವು ರಾಜಕಾರಣದಿಂದ ದೂರವಿರಬೇಕು, ಮಠಾಧೀಶರು ಸಮಾಜದ ಹಿತದೃಷ್ಟಿಯಿಂದ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡುವ ಕಾರ್ಯ ಮಾಡಬೇಕೇ ವಿನಾ ನೇರವಾಗಿ ಅವರ ಬೆಂಬಲಕ್ಕೆ ನಿಲ್ಲುವುದು ಸಾಧುವಲ್ಲ ಮತ್ತು ಅದು ಪ್ರಜಾಪ್ರಭುತ್ವ ವಿರೋಧಿ ಎಂಬುದು ಅನೇಕ ಚಿಂತಕರ ಅಳಲು. ಮಠಗಳು ಮತ್ತು ರಾಜಕಾರಣಿಗಳ ಸಂಬಂಧದ ಬಗ್ಗೆ ಉಂಟಾಗಿರುವ ತಾತ್ವಿಕ ಭಿನ್ನಾಭಿಪ್ರಾಯವನ್ನು ತಿಳಿಗೊಳಿಸಲು ಚಿಂತಕರು, ಮಠಾಧೀಶರು, ಜನಪ್ರತಿನಿಧಿಗಳ ನಡುವೆ ಅರ್ಥಪೂರ್ಣವಾದ ಚರ್ಚೆ ಅವಶ್ಯವಾಗಿದೆ.

ಸಂಗಯ್ಯ ಅ. ಹಿರೇಮಠ, ಧಾರವಾಡ

ಪರೀಕ್ಷೆ ರದ್ದು: ಆ ಮುಖ, ಈ ಮುಖ

ನಾನು ಇತ್ತೀಚೆಗೆ ಸರ್ಕಾರಿ ಪದವಿ ಪೂರ್ವ ಕಾಲೇಜೊಂದರಲ್ಲಿ ದ್ವಿತೀಯ ಪಿಯು ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಸಭೆಯಲ್ಲಿ ಅತಿಥಿಯಾಗಿ ಭಾಗವಹಿಸಿದ್ದೆ. ಅಲ್ಲಿ ಉಪನ್ಯಾಸಕರು ಕೆಲವು ವಿದ್ಯಾರ್ಥಿಗಳ ಬಗ್ಗೆ, ಅವರು ಏನೂ ಓದುವುದಿಲ್ಲವೆಂತಲೂ, ತರಗತಿಯಲ್ಲೂ ಸರಿಯಾಗಿ ಪಾಠ ಕೇಳದೆ ಕೀಟಲೆ ಮಾಡುತ್ತಿರುತ್ತಾರೆಂದೂ, ಹೀಗೇ ಮಾಡಿದರೆ ಅವರು ಪರೀಕ್ಷೆಯಲ್ಲಿ ಖಂಡಿತ ಪಾಸಾಗುವುದಿಲ್ಲವೆಂದೂ ಪೋಷಕರಲ್ಲಿ ದೂರು ಹೇಳುತ್ತಿದ್ದರು. ಪೋಷಕರ ಮುಖದಲ್ಲಿ ತಮ್ಮ ಮಕ್ಕಳ ಭವಿಷ್ಯದ ಬಗೆಗಿನ ಆತಂಕ ವ್ಯಕ್ತವಾಗುತ್ತಿತ್ತು.

ಅದಾದ ಸ್ವಲ್ಪ ದಿನಗಳಲ್ಲಿ ಸರ್ಕಾರವು ದ್ವಿತೀಯ ಪಿಯು ಪರೀಕ್ಷೆಯನ್ನು ರದ್ದು ಮಾಡಿ, ಎಲ್ಲ ವಿದ್ಯಾರ್ಥಿಗಳನ್ನೂ ಪಾಸು ಮಾಡುವ ನಿರ್ಧಾರ ತೆಗೆದುಕೊಂಡಿತು. ನಾನು ಮತ್ತೆ ಅದೇ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭಕ್ಕೆ ಅತಿಥಿಯಾಗಿ ಹೋದೆ. ಹಿಂದೆ ಉಪನ್ಯಾಸಕರ ಕೆಂಗಣ್ಣಿಗೆ ಗುರಿಯಾಗಿದ್ದ ವಿದ್ಯಾರ್ಥಿಗಳು ಬಹಳ ಖುಷಿಯಿಂದ, ಲವಲವಿಕೆಯಿಂದ ಓಡಾಡಿಕೊಂಡಿದ್ದರು. ಮತ್ತೆ ಕೆಲವು ವಿದ್ಯಾರ್ಥಿಗಳು ಮಂಕಾಗಿ ಕುಳಿತಿದ್ದರು. ನಾನು ಆ ವಿದ್ಯಾರ್ಥಿಗಳನ್ನು ಕರೆದು, ಅವರು ಸಪ್ಪಗಿರುವುದಕ್ಕೆ ಕಾರಣ ಕೇಳಿದೆ. ಆಗ ಅವರಿಂದ ಬಂದ ಉತ್ತರ ಅಚ್ಚರಿ ಉಂಟುಮಾಡಿತು. 'ಇಲ್ಲಾ ಸರ್, ನಾವು ಈ ಬಾರಿ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದು ಉತ್ತಮ ಅಂಕ ಗಳಿಸಬೇಕು ಅಂತ ಒಳ್ಳೆಯ ತಯಾರಿ ನಡೆಸಿದ್ದೆವು. ಆದರೆ ಪರೀಕ್ಷೆಯೇ ಇಲ್ಲವಾಯಿತಲ್ಲ' ಅಂತ ಬಹಳ ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಏನು ಹೇಳಬೇಕೆಂದೇ ನನಗೆ ತಿಳಿಯದಾಯಿತು!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

5 ವರ್ಷಗಳಲ್ಲಿ 1.76 ಲಕ್ಷ ಅತ್ಯಾಚಾರ ಪ್ರಕರಣ

ದೇಶದಲ್ಲಿ 2015ರಿಂದ 2019ರ ಅವಧಿಯಲ್ಲಿ ಒಟ್ಟು 1.76 ಲಕ್ಷ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ ಎಂದು ಸರ್ಕಾರವು ಸಂಸತ್ತಿಗೆ ಮಾಹಿತಿ ನೀಡಿದೆ. ಈ ಅವಧಿಯಲ್ಲಿ ಪ್ರತಿ ವರ್ಷ ದಾಖಲಾದ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆ/ಯುವತಿ/ಬಾಲಕಿಯರ ಮೇಲೆ ನಡೆದ ಅತ್ಯಾಚಾರಗಳ ಸಂಖ್ಯೆಯೂ ಏರಿಕೆಯಾಗಿದೆ ಎಂದು ಸರ್ಕಾರದ ದಾಖಲೆಗಳು ಹೇಳುತ್ತವೆ. ದೆಹಲಿಯಲ್ಲಿ ದಲಿತ ಬಾಲಕಿಯ ಮೇಲೆ ಅತ್ಯಾಚಾರ ಮತ್ತು ಹತ್ಯೆಯ ಪ್ರಕರಣ ಭಾರಿ ಸದ್ದು ಮಾಡುತ್ತಿರುವ ಸಂದರ್ಭದಲ್ಲೇ ಸರ್ಕಾರ, ಸಂಸತ್ತಿಗೆ ಈ ಮಾಹಿತಿ ನೀಡಿದೆ.

ಶೇ 75.5ರಷ್ಟು ಏರಿಕೆ

2010ರ ನಂತರ ದೇಶದಲ್ಲಿ ದಲಿತರ ಮೇಲೆ ನಡೆದ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಸತತ ಏರಿಕೆಯಾಗುತ್ತಲೇ ಬಂದಿದೆ. 2010ರಲ್ಲಿ ದಾಖಲಾದ ಪ್ರಕರಣಗಳಿಗೆ ಹೋಲಿಸಿದರೆ, 2019ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯಲ್ಲಿ ಶೇ 75.5ರಷ್ಟು ಏರಿಕೆಯಾಗಿದೆ. ಇದೇ ಅವಧಿಯಲ್ಲಿ ದೇಶದಲ್ಲಿ ಪ್ರತಿ ವರ್ಷ ದಾಖಲಾದ ಅತ್ಯಾಚಾರ ಪ್ರಕರಣಗಳಲ್ಲಿನ ಏರಿಕೆ ಪ್ರಮಾಣ ಶೇ 45.5ರಷ್ಟು ಇತ್ತು



ಅತ್ಯಾಚಾರ ಪ್ರಕರಣಗಳಲ್ಲಿ ಭಾರಿ ಏರಿಕೆ



1.42 ಲಕ್ಷ
2010-2014ರ ಅಂತ್ಯದವರೆಗೆ ದೇಶದಲ್ಲಿ ದಾಖಲಾದ ಅತ್ಯಾಚಾರ ಪ್ರಕರಣಗಳು

1.76 ಲಕ್ಷ
2015-2019ರ ಅಂತ್ಯದವರೆಗೆ ದೇಶದಲ್ಲಿ ದಾಖಲಾದ ಅತ್ಯಾಚಾರ ಪ್ರಕರಣಗಳು

- ಹಿಂದಿನ ದಶಕದ ಮೊದಲ ಭಾಗದಲ್ಲಿ ದಾಖಲಾದ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ. ದ್ವಿತೀಯ ಭಾಗದಲ್ಲಿ ದಾಖಲಾದ ಪ್ರಕರಣಗಳ ಪ್ರಮಾಣ ಶೇ 23.94ರಷ್ಟು ಏರಿಕೆಯಾಗಿದೆ
- 2012ರಲ್ಲಿ ನಿರ್ಭಯಾ ಪ್ರಕರಣ ನಡೆದ ನಂತರದ ವರ್ಷಗಳಲ್ಲಿ ಅತ್ಯಾಚಾರ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. 2012ರಲ್ಲಿ ದಾಖಲಾದ ಪ್ರಕರಣಗಳಿಗೆ ಹೋಲಿಸಿದರೆ 2013ರಲ್ಲಿ ದಾಖಲಾದ ಪ್ರಕರಣಗಳ ಪ್ರಮಾಣದಲ್ಲಿ ಶೇ 35.5ರಷ್ಟು ಏರಿಕೆಯಾಗಿದೆ
- 2016ರಲ್ಲಿ ಗರಿಷ್ಠ ಸಂಖ್ಯೆಯ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ನಂತರದ ವರ್ಷಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಇಳಿಕೆಯಾಗಿದೆ
- 2020ರ ಭಾರತದಲ್ಲಿ ಅಪರಾಧ ವರದಿ ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಹೀಗಾಗಿ 2020ರ ದತ್ತಾಂಶಗಳು ಲಭ್ಯವಾಗಿಲ್ಲ. ಸರ್ಕಾರವೂ ಈ ದತ್ತಾಂಶವನ್ನು ಸಂಸತ್ತಿಗೆ ನೀಡಿಲ್ಲ

ರಾಜಕೀಯ ಮೇಲಾಟ

ಅತ್ಯಾಚಾರ ಪ್ರಕರಣಗಳನ್ನು ರಾಜಕೀಯ ನಾಯಕರು ರಾಜಕೀಯ ದಾಳವಾಗಿ ಬಳಸಿಕೊಳ್ಳುತ್ತಿರುವ ಪ್ರವೃತ್ತಿ ಇತ್ತೀಚಿನ ವರ್ಷಗಳಲ್ಲಿ ಕಂಡುಬಂದಿದೆ. ಘಟನೆ ನಡೆದ ಬಳಿಕ ರಾಜಕೀಯ ಮುಖಂಡರು ಸಂತ್ರಸ್ತೆಯ ಮನೆಗೆ ಭೇಟಿ ನೀಡಲು ಸರದಿ ಸಾಲಿನಲ್ಲಿ ಕಾಯುವುದು ಸಾಮಾನ್ಯವಾಗಿಬಿಟ್ಟಿದೆ.

ಇತ್ತೀಚೆಗೆ ದೆಹಲಿಯಲ್ಲಿ ನಡೆದ ದಲಿತ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದಾರೆ. 'ಮೋದಿ ಅವರ ಮೇಕ್ ಇನ್ ಇಂಡಿಯಾ ಎಲ್ಲೂ ಕಾಣಿಸುತ್ತಿಲ್ಲ. ಕಾಣುತ್ತಿರುವುದು ರೇಪ್ ಇನ್ ಇಂಡಿಯಾ' ಎಂದು ಹೇಳಿದ್ದಾರೆ. ಇದಕ್ಕೆ ಬಿಜೆಪಿಯಿಂದ ತೀವ್ರ ಟೀಕೆ ವ್ಯಕ್ತವಾಗಿದೆ.

ರಾಹುಲ್ ಅವರು ಕಾಂಗ್ರೆಸ್ ಆಡಳಿತ ಇರುವ ರಾಜಸ್ಥಾನ, ಮಹಾರಾಷ್ಟ್ರ, ಛತ್ತೀಸಗಡ ಮತ್ತು ಪಂಜಾಬ್‌ಗಳಲ್ಲಿ ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳ ಬಗ್ಗೆ ಏಕೆ ದನಿ ಎತ್ತುವುದಿಲ್ಲ ಎಂದು ಬಿಜೆಪಿ ತಿರುಗೇಟು ನೀಡಿದೆ.

ಬಿಜೆಪಿ ಆಡಳಿತ ಇರುವ ಉತ್ತರ ಪ್ರದೇಶದ ಹಾಥರಸ್ ಎಂಬಲ್ಲಿ ಕಳೆದ ವರ್ಷ ಅತ್ಯಾಚಾರ ಪ್ರಕರಣ ವರದಿಯಾಗಿತ್ತು. ಈ ಘಟನೆ ನಡೆದ ಸಮಯದಲ್ಲೇ ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನದ ಬಾರನ್ ಎಂಬಲ್ಲಿ ಅತ್ಯಾಚಾರ ವರದಿಯಾಗಿತ್ತು. ಪ್ರತಿಪಕ್ಷಗಳು ಹಾಥರಸ್ ಪ್ರಕರಣ ಇಟ್ಟುಕೊಂಡು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಯತ್ನಿಸಿದವು. ಆದರೆ ಬಾರನ್‌ನಲ್ಲಿ ಘಟನೆ ನಡೆದಾಗ ಅಲ್ಲಿನ ಕಾಂಗ್ರೆಸ್ ಸರ್ಕಾರ ಏನು ಮಾಡುತ್ತಿತ್ತು ಎಂದು ಬಿಜೆಪಿ ಕುಟುಕಿತ್ತು. ದೆಹಲಿ ಘಟನೆ ಬಳಿಕ ರಾಹುಲ್ ಗಾಂಧಿ, ಬೃಂದಾ ಕಾರಟ್, ಅರವಿಂದ ಕೇಜ್ರಿವಾಲ್ ಅವರು ಸಂತ್ರಸ್ತೆಯ ಮನೆಗೆ ಭೇಟಿ ನೀಡಿದರು. ಪ್ರವಾಸಿ ತಾಣವೇನೋ ಎನ್ನುವ ರೀತಿಯಲ್ಲಿ ಹಾಥರಸ್‌ಗೆ ರಾಜಕೀಯ ಮುಖಂಡರು ತಂಡತಂಡವಾಗಿ ಹೋಗಿಬಂದರು. ಮನೆಗೆ ಭೇಟಿ ನೀಡಿ ಫೋಟೊ ತೆಗೆಸಿಕೊಳ್ಳುವ ನಾಯಕರು ಬಳಿಕ ನಾಪತ್ತೆಯಾಗುತ್ತಾರೆ ಎಂಬುದು ಸಂತ್ರಸ್ತ ಕುಟುಂಬದ ಅಳಲು.

'ನಿರ್ಭಯಾ' ಬಳಿಕ ಜಾಗೃತಿ ಹೆಚ್ಚಳ

ದೇಶದ ವಾರ್ಷಿಕ ಅಪರಾಧ ವರದಿಗಳನ್ನು ಗಮನಿಸಿದರೆ 2013ರ ನಂತರ ದಾಖಲಾಗುತ್ತಿರುವ ಅತ್ಯಾಚಾರ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿರುವುದು ಸ್ಪಷ್ಟವಾಗುತ್ತದೆ. 2012ರಲ್ಲಿ ನಡೆದ ನಿರ್ಭಯಾ ಪ್ರಕರಣ ಮತ್ತು ಆನಂತರ ಅತ್ಯಾಚಾರ ಪ್ರಕರಣಗಳನ್ನು ದಾಖಲಿಸುವ ಬಗ್ಗೆ ಮೂಡಿದ ಜಾಗೃತಿಯ ಕಾರಣ, ಪ್ರಕರಣಗಳು ದಾಖಲಾಗುವ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಕೇಂದ್ರ ಸರ್ಕಾರವು ನಿರ್ಭಯಾ ಪ್ರಕರಣದ ನಂತರ ಅತ್ಯಾಚಾರ ಪ್ರಕರಣಗಳ ತ್ವರಿತ ವಿಚಾರಣೆ, ಸಂತ್ರಸ್ತೆಯರ ಚಿಕಿತ್ಸೆ ಮತ್ತು ಪರಿಹಾರ ವೆಚ್ಚಗಳನ್ನು ಭರಿಸಲು ನಿರ್ಭಯಾ ನಿಧಿಯನ್ನು ಸ್ಥಾಪಿಸಿದೆ. ಪ್ರತಿ ವರ್ಷ ಈ ನಿಧಿಗೆ ಇಂತಿಷ್ಟು ಹಣವನ್ನು ಮೀಸಲಿಡಲಾಗುತ್ತಿದೆ. ಆದರೆ ಈ ನಿಧಿಯು ಪೂರ್ಣಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ.

ಅತ್ಯಾಚಾರ ಪ್ರಕರಣಗಳ ತ್ವರಿತ ವಿಚಾರಣೆ ಮತ್ತು ಇತ್ಯರ್ಥಕ್ಕಾಗಿ ದೇಶದಾದ್ಯಂತ ತ್ವರಿತಗತಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಈಗ ದೇಶದಾದ್ಯಂತ ಒಟ್ಟು 660 ತ್ವರಿತಗತಿ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಅತ್ಯಾಚಾರ ಪ್ರಕರಣಗಳು ನಿರೀಕ್ಷಿತ ಮಟ್ಟದಲ್ಲಿ ಇತ್ಯರ್ಥವಾಗದ ಕಾರಣ, ಈ ಕೋರ್ಟ್‌ಗಳನ್ನು ಇನ್ನೂ ಎರಡು ವರ್ಷ ಮುಂದುವರಿಸಲು ಕೇಂದ್ರ ಸಚಿವ ಸಂಪುಟವು ಇದೇ ಬುಧವಾರ ಸಮ್ಮತಿ ಸೂಚಿಸಿದೆ. ಜತೆಗೆ ಇಂತಹ ನ್ಯಾಯಾಲಯಗಳ ಸಂಖ್ಯೆಯನ್ನು 1,023ಕ್ಕೆ ಹೆಚ್ಚಿಸಲು ಸಮ್ಮತಿ ಸೂಚಿಸಿದೆ. 2019ರಲ್ಲಿ ಆರಂಭವಾದಾಗಿನಿಂದ ಈ ವಿಶೇಷ ಕೋರ್ಟ್‌ಗಳು 51,600 ಅತ್ಯಾಚಾರ ಪ್ರಕರಣಗಳನ್ನು ಇತ್ಯರ್ಥಪಡಿಸಿವೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಅವರು ಹೇಳಿದ್ದಾರೆ. ಆದರೆ ಯಾವ ಅವಧಿಯವರೆಗಿನ ಮಾಹಿತಿಯನ್ನು ಅವರು ನೀಡಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ.

ಕುಂಠಿತ ವಿಚಾರಣೆ

1.37 ಲಕ್ಷ
2018ರ ಅಂತ್ಯದಲ್ಲಿ ವಿಚಾರಣೆ ಆರಂಭವಾಗದೇ ಉಳಿದಿದ್ದ ಪ್ರಕರಣಗಳು

24,848
2019ರಲ್ಲಿ ಹೊಸದಾಗಿ ವಿಚಾರಣೆಗೆ ಬಂದ ಪ್ರಕರಣಗಳು

1.62 ಲಕ್ಷ
2019ರಲ್ಲಿ ವಿಚಾರಣೆ ನಡೆಯಬೇಕಿದ್ದ ಒಟ್ಟು ಪ್ರಕರಣಗಳು

1.45 ಲಕ್ಷ
2019ರ ಅಂತ್ಯಕ್ಕೆ ವಿಚಾರಣೆ ಆರಂಭವಾಗಬೇಕಿದ್ದ ಪ್ರಕರಣಗಳು

16,701
2019ರ ಅಂತ್ಯಕ್ಕೆ ವಿಚಾರಣೆ ಪೂರ್ಣಗೊಂಡ ಪ್ರಕರಣಗಳು

1,431
2019ರ ಅಂತ್ಯಕ್ಕೆ ವಿಚಾರಣೆ ವೇಳೆ ವಜಾಗೊಂಡ ಪ್ರಕರಣಗಳು

17,109
2019ರ ಅಂತ್ಯಕ್ಕೆ ಇತ್ಯರ್ಥವಾದ ಪ್ರಕರಣಗಳು

ಉನ್ನಾವ್, ಕಠುವಾ, ಹಾಥರಸ್... ಮುಗಿಯದ ವ್ಯಥೆ

ದೇಶ ನಡುಗಿಸಿದ ನಿರ್ಭಯಾ: ಇದು ಇಡೀ ದೇಶವನ್ನೇ ನಡುಗಿಸಿದ ಪ್ರಕರಣ. ಮಾಧ್ಯಮಗಳು ಸಂತ್ರಸ್ತೆಯನ್ನು 'ನಿರ್ಭಯಾ' ಎಂದು ಕರೆದವು. 2012ರಲ್ಲಿ ದೆಹಲಿಯಲ್ಲಿ ಚಲಿಸುತ್ತಿದ್ದ ಬಸ್‌ನಲ್ಲಿ ಆರು ಮಂದಿ ನಿರ್ಭಯಾ ಮೇಲೆ ಅತ್ಯಾಚಾರ ಎಸಗಿದ್ದರು. ಕಬ್ಬಿಣದ ಸಲಾಕೆಯಿಂದ ಯುವತಿಯ ದೇಹಕ್ಕೆ ಗಾಯ ಮಾಡಲಾಗಿತ್ತು. ಸಿಂಗಪುರದ ಆಸ್ಪತ್ರೆಗೆ ದಾಖಲಿಸಿದರೂ ನಿರ್ಭಯಾ ಬದುಕುಳಿಯಲಿಲ್ಲ. ಆರೋಪಿಗಳಲ್ಲಿ ಒಬ್ಬನಾದ ರಾಮ್‌ಸಿಂಗ್ ಜೈಲಿನಲ್ಲಿ ಆತ್ಮಹತ್ಯೆಗೆ ಶರಣಾದ. ಮತ್ತೊಬ್ಬ ಬಾಲಾಪರಾಧಿ ಎಂಬ ಕಾರಣಕ್ಕೆ ಬಾಲಗೃಹದಲ್ಲಿರಿಸಿ ಎರಡು ವರ್ಷಗಳ ಬಳಿಕ ಬಿಡುಗಡೆ ಮಾಡಲಾಯಿತು. ಉಳಿದ ನಾಲ್ವರಿಗೆ ಮರಣದಂಡನೆ ಆಯಿತು.

ಹಾಥರಸ್ ಅನ್ಯಾಯ: ಉತ್ತರಪ್ರದೇಶದ ಹಾಥರಸ್ ಜಿಲ್ಲೆಯಲ್ಲಿ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ 19 ವರ್ಷದ ದಲಿತ ಮಹಿಳೆ ಮೇಲೆ ನಾಲ್ವರು ಮೇಲ್ಜಾತಿಯ ವ್ಯಕ್ತಿಗಳಿಂದ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಎರಡು ವಾರಗಳ ನಂತರ ಯುವತಿಯು ದೆಹಲಿಯ ಆಸ್ಪತ್ರೆಯಲ್ಲಿ ಮೃತಪಟ್ಟರು. ಯುವತಿಯ ಕುಟುಂಬ ಸದಸ್ಯರ ಅನುಪಸ್ಥಿತಿಯಲ್ಲಿ ರಾಜ್ಯದ ಪೊಲೀಸರೇ ಅಂತ್ಯಸಂಸ್ಕಾರ ನಡೆಸಿದ್ದರು. ಪೊಲೀಸರ ಈ ನಡೆಯ ವಿರುದ್ಧ ದೇಶದಾದ್ಯಂತ ತೀವ್ರ ಆಕ್ರೋಶ ಉಂಟಾಗಿತ್ತು

ಕಠುವಾ ಅತ್ಯಾಚಾರ: 2018ರ ಜನವರಿಯಲ್ಲಿ, ಕಾಶ್ಮೀರದ ಕಠುವಾ ಸಮೀಪ 8 ವರ್ಷದ ಬಾಲಕಿಯನ್ನು ಅಪಹರಿಸಿ, ಸಾಮೂಹಿಕ ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿತ್ತು. ಬಲಿಯಾದ ಬಾಲಕಿ ಸ್ಥಳೀಯ ಅಲೆಮಾರಿ ಬಕರ್ವಾಲ್ ಬುಡಕಟ್ಟಿಗೆ ಸೇರಿದವಳು. ಆಕೆ ನಾಪತ್ತೆಯಾದ ಒಂದು ವಾರದ ಬಳಿಕ ಮೃತದೇಹ ಪತ್ತೆಯಾಗಿತ್ತು

ಉನ್ನಾವ್ ಘಟನೆ: ಉತ್ತರ ಪ್ರದೇಶದ ಉನ್ನಾವ್ ಎಂಬಲ್ಲಿ 17 ವರ್ಷದ ದಲಿತ ಬಾಲಕಿಯ ಮೇಲೆ 2017ರ ಜೂನ್ 4ರಂದು ಅತ್ಯಾಚಾರ ನಡೆದಿತ್ತು. ಬಿಜೆಪಿಯ ಮಾಜಿ ಸದಸ್ಯ ಕುಲದೀಪ್ ಸಿಂಗ್ ಸೆಂಗಾರ್ ಪ್ರಕರಣದ ಆರೋಪಿ. ಆದರೆ ಪ್ರಕರಣವನ್ನು ಸಂತ್ರಸ್ತೆ ಕಡೆಗೆ ತಿರುಗಿಸಿದ್ದ ಸೆಂಗಾರ್, ಬಾಲಕಿಯ ತಂದೆಯನ್ನು ಜೈಲಿಗೆ ಹಾಕಿಸಿದ್ದ. ಬಾಲಕಿಯ ತಂದೆ ಪೊಲೀಸ್ ಕಸ್ಟಡಿಯಲ್ಲಿ ಮೃತಪಟ್ಟರು. ವಿಚಾರಣೆ ನಡೆಸಿದ ನ್ಯಾಯಾಲಯ, ಸೆಂಗಾರ್ ಮೇಲಿನ ಆರೋಪವನ್ನು ಎತ್ತಿಹಿಡಿದು, ಜೀವಾವಧಿ ಶಿಕ್ಷೆ ವಿಧಿಸಿತು

ಹೈದರಾಬಾದ್ ಶೂಟೌಟ್: 2019ರ ನವೆಂಬರ್‌ನಲ್ಲಿ ಹೈದರಾಬಾದ್‌ನ ಶಂಶಾಬಾದ್‌ನಲ್ಲಿ 26 ವರ್ಷದ ಪಶುವೈದ್ಯೆ ಮೇಲೆ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ ನಡೆದಿತ್ತು. ಪೊಲೀಸರು ಆರೋಪಿಗಳನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದರು. 'ಅತ್ಯಾಚಾರಿಗಳಿಗೆ ವಿಳಂಬ ಮಾಡದೇ ಶಿಕ್ಷೆ ನೀಡಲಾಗಿದೆ' ಎಂಬ ಅರ್ಥದಲ್ಲಿ ಚರ್ಚೆಗಳು ನಡೆದವು

ಜಿಶಾ ಪ್ರಕರಣ: 29 ವರ್ಷದ ದಲಿತ ಯುವತಿ ಜಿಶಾ 2016ರ ಏಪ್ರಿಲ್ 28ರಂದು ಕೇರಳದ ಎರ್ನಾಕುಲಂನ ತಮ್ಮ ಮನೆಯಲ್ಲಿಯೇ ಅತ್ಯಾಚಾರಕ್ಕೆ ಒಳಗಾಗಿ ಹತ್ಯೆಯಾದರು. ಜಿಶಾಗೆ ನ್ಯಾಯ ಕೊಡಿಸಲು ಸಾಮಾಜಿಕ ಜಾಲತಾಣಗಳಲ್ಲಿ ಶುರುಮಾಡಿದ್ದ ಜಸ್ಟೀಸ್‌ಫಾರ್‌ಜಿಶಾ ಹ್ಯಾಷ್‌ಟ್ಯಾಗ್‌ಗೆ ಭಾರಿ ಸ್ಪಂದನೆ ಸಿಕ್ಕಿತ್ತು

ಶಕ್ತಿ ಮಿಲ್ ಪ್ರಕರಣ: ಮುಂಬೈನ ಪತ್ರಿಕೆಯೊಂದರಲ್ಲಿ ಇಂಟರ್ನ್ ಆಗಿದ್ದ 22 ವರ್ಷದ ಫೋಟೊ ಜರ್ನಲಿಸ್ಟ್ ಮೇಲೆ ಮುಂಬೈನ ಶಕ್ತಿ ಮಿಲ್ಸ್‌ನಲ್ಲಿ ಬಾಲಕನೊಬ್ಬ ಸೇರಿದಂತೆ ಐವರು ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಮೂವರು ಅಪರಾಧಿಗಳಿಗೆ 2014ರ ಏಪ್ರಿಲ್ 4ರಂದು ಮರಣದಂಡನೆ ವಿಧಿಸಲಾಯಿತು. ಇತರ ಇಬ್ಬರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು

ಆಧಾರ: ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಸಿದ್ಧಪಡಿಸಿದ 'ಭಾರತದಲ್ಲಿ ಅಪರಾಧ ವಾರ್ಷಿಕ ವರದಿಗಳು: 2010ರಿಂದ 2019', ಪಿಟಿಐ, ಸಂಸತ್ತಿನಲ್ಲಿ ಸರ್ಕಾರ ನೀಡಿದ ಮಾಹಿತಿ, ನ್ಯಾಯಾಂಗ ಇಲಾಖೆ ವರದಿಗಳು

ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯ

'ವಂಚಿಸುವ ಉದ್ದೇಶದ ಲೈಂಗಿಕತೆ ಅತ್ಯಾಚಾರ'

ಪ್ರಜಾವಾಣಿ ವಾರ್ತೆ

ಲಖನೌ: 'ಮದುವೆಯಾಗುತ್ತೇನೆ ಎಂದು ಮಹಿಳೆಗೆ ಸುಳ್ಳು ಭರವಸೆ ನೀಡಿ ನಡೆಸುವ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರ ಎಂದು ಪರಿಗಣಿಸಬೇಕು. ಇಂತಹ ಪ್ರಕರಣಗಳನ್ನು ನಿಯಂತ್ರಿಸಲು ಅಗತ್ಯ ಕಾನೂನನ್ನು ರಚಿಸಬೇಕು' ಎಂದು ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಉತ್ತರ ಪ್ರದೇಶದ ಕಾನ್ಪುರದ ಮಹಿಳೆಯೊಬ್ಬರನ್ನು ಮದುವೆಯಾಗುವುದಾಗಿ ನಂಬಿಸಿ, ಲೈಂಗಿಕ ಕ್ರಿಯೆ ನಡೆಸಿದ್ದ ವ್ಯಕ್ತಿಯ ವಿರುದ್ಧ ವಂಚನೆ ಪ್ರಕರಣ ದಾಖಲಾಗಿದೆ. ಈಗ ಬಂಧನದಲ್ಲಿರುವ ಆರೋಪಿಯು ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಪ್ರದೀಪ್ ಕುಮಾರ್ ಶ್ರೀವಾಸ್ತವ ಅವರಿದ್ದ ಏಕಸದಸ್ಯ ಪೀಠವು ಅರ್ಜಿಯ ವಿಚಾರಣೆ ವೇಳೆ ಹೀಗೆ ಹೇಳಿದೆ. ಆರೋಪಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

'ಅತ್ಯಾಚಾರವು ದೈಹಿಕವಾಗಿ ಮತ್ತು ನೈತಿಕವಾಗಿ ಅತ್ಯಂತ ಕೀಳು ಅಪರಾಧ ಎಂದು ನಮ್ಮ ಸಮಾಜ ಭಾವಿಸುತ್ತದೆ. ಅತ್ಯಾಚಾರದ ದುಷ್ಪರಿಣಾಮಗಳು ಸಂತ್ರಸ್ತೆಯನ್ನು ದೀರ್ಘಕಾಲದವರೆಗೆ ಬಾಧಿಸುತ್ತವೆ. ಮದುವೆಯಾಗುವುದಾಗಿ ನಂಬಿಸಿ, ಲೈಂಗಿಕ ಕ್ರಿಯೆ ನಡೆಸುವುದು ಮತ್ತು ಆನಂತರ ಮದುವೆಯಾಗದೇ ವಂಚಿಸುವುದನ್ನು ಅತ್ಯಾಚಾರ ಎಂದು ಪರಿಗಣಿಸುವ ಕಾನೂನು ರಚಿಸುವ ಅವಶ್ಯಕತೆ ಇದೆ' ಎಂದು ಪೀಠವು ಹೇಳಿದೆ.

'ಸಂತ್ರಸ್ತೆಯನ್ನು ವಂಚಿಸುವ ಉದ್ದೇಶದಿಂದಲೇ ಮದುವೆಯ ಭರವಸೆ ನೀಡುವ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಕಾನೂನಿನಲ್ಲಿ ಯಾವುದೇ ಸ್ಪಷ್ಟ ಶಿಕ್ಷೆ ಇಲ್ಲದಿರುವ ಕಾರಣ, ತಾವು ತಪ್ಪಿಸಿಕೊಳ್ಳಬಹುದು ಎಂಬ ಮನಸ್ಥಿತಿ ಇಂತಹ ಆರೋಪಿಗಳಲ್ಲಿ ರೂಪುಗೊಂಡಿದೆ. ಸುಳ್ಳು ಭರವಸೆ ನೀಡಿ, ಲೈಂಗಿಕ ಕ್ರಿಯೆ ನಡೆಸಲು ಅನುಮತಿ ಪಡೆದುಕೊಂಡ ಪ್ರಕರಣಗಳನ್ನು ಅತ್ಯಾಚಾರ ಎಂದು ಸ್ಪಷ್ಟವಾಗಿ ವ್ಯಾಖ್ಯಾನಿಸುವ ಮತ್ತು ಶಿಕ್ಷಿಸುವ ಕಾನೂನಿನ ಅವಶ್ಯಕತೆ ಇದೆ' ಎಂದು ಪೀಠವು ಅಭಿಪ್ರಾಯಪಟ್ಟಿದೆ.

'ಲವ್‌ಜಿಹಾದ್' ನಿಷೇಧ ಕಾಯ್ದೆ ಪ್ರಶ್ನಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: 'ಅಂತರಧರ್ಮೀಯ ಮದುವೆಯ ನಂತರದ ಮತಾಂತರವನ್ನು ಅಪರಾಧ ಎಂದು ಪರಿಗಣಿಸುವ ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ-2021 ಅಥವಾ ಲವ್ ಜಿಹಾದ್ ನಿಷೇಧ ಕಾಯ್ದೆ ರಚಿಸಿದ ಹಿಂದಿನ ಕಾರಣವೇನು' ಎಂದು ಗುಜರಾತ್ ಹೈಕೋರ್ಟ್ ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ. ಈ ಸಂಬಂಧ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಈ ಕಾಯ್ದೆಯ ವಿರುದ್ಧ ಜಮೀಯತ್ ಉಲೇಮಾ ಎ ಹಿಂದ್ ಸಂಘಟನೆ ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ಈ ನೋಟಿಸ್ ಜಾರಿ ಮಾಡಿದೆ.

> ಒತ್ತಾಯದ, ವಂಚನೆಯ ಮದುವೆ ಅಪರಾಧ ಎನ್ನುತ್ತಿದ್ದೀರಿ, ಅದು ಸರಿ. ಆದರೆ ಮದುವೆಯ ಕಾರಣಕ್ಕೆ ಮತಾಂತರ ಆಗುವುದು ಹೇಗೆ ಅಪರಾಧವಾಗುತ್ತದೆ?
> **ಗುಜರಾತ್ ಹೈಕೋರ್ಟ್**

> ಹೈಕೋರ್ಟ್‌ನ ಈ ಪ್ರಶ್ನೆಗೆ ಉತ್ತರಿಸಲು ಸಾಕಷ್ಟು ಸಮಯಾವಕಾಶಬೇಕು. ಕಾಯ್ದೆಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಉತ್ತರ ನೀಡಬೇಕಿದೆ
> **ಮನೀಷ್ ಲವಕುಮಾರ್,** ಗುಜರಾತ್ ಅಡ್ವೊಕೇಟ್ ಜನರಲ್

'ಅಂತರಧರ್ಮೀಯ ವಿವಾಹವನ್ನು ಸಂಪೂರ್ಣವಾಗಿ ಅಪರಾಧ ಎಂದು ವ್ಯಾಖ್ಯಾನಿಸಲಾಗಿದೆ. ಸಂವಿಧಾನವು ಕೊಟ್ಟಿರುವ ಮೂಲಭೂತ ಹಕ್ಕನ್ನು ಈ ಕಾಯ್ದೆಯು ಅಪರಾಧ ಎಂದು ಪರಿಗಣಿಸುತ್ತದೆ. ಅಂತರಧರ್ಮೀಯ ವಿವಾಹ ನಡೆದ ಸಂದರ್ಭದಲ್ಲಿ ವಧುವಿನ ತಂದೆ-ತಾಯಿ ಅಥವಾ ರಕ್ತಸಂಬಂಧಿ, 'ಇದು ಒತ್ತಾಯದ ಮತ್ತು ಮತಾತಂರ ಉದ್ದೇಶದ ಮದುವೆ' ಎಂದು ದೂರು ನೀಡಿದರೆ ಸಾಕು. ವರನನ್ನು 10 ವರ್ಷ ಜೈಲಿಗೆ ಹಾಕಬಹುದು. ಇದು ಇಬ್ಬರು ವಯಸ್ಕರು ನಿರ್ಧರಿಸಿ ಆದ ಮದುವೆಯನ್ನು ಅಪರಾಧ ಕೃತ್ಯ ಎಂದು ಪರಿಗಣಿಸುತ್ತದೆ. ಈ ಮೂಲಕ ಅವರ ಹಕ್ಕನ್ನು ಕಸಿದುಕೊಳ್ಳುತ್ತದೆ' ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ತಮ್ಮ ತಂದೆಯ ಸಾವಿಗೆ ಸಹೋದರ, ಪ್ರಧಾನಿ ನರೇಂದ್ರ ಮೋದಿ ಅವರೇ ಕಾರಣ ಎಂಬ ಭಾವನೆ ಅವರ ಇತರ ಸಹೋದರರಲ್ಲಿ ಈಗಲೂ ಇದೆ' ಎಂಬ ಪತ್ರಿಕಾ ವರದಿಯೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಮೋದಿ ಅವರು ಚಿನ್ನ ಕದ್ದು ಮನೆಯಿಂದ ಹೊರನಡೆದಾಗ ಅವರ ತಂದೆ ದಾಮೋದರ ದಾಸ್ ಮೋದಿ ಅವರು ಹೃದಯಾಘಾತದಿಂದ ಮೃತಪಟ್ಟರು. ಹಣಕಾಸಿನ ತೊಂದರೆಯಿಂದಾಗಿ ಸೂಕ್ತ ಸಮಯದಲ್ಲಿ ಚಿಕಿತ್ಸೆ ಸಿಗಲಿಲ್ಲ' ಎಂದು ವರದಿಯಲ್ಲಿ ಇದೆ.

'ಡೆಲ್ಲಿ ನ್ಯೂಸ್ ನೆಟ್‌ವರ್ಕ್' ಎಂಬ ಪತ್ರಿಕೆಯಲ್ಲಿ ಈ ವರದಿ ಪ್ರಕಟವಾಗಿದೆ ಎಂದು ಹೇಳಲಾಗಿದೆ. ಆದರೆ, ಈ ಹೆಸರಿನ ಪತ್ರಿಕೆಯೇ ಇಲ್ಲ ಎಂಬುದು 'ಆಲ್ಟ್ ನ್ಯೂಸ್' ಮತ್ತು 'ಲಾಜಿಕಲ್ ಇಂಡಿಯನ್'ನ ಫ್ಯಾಕ್ಟ್ ಚೆಕ್ ತಂಡಗಳು ನಡೆಸಿದ ಪರಿಶೀಲನೆಯಿಂದ ಗೊತ್ತಾಗಿದೆ. ವರದಿಯಲ್ಲಿ ಕಾಗುಣಿತದ ಹಲವು ತಪ್ಪುಗಳು ಇವೆ. 'ಈ ಸುದ್ದಿ ಸುಳ್ಳು' ಎಂದು ಮೋದಿ ಅವರ ಸಹೋದರರಾದ ಸೋಮ ಮೋದಿ ಹಾಗೂ ಪ್ರಹ್ಲಾದ್ ಮೋದಿ ಅವರೂ ತಿಳಿಸಿದ್ದಾರೆ. ತಂದೆಯವರು ಕ್ಯಾನ್ಸರ್‌ನಿಂದ ಮೃತಪಟ್ಟಾಗ ನರೇಂದ್ರ ಮೋದಿ ಅವರು ಕೈಲಾಸ ಮಾನಸ ಸರೋವರ ಯಾತ್ರೆ ಮುಗಿಸಿ ಆಗಷ್ಟೇ ಬಂದಿದ್ದರು ಎಂದು ಸ್ಪಷ್ಟಪಡಿಸಿದ್ದಾರೆ.

ಗುಂಡಣ್ಣ

ದಿನ ಭವಿಷ್ಯ

ಶುಕ್ರವಾರ ಆಗಸ್ಟ್ 6, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆಶ್ಲೇಷ ತ್ರಯೋದಶಿ ಗಂ. 26-53 (ಹ. 4-59) ಶುಕ್ರವಾರ ನಿತ್ಯ ನಕ್ಷತ್ರ ಆದ್ರೆ ಗಂ. 0-18 (ಬೆ. 6-21) ವಜ್ರ ನಾಮ ಯೋಗ ಗಂ. 49-14 ವಣಿಜ ಕರಣ ಗಂ. 26-53 ವಿಷ ಗಂ. 32-28 ಅಮೃತ ಗಂ. 58-13 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-10 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 2, 6

ಮೇಷ: ಸಂಕಷ್ಟಗಳು ಕಡಿಮೆಯಾಗಿ ಕೆಲಸ–ಕಾರ್ಯಗಳು ಸುಗಮ ಚಾಲನೆ ಪಡೆದುಕೊಳ್ಳುವವು. ಸಿಟ್ಟು ಸೆಡವುಗಳಿಂದಾಗಿ ತೊಂದರೆ. ಅನಿರೀಕ್ಷಿತ ಅನಾವಶ್ಯಕ ಖರ್ಚು ಸಂಭವಿಸುವವು. ಆರೋಗ್ಯದಲ್ಲಿ ಸುಧಾರಣೆ.

ವೃಷಭ: ನಿಮ್ಮ ಕೆಲಸ–ಕಾರ್ಯಗಳು ಮಂದಗತಿಯಲ್ಲೂ ಪ್ರಗತಿ ಕಾಣುವುದು. ಉದರಶೂಲೆ ಮುಂತಾದ ಉದರ ಸಂಬಂಧಿ ಸಣ್ಣಪುಟ್ಟ ತೊಂದರೆ ಬರಬಹುದು. ಹೊಸ ಕಾರ್ಯಯೋಜನೆ ಪ್ರಾರಂಭಿಸದಿರುವುದೇ ಒಳ್ಳೆಯದು.

ಮಿಥುನ: ಆರ್ಥಿಕ ಉನ್ನತಿ ಕಂಡುಬರುವುದು. ಶತ್ರುಗಳ ವಿರುದ್ಧ ಜಯದ ಸವಾರಿ ಮಾಡುವ ಯೋಗ. ಬಹುದಿನಗಳ ಸಮಸ್ಯೆಯಿಂದ ಪರಿಹಾರ ದೊರೆತು ನೆಮ್ಮದಿ. ಬಂಧುಗಳ ಆಗಮನವನ್ನು ನಿರೀಕ್ಷಿಸಿ.

ಕರ್ಕಾಟಕ: ಕಣ್ಣು, ತಲೆನೋವಿನಿಂದ ಬಳಲುವ ಸಾಧ್ಯತೆ. ಅತಿಯಾದ ವಾದ, ವಿವಾದದಿಂದಾಗಿ ವೈರತ್ವ. ಅಮೂಲ್ಯ ವಸ್ತುಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದ್ದು ಜಾಗೃತೆ ವಹಿಸಿ. ಅನಾವಶ್ಯಕ ದಂಡ ತೆರಬೇಕಾದಿತು.

ಸಿಂಹ: ನಿಮ್ಮ ನಿರ್ಣಯಗಳು ಫಲ ನೀಡುವವು. ಆದಾಯದಲ್ಲಿ ಹೆಚ್ಚಳ ಕಂಡುಬಂದು ಪರಿಸ್ಥಿತಿ ಸುಧಾರಿಸುವುದು. ವಾಹನ ಖರೀದಿ ಭಾಗ್ಯ. ಉದ್ಯೋಗ ಕ್ಷೇತ್ರದಲ್ಲಿ ಗೌರವಾದರಗಳು ಸಿಗಲಿವೆ.

ಕನ್ಯಾ: ಆರ್ಥಿಕ ಅನುಕೂಲ ನಿಮ್ಮನ್ನರಸಿ ಬರುವುದು. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಖರ್ಚು. ನಿಮ್ಮ ಉತ್ತಮ ನಡುವಳಿಕೆಯಿಂದಾಗಿ ಗೌರವಾದರ. ಆರೋಗ್ಯ ವೃದ್ಧಿ ನೆಮ್ಮದಿಯ ಜೀವನ.

ತುಲಾ: ಹಿರಿಯರೊಂದಿಗೆ ವಿಧೇಯತೆಯಿಂದ ನಡೆದುಕೊಳ್ಳಿ. ಸಾಮಾಜಿಕ ಕಾರ್ಯಗಳಿಂದಾಗಿ ನೆಮ್ಮದಿ ದೊರಕುವುದು. ವೃಥಾ ವೈಮನಸ್ಸು. ಆರ್ಥಿಕ ವಿಷಯದಲ್ಲಿ ಯಥಾಸ್ಥಿತಿ ಮುಂದುವರೆದು, ಕೆಲಸ ಕಾರ್ಯಗಳಲ್ಲಿ ಉತ್ಸಾಹ.

ವೃಶ್ಚಿಕ: ನೌಕರರು ಮತ್ತು ಸ್ವಂತ ಉದ್ಯೋಗಿಗಳು ತಪ್ಪು ತಡೆಗಳಿಗೆ ಅವಕಾಶವಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಉದ್ಯೋಗ ಅಥವಾ ವಾಸದ ಸ್ಥಾನ ಪಲ್ಲಟವಾಗುವ ಸಾಧ್ಯತೆ. ಉತ್ತಮ ಸ್ಥಾನ ದೊರಕುವುದು.

ಧನು: ಮನೆಯಲ್ಲಿ ಶುಭಕಾರ್ಯಗಳು ನೆರವೇರುವ ಸಾಧ್ಯತೆ. ನೌಕರಿಯ ವಿಷಯದಲ್ಲಿ ಉನ್ನತ ಸ್ಥಾನ ಅಥವಾ ಬದಲಾವಣೆ ಕಂಡುಬರುವುದು. ಆರ್ಥಿಕ ಅನುಕೂಲತೆ ಉತ್ತಮಗೊಳ್ಳುವುದು. ಮಕ್ಕಳಿಂದ ಸಂತಸ.

ಮಕರ: ಬೇರೆಯವರ ಅಪಹಾಸ್ಯಕ್ಕೆ ಗುರಿಯಾಗುವ ಸಾಧ್ಯತೆಯಿದ್ದು ಗಂಭೀರ ನಡವಳಿಕೆ ಅಗತ್ಯ. ಮಾನಸಿಕ ಚಂಚಲತೆಯುಂಟಾಗಿ ದುಸ್ವಪ್ನಗಳು ಉಂಟಾಗಬಹುದು. ಮನೆಯವರ ಆರೋಗ್ಯದೆಡೆಗೆ ಹೆಚ್ಚಿನ ಗಮನ ಅಗತ್ಯ.

ಕುಂಭ: ಅನಾವಶ್ಯಕ ಖರ್ಚು ತಲೆದೋರಬಹುದು. ಬಂಧುಗಳ ಭೇಟಿ ಸಾಧ್ಯತೆ. ಉದ್ಯೋಗದಲ್ಲಿ ಹೆಚ್ಚಿನ ಒತ್ತಡ. ಆಹಾರದಲ್ಲಿನ ವ್ಯತ್ಯದಿಂದಾಗಿ ಅಜೀರ್ಣ ಸಂಬಂಧಿ ರೋಗಗಳು ಕಂಡುಬರಬಹುದು.

ಮೀನ: ಬರಬೇಕಾದ ಹಣ ಹಿಂದಿರುಗಿ ಬರುವ ಸಾಧ್ಯತೆ. ಉಳಿತಾಯದಲ್ಲಿ ಪ್ರಗತಿ. ಆರೋಗ್ಯದಲ್ಲಿ ಸುಧಾರಣೆ. ಸಂತಾನ ಭಾಗ್ಯ ಪ್ರಾಪ್ತಿ. ನಿಂತುಹೋದ ಯೋಜನೆಗಳು ಪುನರಾರಂಭಗೊಳ್ಳುವವು.

ನಿಮ್ಮ ಜನ್ಮದಿನ 6-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ಹಣಕಾಸಿನ ವ್ಯವಹಾರದಲ್ಲಿ ಸಾಮಾನ್ಯ ಪ್ರಗತಿ, ಸೌಂದರ್ಯಪ್ರಿಯರಾದ ನೀವು ಅಲಂಕರಣ ಉದ್ಯೋಗದಲ್ಲಿ ಪ್ರಗತಿಯನ್ನು ಸಾಧಿಸಲಿದ್ದೀರಿ. ಉದ್ಯೋಗಸ್ಥರಿಗೆ ಉತ್ತಮ ಆದಾಯ. ಮಕ್ಕಳ ಪ್ರಗತಿಯಿಂದಾಗಿ ಗೌರವಾನ್ವಿತ ಸ್ಥಾನಮಾನಗಳು ಲಭ್ಯವಾಗುವವು.

ಬೆರಗಿನ ಬೆಳಕು

ಗುರುರಾಜ ಕರಜಗಿ

ದ್ವಂದ್ವಗಳ ಚಿಂತನೆ

ಮಗ ಹಾಗೆ ತನ್ನ ದುಃಖವನ್ನು ಹೇಳಿಕೊಂಡಾಗಲೂ ಬೋಧಿಸತ್ವ ಯಾವ ಮಾತನ್ನೂ ಆಡಲಿಲ್ಲ. ಆಗ ಜಾಲಿಕುಮಾರ ಹೃದಯ ಕರಗುವಂತೆ ವಿಲಾಪ ಮಾಡತೊಡಗಿದ. 'ಅಪ್ಪಾ, ಆ ಯಾಚಕನೊಂದಿಗೆ ಹೋಗುವುದು ನನಗೆ ಕಷ್ಟವಲ್ಲ. ಮನುಷ್ಯನಿಗೆ ಈ ತರಹದ ಸುಖ-ದುಃಖಗಳು ಬಂದೇ ಬರುತ್ತವೆ. ಆದರೆ ತಾಯಿಯ ದರ್ಶನವಿಲ್ಲದೆ ಹೋಗುವುದು ನನಗೆ ತುಂಬ ದುಃಖಕರ. ನನ್ನ ಬಡಪಾಯಿ ತಾಯಿ, ನನ್ನನ್ನು ಮತ್ತು ಸುಂದರಿಯಾದ ನನ್ನ ತಂಗಿಯನ್ನು ಕಾಣದೆ ಚಿರಕಾಲ ಅಳುತ್ತಾಳೆ. ಆಕೆ ಸದಾಕಾಲವೂ ತಂಗಿಯನ್ನು ಆಶ್ರಮದಲ್ಲಿ ಕಾಣಲು ಹವಣಿಸುತ್ತಾಳೆ. ನೀವಿಬ್ಬರೂ ನಮ್ಮನ್ನು ಕಾಣದೆ ಕೊರಗಿ ಕೃಶರಾಗಿಬಿಡುತ್ತೀರಿ. ಅಪ್ಪಾ, ನಾವು ಇನ್ನು ಮೇಲೆ ಇಲ್ಲಿ ಸುರಿದಿರುವ ಜಮ್ಮು ನೇರಳೆ, ಸಿಂಧುವಾರಿಕ, ಅಶ್ವರಥ, ಹಲಸು, ನ್ಯಗ್ರೋಧ ಮುಂತಾದ ಹಣ್ಣಿನ ಮರಗಳನ್ನು ತೊರೆದು ಹೋಗುತ್ತೇವೆ. ಈ ಆಶ್ರಮ, ತಂಪಾದ ನೀರಿನ ನದಿ, ಸರೋವರಗಳು, ನಾವು ಸಂತೋಷವಾಗಿ ಆಡಿಕೊಂಡಿದ್ದ ಪರಿಸರ, ಎಲ್ಲವನ್ನೂ ಬಿಟ್ಟು ಹೋಗುತ್ತೇವೆ. ಅಪ್ಪಾ, ಇಗೋ, ಇವು ನಾವು ಆಟವಾಡುತ್ತಿದ್ದ ಆನೆ, ಕುದುರೆ, ಎತ್ತುಗಳ ಗೊಂಬೆಗಳು. ಇವುಗಳೊಂದಿಗೆ ನಾವು ಆಟವಾಡುತ್ತಿದ್ದೆವು. ಇಂದು ಅವುಗಳನ್ನು ನಾವು ತ್ಯಜಿಸುತ್ತಿದ್ದೇವೆ'. ಹೀಗೆ ಹೇಳಿ ಮಗ ಅಳುತ್ತಿದ್ದಾಗ ಯಾಚಕನಾದ ಮುದಿಬ್ರಾಹ್ಮಣ ಅಲ್ಲಿಗೆ ಬಂದ. ಮತ್ತೆ ಅಣ್ಣ-ತಂಗಿಯನ್ನು ಬಳ್ಳಿಯಿಂದ ಕಟ್ಟಿ, ತಂದೆಯ ಮುಂದೆಯೇ ರಪರಪನೆ ಹೊಡೆಯುತ್ತ, ಎಳೆದುಕೊಂಡು ಹೊರಟ. ಹಾಗೆ ಎಳೆದೊಯ್ಯುತ್ತಿರುವಾಗ ಮಕ್ಕಳು ತಂದೆಗೆ ಕೂಗಿ ಹೇಳಿದರು, 'ತಂದೆಯೇ, ಅಮ್ಮನಿಗೆ ಆರೋಗ್ಯ ಕಾಪಾಡಿಕೊಳ್ಳಲು ಹೇಳಿ. ನೀನೂ ಸುಖವಾಗಿರು. ನಮ್ಮ ಆಟದ ಬೊಂಬೆಗಳು ಅಮ್ಮನ ದುಃಖವನ್ನು ಕೊಂಚ ಕಡಿಮೆ ಮಾಡಿಯಾವು'.

ಮಕ್ಕಳ ದುಃಖವನ್ನು ಕಂಡು ಬೋಧಿಸತ್ವನ ಮನಸ್ಸಿನಲ್ಲಿ ತಳಮಳ ಉಂಟಾಯಿತು. ಅವನ ಹೃದಯದ ಮಾಂಸ ಬಿಸಿಯಾಯಿತು. ಸಿಂಹದ ಬಾಯಿಯಲ್ಲಿ ತಲೆಯನ್ನು ಸಿಕ್ಕಿಸಿಕೊಂಡ ಆನೆಯಂತೆ, ರಾಹುವಿನ ಮುಖದಲ್ಲಿ ಸೇರಿದ ಚಂದ್ರನಂತೆ ಆತ ನಡುಗುತ್ತ, ತನ್ನನ್ನು ನಿಯಂತ್ರಿಸಿಕೊಳ್ಳಲಾರದವನಂತೆ, ಮಕ್ಕಳನ್ನು ನೋಡದೆ ಆಶ್ರಮದೊಳಗೆ ಬಂದ. ಅಲ್ಲಿ ತಾನೊಬ್ಬನೇ ನಿಂತು ಕರುಣಾಪೂರ್ಣವಾಗಿ ಪ್ರಲಾಪ ಮಾಡತೊಡಗಿದ. 'ನಾನೇನೋ ನನ್ನ ಮುಕ್ತಿಗಾಗಿ ಮಕ್ಕಳನ್ನು ತ್ಯಾಗ ಮಾಡಿಬಿಟ್ಟೆ. ಇನ್ನು ಮುಂದೆ ಮಕ್ಕಳಿಗೆ ಹಸಿವು, ಬಾಯಾರಿಕೆಯಾದರೆ ಯಾರನ್ನು ಕೇಳಬೇಕು? ಸಂಜೆ ಮಲಗುವಾಗ ಅವರಿಗೆ ಯಾರು ಊಟ ಕೊಡುತ್ತಾರೆ? ಕಾಲಿನಲ್ಲಿ ಪಾದರಕ್ಷೆಗಳಿಲ್ಲದೆ ಹೇಗೆ ನಡೆದಾರು? ಮಕ್ಕಳಿಗೆ ನಡೆದು ಆಯಾಸವಾದರೆ ಎತ್ತಿಕೊಳ್ಳುವವರಾರು? ಆ ಮುದುಕ ಬ್ರಾಹ್ಮಣ ನನ್ನ ಮುಂದೆಯೇ ಮಕ್ಕಳಿಗೆ ಹೊಡೆಯುತ್ತ ಹೋದನಲ್ಲ, ಬಲೆಯಲ್ಲಿ ಸಿಕ್ಕ ಮೀನುಗಳನ್ನು ಹೊಡೆದಂತೆ ಸುಕೋಮಲವಾದ ಮಕ್ಕಳನ್ನು ಶಿಕ್ಷಿಸುತ್ತಾನಲ್ಲ, ಅವನಿಂದ ಕರುಣೆಯನ್ನು ಅಪೇಕ್ಷಿಸುವುದು ಸಾಧ್ಯವೇ?'

ಹೀಗೆ ಚಿಂತಿಸುವಾಗ ಬೋಧಿಸತ್ವನ ಮನಸ್ಸಿನಲ್ಲಿ ಸಂಕಲ್ಪ, ವಿಕಲ್ಪಗಳು ಏಳತೊಡಗಿದವು. ಈ ಬ್ರಾಹ್ಮಣ ಮಕ್ಕಳಿಗೆ ತೊಂದರೆ ಕೊಡುತ್ತಾನೆ. ಆದ್ದರಿಂದ ನಾನು ನನ್ನ ಬಿಲ್ಲು, ಖಡ್ಗಗಳನ್ನು ತೆಗೆದುಕೊಂಡು ಹೋಗಿ, ಬ್ರಾಹ್ಮಣನನ್ನು ಹಿಂಬಾಲಿಸಿ, ಅವನನ್ನು ಕೊಂದು ಮಕ್ಕಳನ್ನು ಕರೆತಂದುಬಿಡಲೇ? ಆದರೆ ದಾನಕೊಟ್ಟು ಅದರ ವಿರುದ್ಧವಾಗಿ ಚಿಂತಿಸುವುದು ಅನುಚಿತ. ಹೀಗೆ ದ್ವಂದ್ವದಲ್ಲಿ ಚಿಂತಿಸಿ ಬೋಧಿಸತ್ವ ಬೆಂಡಾದ. ❖

ಪದಬಂಧ 4680 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಈತ ನೆಲೆಗೊಳಿಸುವವನು (3)
4.ವನದ ಹತ್ತಿರ ಬೀಸಿದ ಗಾಳಿ (3)
5.ಕತ್ತು ಕೊನೆಗಿದ್ದಾಗ ನಡೆದ ಘಟನೆ! (4)
6.ಈ ಪರಿ ಕಾಣುತ್ತಿರುವ ಅಳತೆ (4)
8.ದಿಟ್ಟತನದಿಂದ ನುಡಿದ ಸತ್ಯವಿಲ್ಲಿ ಉಲ್ಟಾ ಕಾಣುತ್ತಿದೆ (2)
10.ತಮ್ಮನ ಮನೆ ಹತ್ತಿರ ಕವಿದ ಕತ್ತಲು! (2)
13.ತಪಸ್ಸನ್ನು ಮಾಡುವವಳು (4)
14.ಅವನ ವಾಸಸ್ಥಾನದ ಹತ್ತಿರ ಸಂಭವಿಸಿದ ಸಾವು! (4)
15.ಬಲತ್ಕಾರದಿಂದ ಹಿಡಿಯುವುದು (3)
16.ಗ್ರಹದ ಹತ್ತಿರವಿರುವ ಪ್ರತಿಮೆ! (3)

ಮೇಲಿಂದ ಕೆಳಕ್ಕೆ
1.ಈ ವೈಸ್‌ಚಾನ್ಸಲರ್ ಕನ್ನಡಿಗರು! (6)
2.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
3.ಊಳಿಗವನ್ನು ಹೀಗೆನ್ನಿ (3)
5.ಧನಿಕನನ್ನು ಹೀಗೂ ಕರೆಯುತ್ತಾರೆ (4)
7.ಮರಗಿಡಗಳನ್ನು ಹೆಚ್ಚಾಗಿ ಬೆಳೆಸಲು ಪ್ರೋತ್ಸಾಹಿಸುವ ಸಮಾರಂಭವಿಲ್ಲಿ ಉಲ್ಟಾ ಕಾಣುತ್ತಿದೆ (6)
9.ಧೈರ್ಯ ಅಥವಾ ಸಾಹಸ (4)
11.ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು (5)
12.ಕಳವಳದಿಂದ ತಿಂದಿರುವ ತುತ್ತು (3)



4679ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಪ್ಲವ 4.ರಸಪೂರ್ಣ 6.ಕಮಂಡಲು 8.ನಯನ 11.ಕಸೂತಿ 13.ಹಸುಗೂಸು 16.ಮದಗಜ 17.ಲಿಲಾವು
ಮೇಲಿಂದ ಕೆಳಕ್ಕೆ: 2.ವರಮಾನ 3.ಬಗ್ಗಡ 5.ರ್ಣಕ 7.ಲುಬ್ಧಕ 9.ನರಕ 10.ಕಲಹ 12.ತಿಲಾಂಜಲಿ 14.ಸುಭಿಕ್ಷ 15.ಸುಮ

ಸುಡೊಕು 5066

	2			6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5065 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಗಡಿ ಸಮಸ್ಯೆ ಪರಿಹಾರಕ್ಕೆ ಚರ್ಚೆ ಅಸ್ಸಾಂ–ಮಿಜೋರಾಂ ಸಮ್ಮತಿ

ಐಜ್ವಾಲ್ (ಪಿಟಿಐ): ಅಂತರರಾಜ್ಯ ಗಡಿ ವಿವಾದವನ್ನು ಸೌಹಾರ್ದಯುತ ಮಾತುಕತೆಯ ಮೂಲಕ ಬಗೆಹರಿಸಿ-ಕೊಳ್ಳಲು ಮಿಜೋರಾಂ ಮತ್ತು ಅಸ್ಸಾಂ ಸರ್ಕಾರ ಗುರುವಾರ ನಿರ್ಧರಿಸಿವೆ.

ಅಧಿಕಾರಿಗಳು ಈ ಮಾಹಿತಿ ನೀಡಿದ್ದಾರೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಿಜೋರಾಂ ರಾಜ್ಯಕ್ಕೆ ಪ್ರಯಾಣಿಸುವ ಕುರಿತಂತೆ ರಾಜ್ಯ-ವಾಸಿಗಳಿಗೆ ನೀಡಲಾಗಿದ್ದ ಸಲಹಾ ಸೂಚನೆಯನ್ನು ಹಿಂಪಡೆಯಲು ಅಸ್ಸಾಂ ಸರ್ಕಾರ ನಿರ್ಧರಿಸಿದೆ.

ಅಂತರ ರಾಜ್ಯ ಗಡಿಯಲ್ಲಿ ಶಾಂತಿಯುತ ಸ್ಥಿತಿಯನ್ನು ಕಾಯ್ದುಕೊಳ್ಳಲು ಉಭಯ ರಾಜ್ಯಗಳು ಸಮ್ಮತಿಸಿದ್ದು, ಪೂರಕವಾಗಿ ಗಡಿ ಭಾಗಕ್ಕೆ ತಟಸ್ಥ ಪಡೆಗಳನ್ನು ನಿಯೋಜಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿವೆ.

ಈ ಬಗ್ಗೆ ಅಸ್ಸಾಂನ ಗಡಿಭದ್ರತೆ ಮತ್ತು ಅಭಿವೃದ್ಧಿ ಖಾತೆ ಸಚಿವ ಅತುಲ್ ಬೋರಾ, ಇಲಾಖೆಯ ಆಯುಕ್ತ ಜಿ.ಡಿ. ತ್ರಿಪಾಠಿ ಹಾಗೂ ಮಿಜೋರಾಂನ ಗೃಹ ಸಚಿವ ಲಾಲ್‌ಚಂ ಲಿಯಾನಾ ಮತ್ತು ಗೃಹ ಕಾರ್ಯದರ್ಶಿ ವನಲಾಲ್‌ಗತಸ್ಕಾ ಜಂಟಿ ಹೇಳಿಕೆ ನೀಡಿದ್ದಾರೆ.

ಗಡಿ ಕಾಯಲು ಉಭಯ ರಾಜ್ಯಗಳು ತಮ್ಮ ಅರಣ್ಯ ಮತ್ತು ಪೊಲೀಸ್ ಪಡೆಗಳನ್ನು ನಿಯೋಜಿಸಬಾರದು. ಸಂಘರ್ಷಕ್ಕೆ ಅವಕಾಶ ಕಲ್ಪಿಸಬಾರದು. ಅಸ್ಸಾಂ–ಮಿಜೋರಾಂ ಗಡಿಭಾಗದ ಜಿಲ್ಲೆಗಳಾದ ಅಸ್ಸಾಂನ ಕರೀಂಗಂಜ್, ಹೈಲಾಕಂಡಿ ಮತ್ತು ಕಚಾರ್ ಹಾಗೂ ಮಿಜೋರಾಂನ ಮಮಿತ್ ಮತ್ತು ಕೊಲಸಿಬ್ ಜಿಲ್ಲೆಗಳಿಗೆ ಅನ್ವಯವಾಗಲಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಅಸ್ಸಾಂ ಮತ್ತು ಮಿಜೋರಾಂ ಸರ್ಕಾರಗಳ ಪ್ರತಿನಿಧಿಗಳು ಉಭಯ ರಾಜ್ಯಗಳ ಜನರ ನಡುವೆ ಶಾಂತಿ ಮತ್ತು ಸಾಮರಸ್ಯವನ್ನು ಉತ್ತೇಜಿಸಲು, ಸಂರಕ್ಷಿಸಲು ಮತ್ತು ಕಾಪಾಡಿಕೊಳ್ಳಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಒಪ್ಪಿದ್ದಾರೆ' ಎಂದು ಅಸ್ಸಾಂ ಸಚಿವ ಅಶೋಕ್ ಸಿಂಘಾಲ್ ಟ್ವೀಟ್ ಮಾಡಿದ್ದಾರೆ.

ಜುಲೈ 26 ರಂದು ಈ ಎರಡು ಈಶಾನ್ಯ ರಾಜ್ಯಗಳ ನಡುವಿನ ಅಂತರ್ ರಾಜ್ಯ ಗಡಿ ಘರ್ಷಣೆಯಲ್ಲಿ ಆರು ಮಂದಿ ಅಸ್ಸಾಂ ಪೊಲೀಸ್ ಸಿಬ್ಬಂದಿ ಸಾವನ್ನಪ್ಪಿದ್ದರು. ಕ್ಯಾಚಾರ್ ಪ್ರದೇಶದ ಎಸ್‌ಪಿ ಸೇರಿದಂತೆ 50 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಕೆಂಪುಪಟ್ಟಿಯಿಂದ ಹಳದಿಪಟ್ಟಿಗೆ ಭಾರತ

ಲಂಡನ್ (ಪಿಟಿಐ): ಪೂರ್ಣ ಪ್ರಮಾಣದಲ್ಲಿ ಕೋವಿಡ್ ಲಸಿಕೆ ಪಡೆದಿರುವ ಭಾರತದ ಪ್ರಯಾಣಿಕರು ಬ್ರಿಟನ್‌ನಲ್ಲಿ 10 ದಿನಗಳ ಕಾಲ ಹೋಟೆಲ್ ಕ್ವಾರಂಟೈನ್‌ನಲ್ಲಿ ಇರಬೇಕಾದ ಅಗತ್ಯವಿಲ್ಲ. ಅದರ ಬದಲಿಗೆ ಅವರು 10 ದಿನಗಳ ಕಾಲ ಮನೆ ಕ್ವಾರಂಟೈನ್‌ನಲ್ಲಿ ಇರಬೇಕಾಗುತ್ತದೆ.

ಬ್ರಿಟನ್ ಈ ಹಿಂದೆ ಕೆಂಪು ಪಟ್ಟಿಯಲ್ಲಿ ಗುರುತಿಸಿದ್ದ ಭಾರತ, ಯುಎಇ, ಕತಾರ್, ಬಹ್ರೇನ್ ದೇಶಗಳನ್ನು ಹಳದಿ ಪಟ್ಟಿಗೆ ಸೇರಿಸಿದೆ. ಈ ಬದಲಾವಣೆ ಇದೇ 8ರಿಂದ ಜಾರಿಗೆ ಬರಲಿದೆ ಎಂದು ಬ್ರಿಟನ್ ಸಾರಿಗೆ ಕಾರ್ಯದರ್ಶಿ ಗ್ರಾಂಟ್ ಶಾಪ್ಸ್ ಟ್ವೀಟ್ ಮಾಡಿದ್ದಾರೆ.

ಹಳದಿ ಪಟ್ಟಿಯಲ್ಲಿ ಬರುವ ದೇಶಗಳ ಪ್ರಯಾಣಿಕರು ತಮ್ಮ ದೇಶದ ನಿರ್ಗಮನಕ್ಕೂ ಮೂರು ದಿನಗಳ ಮೊದಲು ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿರಬೇಕು. ಬ್ರಿಟನ್‌ಗೆ ಬಂದ ಮೇಲೆ ಎರಡು ಕೋವಿಡ್ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ ಎಂಬ ನಿಯಮಗಳಿವೆ.

18 ವರ್ಷದೊಳಗಿನವರು ಮತ್ತು ಬ್ರಿಟನ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಲಸಿಕೆ ಹಾಕಿಸಿಕೊಂಡವರಿಗೆ ಮನೆ ಕ್ವಾರಂಟೈನ್ ನಿಂದ ವಿನಾಯಿತಿ ನೀಡಲಾಗಿದೆ. ಅದೇ ರೀತಿಯ ವಿನಾಯಿತಿ ಯುರೋಪಿಯನ್ ಒಕ್ಕೂಟ ಮತ್ತು ಅಮೆರಿಕದಲ್ಲಿ ಎರಡು ಡೋಸ್ ಕೋವಿಡ್ ಲಸಿಕೆ ಪಡೆದವರಿಗೂ ಇದೆ.

ಲಕ್ಷ್ಮೀ: ಸಮೃದ್ಧಿಯ ದೇವತೆ

● ನವೀನ ಗಂಗೋತ್ರಿ

ಹಣವಿದ್ದ ಮಾತ್ರಕ್ಕೆ ಸೌಖ್ಯವೊದಗುತ್ತದೆ ಎನ್ನುವುದು ಸುಳ್ಳಷ್ಟೆ. ಹಾಗಾಗಿ ಲಕ್ಷ್ಮೀಯ ಆರಾಧನೆಯು ಬರಿಯ ಧನಕನಕಗಳ ಸುತ್ತಲೇ ಹೆಣೆದುಕೊಳ್ಳದೆ ಬಹುಮುಖಿಯಾದ 'ಸಮೃದ್ಧಿ' ಎನ್ನುವುದನ್ನು ಒಳಗೊಂಡಿದೆ.

ಇಂದು ಆಷಾಢ ಶುಕ್ರವಾರ

ಭಾರತೀಯ ಜೀವನವಿಧಾನದಲ್ಲಿ ಬೆಳೆದುಬಂದ ದೇವತಾಕಲ್ಪನೆಯು ನಮ್ಮ ದೈನಂದಿನ ಜೀವನದ ಬಹುತೇಕ ಎಲ್ಲ ಸಂಗತಿಗಳನ್ನು ಒಳಗೊಂಡಿದೆಯಲ್ಲದೆ ಅವನ್ನು ಬಹುವಾಗಿ ಪ್ರಭಾವಿಸಿದೆ. ನಮ್ಮಲ್ಲಿ ಮಾನವ ಬದುಕಿನ ವಿಭಿನ್ನ ಆಯಾಮಗಳಿಗೆ ಅಧಿಷ್ಠಾತೃವಾದ ಒಂದಲ್ಲ ಒಂದು ದೇವತೆ ಇದ್ದೇ ಇದೆಯೆನ್ನಬಹುದು. ಮಣ್ಣು, ನೀರು, ಮಿಂಚುಗಳಂಥ ಮೂರ್ತಸಂಗತಿಗಳಲ್ಲದೆ ವಿದ್ಯೆ, ತೇಜಸ್ಸು, ಕಾಂತಿಗಳಂಥ ಅಮೂರ್ತ ಸಂಗತಿಗಳಿಗೆ ಸಂಬಂಧಿಸಿಯೂ ದೇವತೆಗಳಿದ್ದಾರೆ. ಆಯಾ ದೇವತೆಗಳಿಗೆ ಪ್ರಶಸ್ತವಾದ ಕಾಲ, ಮಂತ್ರಗಳು, ಅಲಂಕಾರ, ನೈವೇದ್ಯ ಭಕ್ಷ್ಯಗಳು ಮತ್ತು ಪೂಜಾವಿಧಾನ ಎಲ್ಲವೂ ಭಿನ್ನ ಭಿನ್ನ. ಕೆಲವೊಮ್ಮೆ ಕೆಲವು ದೇವತೆಗಳು ನಿರ್ದಿಷ್ಟಪ್ರದೇಶದಲ್ಲಿ ಮಾತ್ರವೇ ಚಾಲ್ತಿಯಲ್ಲಿದ್ದರೆ ಕೆಲವೊಂದು ದೇವತೆಗಳು ಆಭಾರತವ್ಯಾಪಿಯಾದವುಗಳು. ಲಕ್ಷ್ಮೀದೇವಿ ಹಾಗೊಬ್ಬಳು ಭಾರತದಾದ್ಯಂತ ಪ್ರಸಿದ್ಧಳಾದ ದೇವತೆ.

ವೇದಸಾಹಿತ್ಯದಲ್ಲಿಯೂ ಸಾಕಷ್ಟು ಸ್ತುತಿಗೆ ಒಳಪಟ್ಟ ದೇವತೆಯಿವಳು. ವೈದಿಕ ಸಾಹಿತ್ಯದಲ್ಲಿ ಹೆಚ್ಚಾಗಿ 'ಶ್ರೀಃ' ಎಂದು ಕರೆಸಿಕೊಳ್ಳುವ ಇವಳು ಲೋಕದಲ್ಲಿ ಶ್ರೀಮನ್ನಾರಾಯಣನ ಮಡದಿಯಾಗಿ 'ಲಕ್ಷ್ಮೀ' ಎಂಬ ಹೆಸರಿನಿಂದ ಪ್ರಸಿದ್ಧಳು. ಋಗ್ವೇದದ ಖಿಲಭಾಗದಲ್ಲಿ ಈ ದೇವತೆಯ ಹೆಸರಿನಲ್ಲಿ 'ಶ್ರೀಸೂಕ್ತ'ವೆಂಬ ಋಕ್ಕುಗಳ ಸಮೂಹವೂ ಇದೆ. ಲಕ್ಷ್ಮೀ ಎನ್ನುವ ದೇವತಾಪರಿಕಲ್ಪನೆಯ ಹಿಂದೆ ಬರಿಯ ಹಣ ಮತ್ತು ಧನಸಂಬಂಧಿಯಾದ ಸಂಪತ್ತು ಮಾತ್ರವಲ್ಲದೆ ಉಳಿದ ಯಾವೆಲ್ಲ ಸಂಗತಿಗಳು ಮಿಳಿತವಾಗಿವೆ ಎಂಬುದನ್ನು ಶ್ರೀಸೂಕ್ತದಲ್ಲಿ ಕಾಣಬಹುದು. ಬದುಕಿನ ಸೌಖ್ಯವೆಲ್ಲವೂ ಹಣದಲ್ಲಿಯೇ ಇದೆ ಎನ್ನುವ ಈ ಕಾಲದ ಬಹುಜನರ ಮನೋವ್ಯಾಧಿಗೆ ಇದೊಂದು ಔಷಧವೂ ಆಗಬಲ್ಲದು. ಮಾನವ ಜೀವನವೆನ್ನುವುದು ಹಣವೂ ಸೇರಿದಂತೆ ಹತ್ತಾರು ಸೌಖ್ಯಗಳನ್ನು ಬಯಸುತ್ತದೆ. ಹಣವಿದ್ದಮಾತ್ರಕ್ಕೆ ಸೌಖ್ಯವೊದಗುತ್ತದೆ ಎನ್ನುವುದು ಸುಳ್ಳಷ್ಟೆ. ಹಾಗಾಗಿ ಲಕ್ಷ್ಮೀಯ ಆರಾಧನೆಯು ಬರಿಯ ಧನಕನಕಗಳ ಸುತ್ತಲೇ ಹೆಣೆದುಕೊಳ್ಳದೆ ಬಹುಮುಖಿಯಾದ 'ಸಮೃದ್ಧಿ' ಎನ್ನುವುದನ್ನು ಒಳಗೊಂಡಿದೆ.

ಋಗ್ವೇದದ ಶ್ರೀಸೂಕ್ತವಾಗಲೀ ಅಥವಾ ಯಜುರಾದಿ ವೇದಗಳಲ್ಲಿ ಆಗಾಗ್ಗೆ ತೋರುವ ಶ್ರೀಸಂಬಂಧಿಯಾದ ಮಂತ್ರಗಳಾಗಲಿ ಈ ಸಮೃದ್ಧಿಯ ಕುರಿತಾಗಿಯೇ ಇರುವಂಥವು. ಸಮೃದ್ಧಿಯೆನ್ನುವುದು ಬಹುಮುಖಿಯಾದ್ದು. ಸರಳವಾಗಿ ಹೇಳಬೇಕೆಂದರೆ ಸಮೃದ್ಧಿಯು ನಮ್ಮ ದೈನಂದಿನ ಬದುಕಿನ ಬಹುಮುಖ್ಯ ಅಗತ್ಯಗಳಾದ ನೀರು, ಗಾಳಿ, ಆಹಾರ, ಆರೋಗ್ಯ, ನಿದ್ರೆ ಮತ್ತು ದುಡಿಮೆಯ ಕುರಿತಾಗಿ ಇರುವಂಥದು. 'ಒದಗು' ಎನ್ನುವುದು 'ಸಮೃದ್ಧಿ' ಎಂಬ ಸಂಸ್ಕೃತಪದಕ್ಕೆ ಸಂವಾದಿಯಾಗಬಲ್ಲ ಕನ್ನಡದ ಪದ. ಇವತ್ತಿಗೂ ಕರ್ನಾಟಕದ ಹಳ್ಳಿಗರ ಕನ್ನಡದಲ್ಲಿ ಈ ಒದಗುವಿಕೆಯ ಕಲ್ಪನೆ ಜೀವಂತವಾಗಿದೆ. ಹಣ ಎನ್ನುವುದು ಮೌಲ್ಯದ ವಿನಿಮಯಕ್ಕಾಗಿ ಚಾಲ್ತಿಗೆ ಬಂದ ಎರಡನೆಯ ಸ್ತರದ ಸಮೃದ್ಧಿಯ ಮಾನಕವಷ್ಟೆ; ಹಣವು ತಾನೇ ಸ್ವತಃ ಮೌಲ್ಯವಲ್ಲ – ಅದು ಮೌಲ್ಯದ ಪ್ರತಿನಿಧಿ. ಆದರೆ ಲಕ್ಷ್ಮೀ ಆರಾಧನೆಯು ಸಾಕ್ಷಾತ್ತಾಗಿ ಮೌಲ್ಯದ್ದೇ ಆರಾಧನೆ. ಲಕ್ಷ್ಮೀಪೂಜೆಯೆಂದರೆ ಸಮೃದ್ಧಿಯನ್ನು ಮನಸಾ ಕರೆಯುವ ಮತ್ತು ಉಂಟಾಗುವಂತೆ ಪ್ರಾರ್ಥಿಸುವ ಮಾರ್ಗ.

ಉಣ್ಣಲು ಕಲಬೆರಕೆಯಿಲ್ಲದ ರುಚಿ-ಶುಚಿಯಾದ ಆರೋಗ್ಯಪೂರ್ಣ ಆಹಾರ, ಕುಡಿಯಲು ಕಲುಷಿತವಲ್ಲದ ಶುದ್ಧ ಸಹಜವಾದ ನೀರು, ಎದೆತುಂಬ ಎಳೆದುಕೊಂಡು ತೃಪ್ತಗೊಳ್ಳಬೇಕೆನಿಸುವಷ್ಟು ನಿರ್ಮಲವಾದ ಗಾಳಿ, ತಾಜಾ ತಾಜಾ ಆಗಿರುವ ಹಣ್ಣು-ತರಕಾರಿ ಮತ್ತು ಹಯನು - ಇವೇ ಮೊದಲಾದ ಯಾವಜ್ಜೀವ ಸಂತೃಪ್ತಿಯ ಮಾನಕಗಳನ್ನು ಮರೆತು ಬದುಕಿನ ಅಂತಸ್ಸತ್ವವನ್ನೇ ಕಡಿಮೆಮಾಡಿಕೊಂಡಿದ್ದೇವೆ. ಹೈಯಂಗವೀನ (ನಿನ್ನೆ ಕರೆದ ಹಾಲಿನಿಂದ ಇವತ್ತು ತಯಾರಿಸಿದ ತುಪ್ಪ) ಎನ್ನುವುದು ನಮ್ಮ ಪೂರ್ವಿಕರ ಒಂದು ಸಮೃದ್ಧಿಯ ಕಲ್ಪನೆ. ಇವತ್ತಿನ ಕಾಲದಲ್ಲಿ ನಿಜಕ್ಕೂ ಶುದ್ಧವಾದ ಸಹಜವಾದ ತುಪ್ಪವನ್ನು ತಿನ್ನುವ ಭಾಗ್ಯ ಎಷ್ಟು ಜನರಿಗೆ ತಾನೇ ಇದ್ದೀತು? ಹಣವಿದ್ದ ಮಾತ್ರಕ್ಕೆ ಇವೆಲ್ಲ ಒದಗಿಬರುವುದಿಲ್ಲ. ಹಾಗಾಗಿ ಲಕ್ಷ್ಮೀ ಎಂಬ ದೇವತೆಯೂ, ಅವಳ ಆರಾಧನೆಯೂ ಹಣಕ್ಕಿಂತ ಹೆಚ್ಚಾಗಿ ಬದುಕನ್ನು ಇನ್ನಷ್ಟು ಸತ್ತ್ವಯುತಗೊಳಿಸುವ ಸಮೃದ್ಧಿಯ ಕುರಿತಾಗಿ ಇರುವುದೆನ್ನಬಹುದು.

ಈ ಆಷಾಢ ಶುಕ್ರವಾರದ ಲಕ್ಷ್ಮೀಪೂಜೆಯು ಹೆಚ್ಚು ಅರ್ಥಪೂರ್ಣವಾದ ಸಮೃದ್ಧಿಯ ಪರಿಕಲ್ಪನೆಯನ್ನು ನಮಗೆಲ್ಲ ಕರುಣಿಸಲಿ. ❖

ಬೋಳು ಮಂಡೆ- ಕೋವಿಡ್ 'ಕೊಡುಗೆ'

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಹೆಚ್ಚಿನವರಿಗೆ 3 ತಿಂಗಳ ಬಳಿಕ ಕೂದಲು ಉದುರುವಿಕೆ ಸಮಸ್ಯೆಗಳು ಕಾಣಿಸಿಕೊಳ್ಳಲಾರಂಭಿಸಿವೆ. ಈ ಸಮಸ್ಯೆ ಪುರುಷರಿಗಿಂತ ಮಹಿಳೆಯರಲ್ಲಿ ಅಧಿಕವಾಗಿದೆ.

ಕೋವಿಡ್ ಎರಡನೇ ಅಲೆ ಬಳಿಕ ಈ ರೀತಿಯ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗುತ್ತಿವೆ ಎಂದು ವೈದ್ಯಕೀಯ ತಜ್ಞರು ಹೇಳಿದ್ದಾರೆ. ಎಲ್ಲ ವಯೋಮಾನದವರಲ್ಲಿಯೂ ಈ ಸಮಸ್ಯೆ ಕಾಡುತ್ತಿರುವುದನ್ನು ವೈದ್ಯರು ಗುರುತಿಸಿದ್ದಾರೆ.

ಕೋವಿಡ್ ಪೀಡಿತರಾಗಿದ್ದ ಅವಧಿಯಲ್ಲಿ ದೇಹದಲ್ಲಿನ ಪೋಷಕಾಂಶದ ವ್ಯತ್ಯಯ, ಮಾನಸಿಕ ಹಾಗೂ ದೈಹಿಕ ಒತ್ತಡ, ಅತಿಯಾದ ಔಷಧ ಬಳಕೆ ಸೇರಿದಂತೆ ವಿವಿಧ ಕಾರಣಗಳಿಂದ ಚೇತರಿಸಿಕೊಂಡ ಬಳಿಕ ಕೂದಲು ಹೆಚ್ಚಿನ ಪ್ರಮಾಣದಲ್ಲಿ ಉದುರುತ್ತಿವೆ ಎಂದು ವೈದ್ಯಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡ ವ್ಯಕ್ತಿಯೊಬ್ಬರ ಕೂದಲು ಉದುರಿರುವುದು

'ವಯಸ್ಕರು ಹಾಗೂ ವೃದ್ಧರಲ್ಲಿ ಈ ಸಮಸ್ಯೆ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿದೆ. ದಿನಕ್ಕೆ 30ರಿಂದ 40 ಕೂದಲುಗಳು ಉದುರುತ್ತಿರುವವರಿಗೆ 100ರಿಂದ 200 ಕೂದಲುಗಳು ತಲೆಯ ಎಲ್ಲೆಡೆಯಿಂದ ಉದುರುತ್ತಿವೆ. ಈ ಹಿಂದೆ ವಿರಳವಾಗಿ ಪ್ರಕರಣಗಳು ವರದಿಯಾಗುತ್ತಿದ್ದವು. 2ನೇ ಅಲೆ ಬಳಿಕ ಹೆಚ್ಚಿನ ಸಂಖ್ಯೆಯಲ್ಲಿ ಹೊರ ರೋಗಿಗಳು ಈ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಬರುತ್ತಿದ್ದಾರೆ. ಅವರನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಕೋವಿಡ್‌ನಿಂದಾಗಿ ಎನ್ನುವುದು ತಿಳಿದುಬಂದಿದೆ. ಈ ಸಮಸ್ಯೆಯನ್ನು 'ಟೆಲೊಜೆನ್ ಎಫ್ಲುವಿಯಮ್' ಎನ್ನಲಾಗುತ್ತದೆ' ಎಂದು ಚರ್ಮ ರೋಗ ತಜ್ಞರು ತಿಳಿಸಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಕೂದಲು ಉದುರುವಿಕೆ ಸಮಸ್ಯೆ ತಾತ್ಕಾಲಿಕವಾಗಿದೆ. 9 ತಿಂಗಳ ಬಳಿಕ ಸರಿಹೋಗಲಿದೆ

ಡಾ. ಗಿರೀಶ್ ಎಂ.ಎಸ್.,
ಚರ್ಮರೋಗ ತಜ್ಞ

ಮಹಿಳೆಯರಲ್ಲಿ ಅಧಿಕ: ಇಎಸ್‌ಐ ಆಸ್ಪತ್ರೆ, ಆಸ್ಟರ್ ಸಿಎಂಐ, ಜಿವಿಜಿ ಇನ್ವಿವೊ ಆಸ್ಪತ್ರೆ, ಮಣಿಪಾಲ್, ಫೋರ್ಟಿಸ್ ಸೇರಿದಂತೆ ಪ್ರಮುಖ ಆಸ್ಪತ್ರೆಗಳಲ್ಲಿ ಈ ರೀತಿಯ ಪ್ರಕರಣಗಳು ವರದಿಯಾಗಿವೆ. ಇಎಸ್‌ಐ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಸರಾಸರಿ 25 ಮಂದಿ ಹೊರರೋಗಿಗಳಾಗಿ ಈ ಸಮಸ್ಯೆಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಜಿವಿಜಿ ಇನ್ವಿವೊ ಆಸ್ಪತ್ರೆಯಲ್ಲಿ ಸದ್ಯ 12 ಮಂದಿ ಒಳರೋಗಿಗಳಾಗಿ ದಾಖಲಾಗಿದ್ದಾರೆ.

'ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಶೇ 90ಕ್ಕೂ ಅಧಿಕ ಮಂದಿಯಲ್ಲಿ ಕೂದಲು ಉದುರುವಿಕೆ ಸಮಸ್ಯೆ ಕಾಣಿಸಿಕೊಳ್ಳುತ್ತದೆ' ಎಂದು ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ಚರ್ಮರೋಗ ತಜ್ಞ ಡಾ. ಗಿರೀಶ್ ಎಂ.ಎಸ್. ತಿಳಿಸಿದರು.

'ಕೂದಲು ಉದುರುವಿಕೆಯನ್ನು 7 ಹಂತಗಳಲ್ಲಿ ವಿಭಜಿಸಲಾಗುತ್ತದೆ. ಸೋಂಕಿನಿಂದ ಚೇತರಿಸಿಕೊಂಡವರಲ್ಲಿ ಎರಡು ಹಂತದಲ್ಲಿ ಕೂದಲು ಉದುರುತ್ತದೆ. ಇದಕ್ಕೆ ಪ್ಲೇಟ್ಲೆಟ್ ರಿಚ್ ಪ್ಲಾಸ್ಮಾ ಸೇರಿದಂತೆ ವಿವಿಧ ಚಿಕಿತ್ಸೆಗಳು ಇವೆ' ಎಂದು ಜಿವಿಜಿ ಇನ್ವಿವೊ ಆಸ್ಪತ್ರೆಯ ಮುಖ್ಯ ಪ್ಲಾಸ್ಟಿಕ್ ಸರ್ಜನ್ ಡಾ. ಗುಣಶೇಖರ್ ವುಪ್ಪಲಪತಿ ಹೇಳಿದರು.

ಕೂದಲು ವೃದ್ಧಿಗೆ ತಜ್ಞರ ಸಲಹೆಗಳು

- ಕೂದಲು ಮೊದಲಿನಂತೆ ಬೆಳವಣಿಗೆ ಹೊಂದಲು ಪೋಷಕಾಂಶ ಹೆಚ್ಚಿಸುವ ಜಿಂಕ್ ಸೇರಿದಂತೆ ವಿವಿಧ ಮಾತ್ರೆಗಳನ್ನು ನೀಡಲಾಗುತ್ತದೆ. ವೈದ್ಯರ ಸಲಹೆ ಪಡೆದು ಸೇವಿಸಬೇಕು
- ಪೌಷ್ಟಿಕ ಆಹಾರ ಸೇವನೆ, ಒತ್ತಡ ನಿವಾರಣೆಗೆ ವ್ಯಾಯಾಮ, ಯೋಗ ಅಗತ್ಯ
- ಚೆನ್ನಾಗಿ ನಿದ್ದೆ ಹಾಗೂ ವಿಶ್ರಾಂತಿ ಮಾಡಬೇಕು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕರ್ನಾಟಕ ಕ್ರಮಕ್ಕೆ ವಿಜಯನ್ ಟೀಕೆ

ತಿರುವನಂತಪುರ (ಪಿಟಿಐ): ಕೋವಿಡ್–19 ನಿಯಂತ್ರಣ ಕಾರಣವೊಡ್ಡಿ ರಾಜ್ಯದ ಜನರ ಪ್ರಯಾಣದ ಮೇಲೆ ಕರ್ನಾಟಕ ಸರ್ಕಾರ ನಿರ್ಬಂಧ ವಿಧಿಸಿರುವುದನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗುರುವಾರ ಟೀಕಿಸಿದರು.

ಕರ್ನಾಟಕ ಸರ್ಕಾರ ಹೊಸದಾಗಿ ಹೇರಿರುವ ನಿರ್ಬಂಧ ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನೀಡಿರುವ ನಿರ್ದೇಶನಕ್ಕೆ ವಿರುದ್ಧವಾಗಿವೆ ಎಂದರು. ಈ ಸಂಬಂಧ ಐಯುಎಂಎಲ್ ಶಾಸಕ ಎ.ಕೆ.ಎಂ.ಅಶ್ರಫ್ ಅವರು ಬರೆದ ಪತ್ರಕ್ಕೆ ಉತ್ತರಿಸಿರುವ ವಿಜಯನ್, 'ನೆರೆ ರಾಜ್ಯಗಳು ಹೇರಿರುವ ನಿರ್ಬಂಧಗಳಿಂದ ರಾಜ್ಯದ ಜನರ ಓಡಾಟಕ್ಕೆ ತೊಂದರೆಯಾಗದಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ' ಎಂದರು.

ಡಿಜಿಪಿ ಅನಿಲ್‌ಕಾಂತ್ ಅವರು, ಕರ್ನಾಟಕದ ಡಿಜಿಪಿಯವರನ್ನು ಸಂಪರ್ಕಿಸಿದ್ದು, ಅವರು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಸಂಸತ್ ಘೇರಾವ್

ಹಣದುಬ್ಬರ, ನಿರುದ್ಯೋಗ ಹೆಚ್ಚಳ, ನೂತನ ಕೃಷಿ ಕಾಯ್ದೆಗಳು ಹಾಗೂ ಪೆಗಾಸಸ್ ಗೂಢಚರ್ಯೆ ಸೇರಿದಂತೆ ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ನವದೆಹಲಿಯಲ್ಲಿ ಗುರುವಾರ 'ಸಂಸತ್ ಘೇರಾವ್' ಹಮ್ಮಿಕೊಂಡಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು –ಪಿಟಿಐ ಚಿತ್ರ

ಕೋವಿಡ್: ಹೊಸ ತಳಿಯ 'ಇಟಾ' ವೈರಾಣು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 'ಇಟಾ' (ಬಿ.1.525) ಹೆಸರಿನ ಹೊಸ ತಳಿಯ ಕೊರೊನಾ ವೈರಾಣು ಗುರುವಾರ ಪತ್ತೆಯಾಗಿದೆ.

ಈ ವೈರಾಣುವಿನ ತೀವ್ರತೆ ತಿಳಿಯಲು ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಎರಡು ತಿಂಗಳ ಹಿಂದೆ ಕತಾರ್‌ನಿಂದ ಮಂಗಳೂರಿಗೆ ಬಂದಿದ್ದ ವ್ಯಕ್ತಿಯೊಬ್ಬರು ಕೋವಿಡ್ ಪೀಡಿತರಾಗಿದ್ದರು. ಅವರ ಮಾದರಿಯನ್ನು ಜಿನೋಮಿಕ್ ಸಿಕ್ವೆನ್ಸಿಸ್ (ಅನುಕ್ರಮಣಿಕೆ) ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು.

ಅವರಲ್ಲಿ ಇಟಾ ತಳಿಯ ವೈರಾಣು ಕಾಣಿಸಿಕೊಂಡಿತ್ತು ಎನ್ನುವುದು ಈಗ ದೃಢಪಟ್ಟಿದೆ.

ಹೊಸದಾಗಿ ಒಂದು ಡೆಲ್ಟಾ ಪ್ಲಸ್ ಪ್ರಕರಣ ಕೂಡ ಖಚಿತಪಟ್ಟಿದ್ದು, ಈ ತಳಿಯ ವೈರಾಣು ಹೊಂದಿದವರ ಸಂಖ್ಯೆ 4ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.61 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 1,785 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಶೇ 1.10ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

ರಾಜ್ಯದ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 337, ಮೈಸೂರಿನಲ್ಲಿ 105 ಹಾಗೂ ಕೊಡಗಿನಲ್ಲಿ 100 ಪ್ರಕರಣಗಳು ಪತ್ತೆಯಾಗಿವೆ.

ಬೆಂಗಳೂರಿನಲ್ಲಿ 414, ಉಡುಪಿಯಲ್ಲಿ 134, ಹಾಸನದಲ್ಲಿ 125 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ.

ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.13 ಲಕ್ಷ ದಾಟಿದೆ. ಕೊರೊನಾ ಸೋಂಕಿತರಲ್ಲಿ 1,651 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.52 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 25 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 12 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ.

ಬೆಂಗಳೂರಿನಲ್ಲಿ 5, ಕೋಲಾರ, ದಕ್ಷಿಣ ಕನ್ನಡ ಹಾಗೂ ಬೆಳಗಾವಿಯಲ್ಲಿ ತಲಾ 3, ಉಡುಪಿ, ಮೈಸೂರು ಹಾಗೂ ಮಂಡ್ಯದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.40ರಷ್ಟು ವರದಿಯಾಗಿದೆ.

ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,750ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 24,414ಕ್ಕೆ ಏರಿಕೆಯಾಗಿದೆ.

21 ನರ್ಸಿಂಗ್ ವಿದ್ಯಾರ್ಥಿನಿಯರಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಹಾಸನ: ನಗರದ ನರ್ಸಿಂಗ್ ಕಾಲೇಜಿನ 21 ವಿದ್ಯಾರ್ಥಿನಿಯರಿಗೆ ಕೊರೊನಾ ಸೋಂಕು ತಗುಲಿದೆ.

ಪರೀಕ್ಷೆಗಾಗಿ ಕೇರಳದಿಂದ ಬಂದಿದ್ದ ನಗರದ ನಿಸರ್ಗ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿದಾಗ, ಸೋಂಕು ದೃಢಪಟ್ಟಿದೆ.

ಈ ವಿದ್ಯಾರ್ಥಿಗಳು ಅತಿಥಿ ಪಿ.ಜಿಯಲ್ಲಿ ವಾಸಿಸುತ್ತಿದ್ದಾರೆ. ಈ ವಿದ್ಯಾರ್ಥಿಗಳೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿದ್ದ 27 ವಿದ್ಯಾರ್ಥಿನಿಯರನ್ನು ಶ್ರೀರಂಗ ವಸತಿ ಗೃಹದಲ್ಲಿ ಕ್ವಾರಂಟೈನ್ ಮಾಡಿ, ಸೀಲ್‌ಡೌನ್ ಮಾಡಲಾಗಿದೆ. ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಲಾಗಿದ್ದು, ಶುಕ್ರವಾರ ವರದಿ ಬರಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ. ಸತೀಶ್ ಕುಮಾರ್ ತಿಳಿಸಿದರು.

ಕೇರಳ ವಿದ್ಯಾರ್ಥಿ ಸೇರಿ ಐವರಿಗೆ ಸೋಂಕು (ರಾಯಚೂರು ವರದಿ): ಕೇರಳದ ಒಬ್ಬ ಹಾಗೂ ಕರ್ನಾಟಕದ ನಾಲ್ವರು ವಿದ್ಯಾರ್ಥಿಗಳಿಗೆ ಗುರುವಾರ ಕೋವಿಡ್ ದೃಢಪಟ್ಟಿದ್ದು, ಜಿಲ್ಲೆಗೆ ಮೂರನೇ ಅಲೆಯ ಆತಂಕ ಎದುರಾಗಿದೆ.

ಇಲ್ಲಿನ ವೈದ್ಯಕೀಯ ವಿಜ್ಞಾನ ಸಂಸ್ಥೆ (ರಿಮ್ಸ್) ಕಾಲೇಜಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಕೋವಿಡ್ ದೃಢವಾಗಿರುವ ಪರಿಣಾಮ, ಜುಲೈ 26 ರಿಂದ ಆರಂಭವಾಗಿದ್ದ ತರಗತಿಗಳನ್ನು ರದ್ದುಪಡಿಸಲಾಗಿದೆ. 650 ವಿದ್ಯಾರ್ಥಿಗಳೆಲ್ಲರ ಗಂಟಲು ದ್ರವದ ಮಾದರಿ ಸಂಗ್ರಹಿಸಲಾಗಿದೆ. ವರದಿ ಬರುವವರೆಗೂ ಹಾಸ್ಟೆಲ್‌ಗಳಲ್ಲಿಯೆ ಪ್ರತ್ಯೇಕವಾಗಿ ಇರುವಂತೆ ಸೂಚಿಸಲಾಗಿದೆ.

'ಕಾಲೇಜಿಗೆ ಬರುವಾಗ ವಿದ್ಯಾರ್ಥಿಗಳು ನೆಗೆಟಿವ್ ವರದಿ ಸಲ್ಲಿಸಿದ್ದರು. ಆದರೂ, ನಾಲ್ವರಿಗೆ ಸೋಂಕು ಪತ್ತೆಯಾಗಿದೆ. ಇದು ಡೆಲ್ಟಾ ವೈರಸ್ ಎಂದು ಗುರುತಿಸಲು ನಮಗೆ ಸಾಧ್ಯವಿಲ್ಲ. ಬೆಂಗಳೂರಿಗೆ ಸ್ಯಾಂಪಲ್ ಕಳುಹಿಸಲಾಗಿದೆ' ಎಂದು ರಿಮ್ಸ್ ನಿರ್ದೇಶಕ ಡಾ.ಬಸವರಾಜ ಪೀರಾಪುರೆ 'ಪ್ರಜಾವಾಣಿ'ಗೆ ತಿಳಿಸಿದರು.

ಫಲಿತಾಂಶ ಸುಧಾರಣೆ: 25ರಿಂದ ಪರೀಕ್ಷೆ–ಸಿಬಿಎಸ್‌ಇ

ನವದೆಹಲಿ: ಫಲಿತಾಂಶ ಸುಧಾರಣೆ ಮಾಡಿಕೊಳ್ಳಲು ಬಯಸುವ 10 ಹಾಗೂ 12ನೇ ತರಗತಿ ವಿದ್ಯಾರ್ಥಿಗಳಿಗೆ ಆ.25ರಿಂದ ಸೆ.15ರ ವರೆಗೆ ಪರೀಕ್ಷೆಗಳನ್ನು ನಡೆಸಿ, ಸೆ.30ರಂದು ಫಲಿತಾಂಶ ಪ್ರಕಟಿಸಲಾಗುವುದು ಎಂದು ಸುಪ್ರೀಂಕೋರ್ಟ್‌ಗೆ ಸಿಬಿಎಸ್‌ಇ ಗುರುವಾರ ತಿಳಿಸಿದೆ.

ಐಸಿಎಸ್‌ಇ ನಡೆಸುವ ಪರೀಕ್ಷೆಗಳು ಆ. 16ರಿಂದ ನಡೆಯಲಿದ್ದು, ಸೆ. 20ರಂದು ಫಲಿತಾಂಶ ಪ್ರಕಟವಾಗಲಿದೆ. ಆ. 10ರಿಂದ ಸಿಬಿಎಸ್‌ಇ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಅದೇ ದಿನ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಲಾಗುವುದು ಎಂದು ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ/ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ7th, SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500ರಿಂದ 45000/-ದವರೆಗೆ. 9538250222, 9538191333

ಇಂದೇ ಬೇಕಾಗಿದ್ದಾರೆ ಬೆಂಗಳೂರಿನ ಸುಪ್ರಸಿದ್ಧ ಕಂಪನಿಯಲ್ಲಿ ಆಫೀಸ್ ಕೆಲಸಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ (SSLC to Any Degree Pass/Fail) ಸಂಬಳ 18,000/-ರಿಂದ 65,000/- ದವರೆಗೆ ವಸತಿಯೂಟದೊಂದಿಗೆ ಇಂದೇ ಸಂಪರ್ಕಿಸಿ: ಸುಪ್ರಿಯಾ- 9538032277, 9538075599

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ತಕ್ಷಣ ಬೇಕಾಗಿದ್ದಾರೆ ಬೆಂಗಳೂರು&ಕರ್ನಾಟಕದಾದ್ಯಂತ ಕಂಪನಿಗಳಿಗೆ, ಆಫೀಸ್‌ಗಳಿಗೆ,ಬ್ಯಾಂಕ್‌ಗಳಿಗೆ,ಶೋ ರೂಂಗಳಿಗೆಯಾವುದೇ ವಿದ್ಯಾರ್ಹತೆಯಿರುವ ವಿದ್ಯಾರ್ಹತೆಯಿಲದವರಿಗೂ ವಸತಿಯೂಟದೊಂದಿಗೆ ಸಂಬಳ+OT,17,200/-47000/-.8884412822, 9986083666

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

Marketing & Sales

WANTED DRA/NON DRA Field Executives/ Telecallers for Bangalore, Attractive Salary, PF+ESI Contact: 9113602995/ 8867052293.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

TOYOTA, TVS, ವಿಡಿಯೋಕಾನ್, ಬ್ರಿಟಾನಿಯಾಗಳಿಗೆ ಬಿಗ್ ಬಜಾರ್‌ಗಳಿಗೆ SSLC,PUC,Degree ಯವರು, ITI ನವರು, (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ. 17,000-56,000/- ವಸತಿಯೂಟವಿದೆ. 9611715755

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

General

75% OFF - Commercial property 13 acres value 12 crore is for sale at 3.5 Cr. Attached to Hiriyur -Bellary Highway, Clear title, Suitable for Investment, Loan, Collateral Security- 9880560996

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

HEALTH SPECIAL

VIH ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
ಲೈಂಗಿಕ ರೋಗಗಳು, ಉದ್ರೇಕದ ಸಮಸ್ಯೆ, ಲೈಂಗಿಕ ನಿರಾಸಕ್ತಿ, ನಿದ್ರಾ ಸ್ಖಲನ, ಶೀಘ್ರ ಸ್ಖಲನ, ಅಂಗ ಚಿಕ್ಕದಾಗುವುದು, ನರ ದೌರ್ಬಲ್ಯ, ಅವಧಿಗೆ ಮೊದಲೇ ಸ್ಖಲನ, ಆತಂಕ, ದೌರ್ಬಲ್ಯ, ಕಡಿಮೆ ವೀರ್ಯಾಣು, ಮುಷ್ಠಿ ಮೈಥುನದ ಅಡ್ಡಪರಿಣಾಮ
Before / After
NO SIDE EFFECTS 100%
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

ವ್ಯಾಪಾರ

Business Offers

Finance

ನಮ್ಮ ಸೇವೆಗಳು ಪ್ಯಾನ್, ಇ ಆಧಾರ್, ಪಾಸ್‌ಪೋರ್ಟ್, ಪಿಎಫ್ , 24 ಗಂಟೆಗಳಲ್ಲಿ ಕೇವಲ ಪ್ಯಾನ್ ಮತ್ತು ಆಧಾರ್ ಮೇಲೆ ಬ್ಯಾಂಕ್ ಸಾಲ ನೀಡುತ್ತೇವೆ.ವಯಸ್ಸು 22 ರಿಂದ 55 ವರ್ಷಗಳು.ಕೇವಲ ಬೆಂಗಳೂರಿನಲ್ಲಿ .8050826384

General

ಬಿಸಿನೆಸ್ ಡೆವಲಪ್ಮೆಂಟ್ ಹಾಗೂ ಉದ್ಯೋಗ ಅವಕಾಶಕ್ಕಾಗಿ ಸಂಪರ್ಕಿಸಿ: 9741103367, 8792102232, 9844050638

ಭವಿಷ್ಯ

Astrology

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★॥ಶ್ರೀಲಕ್ಷ್ಮಿ ನರಸಿಂಹಸ್ವಾಮಿ ಜ್ಯೋತಿಷ್ಯರು॥★ ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ.ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಶಾಶ್ವತ ಪರಿಹಾರ. ರಾಘವೇಂದ್ರ ಗುರೂಜಿ. 7337678002

॥★ಉಚಿತ ಭವಿಷ್ಯವಾಣಿ★॥ ವಶೀಕರಣ ಸ್ಪೆಷಲಿಸ್ಟ್ ಸರ್ವಸಿದ್ಧಿ ಸಾಧಕರು ಮಂಜುನಾಥಶಾಸ್ತ್ರಿ 9900277438. ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ. 100% ಗ್ಯಾರಂಟಿ ಪರಿಹಾರ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಗುರುವಾರವೂ ನಡೆಯದ ಸಂಸತ್ ಕಲಾಪ: ಪೆಗಾಸಸ್, ರೈತರ ಸಮಸ್ಯೆ ಚರ್ಚೆಗೆ ವಿಪಕ್ಷಗಳ ಪಟ್ಟು

ಚರ್ಚೆಯಿಲ್ಲದೇ ಮೂರು ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ತನಿಖೆಗೆ ಆಗ್ರಹಿಸಿ ಸಂಸತ್ತಿನಲ್ಲಿ ಪ್ರತಿಪಕ್ಷಗಳು ನಡೆಸುತ್ತಿರುವ ಪ್ರತಿಭಟನೆಯ ನಡುವೆಯೇ ರಾಜ್ಯಸಭೆಯು ಮೂರು ಮಸೂದೆಗಳಿಗೆ ಗುರುವಾರ ಅಂಗೀಕಾರ ನೀಡಿದೆ. ಲೋಕಸಭೆಯಲ್ಲಿ ಎರಡು ಮಸೂದೆ ಮಂಡನೆಯಾದವು.

ಅಗತ್ಯ ಸೇವೆಗಳಲ್ಲಿ ತೊಡಗಿರುವ ಘಟಕಗಳಲ್ಲಿ ಮುಷ್ಕರ, ಲಾಕ್‌ಔಟ್ ಮತ್ತು ವಜಾ ನಿಷೇಧಿಸಲು ಸರ್ಕಾರಕ್ಕೆ ಅವಕಾಶ ನೀಡುವ ಮಸೂದೆ ಈ ಪೈಕಿ ಒಂದು. ರಾಷ್ಟ್ರೀಯ ರಾಜಧಾನಿ ಪ್ರದೇಶ ಮತ್ತು ಅದರ ಪಕ್ಕದ ಪ್ರದೇಶಗಳಲ್ಲಿ ವಾಯು ಗುಣಮಟ್ಟ ನಿರ್ವಹಣೆಗೆ ಆಯೋಗವನ್ನು ಸ್ಥಾಪಿಸುವ ಮಸೂದೆಗೆ ರಾಜ್ಯಸಭೆ ಅನುಮೋದನೆ ನೀಡಿತು.

ವಿರೋಧ ಪಕ್ಷದ ಸದಸ್ಯರು ಪೆಗಾಸಸ್ ಬಗ್ಗೆ ಚರ್ಚೆಗೆ ಒತ್ತಾಯಿಸಿದರು. ಆದರೆ ಇದಕ್ಕೆ ಸರ್ಕಾರ ಒಪ್ಪಲಿಲ್ಲ. ಹೀಗಾಗಿ ಲೋಕಸಭೆ ಪದೇ ಪದೇ ಮುಂದೂಡಿಕೆಗೆ ಸಾಕ್ಷಿಯಾಯಿತು. ಕೇಂದ್ರೀಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆ ಮಂಡನೆಯಾಯಿತು. ಇದು ಲಡಾಖ್‌ನಲ್ಲಿ ಸಿಂಧು ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪಿಸುವುದನ್ನು ಪ್ರಸ್ತಾಪಿಸಿದೆ. ತೆರಿಗೆ ಕಾನೂನುಗಳ (ತಿದ್ದುಪಡಿ) ಮಸೂದೆಯನ್ನೂ ಸಹ ಸರ್ಕಾರ ಮಂಡಿಸಿತು.

ಪ್ರಶ್ನೋತ್ತರ ವೇಳೆಯಲ್ಲಿ ಪ್ರಮುಖ ವಿಷಯಗಳನ್ನು ಚರ್ಚಿಸಲಾಗುತ್ತಿದೆ ಎಂದು ಗದ್ದಲ ನಡೆಸುತ್ತಿದ್ದ ಸದಸ್ಯರಿಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಭರವಸೆ ನೀಡಿದರು. ಆದರೆ ಸದಸ್ಯರು ಫಲಕ ಪ್ರದರ್ಶಿಸಿ, ಘೋಷಣೆ ಕೂಗಿ ಪ್ರತಿಭಟನೆ ಮುಂದುವರಿಸಿದರು. 41 ವರ್ಷಗಳ ನಂತರ ಒಲಿಂಪಿಕ್ಸ್‌ನಲ್ಲಿ ಪದಕ ಪಡೆದ ಭಾರತೀಯ ಹಾಕಿ ತಂಡವನ್ನು ಓಂ ಬಿರ್ಲಾ ಅವರು ಅಭಿನಂದಿಸಿದರು. ಟೋಕಿಯೊದಲ್ಲಿ ನಡೆಯುತ್ತಿರುವ ಕ್ರೀಡಾಕೂಟದಲ್ಲಿ ಪದಕ ಗೆದ್ದ ಮಹಿಳಾ ಅಥ್ಲೀಟುಗಳಿಗೂ ಅಭಿನಂದನೆ ತಿಳಿಸಿದರು.

> ಸರ್ಕಾರವು ಪ್ರತಿಪಕ್ಷದ ಧ್ವನಿ ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಅದು ಕೈಗೂಡುವುದಿಲ್ಲ. ಜನರ ಸಮಸ್ಯೆ ನಿವಾರಣೆಗೆ ಹೋರಾಡುತ್ತಲೇ ಇರುತ್ತೇವೆ
>
> **ಮಲ್ಲಿಕಾರ್ಜುನ ಖರ್ಗೆ,** ರಾಜ್ಯಸಭೆಯ ಪ್ರತಿಪಕ್ಷ ನಾಯಕ

> ಕಲಾಪಕ್ಕೆ ತಡೆಯೊಡ್ಡಲು ವಿರೋಧ ಪಕ್ಷಗಳು ಯತ್ನಿಸುತ್ತಿವೆ. ಆದರೆ, ದೇಶವನ್ನು ಸ್ವಾವಲಂಬಿಗೊಳಿಸುವುದಕ್ಕೆ 130 ಕೋಟಿ ಜನರು ಅವಕಾಶ ಕೊಡುವುದಿಲ್ಲ
>
> **ನರೇಂದ್ರ ಮೋದಿ,** ಪ್ರಧಾನಿ

ಪರಿಶಿಷ್ಟ ಸಮುದಾಯದ ಬಾಲಕಿ ಸಾವಿನ ವಿಷಯವನ್ನು ಪ್ರಸ್ತಾಪಿಸಲು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಲೋಕಸಭೆಯಲ್ಲಿ ಪ್ರಯತ್ನಿಸಿದರು. ಆದರೆ ಸ್ಪೀಕರ್ ಅನುಮತಿ ನೀಡಲಿಲ್ಲ. ಘಟನೆ ಖಂಡಿಸಿ ನಿರ್ಣಯ ಅಂಗೀಕರಿಸಬೇಕು ಎಂದು ಅವರು ಬಯಸಿದ್ದರು. 'ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಚಿವ ಮೇಘವಾಲ್, ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನದಲ್ಲಿ ಇಂತಹದ್ದೇ ಘಟನೆ ನಡೆದಾಗ ಕಾಂಗ್ರೆಸ್ ಏಕೆ ಮೌನವಾಗಿತ್ತು ಎಂದು ಪ್ರಶ್ನಿಸಿದರು.

'ಸದನವನ್ನು ದಿನದ ಮಟ್ಟಿಗೆ ಮುಂದೂಡಿದ ಬಳಿಕ, ಪ್ರತಿಭಟನೆ ನಡೆಸಿದ ಸದಸ್ಯರು ತಮ್ಮ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ಅವಕಾಶ ನೀಡದಿರುವುದು ತಪ್ಪು. ಹೀಗೆ ಮಾಡಿದರೆ ನೀವು ಅದರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ' ಎಂದು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ನಖ್ವಿ, 'ಪ್ರತಿಪಕ್ಷಗಳು ಪ್ರತಿಭಟನೆ ನಡೆಸುವುದಕ್ಕೆ ಯಾವುದೇ ಆಕ್ಷೇಪವಿಲ್ಲ, ಆದರೆ ಅವರು ಹಿಂಸಾಚಾರಕ್ಕೆ ಮುಂದಾಗಿದ್ದು ಕಳವಳಕಾರಿ. ಭದ್ರತಾ ಸಿಬ್ಬಂದಿಯನ್ನು ನೋಯಿಸಿ, ಹಿಂಸೆಯ ಮೂಲಕ ಕಲಾಪವನ್ನು ಹೈಜಾಕ್ ಮಾಡುವುದಕ್ಕೆ ತಮ್ಮ ಆಕ್ಷೇಪವಿದೆ' ಎಂದು ಹೇಳಿದರು.

ತೃಣಮೂಲ ಕಾಂಗ್ರೆಸ್‌ನ ಆರು ಸದಸ್ಯರನ್ನು ಅಮಾನತುಗೊಳಿಸಿದ್ದನ್ನು ಖಂಡಿಸಿ ವಿರೋಧ ಪಕ್ಷಗಳು ರಾಜ್ಯಸಭೆಯಲ್ಲಿ ಧರಣಿ ನಡೆಸಿದವು. ಸದನದಲ್ಲಿ ಹಾಜರಿದ್ದ ಸಚಿವರ ಪರವಾಗಿ ಸಂಸದೀಯ ವ್ಯವಹಾರ ಸಚಿವರೇ ಪದೇ ಪದೇ ಉತ್ತರ ನೀಡಿದ್ದಕ್ಕೆ ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಆಕ್ಷೇಪಿಸಿದರು.

ವಿಪಕ್ಷಗಳ ದೇಶದ್ರೋಹ ರಾಜಕಾರಣ: ಮೋದಿ ಆರೋಪ

ಲಖನೌ (ಪಿಟಿಐ): ಇಡೀ ದೇಶವು ಮುನ್ನಡೆಯಲು ಕಾತರಿಸುತ್ತಿದ್ದರೆ ವಿರೋಧ ಪಕ್ಷಗಳು ಸಂಸತ್ ಕಲಾಪಕ್ಕೆ ಅಡ್ಡಿಪಡಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ವಾಗ್ದಾಳಿ ನಡೆಸಿದ್ದಾರೆ.

ಮಾನವ ಕುಲವು ಕಂಡ ಅತ್ಯಂತ ದೊಡ್ಡ ವಿಕೃತಿಯಿಂದ ಹೊರಬರಲು ಪ್ರಯತ್ನಿಸುತ್ತಿರುವಾಗ ವಿರೋಧ ಪಕ್ಷಗಳು ದೇಶದ ಹಿತಾಸಕ್ತಿಗೆ ಅಡ್ಡಿ ಮಾಡಲು ಯತ್ನಿಸುತ್ತಿವೆ. 'ಇಂತಹ ಸ್ವಾರ್ಥ ಮತ್ತು ದೇಶದ್ರೋಹಿ ರಾಜಕಾರಣದ ಒತ್ತೆಯಾಳುಗಳಾಗಲು ಈ ದೇಶದ ಶ್ರೇಷ್ಠ ಜನರು ಅವಕಾಶ ಕೊಡುವುದಿಲ್ಲ. ವಿರೋಧ ಪಕ್ಷಗಳು ಎಷ್ಟೇ ಪ್ರಯತ್ನಿಸಿದರೂ ದೇಶದ ಅಭಿವೃದ್ಧಿಯನ್ನು ನಿಲ್ಲಿಸಲಾಗದು' ಎಂದು ಮೋದಿ ಹೇಳಿದ್ದಾರೆ.

'ಒಂದೆಡೆ, ನಮ್ಮ ದೇಶವು ಮೇಲಿಂದ ಮೇಲೆ ಗೆಲುವಿನ ಗೋಲು ಹೊಡೆಯುತ್ತಿದೆ. ಇನ್ನೊಂದೆಡೆ, ಕೆಲವರು ತಮ್ಮ ಸ್ವಾರ್ಥ ರಾಜಕೀಯ ಹಿತಾಸಕ್ತಿಗಾಗಿ ತಮ್ಮದೇ ಗೋಲುಪಟ್ಟಿಗೆ ಗೋಲು ಹೊಡೆಯುವಂತಹ ಕೆಲಸ ಮಾಡುತ್ತಿದ್ದಾರೆ' ಎಂದು ಮೋದಿ ಹೇಳಿದ್ದಾರೆ. ಪೆಗಾಸಸ್ ಕುತಂತ್ರಾಂಶ ಬಳಸಿ ನಡೆದಿದೆ ಎನ್ನಲಾದ ಬೇಹುಗಾರಿಕೆ ಬಗ್ಗೆ ಚರ್ಚೆಗೆ ಒತ್ತಾಯಿಸುತ್ತಿರುವ ವಿರೋಧ ಪಕ್ಷಗಳ ವಿರುದ್ಧ ಮೋದಿ ಹರಿಹಾಯ್ದಿದ್ದಾರೆ.

ಉತ್ತರ ಪ್ರದೇಶ ಸರ್ಕಾರ ಏರ್ಪಡಿಸಿದ್ದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನಾ ದಿನದಲ್ಲಿ ವಿಡಿಯೊ ಕಾನ್ಫರನ್ಸ್ ಮೂಲಕ ಭಾಗವಹಿಸಿ ಮೋದಿ ಮಾತನಾಡಿದರು.

'ದೇಶಕ್ಕೆ ಏನು ಬೇಕು ಎಂಬ ಬಗ್ಗೆ ಅವರಿಗೆ ಕಾಳಜಿ ಇಲ್ಲ. ದೇಶ ಏನನ್ನು ಸಾಧಿಸುತ್ತಿದೆ ಅಥವಾ ಹೇಗೆ ಬದಲಾಗುತ್ತಿದೆ ಎಂಬುದೂ ಬೇಕಾಗಿಲ್ಲ. ತಮ್ಮ ಸ್ವಹಿತಾಸಕ್ತಿಗಾಗಿ ಸಂಸತ್ತಿಗೆ ಅವಮಾನ ಮಾಡುತ್ತಿದ್ದಾರೆ' ಎಂದು ಮೋದಿ ಆರೋಪಿಸಿದ್ದಾರೆ.

ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಮರುಸ್ಥಾಪಿಸುವಂತೆ ಒತ್ತಾಯಿಸಿ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಸಂಸದ ಹಸ್ನೈನ್ ಮಸೂದಿ ಅವರು ಸಂಸತ್ ಭವನದ ಹೊರಗೆ ಭಿತ್ತಿಪತ್ರ ಪ್ರದರ್ಶಿಸಿದರು —ಪಿಟಿಐ ಚಿತ್ರ

ಪೆಗಾಸಸ್: ಜನರ ಬಾಯಿ ಮುಚ್ಚಿಸುವ ಅಸ್ತ್ರ: ರಾಹುಲ್

ಪೆಗಾಸಸ್ ಕುತಂತ್ರಾಂಶ ಬಳಸಿ ಬೇಹುಗಾರಿಕೆ ನಡೆಸಲಾಗಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಈ ಕುತಂತ್ರಾಂಶವು ಜನರ ಬಾಯಿ ಮುಚ್ಚಿಸುವ ಅಸ್ತ್ರವಾಗಿದೆ ಎಂದು ಅವರು ಹೇಳಿದ್ದಾರೆ.

ಯುವ ಕಾಂಗ್ರೆಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ 'ಸಂಸತ್ ಘೇರಾವೊ' ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ನಿರುದ್ಯೋಗ ಸಮಸ್ಯೆಯ ಕುರಿತಂತೆಯೂ ಅವರು ಮೋದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ನಿಮ್ಮ ಮೊಬೈಲ್ ಫೋನ್ ನಿಮ್ಮ ಧ್ವನಿ. ನನ್ನೊಬ್ಬನ ಫೋನ್‌ನಲ್ಲಿ ಮಾತ್ರವಲ್ಲ, ದೇಶದ ಎಲ್ಲ ಯುವ ಜನರ ಮೊಬೈಲ್‌ನಲ್ಲಿ ಪೆಗಾಸಸ್ ಕುತಂತ್ರಾಂಶವನ್ನು ಮೋದಿ ಅಳವಡಿಸಿದ್ದಾರೆ. ನೀವು ಸತ್ಯವನ್ನು ಮಾತನಾಡಲೇಬಾರದು. ಏಕೆಂದರೆ ನಿಮ್ಮ ಫೋನ್‌ನಲ್ಲಿ ನರೇಂದ್ರ ಮೋದಿಯೂ ಇದ್ದಾರೆ, ಪೆಗಾಸಸ್ ಕೂಡ ಇದೆ' ಎಂದು ರಾಹುಲ್ ಹೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net | Prajavani | Prajavani

ಫೇಸ್ ಬುಕ್, ಯೂ ಟ್ಯೂಬ್, ಟ್ವಿಟರ್ ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಸಂವಾದ ಒಲಿಂಪಿಕ್ ಮತ್ತು ಭಾರತೀಯ ಮಹಿಳಾ ಕ್ರೀಡಾಪಟುಗಳು — ಸಂಜೆ 4ರಿಂದ 5

ಭಾಗವಹಿಸುವವರು: **ಜೆ.ಜೆ. ಶೋಭಾ,** ಅಂತರರಾಷ್ಟ್ರೀಯ ಅಥ್ಲೀಟ್ ಹಾಗೂ ಒಲಿಂಪಿಯನ್, **ಡಾ. ಮಾಲತಿ ಕೆ. ಹೊಳ್ಳ,** ಅಂತರರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಹಾಗೂ ಪ್ಯಾರಾಲಿಂಪಿಯನ್, **ಎಂ. ಆರ್. ಪೂವಮ್ಮ,** ಅಂತರರಾಷ್ಟ್ರೀಯ ಅಥ್ಲೀಟ್ ಹಾಗೂ ಒಲಿಂಪಿಯನ್

ಸಿನಿ ಸಿಪ್
ಜಗ್ಗೇಶ್ ಮೇಕಪ್ ಹುಡುಕಾಟದ ಪ್ರಸಂಗ



ಪಾಡ್‌ಕಾಸ್ಟ್:
ಇಂದಿನ ವಿಶೇಷ: ಕಥೆ ಕೇಳು ಮಗುವೆ ಸಿನಿಮಾ ಮ್ಯಾಟನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ, ಸಂಪಾದಕೀಯ, ಪ್ರಚಲಿತ

ನಾಳೆ

ಸೆಲೆಬ್ರಿಟಿ ಲೈವ್:
ಜನಪ್ರಿಯ ಸಂಗೀತ ನಿರ್ದೇಶಕ **ಗುರುಕಿರಣ್** ಜೊತೆಗೆ **ಮುಖಾಮುಖಿ**

ಪ್ರಜಾವಾಣಿ ಸೆಲೆಬ್ರಿಟಿ LIVE — ಬೆಳಿಗ್ಗೆ 11ರಿಂದ 12

ಪೆಗಾಸಸ್ ಪ್ರಕರಣ ಸತ್ಯವಾಗಿದ್ದರೆ ಗಂಭೀರ

ಒಂದನೇ ಪುಟದಿಂದ...

ಅರ್ಜಿಗಳ ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ನೀಡುವಂತೆ ಅರ್ಜಿದಾರರಿಗೆ ತಿಳಿಸಿದೆ. ಮುಂದಿನ ವಿಚಾರಣೆಯು ಮಂಗಳವಾರ (ಆಗಸ್ಟ್ 10) ನಡೆಯಲಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸಿಂಧುತ್ವವನ್ನೇ ಅರ್ಜಿದಾರರಲ್ಲಿ ಕೆಲವರು ಪ್ರಶ್ನಿಸಿದ್ದಾರೆ. ಹಾಗಾಗಿ, ವಿಷಯವು ಹೆಚ್ಚು ಸಂಕೀರ್ಣಗೊಂಡಿದೆ. ಕೇಂದ್ರ ಸರ್ಕಾರದ ಪರವಾಗಿ ಯಾರಾದರೂ ಹಾಜರಾಗಲಿ. ಆ ಮೇಲೆ ನೋಡೋಣ ಎಂದು ಪೀಠವು ಹೇಳಿದೆ.

ಬೇಹುಗಾರಿಕೆಗೆ ಒಳಗಾಗಿದ್ದಾರೆ ಎನ್ನಲಾದ ವ್ಯಕ್ತಿಗಳು ಅಪರಾಧ ತನಿಖೆಗಾಗಿ ದೂರು ದಾಖಲಿಸಿದ್ದಾರೆಯೇ ಎಂದು ಪೀಠವು ಕೇಳಿದೆ. ಭಾರತೀಯ ಸಂಪಾದಕರ ಕೂಟವು ಸಲ್ಲಿಸಿದ ಅರ್ಜಿಯನ್ನು ಬಿಟ್ಟರೆ ಉಳಿದೆಲ್ಲ ಅರ್ಜಿಗಳು ಮಾಧ್ಯಮ ವರದಿಗಳನ್ನು ಆಧಾರಿಸಿವೆ ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

ಅರ್ಜಿ ಸಲ್ಲಿಸಿದ ವ್ಯಕ್ತಿಗಳು ವಿದ್ಯಾವಂತರು ಮತ್ತು ಸಂಪನ್ಮೂಲದ ಲಭ್ಯತೆ ಇರುವವರು. ಹಾಗಾಗಿ, ಅವರು ಅರ್ಜಿಯ ಜತೆಗೆ ಹೆಚ್ಚು ದಾಖಲೆಗಳನ್ನು ಸಲ್ಲಿಸಬಹುದಿತ್ತು ಎಂದು ಪೀಠವು ಹೇಳಿದೆ. ಪತ್ರಕರ್ತರಾದ ಎನ್. ರಾಮ್ ಮತ್ತು ಶಶಿಕುಮಾರ್ ಅವರೂ ಅರ್ಜಿದಾರರಲ್ಲಿ ಸೇರಿದ್ದಾರೆ.

ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಎಂಬ ಕಂಪನಿಯು ತಯಾರಿಸುವ ಪೆಗಾಸಸ್ ಕುತಂತ್ರಾಂಶ ಬಳಸಿ 50 ಸಾವಿರಕ್ಕೂ ಹೆಚ್ಚು ಜನ ಮೇಲೆ ಗೂಢಚರ್ಯೆ ನಡೆಸಲು ಯತ್ನಿಸಲಾಗಿದೆ ಎಂಬ ಅಂತರರಾಷ್ಟ್ರೀಯ ಮಟ್ಟದ ತನಿಖಾ ವರದಿಯು ಜುಲೈ 18ರಂದು ಪ್ರಕಟವಾಗಿತ್ತು. ಅದರಲ್ಲಿ ಭಾರತದ ಹಲವರು ಹೆಸರು ಸೇರಿದೆ.

'ಮೌಲ್ಯಗಳ ಮೇಲಿನ ದಾಳಿ'

'ಪೆಗಾಸಸ್ ಎಂಬುದು ಕುತಂತ್ರಾಂಶ. ನಮ್ಮ ಗಮನಕ್ಕೆ ಬಾರದಂತೆಯೇ ಇದು ನಮ್ಮ ಜೀವನಕ್ಕೆ ಪ್ರವೇಶಿಸುತ್ತದೆ. ನಮ್ಮ ಜೀವನದೊಳಕ್ಕೆ ಬರಲು ಇದಕ್ಕೆ ಒಂದು ಫೋನ್ ಇದ್ದರೆ ಸಾಕು. ಖಾಸಗಿತನ, ಮಾನವ ಘನತೆ, ನಮ್ಮ ಗಣರಾಜ್ಯದ ಮೌಲ್ಯ ಎಲ್ಲದರ ಮೇಲೆ ನಡೆದ ದಾಳಿ ಇದು. ಈ ಕುತಂತ್ರಾಂಶವು ರಾಷ್ಟ್ರೀಯ ಅಂತರ್ಜಾಲದ ಬೆನ್ನೆಲುಬಿನೊಳಗೇ ನುಸುಳಿದೆ' ಎಂದು ಎನ್. ರಾಮ್ ಪರ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು.

ಸಾಮಾಜಿಕ ಹೋರಾಟಗಾರರು, ಪತ್ರಕರ್ತರು, ರಾಜಕಾರಣಿಗಳು ಮತ್ತು ಇತರರ ಮೇಲೆ ನಡೆದ ಬೇಹುಗಾರಿಕೆ ಬಗ್ಗೆ ಪ್ರಕಟವಾದ ಮಾಧ್ಯಮ ವರದಿಗಳ ಆಧಾರದಲ್ಲಿ ಫ್ರಾನ್ಸ್ ಮತ್ತು ಅಮೆರಿಕದ ನ್ಯಾಯಾಲಯಗಳು ಕ್ರಮ ಕೈಗೊಂಡಿವೆ ಎಂಬುದರತ್ತ ಸಿಬಲ್ ಗಮನ ಸೆಳೆದರು. ನ್ಯಾಯಮೂರ್ತಿಗಳ ಮೇಲೆಯೂ ಬೇಹುಗಾರಿಕೆ ನಡೆಸಲಾಗಿದೆ ಎಂಬ ಆರೋಪ ಇದೆ. ಈ ಕುತಂತ್ರಾಂಶವನ್ನು ಸರ್ಕಾರಗಳಿಗೆ ಮಾತ್ರ ಮಾರಾಟ ಮಾಡಲಾಗುತ್ತದೆ. ಹಾಗಾಗಿ, ಈ ಹಂತದಲ್ಲಿ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಬೇಕು ಎಂದು ಕೋರಿದರು.

ನಟ ಧನುಷ್‌ಗೆ ಹೈಕೋರ್ಟ್ ತರಾಟೆ

ಚೆನ್ನೈ (ಪಿಟಿಐ): ಐಷಾರಾಮಿ ಕಾರಿಗೆ ಪ್ರವೇಶ ತೆರಿಗೆ ವಿಧಿಸಿರುವುದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದ ನಟ ಧನುಷ್ ಅವರನ್ನು ಮದ್ರಾಸ್ ಹೈಕೋರ್ಟ್ ಗುರುವಾರ ತರಾಟೆಗೆ ತೆಗೆದುಕೊಂಡಿದೆ.

'ಕಡಿಮೆ ಆದಾಯ ಹೊಂದಿರುವವರು ಪ್ರಾಮಾಣಿಕವಾಗಿ ತೆರಿಗೆಯನ್ನು ಪಾವತಿಸುತ್ತಿದ್ದಾರೆ. ಈ ವರ್ಗದವರು ತೆರಿಗೆ ವಿನಾಯಿತಿಗಾಗಿ ನ್ಯಾಯಾಲಯದ ಮೊರೆ ಹೋಗುವುದಿಲ್ಲ' ಎಂದು ಹೇಳಿದೆ.

'ತೆರಿಗೆದಾರರ ಹಣ ಬಳಸಿ ನಿರ್ಮಿಸಿರುವ ರಸ್ತೆಯಲ್ಲಿ ನೀವು ಐಷಾರಾಮಿ ಕಾರಿನಲ್ಲಿ ಸಂಚರಿಸುತ್ತೀರಿ. ಹಾಲು ಹಾಕುವವರು ಮತ್ತು ದಿನಗೂಲಿ ಕಾರ್ಮಿಕರರು ಸಹ ಪ್ರತಿ ಲೀಟರ್ ಪೆಟ್ರೋಲ್ ಖರೀದಿಸಿದ್ದಕ್ಕೆ ತೆರಿಗೆ ಪಾವತಿಸುತ್ತಾರೆ. ಇಂತಹ ತೆರಿಗೆಗಳಿಂದ ವಿನಾಯಿತಿ ನೀಡಬೇಕು ಎಂದು ಕೋರಿ ಇವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿಲ್ಲ' ಎಂದು ನ್ಯಾಯಮೂರ್ತಿ ಎಸ್.ಎಂ. ಸುಬ್ರಮಣಿಯಂ ಅಭಿಪ್ರಾಯಪಟ್ಟಿದ್ದಾರೆ.

ಧನುಷ್

'48 ಗಂಟೆಗಳಲ್ಲಿ ಬಾಕಿ ಉಳಿದಿರುವ ₹30.30 ಲಕ್ಷ ಪ್ರವೇಶ ತೆರಿಗೆಯನ್ನು ವಾಣಿಜ್ಯ ತೆರಿಗೆ ಇಲಾಖೆಗೆ ಪಾವತಿಸಬೇಕು' ಎಂದು ಅವರು ನಿರ್ದೇಶನ ನೀಡಿದ್ದಾರೆ.

ಧನುಷ್ ಅವರು ಈ ಮೊದಲು ಪ್ರವೇಶ ತೆರಿಗೆ ಮೊತ್ತವಾದ ₹60.60 ಲಕ್ಷದ ಅರ್ಧದಷ್ಟು ಮೊತ್ತವನ್ನು ಇಲಾಖೆಗೆ ಪಾವತಿಸಿದ್ದರು.

ಇಂಗ್ಲೆಂಡ್‌ನಿಂದ 2015ರಲ್ಲಿ ಆಮದು ಮಾಡಿಕೊಂಡಿದ್ದ ₹2.15 ಕೋಟಿ ಮೌಲ್ಯದ ಐಷಾರಾಮಿ 'ರೋಲ್ಸ್ ರಾಯ್ ಘೋಸ್ಟ್' ಕಾರಿಗೆ ಪ್ರವೇಶ ತೆರಿಗೆ ವಿಧಿಸಿರುವುದನ್ನು ಪ್ರಶ್ನಿಸಿ ನಟ ಧನುಷ್ ರಿಟ್ ಅರ್ಜಿ ಸಲ್ಲಿಸಿದ್ದರು.

ಇದೇ ರೀತಿಯಲ್ಲಿ ನಟ ವಿಜಯ್ ಅವರು ಸಹ ಇತ್ತೀಚೆಗೆ ನ್ಯಾಯಾಲಯದಿಂದ ತರಾಟೆಗೆ ಒಳಗಾಗಿದ್ದರು. ಆಮದು ಮಾಡಿಕೊಂಡಿದ್ದ ಐಷಾರಾಮಿ 'ರೋಲ್ಸ್ ರಾಯ್' ಕಾರಿಗೆ ಹೆಚ್ಚು ಪ್ರವೇಶ ತೆರಿಗೆ ವಿಧಿಸಲಾಗಿದೆ ಎಂದು ಪ್ರಶ್ನಿಸಿ ಅವರು ಸಹ ರಿಟ್ ಅರ್ಜಿ ಸಲ್ಲಿಸಿದ್ದರು.

ಪಶ್ಚಿಮ ಬಂಗಾಳದಲ್ಲಿ ಭಾರಿ ಮಳೆಯ ಪರಿಣಾಮ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಹೌರಾ ಜಿಲ್ಲೆಯ ಅಮ್ತಾ ಪಟ್ಟಣದಲ್ಲಿ ಸ್ಥಾಪಿಸಿರುವ ಪರಿಹಾರ ಕೇಂದ್ರದಿಂದ ಆಹಾರ ಪೊಟ್ಟಣ ಹಾಗೂ ಕುಡಿಯುವ ನೀರು ಪಡೆಯುವ ಸಲುವಾಗಿ ಜನರು ರಸ್ತೆಯಲ್ಲಿ ನಿಂತಿದ್ದ ನೀರಿನಲ್ಲಿಯೇ ಗುರುವಾರ ಸಾಗಿದರು —ಪಿಟಿಐ ಚಿತ್ರ

14ನೇ ವರ್ಷಾಚರಣೆ ಸಂಭ್ರಮದಲ್ಲಿ ರಿಲಯನ್ಸ್ ಜುವೆಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜುವೆಲ್ಸ್ ತನ್ನ 14ನೇ ವರ್ಷಾಚರಣೆಯ ಸಲುವಾಗಿ ಚಿನ್ನಾಭರಣಗಳ ವಿಶೇಷ ಸಂಗ್ರಹವಾಗಿರುವ 'ಆಭಾರ್'ಗೆ ಚಾಲನೆ ನೀಡಿದೆ. #ರಿಶ್ತೋನ್ಕಿಧಾಗಾ ಎಂಬ ಹೆಸರಿನಲ್ಲಿ ಗ್ರಾಹಕರು, ಉದ್ಯೋಗಿಗಳು ಮತ್ತು ಕುಶಲಕರ್ಮಿಗಳಿಗೆ ಕೃತಜ್ಞತೆ ಸಲ್ಲಿಸಿದೆ.

ಸಂಗ್ರಹವು ವಿಶಿಷ್ಟವಾದ ಕರಕುಶಲ ಚಿನ್ನ ಮತ್ತು ವಜ್ರದ ಕಿವಿಯೋಲೆ ವಿನ್ಯಾಸಗಳನ್ನು ಒಳಗೊಂಡಿದೆ. ಇದು ಡ್ಯಾಂಗ್ಲರ್‌ಗಳು, ಫ್ರಿಂಜ್‌ಗಳು, ಟಾಪ್ ಮತ್ತು ಡ್ರಾಪ್ಸ್, ಜುಮ್ಕಿ, ಸ್ಟಡ್‌ಗಳ ಸಾಂಪ್ರದಾಯಿಕ ಮತ್ತು ಸಮಕಾಲೀನ ವಿನ್ಯಾಸಗಳನ್ನು ಒಳಗೊಂಡಿದೆ.

ಕಂಪನಿಯು ಗ್ರಾಹಕರಿಗೆ ಸೆಪ್ಟೆಂಬರ್ 1ರವರೆಗೆ ವಿಶೇಷ ಕೊಡುಗೆಗಳನ್ನು ಘೋಷಿಸಿದ್ದು, ಚಿನ್ನಾಭರಣಗಳ ಮೇಕಿಂಗ್ ಚಾರ್ಜ್ ಮತ್ತು ವಜ್ರದ ಆಭರಣಗಳ ಮೌಲ್ಯದ ಮೇಲೆ ಶೇ 20ರಷ್ಟು ವಿನಾಯಿತಿಯನ್ನೂ ಅದು ಒಳಗೊಂಡಿದೆ.

'ಇಷ್ಟು ವರ್ಷ ನಮ್ಮನ್ನು ಬೆಂಬಲಿಸಿದ ಮತ್ತು ವಿಶ್ವಾಸ ತೋರಿಸಿದ ಎಲ್ಲರಿಗೂ ನಾವು ಧನ್ಯವಾದ ಹೇಳಲು ಬಯಸುತ್ತೇವೆ' ಎಂದು ರಿಲಯನ್ಸ್ ಜುವೆಲ್ಸ್‌ನ ಸಿಇಒ ಸುನಿಲ್ ನಾಯಕ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು ▲ 211



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,258
ಇಂದಿನ ಅಂತ್ಯ	16,294
▲	36
ದಿನದ ಗರಿಷ್ಠ	16,349

ವಿನಿಮಯ ದರ

$ ಡಾಲರ್	74.17
£ ಪೌಂಡ್	103.21
€ ಯುರೊ	87.75
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹472

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1470)
ಸೋಯಾ (ರಿಫೈನ್ಡ್)	₹1402 (1400)
ಸೂರ್ಯಕಾಂತಿ (ರಿಫೈನ್ಡ್)	₹1475 (1477)
ಪಾಮೋಲಿನ್	₹1260 (1264)

ವೊಡಾಫೋನ್ ಸಮೂಹ ಮತ್ತು ಕೇನ್ ಎನರ್ಜಿ ಕಂಪನಿಗಳಿಗೆ ಪ್ರಯೋಜನ

ಪೂರ್ವಾನ್ವಯ ತೆರಿಗೆ ಕೊನೆಗೊಳಿಸಲು ಮುಂದಾದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಪೂರ್ವಾನ್ವಯ ತೆರಿಗೆ ವ್ಯವಸ್ಥೆಯ ಸಮಸ್ಯೆ ಕೊನೆಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಮಸೂದೆಯೊಂದನ್ನು ಲೋಕಸಭೆಯಲ್ಲಿ ಗುರುವಾರ ಮಂಡಿಸಿದೆ. ಈ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದರೆ, ವೊಡಾಫೋನ್ ಹಾಗೂ ಕೇನ್ ಎನರ್ಜಿಯಂತಹ ಕಂಪನಿಗಳ ಮುಂದಿರಿಸಿದ್ದ ಪೂರ್ವಾನ್ವಯ ತೆರಿಗೆ ಬೇಡಿಕೆಗಳನ್ನು ಹಿಂಪಡೆಯಲು ಸರ್ಕಾರಕ್ಕೆ ಸಾಧ್ಯವಾಗಲಿದೆ.

ಮಸೂದೆಯು ಕಾಯ್ದೆಯಾದರೆ, ಕಂಪನಿಗಳಿಂದ ಈ ಹಿಂದೆ ಸಂಗ್ರಹಿಸಿದ್ದ ಹಣವನ್ನು ಹಿಂದಿರುಗಿಸಲಾಗುವುದು ಎಂದೂ ಕೇಂದ್ರ ಸರ್ಕಾರವು ಹೇಳಿದೆ.

'ತೆರಿಗೆ ಕಾನೂನು (ತಿದ್ದುಪಡಿ) ಮಸೂದೆ – 2021'ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದರು. ದೇಶದ ಆಸ್ತಿಗಳ ಪರೋಕ್ಷ ವರ್ಗಾವಣೆಗೆ 2012ರ ಕಾನೂನನ್ನು ಬಳಸಿಕೊಂಡು ತೆರಿಗೆ ವಿಧಿಸಿದ್ದನ್ನು ಹಿಂದಕ್ಕೆ ಪಡೆಯಲು ಈ ಮಸೂದೆ ಅನುವು ಮಾಡಿಕೊಡಲಿದೆ.

ಮುಖ್ಯಾಂಶಗಳು

- ಲೋಕಸಭೆಯಲ್ಲಿ ಮಸೂದೆ ಮಂಡನೆ
- ಎರಡು ಪ್ರಕರಣಗಳಲ್ಲಿ ಸೋಲು ಕಂಡಿರುವ ಸರ್ಕಾರ
- ಕೇನ್ ಎನರ್ಜಿ ಕಂಪನಿಗೆ ₹ 8,900 ಕೋಟಿ ನೀಡಬೇಕಿರುವ ಕೇಂದ್ರ

ಬ್ರಿಟಿಷ್ ಕಂಪನಿಗಳಾದ ಕೇನ್ ಎನರ್ಜಿ ಮತ್ತು ವೊಡಾಫೋನ್ ಸಮೂಹದ ಜೊತೆಗೆ ಬಹುಕಾಲದಿಂದ ಇರುವ ತೆರಿಗೆ ಸಂಬಂಧಿ ವ್ಯಾಜ್ಯಗಳ ಮೇಲೆ ಈ ಮಸೂದೆಯು ನೇರ ಪರಿಣಾಮ ಉಂಟುಮಾಡಲಿದೆ. ಪೂರ್ವಾನ್ವಯ ತೆರಿಗೆ ವಿಚಾರದಲ್ಲಿ ಕೇಂದ್ರ ಸರ್ಕಾರವು ಕೇನ್ ಎನರ್ಜಿ ಹಾಗೂ ವೊಡಾಫೋನ್ ಜೊತೆಗಿನ ಎರಡು ಮಧ್ಯಸ್ಥಿಕೆ ಪ್ರಕರಣಗಳಲ್ಲಿ ಸೋಲು ಕಂಡಿದೆ.

ವೊಡಾಫೋನ್ ಪ್ರಕರಣದಲ್ಲಿ ಕೇಂದ್ರ ಸರ್ಕಾರವು ಪಾವತಿ ಮಾಡಬೇಕಿರುವುದು ಏನೂ ಇಲ್ಲ. ಆದರೆ, ಕೇನ್ ಎನರ್ಜಿ ಕಂಪನಿಗೆ ಕೇಂದ್ರವು ₹ 8,900 ಕೋಟಿ (1.2 ಬಿಲಿಯನ್ ಡಾಲರ್) ಮೊತ್ತವನ್ನು ಪಾವತಿಸಬೇಕಾಗುತ್ತದೆ.

ವಿದೇಶಿ ಕಂಪನಿಗಳು ಭಾರತದಲ್ಲಿ ಹೊಂದಿರುವ ಆಸ್ತಿಯ ಪರೋಕ್ಷ ವರ್ಗಾವಣೆ, ಅದಕ್ಕೆ ಸಂಬಂಧಿಸಿದ ತೆರಿಗೆ ವಿಚಾರವು ಬಹುಕಾಲದಿಂದ ವ್ಯಾಜ್ಯದಲ್ಲಿ ಇದೆ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಇಂತಹ ಆಸ್ತಿಯ ವರ್ಗಾವಣೆಗೆ ತೆರಿಗೆ ಇಲ್ಲ ಎಂದು ಸುಪ್ರೀಂ ಕೋರ್ಟ್ 2012ರಲ್ಲಿ ತೀರ್ಪು ನೀಡಿತ್ತು. ಆದರೆ, 2012ರ ಹಣಕಾಸು ಕಾಯ್ದೆಯ ಮೂಲಕ ಆದಾಯ ತೆರಿಗೆ ಕಾಯ್ದೆ – 1961ರ ಕೆಲವು ಅಂಶಗಳಿಗೆ ತಿದ್ದುಪಡಿ ತಂದ ಕೇಂದ್ರವು, ವಿದೇಶಿ ಕಂಪನಿಗಳ ಷೇರುಗಳು ಗಮನಾರ್ಹ ಮೌಲ್ಯ ಪಡೆದುಕೊಂಡಿದ್ದು ಭಾರತದಲ್ಲಿನ ಆಸ್ತಿಯ ಕಾರಣದಿಂದಾಗಿದ್ದರೆ, ಅಂತಹ ಷೇರುಗಳ ಮಾರಾಟದಿಂದ ಬರುವ ಲಾಭವು ತೆರಿಗೆ ವ್ಯಾಪ್ತಿಗೆ ಬರುತ್ತದೆ ಎಂದು ಹೇಳಿತು. ಈ ತಿದ್ದುಪಡಿಯು ಪೂರ್ವಾನ್ವಯ ಆಗುತ್ತದೆ ಎಂದೂ ಹೇಳಿತು.

'2012ರ ಹಣಕಾಸು ಕಾಯ್ದೆಯ ಮೂಲಕ ತರಲಾದ ತಿದ್ದುಪಡಿಗಳ ವಿಚಾರವಾಗಿ ಟೀಕೆಗಳು ಬಂದಿವೆ. ತಿದ್ದುಪಡಿಗಳು ಪೂರ್ವಾನ್ವಯ ಆಗುವಂತೆ ಮಾಡಿದ್ದು ಟೀಕೆಗಳಿಗೆ ಪ್ರಮುಖ ಕಾರಣ. ಇಂತಹ ತಿದ್ದುಪಡಿಗಳು ಹೂಡಿಕೆದಾರರ ನೆಚ್ಚಿನ ತಾಣ ಭಾರತ ಎಂಬ ಹೆಸರಿಗೆ ಕುಂದು ತರುತ್ತವೆ ಎಂಬ ವಾದ ಇದೆ' ಎಂದು ಮಸೂದೆಯಲ್ಲಿ ಹೇಳಲಾಗಿದೆ.

ಈ ಸಂದರ್ಭದಲ್ಲಿ ದೇಶವು ತ್ವರಿತಗತಿಯಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸಬೇಕಿದೆ. ಅರ್ಥ ವ್ಯವಸ್ಥೆಯ ವೇಗದ ಬೆಳವಣಿಗೆ ಹಾಗೂ ಉದ್ಯೋಗ ಸೃಷ್ಟಿಯಲ್ಲಿ ವಿದೇಶಿ ಹೂಡಿಕೆಯ ಪಾತ್ರ ಮಹತ್ವದ್ದು ಎಂದೂ ಮಸೂದೆಯಲ್ಲಿ ವಿವರಣೆ ನೀಡಲಾಗಿದೆ.

ಚಿನ್ನ ₹ 312, ಬೆಳ್ಳಿ ₹ 1,037ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು 10 ಗ್ರಾಂಗೆ ₹ 312ರಷ್ಟು ಇಳಿಕೆ ಆಗಿದ್ದು ₹ 46,907ಕ್ಕೆ ತಲುಪಿದೆ. ಬೆಳ್ಳಿ ಧಾರಣೆಯು ಕೆ.ಜಿ.ಗೆ ₹ 1,037ರಷ್ಟು ಇಳಿಕೆ ಆಗಿ ₹ 66,128ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರವು ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಅಪ್ನಾಕ್ಲಬ್‌ನಲ್ಲಿ ಸಿಕೋಯಾ ಹೂಡಿಕೆ

ಬೆಂಗಳೂರು: ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳನ್ನು (ಎಫ್‌ಎಂಸಿಜಿ) ಸಗಟು ವ್ಯಾಪಾರಿಗಳಿಂದ ಸಣ್ಣ ವ್ಯಾಪಾರಿಗಳಿಗೆ ತಲುಪಿಸುವ 'ಅಪ್ನಾಕ್ಲಬ್' ವೇದಿಕೆಯು ಸಿಕೋಯಾ ಕ್ಯಾಪಿಟಲ್ ಇಂಡಿಯಾಸ್ ಸರ್ಜ್ ನಿಧಿಯಿಂದ ₹ 37 ಕೋಟಿ ಹೂಡಿಕೆ ಪಡೆದುಕೊಂಡಿರುವುದಾಗಿ ತಿಳಿಸಿದೆ.

'ಈ ಹೂಡಿಕೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ಚಟುವಟಿಕೆಯನ್ನು ಇನ್ನಷ್ಟು ವಿಸ್ತರಿಸಲು ಸಾಧ್ಯವಾಗುತ್ತದೆ' ಎಂದು ಅಪ್ನಾಕ್ಲಬ್ ಕಂಪನಿಯ ಸಿಇಒ ಮನೀಶ್ ಕುಮಾರ್ ಹೇಳಿದ್ದಾರೆ.

ಕೃಷಿ ಯಂತ್ರೋಪಕರಣಗಳ ಎಂಆರ್‌ಪಿ ಪ್ರದರ್ಶನ ಕಡ್ಡಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ಯಂತ್ರೋಪಕರಣ ಮಾರಾಟ ಮಾಡುವ ಡೀಲರ್‌ಗಳು ಟ್ರ್ಯಾಕ್ಟರ್, ಟಿಲ್ಲರ್ ಸೇರಿದಂತೆ ರೈತರು ಖರೀದಿಸುವ ಪ್ರತಿಯೊಂದು ಸಲಕರಣೆಗಳ ಗರಿಷ್ಠ ಮಾರಾಟ ದರ (ಎಂಆರ್‌ಪಿ)ವನ್ನು ಕಡ್ಡಾಯವಾಗಿ ಪ್ರದರ್ಶಿಸುವಂತೆ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಈ ವಿಷಯ ತಿಳಿಸಿದ ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಡೀಲರ್‌ಗಳು ಹೆಚ್ಚು ದರ ಆಕರಿಸುತ್ತ ರೈತರಿಗೆ ಮೋಸ ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದ್ದರಿಂದ ಈ ಆದೇಶ ಹೊರಡಿಸಲಾಗಿದೆ ಎಂದರು.

ಕೃಷಿ ಯಂತ್ರೋಪಕರಣ ಉತ್ಪಾದನಾ ಕಂಪನಿಗಳು, ಮಾರಾಟ ಮಾಡುವ ಡೀಲರ್‌ಗಳು ಹಾಗೂ ಆಯಾ ರಾಜ್ಯ ಸರ್ಕಾರಗಳ ಕೃಷಿ ಇಲಾಖೆಗಳ ಅಧಿಕೃತ ವೆಬ್‌ಸೈಟ್‌ಗಳಲ್ಲೂ ಕಡ್ಡಾಯವಾಗಿ ದರ ಪಟ್ಟಿ ಪ್ರಕಟಿಸುವಂತೆ ಸೂಚಿಸಲಾಗಿದೆ ಎಂದು ದರು.

ಕೃಷಿ ಯಂತ್ರೋಪಕರಣ ಖರೀದಿಸುವ ರೈತರಿಗೆ ಉತ್ತೇಜನದ ರೂಪದಲ್ಲಿ ನೀಡಲಾಗುವ ಸಹಾಯಧನ ಸೌಲಭ್ಯ ಕುರಿತೂ ಸಮರ್ಪಕ ಮಾಹಿತಿ ದೊರೆಯುವಂತೆ ನೋಡಿಕೊಳ್ಳಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ ಎಂದು ಅವರು ತಿಳಿಸಿದರು.

ಫ್ಲಿಪ್‌ಕಾರ್ಟ್‌ಗೆ ಇ.ಡಿ. ನೋಟಿಸ್

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯವು (ಇ.ಡಿ.) ಫ್ಲಿಪ್‌ಕಾರ್ಟ್ ಕಂಪನಿ ಮತ್ತು ಅದರ ಪ್ರವರ್ತಕರಿಗೆ ಅಂದಾಜು ₹ 10,600 ಕೋಟಿಗೆ ಸಂಬಂಧಿಸಿದಂತೆ ನೋಟಿಸ್ ಜಾರಿ ಮಾಡಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಉಲ್ಲಂಘನೆಗೆ ಸಂಬಂಧಿಸಿದಂತೆ ಈ ನೋಟಿಸ್ ಜಾರಿಗೊಳಿಸಲಾಗಿದೆ.

ಫ್ಲಿಪ್‌ಕಾರ್ಟ್, ಅದರ ಸಂಸ್ಥಾಪಕರಾದ ಸಚಿನ್ ಬನ್ಸಾಲ್, ಬಿನ್ನಿ ಬನ್ಸಾಲ್ ಸೇರಿದಂತೆ 10 ಜನರಿಗೆ ಹಿಂದಿನ ತಿಂಗಳು ನೋಟಿಸ್ ಜಾರಿಯಾಗಿದೆ ಎಂದು ಮೂಲಗಳು ತಿಳಿಸಿವೆ. ತನಿಖೆಯನ್ನು ಪೂರ್ಣಗೊಳಿಸಿದ ನಂತರವೇ ಈ ನೋಟಿಸ್ ಜಾರಿಗೊಳಿಸಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ನಿಯಮ ಹಾಗೂ ಬಹುಬ್ರ್ಯಾಂಡ್ ಚಿಲ್ಲರೆ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆಯ ಆರೋಪವನ್ನು ಇವರ ಮೇಲೆ ಹೊರಿಸಲಾಗಿದೆ ಎಂದು ಗೊತ್ತಾಗಿದೆ.

ತಾನು ನಿಯಮಗಳನ್ನು ಪಾಲಿಸಿರುವುದಾಗಿ, ಇ.ಡಿ. ತನಿಖೆಗೆ ಸಹಕರಿಸುತ್ತಿರುವುದಾಗಿ ಫ್ಲಿಪ್‌ಕಾರ್ಟ್ ಹೇಳಿದೆ. ಸಚಿನ್ ಮತ್ತು ಬಿನ್ನಿ ಅವರನ್ನು ಸಂಪರ್ಕಿಸಲು ಸಾಧ್ಯವಾಗಿಲ್ಲ. ಎಫ್‌ಡಿಐ ನಿಯಮಗಳನ್ನು ಫ್ಲಿಪ್‌ಕಾರ್ಟ್ ಉಲ್ಲಂಘಿಸಿದ ಎಂಬ ಆರೋಪದ ಬಗ್ಗೆ ಇ.ಡಿ. 2012ರಿಂದಲೂ ಪರಿಶೀಲನೆ ನಡೆಸುತ್ತಿದೆ.

ಮುಂಬೈ ಧಾರಣೆ

ಶೇಂಗಾ

5-8-2021

ಜಾವಾ 70/80(ಹೊಸ)	10000-10050
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1480)
ಒಂದು ವಾರದ ಡೆಲಿವರಿ	1475 (1475)
ಸೋಯಾ ಕಚ್ಚಾ	1370 (1365)
ಪಾಮ್ ವಾರದ ಡೆಲಿವರಿ	1258 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1395 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,750 (48,200)
ಬೆಳ್ಳಿ ಕೆ.ಜಿ 67,550 (68,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-45000
ಹಳತು	42500-52000
ಕುಮಟ	
ಚಿಪ್ಪು	29069-36424
ಕೋಕ	19819-32370
ಹಳೆಚಾಲಿ	44099-44619
ಹೊಸಚಾಲಿ	40669-41869

ಸಿದ್ದಾಪುರ	
ಬಿಳಿಗೋಟು	26719-35299
ಚಾಲಿ	37699-41139
ಕೋಕ	26699-32699
ಕೆಂಪುಗೋಟು	31699-31699
ರಾಶಿ	39849-41399
ತಟ್ಟಿಬೆಟ್ಟೆ	36889-36889
ಶಿರಸಿ	
ಬೆಟ್ಟೆ	32823-38709
ಬಿಳಿಗೋಟು	27990-36878
ಚಾಲಿ	38199-41799

ರಾಶಿ	39809-42099
ಯಲ್ಲಾಪುರ	
ಬಿಳಿಗೋಟು	28899-35500
ಚಾಲಿ	36895-41609
ಕೋಕ	20649-31626
ಕೆಂಪುಗೋಟು	28899-32899
ರಾಶಿ	39390-44765
ತಟ್ಟಿಬೆಟ್ಟೆ	34299-39009
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	249-491
ದ್ವಿತಳಿ	251-536

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	12500	12100	175.85ಸೆಂಟ್ಸ್
ಎಸಿ	5665	4800	4775	
ಆರ್‌ಪಿ	6000	5700	5950	ಲಂಡನ್
ಆರ್‌ಸಿ	3355	3300	3425	1770 ಡಾಲರ್ಸ್

ಇ–ವೇ ಬಿಲ್: ಇದೇ 15ರಿಂದ ರಿಟರ್ನ್ಸ್ ಸಲ್ಲಿಕೆ ಕಡ್ಡಾಯ

ನವದೆಹಲಿ (ಪಿಟಿಐ): ಈ ವರ್ಷದ ಜೂನ್‌ವರೆಗೆ ಸತತ ಎರಡು ತಿಂಗಳಿಂದ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸದೇ ಇದ್ದರೆ ಆಗಸ್ಟ್ 15ರ ನಂತರ ಇ-ವೇ ಬಿಲ್ ಸೃಷ್ಟಿಸಲು ಸಾಧ್ಯವಾಗುವುದಿಲ್ಲ ಎಂದು ಜಿಎಸ್‌ಟಿಎನ್ (ಜಿಎಸ್‌ಟಿ ನೆಟ್‌ವರ್ಕ್) ಹೇಳಿದೆ.

ಬಾಕಿ ಇರುವ ಜಿಎಸ್‌ಟಿ ರಿಟರ್ನ್‌ಗಳನ್ನು ತೆರಿಗೆ ಪಾವತಿದಾರರು ಆಗಸ್ಟ್‌ನಲ್ಲಿ ಸಲ್ಲಿಸುವ ನಿರೀಕ್ಷೆ ಇರುವುದರಿಂದ, ಸರಕು ಮತ್ತು ಸೇವಾ ತೆರಿಗೆ ಸಂಗ್ರಹವನ್ನು ಹೆಚ್ಚಿಸಲು ಈ ನಿರ್ಧಾರವು ಸಹಾಯ ಮಾಡಲಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯು (ಸಿಬಿಐಸಿ) ರಿಟರ್ನ್ಸ್ ಸಲ್ಲಿಸದೇ ಇದ್ದರೂ ಇ-ವೇ ಬಿಲ್ ತಡೆಹಿಡಿಯುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿತ್ತು.

ಸರ್ಕಾರವು ಇದೀಗ, ರಿಟರ್ನ್ಸ್ ಸಲ್ಲಿಸದವರಿಗೆ ಇ-ವೇ ಬಿಲ್‌ಗಳನ್ನು ಮತ್ತೆ ತಡೆಹಿಡಿಯುವ ನಿರ್ಧಾರಕ್ಕೆ ಬಂದಿದೆ. ಆಗಸ್ಟ್ 15ರಿಂದ ಅದು ಜಾರಿಗೆ ಬರಲಿದೆ ಎಂದು ಸಿಬಿಐಸಿ ಹೇಳಿದೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿ ₹ 50 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ಸರಕುಗಳಿಗೆ ಇ–ವೇ ಬಿಲ್ ಪಡೆಯುವುದು ಕಡ್ಡಾಯ. ಆದರೆ, ಚಿನ್ನಕ್ಕೆ ವಿನಾಯಿತಿ ಇದೆ.

ವಿಮಾನಯಾನ ಕಂಪನಿಗಳು, ನಿಲ್ದಾಣಗಳಿಗೆ ನಷ್ಟ

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕದಿಂದಾಗಿ 2020–21ನೇ ಹಣಕಾಸು ವರ್ಷದಲ್ಲಿ ದೇಶದ ವಿಮಾನಯಾನ ಕಂಪನಿಗಳು ಮತ್ತು ವಿಮಾನ ನಿಲ್ದಾಣಗಳಿಗೆ ಒಟ್ಟು ₹ 22,400 ಕೋಟಿ ನಷ್ಟವಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಇದರಲ್ಲಿ ಕಂಪನಿಗಳಿಗೆ ಆಗಿರುವ ನಷ್ಟವು ₹ 19 ಸಾವಿರ ಕೋಟಿ, ವಿಮಾನ ನಿಲ್ದಾಣಗಳಿಗೆ ಆಗಿರುವ ನಷ್ಟದ ಮೊತ್ತವು ₹ 3,400 ಕೋಟಿ.

ವಿಮಾನ ನಿಲ್ದಾಣ ಪ್ರಾಧಿಕಾರವು (ಎಎಐ) 2019ರ ಏಪ್ರಿಲ್–ಜೂನ್ ಅವಧಿಯಲ್ಲಿ ₹ 2,976 ಕೋಟಿ ವರಮಾನ ಗಳಿಸಿತ್ತು. 2021ರ ಏಪ್ರಿಲ್–ಜೂನ್ ಅವಧಿಯಲ್ಲಿ ವರಮಾನವು ₹ 889 ಕೋಟಿಗೆ ಇಳಿದಿದೆ ಎಂದು ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ವಿ.ಕೆ. ಸಿಂಗ್ ಅವರು ಗುರುವಾರ ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಸಾಂಕ್ರಾಮಿಕದಿಂದಾಗಿ ಜಾಗತಿಕ ಮಟ್ಟದಲ್ಲಿ ವಿಮಾನಯಾನ ವಲಯವು ಹೆಚ್ಚಿನ ಪರಿಣಾಮ ಎದುರಿಸುವಂತಾಗಿದೆ. ದೇಶದಲ್ಲಿಯೂ ವಿಮಾನಯಾನ ವಲಯವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ ಎಂದು ಅವರು ವಿವರಿಸಿದ್ದಾರೆ.

ಕುಸ್ತಿ: ಕಂಚಿನ ಪೈಪೋಟಿಯಲ್ಲಿ ಮಂಕಾದ ದೀಪಕ್ ಪೂನಿಯಾ, ವಿನೇಶಾ ಪೋಗಟ್‌ಗೆ ನಿರಾಸೆ

ಬೆಳ್ಳಿಯ ಬೆಡಗು ಮೂಡಿಸಿದ ರವಿ

ಟೋಕಿಯೊ (ಪಿಟಿಐ): ಹರಿಯಾಣದ ನಹ್ರಿ ಗ್ರಾಮದ ಪೈಲ್ವಾನ ರವಿಕುಮಾರ್ ದಹಿಯಾ ತಾವು ಸ್ಪರ್ಧಿಸಿದ ಮೊದಲ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದು ಮಿಂಚಿದ್ದಾರೆ.

ಗುರುವಾರ ನಡೆದ ಒಲಿಂಪಿಕ್ಸ್‌ನ ಪುರುಷರ 57 ಕೆಜಿ ಫ್ರೀಸ್ಟೈಲ್ ಕುಸ್ತಿಯಲ್ಲಿ ಫೈನಲ್‌ನಲ್ಲಿ 4–7ರಿಂದ ರಷ್ಯಾದ ಜವೂರ್ ಉಗೆವ್ ವಿರುದ್ಧ ಸೋತರು. ವಿಶ್ವಚಾಂಪಿಯನ್ ಜವೂರ್ ಅವರಿಗೆ ದಿಟ್ಟ ಪೈಪೋಟಿ ನೀಡಿದ ರವಿಯ ಪ್ರಯತ್ನಕ್ಕೆ ಚಿನ್ನದ ಪದಕ ಒಲಿಯಲಿಲ್ಲ. 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿಯೂ ರವಿ, ಜವೂರ್ ಎದುರು ಮಣಿದಿದ್ದರು.

ಆದರೆ, ಒಲಿಂಪಿಕ್ಸ್ ಕುಸ್ತಿಯಲ್ಲಿ ಬೆಳ್ಳಿ ಪದಕ ಜಯಿಸಿದ ಭಾರತದ ಎರಡನೇ ಕುಸ್ತಿಪಟುವೆಂಬ ಹೆಗ್ಗಳಿಕೆಗೆ ಪಾತ್ರರಾದರು. 2012ರಲ್ಲಿ ನಡೆದ ಲಂಡನ್ ಒಲಿಂಪಿಕ್ಸ್‌ನಲ್ಲಿ ಸುಶೀಲ್ ಕುಮಾರ್ 66ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

23 ವರ್ಷದ ರವಿಕುಮಾರ್, ಬುಧವಾರ ನಡೆದಿದ್ದ ಸೆಮಿಫೈನಲ್‌ನಲ್ಲಿ ಅಮೋಘ ಸಾಮರ್ಥ್ಯ ತೋರಿ ಫೈನಲ್ ಪ್ರವೇಶಿಸಿದ್ದರು. ಅಂತಿಮ ಹಣಾಹಣಿಯಲ್ಲಿ ತಮ್ಮ ಸಂಪೂರ್ಣ ಶಕ್ತಿ ಮತ್ತು ಯುಕ್ತಿಯನ್ನು ವಿನಿಯೋಗಿಸಿದರು. ಎಲ್ಲ ಪಟ್ಟುಗಳನ್ನೂ ಪ್ರಯೋಗಿಸಿದರು. ಆದರೆ, ರಷ್ಯಾದ ಮಲ್ಲ ಚುರುಕಿನ ಪ್ರತ್ಯುತ್ತರ ನೀಡಿದರು.

ಅಪ್ಪನ ಶ್ರಮ; ಮಗನ ಸಾಧನೆ: ರವಿಕುಮಾರ್ ಜನಿಸಿದ ಹಳ್ಳಿಯು ಹರಿಯಾಣದ ಸೋನೆಪತ್ ಜಿಲ್ಲೆಯಲ್ಲಿದೆ. ತಮ್ಮ ಗ್ರಾಮದಲ್ಲಿಯೇ ಹತ್ತನೇ ವಯಸ್ಸಿನವರೆಗೂ ಕುಸ್ತಿ ಅಭ್ಯಾಸ ಮಾಡಿದ ಅವರು, ನಂತರ ಉತ್ತರ ದೆಹಲಿಯಲ್ಲಿರುವ ಛತ್ರಸಾಲ ಕುಸ್ತಿ ನಿಲಯಕ್ಕೆ ಸೇರಿದರು. ಅಲ್ಲಿ ಕುಸ್ತಿ ಕೋಚ್ ಸತ್ಪಾಲ್ ಸಿಂಗ್ ಅವರ ಗರಡಿಯಲ್ಲಿ ಪಳಗಿದರು. ಆದರೆ, ರವಿ ಯಶಸ್ಸಿನಲ್ಲಿ ಅವರ ತಂದೆ ರಾಕೇಶ್ ದಹಿಯಾ ಅವರ ಪಾತ್ರ ದೊಡ್ಡದು.

ರವಿಗೆ ದೆಹಲಿಯಲ್ಲಿ ಉತ್ತಮ ಹಾಲು, ಹೈನು ಸಿಗುವುದಿಲ್ಲವೆಂಬ ಕಾರಣಕ್ಕೆ ರಾಕೇಶ್ ದಹಿಯಾ ಅವರು ಪ್ರತಿನಿತ್ಯ ತಮ್ಮ ಗ್ರಾಮದಿಂದ ತಾಜಾ ಹಾಲು ಮತ್ತು ಹಣ್ಣುಗಳನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದರು.

ರವಿಗೆ ₹ 4 ಕೋಟಿ: ರವಿಕುಮಾರ್ ದಹಿಯಾ ಅವರಿಗೆ ನಾಲ್ಕು ಕೋಟಿ ರೂಪಾಯಿ ಮತ್ತು ಸರ್ಕಾರಿ ಇಲಾಖೆಯಲ್ಲಿ ಪ್ರಥಮ ದರ್ಜೆ ಹುದ್ದೆ ನೀಡುವುದಾಗಿ ಹರಿಯಾಣದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಘೋಷಿಸಿದ್ದಾರೆ.



ಭಾರತದ ರವಿ ದಹಿಯಾ (ಎಡ) ಮತ್ತು ಜವೂರ್ ಉಗೇವ್ ಪೈಪೋಟಿಯ ಕ್ಷಣ –ಪಿಟಿಐ ಚಿತ್ರ

ಕುಸ್ತಿಯಲ್ಲಿ ಭಾರತದ ಸಾಧನೆ

ವರ್ಷ	ಕುಸ್ತಿಪಟು	ಸ್ಥಳ	ಪದಕ
1952	ಕೆ.ಡಿ. ಜಾಧವ್	ಹೆಲ್ಸಿಂಕಿ	ಕಂಚು
2008	ಸುಶೀಲ್ ಕುಮಾರ್	ಬೀಜಿಂಗ್	ಕಂಚು
2012	ಸುಶೀಲ್ ಕುಮಾರ್	ಲಂಡನ್	ಬೆಳ್ಳಿ
2012	ಯೋಗೇಶ್ವರ್ ದತ್	ಲಂಡನ್	ಕಂಚು
2016	ಸಾಕ್ಷಿ ಮಲಿಕ್	ರಿಯೊ ಡಿ ಜನ್ಯೆರೊ	ಬೆಳ್ಳಿ
2021	ರವಿ ದಹಿಯಾ	ಟೋಕಿಯೊ	ಬೆಳ್ಳಿ

ವಿನೇಶಾ ಪೋಗಟ್ ಮತ್ತು ವನೆಸಾ ಕಲಾದಜಿನಸ್ಕಾಯಾ

ವಿನೇಶಾ ಪೋಗಟ್ ನಿರಾಸೆ

ಪದಕ ಜಯದ ನಿರೀಕ್ಷೆಯಲ್ಲಿದ್ದ ವಿನೇಶಾ ಪೋಗಟ್ ಮಹಿಳೆಯರ 53 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಮುಗ್ಗರಿಸಿದರು.

ಈ ಬೌಟ್‌ನಲ್ಲಿ ಬೆಲಾರೂಸ್‌ನ ವನೇಸಾ ಕಲಾಜಿನಸ್ಕಾಯಾ 9–3ರಿಂದ ಫಾಲ್‌ನಲ್ಲಿ ವಿನೇಶ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ವನೇಸಾ ಚೀನಾದ ಕಿನಾಯು ಪಾಂಗ್ ವಿರುದ್ಧ ಮಣಿದರು.

ದೀಪಕ್ ಪೂನಿಯಾಗೆ ಆಘಾತ

ಪುರುಷರ 86 ಕೆಜಿ ಫ್ರೀಸ್ಟೈಲ್ ಕುಸ್ತಿಯ ಕಂಚಿನ ಪದಕದ ಸುತ್ತಿನಲ್ಲಿ ದೀಪಕ್ ಪೂನಿಯಾ ಸೋಲನುಭವಿಸಿದರು. ಇದೇ ಮೊದಲ ಬಾರಿ ಒಲಿಂಪಿಕ್ ಕೂಟದಲ್ಲಿ ಭಾಗವಹಿಸಿರುವ ದೀಪಕ್ ಸ್ಯಾನ್ ಮರಿನೊದ ಮೈಲೊ ನಜೀರ್ ಅಮೈನ್ ವಿರುದ್ಧ ಸೋತರು. ಆರಂಭದಿಂದಲೂ ಉತ್ತಮ ಹೋರಾಟ ಮಾಡಿದ ದೀಪಕ್ ಬೌಟ್‌ನ ಕೊನೆಯ ಹತ್ತು ಸೆಕೆಂಡುಗಳಲ್ಲಿ ಸೋಲಿನತ್ತ ಸಾಗಿದರು. ಅಮೈನ್ 4–2ರಿಂದ ಗೆದ್ದು ಕಂಚು ಗಳಿಸಿದರು.



ಸ್ಪರ್ಧಾ ಸಮಯ

ಅಥ್ಲೆಟಿಕ್ಸ್

ಮಧ್ಯಾಹ್ನ 1 ಗಂಟೆ	ಮಹಿಳೆಯರ 20 ಕಿ.ಮೀ. ನಡಿಗೆ ಫೈನಲ್ (ಭಾವನಾ ಜಾಟ್, ಪ್ರಿಯಾಂಕಾ ಗೋಸ್ವಾಮಿ)
ಸಂಜೆ 4.55	ಪುರುಷರ 4X400 ಮೀ. ರಿಲೇ ಮೊದಲ ಸುತ್ತಿನ ಹೀಟ್ಸ್ (ಅಮೋಜ್ ಜೇಕಬ್, ಅರೋಕಿಯಾ ರಾಜೀವ್, ನೋಹ್ ನಿರ್ಮಲ್ ಟಾಮ್, ಮುಹಮ್ಮದ್ ಅನಾಸ್ ಯಾಹ್ಯಾ).
ಸಂಜೆ 5.20	ಮಹಿಳೆಯರ ಜಾವೆಲಿನ್ ಥ್ರೊ ಫೈನಲ್
ಸಂಜೆ 5.30	ಪುರುಷರ 5000 ಮೀ. ಓಟ ಫೈನಲ್
ಸಂಜೆ 6.05	ಮಹಿಳೆಯರ 400 ಮೀ. ಓಟ ಫೈನಲ್
ಸಂಜೆ 6.20	ಮಹಿಳೆಯರ 1500 ಮೀ. ಓಟ ಫೈನಲ್
ಸಂಜೆ 7 ಗಂಟೆ	ಮಹಿಳೆಯರ 4X100 ಮೀ. ರಿಲೇ ಫೈನಲ್
ಸಂಜೆ 7.20	ಪುರುಷರ 4X100 ಮೀ. ರಿಲೇ ಫೈನಲ್

ಬೀಚ್ ವಾಲಿಬಾಲ್

ಬೆಳಿಗ್ಗೆ 8 ಗಂಟೆ	ಮಹಿಳೆಯರ ಫೈನಲ್ ಪಂದ್ಯ

ಬಾಕ್ಸಿಂಗ್

ಬೆಳಿಗ್ಗೆ 11.35	ಪುರುಷರ ಹೆವಿವೇಟ್ (81–91ಕೆಜಿ) ಫೈನಲ್

ಫುಟ್‌ಬಾಲ್

ಬೆಳಿಗ್ಗೆ 7.30	ಮಹಿಳೆಯರ ಫೈನಲ್ ಪಂದ್ಯ

ಗಾಲ್ಫ್

ಸಂಜೆ 4 ಗಂಟೆ	ಮಹಿಳೆಯರ ವೈಯಕ್ತಿಕ ವಿಭಾಗದ ಸ್ಟ್ರೋಕ್ ಪ್ಲೇ ಮೂರನೇ ಸುತ್ತು (ಅದಿತಿ ಅಶೋಕ್, ದೀಕ್ಷಾ ಡಾಗರ್)

ಕರಾಟೆ

ಸಂಜೆ 4.20	ಪುರುಷರ ಕಟಾ ವಿಭಾಗದ ಫೈನಲ್
ಸಂಜೆ 5.10	ಮಹಿಳೆಯರ ಕುಮಿಟೆ (61 ಕೆಜಿ ವಿಭಾಗ) ಫೈನಲ್
ಸಂಜೆ 5.20	ಪುರುಷರ ಕುಮಿಟೆ (75 ಕೆಜಿ) ಫೈನಲ್

ಟೇಬಲ್ ಟೆನಿಸ್

ಸಂಜೆ 4 ಗಂಟೆ	ಪುರುಷರ ತಂಡ ವಿಭಾಗದ ಫೈನಲ್

ಕುಸ್ತಿ

ಬೆಳಿಗ್ಗೆ 8 ಗಂಟೆ	ಪುರುಷರ 65 ಕೆಜಿ ವಿಭಾಗದ ಪ್ರೀಕ್ವಾರ್ಟರ್ ಮತ್ತು ಕ್ವಾರ್ಟರ್‌ಫೈನಲ್ (ಬಜರಂಗ್ ಪುನಿಯಾ)
ಬೆಳಿಗ್ಗೆ 8 ಗಂಟೆ	ಮಹಿಳೆಯರ 50 ಕೆಜಿ ವಿಭಾಗದ ಪ್ರೀಕ್ವಾರ್ಟರ್ ಮತ್ತು ಕ್ವಾರ್ಟರ್‌ಫೈನಲ್ (ಸೀಮಾ ಬಿಸ್ಲಾ)
ಮಧ್ಯಾಹ್ನ 2.45 ರಿಂದ	ಪುರುಷರ 65 ಕೆಜಿ ವಿಭಾಗದ ಸೆಮಿಫೈನಲ್ಸ್, ಮಹಿಳೆಯರ 50 ಕೆಜಿ ವಿಭಾಗದ ಸೆಮಿಫೈನಲ್ಸ್, ಪುರುಷರ 74 ಕೆಜಿ, 125 ಕೆಜಿ ವಿಭಾಗದ ಫೈನಲ್, ಮಹಿಳೆಯರ 53 ಕೆಜಿ ವಿಭಾಗದ ಫೈನಲ್ಸ್

ಹಾಕಿ (ಮಹಿಳಾ ತಂಡ)

ಬೆಳಿಗ್ಗೆ 7 ಗಂಟೆ	ಕಂಚಿನ ಪದಕದ ಪಂದ್ಯ (ಭಾರತ–ಗ್ರೇಟ್ ಬ್ರಿಟನ್)
ಮಧ್ಯಾಹ್ನ 3.30	ಫೈನಲ್ ಪಂದ್ಯ (ನೆದರ್ಲೆಂಡ್ಸ್–ಅರ್ಜೆಂಟೀನಾ)

(ಆವರಣದಲ್ಲಿ ಭಾರತದ ಸ್ಪರ್ಧಿಗಳು)
ಭಾರತೀಯ ಕಾಲಮಾನ
ಲೈವ್: ಸೋನಿ ನೆಟ್‌ವರ್ಕ್

ಹರ್ಡಲ್ಸ್‌ನಲ್ಲಿ ಜಮೈಕಾ ಪಾರುಪತ್ಯ

ಟೋಕಿಯೊ (ರಾಯಿಟರ್ಸ್): ಬಹಾಮದ ಸ್ಟೀವನ್ ಗಾರ್ಡಿನರ್ ಅವರು ಒಲಿಂಪಿಕ್ಸ್‌ನ 400 ಮೀಟರ್ಸ್ ಓಟದ ಚಿನ್ನದ ಪದಕ ಗೆದ್ದುಕೊಂಡರು. ಪುರುಷರ 110 ಮೀಟರ್ಸ್ ಹರ್ಡಲ್ಸ್‌ನಲ್ಲಿ ಜಮೈಕಾ ಪಾರಮ್ಯ ಮೆರೆದರೆ ಶಾಟ್‌ಪಟ್‌ನಲ್ಲಿ ಅಮೆರಿಕ ಆಧಿಪತ್ಯ ಸ್ಥಾಪಿಸಿತು.

ಸ್ಟೀವನ್ 43.85 ಸೆಕೆಂಡುಗಳೊಂದಿಗೆ ರಾಷ್ಟ್ರೀಯ ದಾಖಲೆ ಮುರಿದರೆ ಕೊಲಂಬಿಯಾದ ಜೋಸ್ ಆ್ಯಂಟನಿ (44.08) ಮತ್ತು ಗ್ರೆನಾಡದ ಕಿರಾನಿ ಜೇಮ್ಸ್ (44.19) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿದರು.

110 ಮೀಟರ್ಸ್ ಹರ್ಡಲ್ಸ್‌ನ ಚಿನ್ನ ಮತ್ತು ಕಂಚಿನ ಪದಕ ಜಮೈಕಾ ಪಾಲಾಯಿತು. ಹನ್ಸ್‌ಲೆ ಪಾರ್ಚ್‌ಮೆಂಟ್ (13.04 ಸೆ) ಚಿನ್ನ ಗಳಿಸಿದರೆ ಅಮೆರಿಕದ ಗ್ರ್ಯಾಂಟ್ ಹೊಲೊವೆ (13.09) ಬೆಳ್ಳಿ ಮತ್ತು ಜಮೈಕಾದ ರೊನಾಲ್ಡ್ ಲೆವಿ (13.10) ಕಂಚು ಗಳಿಸಿದರು.

ಪುರುಷರ ಟ್ರಿಪಲ್ ಜಂಪ್‌ನಲ್ಲಿ ಪೋರ್ಚುಗಲ್‌ನ ಪೆಡ್ರೊ ಪಿಚಾರ್ಡೊ (17.98ಮೀ), ಚೀನಾದ ಯಮಿಂಗ್ ಜೂ (17.57) ಮತ್ತು ಬುರ್ಕಿನಾ ಫಾಸೊದ ಫ್ಯಾಬ್ರಿಸ್ (17.47) ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚು ಗಳಿಸಿದರು. ಅಮೆರಿಕದ ರಯನ್ ಕ್ರೌಸರ್ (23.30 ಮೀ) ಮತ್ತು ಜೋ ಕೊವಾಕ್ಸ್ (22.65) ಶಾಟ್‌ಪಟ್‌ನಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರೆ ನ್ಯೂಜಿಲೆಂಡ್‌ನ ಥಾಮಸ್ ವಾಲ್ಶ್ (22.47) ಕಂಚು ಗೆದ್ದರು.

ಮಹಿಳೆಯರ ಪೋಲ್ ವಾಲ್ಟ್‌ನಲ್ಲಿ ಅಮೆರಿಕದ ಕ್ಯಾತಿ ನಜಿಯೊಟಿ 4.90 ಮೀಟರ್ ಸಾಧನೆಯೊಂದಿಗೆ ಚಿನ್ನ ಗಳಿಸಿದರು. ರಷ್ಯಾದ ಆ್ಯಂಜೆಲಿಕಾ (4.85) ಮತ್ತು ಬ್ರಿಟನ್‌ನ ಹೋಲಿ ಬ್ರಾಡ್‌ಶಾ (4.85) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗಳಿಸಿದರು.

ಪುರುಷರ 110 ಮೀಟರ್ಸ್ ಹರ್ಡಲ್ಸ್‌ನಲ್ಲಿ ಭಾಗವಹಿಸಿದ್ದ (ಎಡದಿಂದ) ಹನ್ಸ್‌ಲೆ ಪಾರ್ಚ್‌ಮೆಂಟ್, ರೊನಾಲ್ಡ್ ಲೆವಿ ಮತ್ತು ಗ್ರ್ಯಾಂಟ್ ಹೊಲೊವೆ ಗುರಿ ಮುಟ್ಟಿದ ಕ್ಷಣ

ಕೆನ್ಯಾದ ಅಬೆಲ್ ಕಿಪ್ಸಾಂಗ್

ಕಿಪ್ಸಾಂಗ್ ಒಲಿಂಪಿಕ್ ದಾಖಲೆ

ಕೆನ್ಯಾದ ಅಬೆಲ್ ಕಿಪ್ಸಾಂಗ್ ಪುರುಷರ 1500 ಮೀಟರ್ಸ್ ಓಟದ ಸೆಮಿಫೈನಲ್‌ನಲ್ಲಿ ಒಲಿಂಪಿಕ್ ದಾಖಲೆ ಮುರಿದು ಫೈನಲ್ ಪ್ರವೇಶಿಸಿದರು. 3 ನಿಮಿಷ 31.65 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ತಮ್ಮದೇ ದೇಶದ ನೊಹ್ ಗೆನಿ ಅವರ ದಾಖಲೆಯನ್ನು ಮುರಿದರು. ನೊಹ್ 3 ನಿಮಿಷ 32.07 ಸೆಕೆಂಡುಗಳಲ್ಲಿ ದಾಖಲೆ ಗುರಿ ತಲುಪಿದ್ದರು.

ನಾರ್ವೆಯ ಇಂಗ್‌ಬ್ರಿಂಗ್‌ಸ್ಟೆನ್ ಅವರನ್ನು ಹಿಂದಿಕ್ಕಿ ಕಿಪ್ಸಾಂಗ್ ಮೊದಲಿಗರಾದರು. ಬ್ರಿಟನ್‌ನ ಜೇಕ್ ವಿಂಗ್ಟ್‌ಮ್ಯಾನ್ ಈ ವರ್ಷದ ಗರಿಷ್ಠ ಸಾಧನೆಯೊಂದಿಗೆ (3:33.48) ಫೈನಲ್ ಪ್ರವೇಶಿಸಿದರು. ಪದಕದ ಸುತ್ತಿನ ಸ್ಪರ್ಧೆ ಶನಿವಾರ ನಡೆಯಲಿದೆ.

ಭಾರತದ ಅಥ್ಲೀಟ್‌ಗಳಿಗೆ ನಿರಾಸೆ

ಇಟಲಿಯ ಮಸಿಮೊ ಸ್ಟ್ಯಾನೊ ಅವರು 20 ಮೀಟರ್ಸ್ ವೇಗನಡಿಗೆಯ ಚಿನ್ನ ಗೆದ್ದರು. 1 ತಾಸು 21 ನಿಮಿಷ 5 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ಜಪಾನ್‌ನ ಇಡೆಕಿ ಕೋಕಿ (1:21:28) ಮತ್ತು ಯಾಮನಿಶಿ ತೊಶಿಕಜು (1:21:46) ಅವರನ್ನು ಹಿಂದಿಕ್ಕಿದರು.

ಭಾರತದ ಸಂದೀಪ್ ಕುಮಾರ್ 20 ಮೀಟರ್ಸ್ ವೇಗನಡಿಗೆಯಲ್ಲಿ ಉತ್ತಮ ಆರಂಭ ಕಂಡರೂ ಕೊನೆಯಲ್ಲಿ ನಿರಾಸೆ ಅನುಭವಿಸಿದರು. ಅರ್ಧ ಹಾದಿಯ ವರೆಗೆ ಎರಡನೇ ಸ್ಥಾನದಲ್ಲಿ ಮುನ್ನಡೆದ ಅವರು 23ನೇ ಸ್ಥಾನಕ್ಕೆ ಕುಸಿದರು. 1 ತಾಸು 20 ನಿಮಿಷ 16 ಸೆಕೆಂಡುಗಳಲ್ಲಿ ರಾಷ್ಟ್ರೀಯ ದಾಖಲೆ ಮಾಡಿದ್ದ ಅವರು ಇಲ್ಲಿ ಒಂದು ತಾಸು 25 ನಿಮಿಷ ಏಳು ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ರಾಹುಲ್ ರೊಹಿಲ್ಲಾ (1:32:06) ಮತ್ತು ಕೆ.ಟಿ.ಇರ್ಫಾನ್ (1:34:41) ಕ್ರಮವಾಗಿ 47 ಮತ್ತು 51ನೇ ಸ್ಥಾನಕ್ಕೆ ಕುಸಿದರು.

ಫುಟ್‌ಬಾಲ್: ಅಮೆರಿಕಕ್ಕೆ ಕಂಚು

ಕಾಶಿಮಾ, ಜಪಾನ್ (ಪಿಟಿಐ): ಮಹಿಳೆಯರ ಫುಟ್‌ಬಾಲ್ ಸ್ಪರ್ಧೆಯಲ್ಲಿ ಅಮೆರಿಕ ತಂಡ ಕಂಚಿನ ಪದಕ ಜಯಿಸಿದೆ.

ಇಬಾರಕಿ ಕಾಶಿಮಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಹಣಾಹಣಿಯಲ್ಲಿ ಅಮೆರಿಕ 4–3 ಗೋಲುಗಳಿಂದ ಆಸ್ಟ್ರೇಲಿಯಾವನ್ನು ಸೋಲಿಸಿತು.

ಅಮೆರಿಕ ತಂಡದ ಪರ ಅನುಭವಿ ಆಟಗಾರ್ತಿ ಮೇಗನ್ ರಾಪಿನೊ 8 ಮತ್ತು 21ನೇ ನಿಮಿಷ ಹಾಗೂ ಕಾರ್ಲಿ ಲಾಯ್ಡ್ 45+1 ಮತ್ತು 51ನೇ ನಿಮಿಷಗಳಲ್ಲಿ ಗೋಲು ಬಾರಿಸಿ ತಂಡದ ಸಂಭ್ರಮಕ್ಕೆ ಕಾರಣರಾದರು.

ಮ್ಯಾರಥಾನ್ ಈಜು: ವೆಲ್‌ಬ್ರಾಕ್‌ಗೆ ಚಿನ್ನ

ಟೋಕಿಯೊ (ರಾಯಿಟರ್ಸ್): ಎದುರಾಳಿಗಳ ಜೊತೆಗೆ ಸುಡುಬಿಸಿಲಿನ ಸವಾಲನ್ನೂ ಹಿಮ್ಮೆಟ್ಟಿಸಿದ ಫ್ಲೋರಿಯನ್ ವೆಲ್‌ಬ್ರಾಕ್ ಒಲಿಂಪಿಕ್ಸ್ ಮ್ಯಾರಥಾನ್ ಈಜು ಸ್ಪರ್ಧೆಯ 10 ಕಿ.ಮೀ. ವಿಭಾಗದಲ್ಲಿ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡರು.

ಒಡೈಬಾ ಮರೀನ್ ಪಾರ್ಕ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಜರ್ಮನಿಯ ಈಜುಪಟು ಒಂದು ತಾಸು 48 ನಿಮಿಷ, 33.7 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಅವರಿಗಿಂತ 25 ಸೆಕೆಂಡು ಹೆಚ್ಚಿಗೆ ಸಮಯ ತೆಗೆದುಕೊಂಡ ಹಂಗರಿಯ ಕ್ರಿಸ್ಟೊಫ್ ರಾಸೊವಸ್ಕಿ ಬೆಳ್ಳಿ ಪದಕ ಗೆದ್ದುಕೊಂಡರೆ, ಇಟಲಿಯ ಗ್ರೆಗೊರಿಯೊ ಪಾಲ್ಟ್ರಿನೆರಿ ಕಂಚಿನ ಪದಕಕ್ಕೆ ಮುತ್ತಿಟ್ಟರು.

ಚಿನ್ನದ ಪದಕದೊಂದಿಗೆ ಫ್ಲೊರಿಯನ್ ವೆಲ್‌ಬ್ರಾಕ್– ಎಎಫ್‌ಪಿ ಚಿತ್ರ

ಇದೇ ಕೂಟದಲ್ಲಿ ವೆಲ್‌ಬ್ರಾಕ್ 1500 ಮೀ. ಫ್ರೀಸ್ಟೈಲ್‌ನಲ್ಲಿ ಕಂಚು ಗೆದ್ದುಕೊಂಡಿದ್ದರೆ, ಪಾಲ್ಟ್ರಿನೆರಿ 800 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದರು.

ಡೈವಿಂಗ್ ಚಿನ್ನ ಹೊಂಗ್‌ಚಾನ್

ಮಹಿಳೆಯರ ಡೈವಿಂಗ್ ಸ್ಪರ್ಧೆಯ 10 ಮೀ. ಪ್ಲಾಟ್‌ಫಾರ್ಮ್ ವಿಭಾಗದ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಚೀನಾ ತನ್ನದಾಗಿಸಿಕೊಂಡಿತು. ಈ ವಿಭಾಗದಲ್ಲಿ 14ರ ಬಾಲೆ ಕ್ವಾನ್ ಹೊಂಗ್‌ಚಾನ್ (466.20 ಪಾಯಿಂಟ್ಸ್) ಅಗ್ರಸ್ಥಾನ ಗಳಿಸಿದರೆ, ಯೂಕ್ಸಿ ಚೆನ್ (425.40) ಬೆಳ್ಳಿ ಪದಕ ಗೆದ್ದುಕೊಂಡರು. ಕಂಚಿನ ಪದಕವು ಆಸ್ಟ್ರೇಲಿಯಾದ ಮೆಲಿಸ್ಸಾ ವು (371.40) ಅವರ ಪಾಲಾಯಿತು.

ಚೀನಾದ ಕ್ವಾನ್ ಹೊಂಗ್‌ಚಾನ್ – ರಾಯಿಟರ್ಸ್ ಚಿತ್ರ

ಪದಕದ ಭರವಸೆ ಮೂಡಿಸಿದ ಅದಿತಿ

ಟೋಕಿಯೊ (ಪಿಟಿಐ): ಎರಡನೇ ದಿನವೂ ಅಮೋಘ ಸಾಮರ್ಥ್ಯ ಪ್ರದರ್ಶಿಸಿದ ಭಾರತದ ಅದಿತಿ ಅಶೋಕ್ ಅವರು ಒಲಿಂಪಿಕ್ಸ್ ಗಾಲ್ಫ್‌ನಲ್ಲಿ ದೇಶಕ್ಕೆ ಮೊದಲ ಪದಕ ಗೆದ್ದುಕೊಡುವತ್ತ ಹೆಜ್ಜೆ ಇರಿಸಿದ್ದಾರೆ.

ಕಸುಮಿಗಸೆಕಿ ಕಂಟ್ರಿ ಕ್ಲಬ್‌ನಲ್ಲಿ ಗುರುವಾರ ನಡೆದ ಮಹಿಳೆಯರ ವಿಭಾಗದ ಎರಡನೇ ಸುತ್ತಿನ ಕೊನೆಯಲ್ಲಿ ಎರಡನೇ ಸ್ಥಾನ ಉಳಿಸಿಕೊಂಡಿದ್ದಾರೆ. ಅವರೊಂದಿಗೆ ಡೆನ್ಮಾರ್ಕ್ ಆಟಗಾರ್ತಿಯರಾದ ನಾನಾ ಮೆಡ್ಸನ್ ಮತ್ತು ಕ್ರಿಸ್ಟಿನ್ ಎಮಿಲಿ ಸ್ಥಾನ ಹಂಚಿಕೊಂಡಿದ್ದಾರೆ. ಅಮೆರಿಕದ ನೆಲಿ ಕೊರ್ಡಾ ಮೊದಲ ಸ್ಥಾನದಲ್ಲೇ ಮುಂದುವರಿದಿದ್ದಾರೆ.

ಎರಡನೇ ಒಲಿಂಪಿಕ್ಸ್‌ನಲ್ಲಿ ಆಡುತ್ತಿರುವ 23 ವರ್ಷದ ಅದಿತಿ ಕೊನೆಯ ನಾಲ್ಕು ಹೋಲ್‌ಗಳಲ್ಲಿ ಗಳಿಸಿದ ಮೂರು ಬಿರ್ಡಿಗಳೊಂದಿಗೆ ಐದು ಬಿರ್ಡಿ ಸಾಧನೆ ಮಾಡಿದರು. ನೆಲ್ಲಿ ಕೊರ್ಡಾ ಅವರಿಗಿಂತ ನಾಲ್ಕು ಶಾಟ್‌ಗಳಿಂದ ಹಿಂದೆ ಉಳಿದಿದ್ದಾರೆ.

ಭಾರತದ ಮತ್ತೊಬ್ಬರು ಗಾಲ್ಫರ್ ದೀಕ್ಷಾ ಡಾಗರ್ 53ನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಶನಿವಾರದ ವರೆಗೆ ಸ್ಪರ್ಧೆ ನಡೆಯಲಿದೆ. ಆದರೆ ವಾರಾಂತ್ಯದಲ್ಲಿ ಭಾರಿ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ 54 ಹೋಲ್‌ಗಳಿಗೆ ಸ್ಪರ್ಧೆಯನ್ನು ಮರುನಿಗದಿ ಮಾಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಫ್ಲ್ಯಾಗ್‌ನತ್ತ ಭರ್ಜರಿ ಹೊಡೆತಗಳೊಂದಿಗೆ ಪಾಯಿಂಟ್‌ಗಳನ್ನು ಕಲೆಹಾಕಲು ಅದಿತಿ ಮುಂದಾಗಿದ್ದಾರೆ.

ಭಾರತದ ಅದಿತಿ ಅಶೋಕ್ –ಎಪಿ / ಪಿಟಿಐ ಚಿತ್ರ

ವಾಟರ್‌ಪೋಲೊ: ಹ್ಯಾಟ್ರಿಕ್ ಚಿನ್ನದ ಮೇಲೆ ಅಮೆರಿಕ ಕಣ್ಣು

ಟೋಕಿಯೊ (ರಾಯಿಟರ್ಸ್): ಸತತ ಮೂರನೇ ಒಲಿಂಪಿಕ್ಸ್ ಚಿನ್ನದ ಮೇಲೆ ಕಣ್ಣಿಟ್ಟಿರುವ ಅಮೆರಿಕದ ಮಹಿಳಾ ವಾಟರ್‌ಪೋಲೊ ತಂಡವು ಟೋಕಿಯೊ ಕೂಟದಲ್ಲಿ ಫೈನಲ್‌ಗೆ ಕಾಲಿಟ್ಟಿದೆ. ಗುರುವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಆ ತಂಡವು 15–11ರಿಂದ ರಷ್ಯಾ ತಂಡವನ್ನು ಪರಾಭವಗೊಳಿಸಿತು. ಗುಂಪು ಹಂತದಲ್ಲಿ ರಷ್ಯಾ ಪಡೆಯನ್ನು 18–5ರಿಂದ ಮಣಿಸಿದ ಅಮೆರಿಕ ತಂಡವು, ಶನಿವಾರ ನಡೆಯುವ ಪ್ರಶಸ್ತಿ ಸುತ್ತಿಗೆ ಸುಲಭವಾಗಿ ತಲುಪುವ ನಿರೀಕ್ಷೆಯಿಟ್ಟುಕೊಂಡಿತ್ತು. ಆದರೆ ರಷ್ಯಾ ಈ ಬಾರಿ ಪ್ರಬಲ ಪೈಪೋಟಿಯೊಡ್ಡಿತು.

ನಾಲ್ಕನೇ ಕ್ವಾರ್ಟರ್‌ನ ಕೊನೆಯಲ್ಲಿ 11–11ರಲ್ಲಿ ಸಮಬಲವಾಗಿದ್ದ ಹಣಾಹಣಿಯಲ್ಲಿ ಅಮೆರಿಕ ತಂಡದವರು ಅನುಭವವನ್ನು ಒರೆಗೆ ಹಚ್ಚಿದರು. ಈ ಹಂತದಲ್ಲಿ ಎರಡು ಗೋಲು ದಾಖಲಿಸಿದ ಮ್ಯಾಡಲೀನ್ ಮುಸ್ಸೆಲ್‌ಮನ್ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು. ಫೈನಲ್ ಪಂದ್ಯದಲ್ಲಿ ಅಮೆರಿಕ ಸ್ಪೇನ್‌ಗೆ ಮುಖಾಮುಖಿಯಾಗಲಿದೆ. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಸ್ಪೇನ್ 8–6ರಿಂದ ಹಂಗರಿ ತಂಡವನ್ನು ಮಣಿಸಿತು.

ಎರಡು ಗೋಲು ಗಳಿಸಿದ ಸಿಮ್ರನ್‌ಜೀತ್ ಸಿಂಗ್; ಜರ್ಮನಿ ವಿರುದ್ಧ ಅಮೋಘ ಗೆಲುವು; ಗೋಡೆಯಾದ ಗೋಲ್‌ಕೀಪರ್ ಶ್ರೀಜೇಶ್

ನಾಲ್ಕು ದಶಕದ ಬಳಿಕ ಸಿಹಿ ತಂದ ಪದಕ

ಟೋಕಿಯೊ (ಎಎಫ್‌ಪಿ/ಪಿಟಿಐ/ರಾಯಿಟರ್ಸ್): ಮೊದಲ ಕ್ವಾರ್ಟರ್‌ನಲ್ಲಿ ಗೋಲು ಬಿಟ್ಟುಕೊಟ್ಟು ಹಿನ್ನಡೆ, ಕೊನೆಯ ಕ್ವಾರ್ಟರ್‌ನಲ್ಲಿ ಒತ್ತಡ; ಅಂತಿಮ ನಿಮಿಷಗಳಲ್ಲಿ ಎದುರಾಳಿಗಳ ಪ್ರಬಲ ಆಕ್ರಮಣ...

ಇದೆಲ್ಲವನ್ನೂ ಮೀರಿ ನಿಂತ ಭಾರತ ತಂಡ ಒಲಿಂಪಿಕ್ಸ್ ಹಾಕಿಯ ಕಂಚಿನ ಪದಕದ ಪಂದ್ಯದಲ್ಲಿ ಜರ್ಮನಿಯನ್ನು 5-4ರಲ್ಲಿ ಮಣಿಸಿತು. ಈ ಮೂಲಕ 41 ವರ್ಷಗಳ ಬಳಿಕ ಪದಕ ಗೆದ್ದು ದೇಶಕ್ಕೆ ಸಿಹಿಯುಣಿಸಿತು.

ಗುರುವಾರದ ಪಂದ್ಯದ ಮೊದಲ ಕ್ವಾರ್ಟರ್‌ನ ಎರಡನೇ ನಿಮಿಷದಲ್ಲಿ ಭಾರತ ಗೋಲು ಬಿಟ್ಟುಕೊಟ್ಟಿತು. ಆದರೆ ಎರಡು ಮತ್ತು ಮೂರನೇ ಕ್ವಾರ್ಟರ್‌ಗಳಲ್ಲಿ ಒಟ್ಟು ಐದು ಗೋಲು ಗಳಿಸಿ ಮುನ್ನಡೆ ಸಾಧಿಸಿತು. 5-3ರ ಮುನ್ನಡೆಯಲ್ಲಿದ್ದ ಭಾರತಕ್ಕೆ ಕೊನೆಯ ಕ್ವಾರ್ಟರ್‌ನಲ್ಲಿ ಗೋಲು ಗಳಿಸಿ ಜರ್ಮನಿ ಆತಂಕ ಒಡ್ಡಿತು. ಕೊನೆಯ ಕ್ಷಣಗಳಲ್ಲಿ ಸತತವಾಗಿ ಭಾರತದ ಆವರಣಕ್ಕೆ ನುಗ್ಗಿದ ಜರ್ಮನಿ ನಿರಂತರ ಆಕ್ರಮಣ ನಡೆಸಿತು. ಪದೇ ಪದೇ ಪೆನಾಲ್ಟಿ ಕಾರ್ನರ್‌ಗಳು ಆ ತಂಡಕ್ಕೆ ಲಭಿಸಿದವು. ಆದರೆ ಮನ್‌ಪ್ರೀತ್ ಬಳಗದ ಡಿಫೆಂಡರ್‌ಗಳು ಭದ್ರ ಕೋಟೆ ನಿರ್ಮಿಸಿದರು. ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಗೋಡೆ ಯಾದರು. ಒಂಬತ್ತು ಗೋಲುಗಳು ದಾಖಲಾದ ಪಂದ್ಯದಲ್ಲಿ ತಿಮುರ್ ಒರುಜ್ ಮೊದಲ ಗೋಲಿನೊಂದಿಗೆ ಜರ್ಮನಿ ಪಾಳಯಕ್ಕೆ ಸಂತಸ ತಂದರು. 17ನೇ ನಿಮಿಷದಲ್ಲಿ ಸಿಮ್ರನ್‌ಜೀತ್ ಸಿಂಗ್ ಬ್ಯಾಕ್‌ಹ್ಯಾಂಡ್ ಮೂಲಕ ಹೊಡೆದ ಗೋಲು ಭಾರತಕ್ಕೆ ಸಮಬಲ ತಂದುಕೊಟ್ಟಿತು. ಆದರೆ 24 ಮತ್ತು 25ನೇ ನಿಮಿಷಗಳಲ್ಲಿ ಕ್ರಮವಾಗಿ ವೆಲೆನ್ ಹಾಗೂ ಫರ್ಕ್ ಜರ್ಮನಿಯ ಮುನ್ನಡೆಗೆ ಕಾರಣರಾದರು.

ಭಾರತ ಛಲ ಬಿಡಲಿಲ್ಲ. 27 ಮತ್ತು 29ನೇ ನಿಮಿಷಗಳಲ್ಲಿ ಹಾರ್ದಿಕ್ ಸಿಂಗ್ ಮತ್ತು ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಗೋಲುಗಳೊಂದಿಗೆ ಮೊದಲಾರ್ಧದ ಮುಕ್ತಾಯಕ್ಕೆ ಪಂದ್ಯ 3-3ರಲ್ಲಿ ಸಮ ಆಯಿತು. ರೂಪಿಂದರ್ ಪಾಲ್ ಸಿಂಗ್ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರೆ ಸಿಮ್ರನ್‌ಜೀತ್ ಮುನ್ನಡೆ ಹೆಚ್ಚಿಸಿದರು. ಆದರೆ 48ನೇ ನಿಮಿಷದಲ್ಲಿ ವಿಂಡ್‌ಫೆಡರ್ ಗಳಿಸಿದ ಗೋಲು ಭಾರತ ತಂಡದಲ್ಲಿ ಆತಂಕ ಸೃಷ್ಟಿಸಿತು. ನಂತರ ಶ್ರೀಜೇಶ್ ಮಿಂಚಿದರು.

ಪದಕ ಗೆದ್ದ ತಂಡ ಮುನ್ನಡೆಸಿದವರು

ವರ್ಷ	ನಾಯಕನ ಹೆಸರು
1928	ಜೈಪಾಲ್ ಮುಂಡಾ
1932	ಲಾಲ್ ಶಾ ಬುಖಾರಿ
1936	ಧ್ಯಾನ್ ಚಂದ್
1948	ಕಿಶನ್‌ಲಾಲ್
1952	ಕೆ.ಡಿ.ಸಿಂಗ್
1956	ಬಲ್ಬೀರ್ ಸಿಂಗ್ ಸೀನಿಯರ್
1960	ಲೆಸ್ಲಿ ಕ್ಲಾಡಿಯಸ್
1964	ಚರಣ್‌ಜೀತ್ ಸಿಂಗ್
1968	ಗುರುಭಕ್ಷ್ ಸಿಂಗ್
1972	ಹರ್ಮಿಕ್ ಸಿಂಗ್
1980	ವಿ.ಭಾಸ್ಕರನ್
2020	ಮನ್‌ಪ್ರೀತ್ ಸಿಂಗ್

ಒಲಿಂಪಿಕ್ಸ್ ಹಾಕಿಯಲ್ಲಿ ಪದಕದ ಸಾಧನೆ

ವರ್ಷ	ಸ್ಥಳ	ಪದಕ
1928	ಆಮ್‌ಸ್ಟರ್‌ಡ್ಯಾಂ	ಚಿನ್ನ
1932	ಲಾಸ್ ಏಂಜಲೀಸ್	ಚಿನ್ನ
1936	ಬರ್ಲಿನ್	ಚಿನ್ನ
1948	ಲಂಡನ್	ಚಿನ್ನ
1952	ಹೆಲ್ಸಿಂಕಿ	ಚಿನ್ನ
1956	ಮೆಲ್ಬರ್ನ್	ಚಿನ್ನ
1960	ರೋಮ್	ಬೆಳ್ಳಿ
1964	ಟೋಕಿಯೊ	ಚಿನ್ನ
1968	ಮೆಕ್ಸಿಕೊ	ಕಂಚು
1972	ಮ್ಯೂನಿಕ್	ಕಂಚು
1980	ಮಾಸ್ಕೊ	ಚಿನ್ನ
2020	ಟೋಕಿಯೊ	ಕಂಚು

ಪಿ.ಆರ್.ಶ್ರೀಜೇಶ್ –ಪಿಟಿಐ ಚಿತ್ರ

21 ಭಾರತ ಹಾಕಿ ತಂಡ ಪಾಲ್ಗೊಂಡ ಒಟ್ಟು ಒಲಿಂಪಿಕ್ಸ್

1 ಬಾರಿ ಭಾರತ ತಂಡ 5, 6, 12ನೇ ಸ್ಥಾನ ಗಳಿಸಿದೆ

4 ಬಾರಿ ಭಾರತ ತಂಡ 7ನೇ ಸ್ಥಾನ ಗಳಿಸಿದೆ

2 ಬಾರಿ ಭಾರತ ತಂಡ 8ನೇ ಸ್ಥಾನ ಗಳಿಸಿದೆ

ಗೋಲು ಗಳಿಸಿದವರು

ಭಾರತ: ಸಿಮ್ರನ್‌ಜೀತ್ ಸಿಂಗ್ (17 ಮತ್ತು 34ನೇ ನಿಮಿಷ) ಹಾರ್ದಿಕ್ ಸಿಂಗ್ (27ನೇ ನಿ) ಹರ್ಮನ್‌ಪ್ರೀತ್ ಸಿಂಗ್ (29ನೇ ನಿ) ರೂಪಿಂದರ್ ಪಾಲ್ ಸಿಂಗ್ (31ನೇ ನಿ)

ಜರ್ಮನಿ: ತಿಮುರ್ ಒರುಜ್ (2ನೇ ನಿ) ನಿಕ್ಲಾಸ್ ವೆಲೆನ್ (24ನೇ ನಿ) ಬೆನೆಡಿಕ್ಟ್ ಫರ್ಕ್ (25ನೇ ನಿ) ಲೂಕಾಸ್ ವಿಂಡ್‌ಫೀಡರ್ (48ನೇ ನಿ)

ಸ್ಕೋರು: 5 ಭಾರತ – 4 ಜರ್ಮನಿ

ಪ್ರತಿ ಕ್ವಾರ್ಟರ್‌ನಲ್ಲಿ ಗೋಲು

ಕ್ವಾರ್ಟರ್	ಭಾರತ	ಜರ್ಮನಿ
ಒಂದು	0	1
ಎರಡು	3	2
ಮೂರು	2	0
ನಾಲ್ಕು	0	1

ಒಟ್ಟು ಸ್ಟ್ರೋಕ್: 11 ಭಾರತ – 24 ಜರ್ಮನಿ

ಫೀಲ್ಡ್ ಗೋಲು ಯಶಸ್ಸು

ಭಾರತ 4ರಲ್ಲಿ 2

ಜರ್ಮನಿ 11ರಲ್ಲಿ 3

ಪೆನಾಲ್ಟಿ ಕಾರ್ನರ್ ಯಶಸ್ಸು

ಭಾರತ 6ರಲ್ಲಿ 2

ಜರ್ಮನಿ 13ರಲ್ಲಿ 1

ಪೆನಾಲ್ಟಿ ಸ್ಟ್ರೋಕ್

ಭಾರತ 1ರಲ್ಲಿ 1

ಜರ್ಮನಿ

ಅವಕಾಶ ಸಿಗಲಿಲ್ಲ

ಗೋಲ್‌ಕೀಪಿಂಗ್ ಯಶಸ್ಸು

ಪಿ.ಆರ್.ಶ್ರೀಜೇಶ್ (ಭಾರತ)

13ರಲ್ಲಿ 9

ಅಲೆಕ್ಸಾಂಡರ್ ಸ್ಟಾಡ್ಲರ್ (ಜರ್ಮನಿ)

7ರಲ್ಲಿ 2

ರಾಣಿ ರಾಂಪಾಲ್ –ಪಿಟಿಐ ಚಿತ್ರ

ರಾಣಿ ಬಳಗಕ್ಕೂ ಪದಕ ನಿರೀಕ್ಷೆ

ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿರುವ ಭಾರತ ಮಹಿಳಾ ತಂಡದವರು ಕಂಚಿನ ಪದಕದ ಮೇಲೆ ಕಣ್ಣಿಟ್ಟು ಶುಕ್ರವಾರ ಕಣಕ್ಕೆ ಇಳಿಯಲಿದ್ದಾರೆ. ಮೂರು ಮತ್ತು ನಾಲ್ಕನೇ ಸ್ಥಾನಗಳನ್ನು ನಿರ್ಧರಿಸುವ ಪಂದ್ಯದಲ್ಲಿ ರಾಣಿ ರಾಂಪಾಲ್ ಬಳಗಕ್ಕೆ ಹಾಲಿಚಾಂಪಿಯನ್ ಬ್ರಿಟನ್ ಎದುರಾಳಿ.

ಆರಂಭದಲ್ಲಿ ನೀರಸ ಪ್ರದರ್ಶನ ನೀಡಿರುವ ಭಾರತ ಮಹಿಳಾ ತಂಡ ನಂತರ ಪುಟಿದೆದ್ದು ಗೆಲುವಿನ ತೋರಣ ಕಟ್ಟಿದೆ. ಬಲಿಷ್ಠ ಆಸ್ಟ್ರೇಲಿಯಾವನ್ನು ಮಣಿಸಿ ಹೆಜ್ಜೆ ಗುರುತು ಮೂಡಿಸಿದೆ. ಆದರೆ ಗುಂಪು ಹಂತದಲ್ಲಿ ಬ್ರಿಟನ್ ವಿರುದ್ಧ 1-4ರಲ್ಲಿ ಸೋತಿತ್ತು.

ಚಿನ್ನದ ಪದಕದ ಸುತ್ತು ಪ್ರವೇಶಿಸಲು ವಿಫಲವಾಗಿರುವ ಬ್ರಿಟನ್ ಕನಿಷ್ಠ ಕಂಚಿನ ಪದಕದೊಂದಿಗೆ ಸಮಾಧಾನಪಟ್ಟುಕೊಳ್ಳಲು ಪ್ರಯತ್ನಿಸಲಿದೆ. ಬ್ರಿಟನ್ ಎದುರಿನ ಪಂದ್ಯದಲ್ಲಿ ಭಾರತ ಅನೇಕ ಅವಕಾಶಗಳನ್ನು ಕೈಚೆಲ್ಲಿತ್ತು. ಹೀಗಾಗಿ ಸೋತಿತ್ತು. ಆ ಲೋಪಗಳನ್ನು ಸರಿಪಡಿಸಿಕೊಂಡು ಮೊದಲ ಬಾರಿ ಕಂಚಿನ ಪದಕಕ್ಕೆ ಮುತ್ತನ್ನಿಡಲು ಪ್ರಯತ್ನಿಸಲಿದೆ.

ತಂಡ ಗೆದ್ದರೆ ಉಡುಗೊರೆ

ಭಾರತ ಮಹಿಳಾ ಹಾಕಿ ತಂಡ ಪದಕ ಗೆದ್ದರೆ ಪ್ರತಿ ಆಟಗಾರ್ತಿಯರಿಗೆ ಮನೆ ನಿರ್ಮಿಸಲು ಹಣ ಮತ್ತು ಕಾರು ನೀಡುವುದಾಗಿ ಗುಜರಾತ್‌ನ ಉದ್ಯಮಿ ಸಾವ್ಜಿ ಧೋಲಾಕಿಯಾ ಘೋಷಿಸಿದ್ದಾರೆ. ಟ್ವೀಟ್ ಮಾಡಿರುವ ಅವರು, 'ಮಹಿಳಾ ಹಾಕಿ ತಂಡದವರನ್ನು ಗೌರವಿಸಲು 'ಎಚ್‌ಕೆ ಸಮೂಹ' ನಿರ್ಧರಿಸಿದೆ. ಪದಕ ಗೆದ್ದುಕೊಟ್ಟರೆ ಮನೆ ಕಟ್ಟಿಸಲು ತಲಾ ₹ 11 ಲಕ್ಷ ಹಣ ನೀಡಲಾಗುವುದು. ಈಗಾಗಲೇ ಮನೆ ಹೊಂದಿರುವವರಿಗೆ ₹ 5 ಲಕ್ಷ ಮೌಲ್ಯದ ಹೊಸ ಕಾರು ಕೊಡಿಸಲಾಗುವುದು' ಎಂದಿದ್ದಾರೆ.

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಮಹಿಳೆಯರು ಈಗಾಗಲೇ ಇತಿಹಾಸ ಬರೆದಿದ್ದಾರೆ. ಆಸ್ಟ್ರೇಲಿಯಾವನ್ನು ಮಣಿಸಿ ಇದೇ ಮೊದಲ ಬಾರಿ ಒಲಿಂಪಿಕ್ಸ್‌ನ ಸೆಮಿಫೈನಲ್‌ಗೆ ಪ್ರವೇಶಿಸಿದ್ದಾರೆ. ಅವರ ಮನೋಧೈರ್ಯ ಹೆಚ್ಚಿಸುವುದು ನಮ್ಮ ಕಂಪನಿಯ ಉದ್ದೇಶ' ಎಂದು ಅವರು ಹೇಳದ್ದಾರೆ.

ಪಂಜಾಬ್ ರಾಜ್ಯದ ಆಟಗಾರರಿಗೆ ಕೋಟಿ

ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿದ್ದ ಪಂಜಾಬ್‌ನ ಆಟಗಾರರಿಗೆ ಅಲ್ಲಿನ ಸರ್ಕಾರ ತಲಾ ₹ ಒಂದು ಕೋಟಿ ನೀಡಲಿದೆ. ಪಂಜಾಬ್ ಕ್ರೀಡಾ ಸಚಿವ ರಾಣಾ ಗುರ್ಮೀತ್ ಸಿಂಗ್ ಸೋಧಿ ಅವರು ಟ್ವೀಟ್ ಮೂಲಕ ಈ ವಿಷಯ ತಿಳಿಸಿದ್ದಾರೆ.

ನಾಯಕ ಮನಪ್ರೀತ್ ಸಿಂಗ್, ಡಿಫೆಂಡರ್‌ಗಳಾದ ಹರ್ಮನ್‌ಪ್ರೀತ್ ಸಿಂಗ್, ರೂಪಿಂದರ್ ಪಾಲ್ ಸಿಂಗ್, ಮಿಡ್‌ಫೀಲ್ಡರ್ ಹಾರ್ದಿಕ್ ಸಿಂಗ್, ಫಾರ್ವರ್ಡ್‌ಗಳಾದ ಶಂಶೇರ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಗುರ್ಜಂತ್ ಸಿಂಗ್ ಮತ್ತು ಮನದೀಪ್ ಸಿಂಗ್ ಅವರು ಪಂಜಾಬ್‌ನವರು.

ಗುರ್ಜಂತ್ ಸಿಂಗ್ ಮನೆಯಲ್ಲಿ ಕುಟುಂಬದವರ ಸಂತಸ –ಎಎಫ್‌ಪಿ ಚಿತ್ರ

ಸಂಭ್ರಮದ ಹೊಳೆ; ಅಭಿನಂದನೆಯ ಮಳೆ: ಪ್ರಧಾನಿ ಕರೆ

ಭಾರತ ಕಂಚು ಗೆದ್ದ ಬೆನ್ನಲ್ಲೇ ದೇಶದಾದ್ಯಂತ ಸಂಭ್ರಮದ ಹೊಳೆ ಹರಿದಿದೆ. ತಂಡದ ಆಟಗಾರರ ಮನೆಗಳಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಣೆ ಮಾಡಿ ಸಂತಸವನ್ನು ಹಂಚಿಕೊಂಡಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ತಂಡದ ಸಾಮರ್ಥ್ಯವನ್ನು ಕೊಂಡಾಡಿದ್ದಾರೆ.

ನಾಯಕನೊಂದಿಗೆ ನರೇಂದ್ರ ಮೋದಿ ದೂರವಾಣಿ ಸಂಭಾಷಣೆ ನಡೆಸಿ ಇಡೀ ತಂಡದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. 'ಇಡೀ ದೇಶ ತಂಡ ಖುಷಿಯಲ್ಲಿ ಕುಣಿದಾಡುತ್ತಿದ್ದು ತಂಡ ವಾಪಸ್ ಬಂದ ಕೂಡಲೇ ನಿಮ್ಮನ್ನೆಲ್ಲ ಭೇಟಿಯಾಗುವೆ' ಎಂದು ಅವರು ಹೇಳಿದ್ದಾರೆ.

ಈ ಹಿಂದೆ ಭಾರತ ತಂಡದಲ್ಲಿದ್ದ ಅನೇಕ ಆಟಗಾರರು ಆನಂದ ಬಾಷ್ಪ ಸುರಿಸಿ ತಂಡವನ್ನು ಅಭಿನಂದಿಸಿದರು. 'ಭಾರತದಲ್ಲಿ ಹಾಕಿ ಸತ್ತುಹೋಗಿದೆ, ಐಸಿಯುನಲ್ಲಿದೆ ಎಂದೆಲ್ಲ ಹಂಗಿಸಿದವರಿಗೆ ಈಗ ಉತ್ತರ ಸಿಕ್ಕಿದೆ. ನಮ್ಮ ಹಾಕಿ ಪುನರ್ಜೀವ ಪಡೆದುಕೊಂಡಿದೆ' ಎಂದು ವಿಶ್ವಕಪ್ ಗೆದ್ದುಕೊಟ್ಟಿರುವ ನಾಯಕ ಅಜಿತ್ ಪಾಲ್ ಸಿಂಗ್ ಹೇಳಿದರು.

'ಅಂತಿಮ ನಿಮಿಷಗಳಲ್ಲಿ ಜರ್ಮನಿ ಪದೇ ಪದೇ ದಾಳಿ ನಡೆಸುತ್ತಿದ್ದಾಗ ಹೃದಯ ಬಡಿತವೇ ನಿಂತಂತೆ ಆಗುತ್ತಿತ್ತು. ಆದರೆ ಕೊನೆಗೆ ಗೆಲುವು ಭಾರತದ್ದಾಯಿತು' ಎಂದು ಹೇಳಿದವರು ಮಾಸ್ಕೊದಲ್ಲಿ ಚಿನ್ನ ಗೆದ್ದ ತಂಡದಲ್ಲಿದ್ದ ಜಾಫರ್ ಇಕ್ಬಾಲ್.

ಮಾಜಿ ಕೋಚ್ ಹರೇಂದ್ರ ಸಿಂಗ್, ಮಾಜಿ ನಾಯಕ ವೀರೇನ್ ರಸ್ಕಿನ್ಹ ಮತ್ತಿತರರು ಕೂಡ ತಂಡವನ್ನು ಅಭಿನಂದಿಸಿದ್ದಾರೆ.

- **ಹಾಕಿಯಲ್ಲಿ ಗಳಿಸಿದ ಕಂಚಿನ ಪದಕದ ಸಾಧನೆ ಕ್ರಿಕೆಟ್ ವಿಶ್ವಕಪ್‌ಗಳ ಗೆಲುವಿಗಿಂತ ಮಿಗಿಲು ಎಂದು ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಅಭಿಪ್ರಾಯಪಟ್ಟಿದ್ದಾರೆ.**
- **ತಂಡಕ್ಕೆ ಅಭಿನಂದನೆ ಸಲ್ಲಿಸಿ ಟ್ವೀಟ್ ಮಾಡಿರುವ ಗಂಭೀರ್, '1983, 2007, 2011ರ ಕ್ರಿಕೆಟ್ ವಿಶ್ವಕಪ್ ಜಯವನ್ನು ಮರೆತುಬಿಡಿ. ಈಗ ಹೆಮ್ಮೆಪಡಿ' ಎಂದಿದ್ದಾರೆ.**

ಶೂಟೌಟ್: ಚಿನ್ನ ಗೆದ್ದ ಬೆಲ್ಜಿಯಂ

ಆಸ್ಟ್ರೇಲಿಯಾವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿದ ಬೆಲ್ಜಿಯಂ ತಂಡ ಚಿನ್ನದ ಪದಕ ಗೆದ್ದುಕೊಂಡಿತು.

ನಿಗದಿತ ಅವಧಿಯಲ್ಲಿ ಪಂದ್ಯ 1-1ರಲ್ಲಿ ಸಮ ಆಗಿತ್ತು. ಹೀಗಾಗಿ ಫಲಿತಾಂಶಕ್ಕಾಗಿ ಶೂಟೌಟ್ ಮೊರೆ ಹೋಗಲಾಯಿತು. ಎಂಟನೇ ನಿಮಿಷದಲ್ಲಿ ವ್ಯಾನ್ ಔಬೆಲ್ ಗಳಿಸಿದ ಗೋಲಿನ ಮೂಲಕ ಬೆಲ್ಜಿಯಂ ಮುನ್ನಡೆ ಸಾಧಿಸಿತ್ತು. 47ನೇ ನಿಮಿಷದಲ್ಲಿ ಜೋಸೆಫ್ ಟಾಮ್ ವಿಕ್ಹಾಮ್ ಗೋಲು ಗಳಿಸಿ ಆಸ್ಟ್ರೇಲಿಯಾಗೆ ಸಮಬಲ ತಂದುಕೊಟ್ಟರು.

ಬಹುದಿನಗಳ ಆಸೆ ಈಡೇರಿತು: ರಘುನಾಥ್

ಬೆಂಗಳೂರು: 'ಬಹಳ ವರ್ಷಗಳ ಕನಸು ಈಡೇರಿತು. ಇಡೀ ದೇಶವೇ ಸಂಭ್ರಮಪಡುವಂತಹ ಸಾಧನೆಯನ್ನು ನಮ್ಮ ಹುಡುಗರು ಮಾಡಿದ್ದಾರೆ'–

ಭಾರತ ಹಾಕಿ ತಂಡದ ಮಾಜಿ ಆಟಗಾರ, ಕನ್ನಡಿಗ ವಿ.ಆರ್. ರಘುನಾಥ್ ಅವರ ಸಂತಸ ಮುಗಿಲುಮುಟ್ಟಿತ್ತು. ಗುರುವಾರ ಹಾಕಿ ತಂಡವು ಒಲಿಂಪಿಕ್ ಕಂಚಿನ ಪದಕ ಜಯಿ ಸಿದ್ದನ್ನು ಶ್ಲಾಘಿಸಿದ ಅವರು 'ಪ್ರಜಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡರು.

ರಘುನಾಥ್

'ನಿನ್ನೆ (ಬುಧವಾರ) ಪಿ.ಆರ್. ಶ್ರೀಜೇಶ್ ಅವರೊಂದಿಗೆ ವಿಡಿಯೊ ಕಾಲ್‌ನಲ್ಲಿ ಮಾತನಾಡಿದ್ದೆ. ಜರ್ಮನಿಯನ್ನು ಸೋಲಿಸಿಯೇ ಸಿದ್ಧ ಎಂದಿದ್ದರು. ಅದರಂತೆ ಆಡಿದರು. ಅವರ ಗೋಲ್‌ಕೀಪಿಂಗ್ ಅತ್ಯದ್ಭುತವಾಗಿತ್ತು. ನಾನು, ಅವರು ಮತ್ತಿತರರು 2012ರಲ್ಲಿ ಭಾರತವನ್ನು ಲಂಡನ್ ಒಲಿಂಪಿಕ್ಸ್‌ನಲ್ಲಿ ಪ್ರತಿನಿಧಿಸಿದ್ದೆವು. ಅಲ್ಲಿಂದ ಈ ಅಭಿಯಾನ ಆರಂಭವಾಗಿತ್ತು. ಹೋದ ಒಲಿಂಪಿಕ್ಸ್ ಕ್ವಾರ್ಟರ್‌ಫೈನಲ್ ತಲುಪಿದ್ದೆವು. ಈ ಬಾರಿ ಕಂಚು ಗೆದ್ದಿರುವ ಮನ್‌ಪ್ರೀತ್ ಸಿಂಗ್, ಸುರೀಂದರ್ ಸಿಂಗ್, ಲಲಿತ್ ಉಪಾಧ್ಯಾಯ ಅವರೆಲ್ಲರೂ ನಮ್ಮ ಜೂನಿಯರ್ಸ್. ಈ ಯುವ ಆಟಗಾರರು ದೊಡ್ಡ ಸಾಧನೆ ಮಾಡಿದ್ದಾರೆ' ಎಂದು ರಘು ಹೇಳಿದರು.

'ಒಲಿಂಪಿಕ್ ಪದಕ ಜಯಿಸಿಲ್ಲವೆಂಬ ನಮ್ಮ ಕೊರಗು ಈಗ ನೀಗಿದೆ. ಇದು ಭಾರತದ ಹಾಕಿ ಕ್ರೀಡೆಗೆ ದೊಡ್ಡ ಶಕ್ತಿ ತುಂಬಿ ಮುಂದಿನ ಬೆಳವಣಿಗೆಗೆ ಸಹಕಾರಿಯಾಗಲಿದೆ. ಬೆಂಗಳೂರಿನಲ್ಲಿ ಹೈಪರ್ಫಾರ್ಮೆನ್ಸ್ ಕೇಂದ್ರವಿದೆ. ಕರ್ನಾಟಕದಿಂದಲೂ ಉತ್ತಮ ಹಾಕಿಪಟುಗಳು ಸಿದ್ಧರಾಗುತ್ತಿದ್ದಾರೆ. ಜೂನಿಯರ್ ಹಂತದಲ್ಲಿ ಪ್ರತಿಭಾವಂತ ಹುಡುಗರು ಸಿದ್ಧರಾಗಿದ್ದಾರೆ. ಈ ಬಾರಿ ಒಲಿಂಪಿಕ್‌ನಲ್ಲಿ ಕರ್ನಾಟಕದವರಿಲ್ಲ. ಆದರೆ ಮುಂದಿನ ಬಾರಿ ಖಚಿತವಾಗಿ ಇರುತ್ತಾರೆ' ಎಂದು ಹಾಕಿ ಕರ್ನಾಟಕದ ಪದಾಧಿಕಾರಿಯೂ ಆಗಿರುವ ರಘು ವಿಶ್ವಾಸ ವ್ಯಕ್ತಪಡಿಸಿದರು.

'ಶುಕ್ರವಾರ ಮಹಿಳೆಯರ ತಂಡವೂ ಪದಕ ಜಯಿಸುವ ವಿಶ್ವಾಸವಿದೆ' ಎಂದರು.

ಚಿತ್ರಾಂಗಣ



ಪುರುಷರ ಸ್ಕೇಟ್‌ಬೋರ್ಡಿಂಗ್ ಪಾರ್ಕ್ ವಿಭಾಗದಲ್ಲಿ ಚಿನ್ನ ಗೆದ್ದ ಆಸ್ಟ್ರೇಲಿಯಾದ ಕೀಗನ್ ಪಾಮರ್ ಅವರ ಸಾಹಸ– ಎಎಫ್‌ಪಿ ಚಿತ್ರ



ಸ್ಪೋರ್ಟ್ಸ್ ಕ್ಲೈಂಬಿಂಗ್ ಸ್ಪೀಡ್ ವಿಭಾಗದಲ್ಲಿ ಚಿನ್ನ ವಿಜೇತ ಸ್ಪೇನ್‌ನ ಆಲ್ಬರ್ಟೊ ಗೈನ್ಸ್ ಲೋಪೆಜ್– ಎಎಫ್‌ಪಿ ಚಿತ್ರ

ಟೇಬಲ್ ಟೆನಿಸ್ ಮಹಿಳಾ ತಂಡ ವಿಭಾಗದ ಚಿನ್ನ ಗೆದ್ದ ಚೀನಾದ ಚೆನ್ ಮೆಂಗ್ ಹಾಗೂ ವಾಂಗ್ ಮಾನ್ಯು

ಬೀಚ್ ವಾಲಿಬಾಲ್: ಆಸ್ಟ್ರೇಲಿಯಾ ತಂಡ ಫೈನಲ್ ಪ್ರವೇಶ

ಟೋಕಿಯೊ (ರಾಯಿಟರ್ಸ್): ಆಸ್ಟ್ರೇಲಿಯಾದ ಮರಿಯಾಫೆ ಆರ್ಟಚೊ ಮತ್ತು ತಲಿಕಾ ಕ್ಲಾನ್ಸಿ ಜೋಡಿ ಬೀಚ್ ವಾಲಿಬಾಲ್‌ನ ಫೈನಲ್ ಪ್ರವೇಶಿಸಿದರು. ಲಾಟ್ವಿಯಾದ ಟಿನಾ ಗ್ರಾಡಿನಾ ಮತ್ತು ಅನಸ್ತೇಸಿಜಾ ಕ್ರವ್ಸೆನೊಕಾ ವಿರುದ್ಧ ಅವರು 23-21, 21-13ರಲ್ಲಿ ಜಯ ಗಳಿಸಿದರು.

ಫೈನಲ್‌ನಲ್ಲಿ ಆಸ್ಟ್ರೇಲಿಯಾ ಜೋಡಿ ಅಮೆರಿಕದ ಏಪ್ರಿಲ್ ರೋಸ್ ಮತ್ತು ಅಲಿಕ್ಸ್ ಕ್ಲಿನ್‌ಮನ್ ಅವರನ್ನು ಎದುರಿಸುವರು. ರೋಸ್–ಅಲಿಕ್ಸ್ ಜೋಡಿ ಸ್ವಿಟ್ಜರ್ಲೆಂಡ್‌ನ ಅನೌಕ್ ವೆರ್ಜ್ ಮತ್ತು ಜೋನಾ ಹೆಡ್ರಿಚ್ ಅವರನ್ನು 21-12, 21-11ರಲ್ಲಿ ಮಣಿಸಿತು.

ವಾಲಿಬಾಲ್: ರಷ್ಯಾ ಸೆಮಿಫೈನಲ್‌ಗೆ

ಟೋಕಿಯೊ (ರಾಯಿಟರ್ಸ್): ವಾಲಿಬಾಲ್‌ನಲ್ಲಿ ಹಾಲಿ ಚಾಂಪಿಯನ್ ಬ್ರೆಜಿಲ್‌ಗೆ ರಷ್ಯಾ ಆಘಾತ ನೀಡಿತು. ಗುರುವಾರ ನಡೆದ ರೋಚಕ ಸೆಮಿಫೈನಲ್ ಪಂದ್ಯದಲ್ಲಿ 18-25, 25-21, 26-24, 25-23ರಲ್ಲಿ ರಷ್ಯಾ ಜಯ ಗಳಿಸಿತು. ಅರ್ಜೆಂಟೀನಾವನ್ನು ಮಣಿಸಿ ಫ್ರಾನ್ಸ್ ಮೊದಲ ಬಾರಿ ಫೈನಲ್ ಪ್ರವೇಶಿಸಿತು.

ರಷ್ಯಾ ಪರ ಮ್ಯಾಕ್ಸಿಮ್ ಮಿಖಾಯ್ಲೊವ್ 22 ಪಾಯಿಂಟ್ ಗಳಿಸಿದರೆ ಇಗರ್ ಕ್ಲಿಕು 15 ಮತ್ತು ಇವಾನ್ ಇಯಾಕೊಲೆವ್ 12 ಪಾಯಿಂಟ್ ಕಲೆ ಹಾಕಿದರು. ಬ್ರೆಜಿಲ್‌ಗಾಗಿ ಯಾಂಡ್ಲಿ ಲೀಲ್ 18 ಪಾಯಿಂಟ್ ಗಳಿಸಿದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	34	24	16	74
ಅಮೆರಿಕ	29	35	27	91
ಜಪಾನ್	22	10	14	46
ಆಸ್ಟ್ರೇಲಿಯಾ	17	5	19	41
ಆರ್‌ಒಸಿ	16	22	20	58
ಭಾರತ (65ನೇ ಸ್ಥಾನ)	0	2	3	5

ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್: ಎರಡನೇ ದಿನದಾಟಕ್ಕೆ ಮಳೆ ಅಡ್ಡಿ; ಜೇಮ್ಸ್ ಆ್ಯಂಡರ್ಸನ್‌ಗೆ ಎರಡು ವಿಕೆಟ್

ರಾಹುಲ್ ಅರ್ಧಶತಕದ ರಂಗು

ನಾಟಿಂಗ್‌ಹ್ಯಾಮ್ (ಪಿಟಿಐ): ಸುಮಾರು ಎರಡು ವರ್ಷಗಳ ನಂತರ ಟೆಸ್ಟ್ ಪಂದ್ಯದಲ್ಲಿ ಆಡುತ್ತಿರುವ ಕನ್ನಡಿಗ ಕೆ.ಎಲ್. ರಾಹುಲ್ ಅರ್ಧಶತಕ ಗಳಿಸಿದರು.

ಟ್ರೆಂಟ್‌ಬ್ರಿಡ್ಜ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್‌ನ ಎರಡನೇ ದಿನವಾದ ಗುರುವಾರ ಮಳೆಯಿಂದಾಗಿ ದಿನದಾಟ ನಿಂತಾಗ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 46.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 125 ರನ್ ಗಳಿಸಿತ್ತು.

ಮೊದಲ ದಿನದಾಟದಲ್ಲಿ ಇಂಗ್ಲೆಂಡ್ ತಂಡವು ಮಧ್ಯಮವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ ಅವರ ಬೌಲಿಂಗ್ ಎದುರು ಕುಸಿದಿತ್ತು. 183 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಭಾರತಕ್ಕೆ ರೋಹಿತ್ ಶರ್ಮಾ (36 ರನ್) ಮತ್ತು ರಾಹುಲ್ (ಬ್ಯಾಟಿಂಗ್ 57) ಗಟ್ಟಿ ಬುನಾದಿ ಹಾಕುವ ಪ್ರಯತ್ನ ಮಾಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 97 ರನ್‌ಗಳನ್ನು ಸೇರಿಸಿದರು. 38ನೇ ಓವರ್‌ನಲ್ಲಿ ರೋಹಿತ್ ಶರ್ಮಾ ವಿಕೆಟ್ ಗಳಿಸಿದ ಒಲಿ ರಾಬಿನ್ಸನ್ ಜೊತೆಯಾಟವನ್ನು ಮುರಿದರು.

ಈ ಹಂತದಲ್ಲಿ ಪರಿಣಾಮಕಾರಿ ದಾಳಿ ನಡೆಸಿದ ವೇಗಿ ಜೇಮ್ಸ್ ಆ್ಯಂಡರ್ಸನ್ ಭಾರತ ತಂಡಕ್ಕೆ ಬಲವಾದ ಪೆಟ್ಟುಕೊಟ್ಟರು.

ತಮ್ಮ ಒಂದೇ ಓವರ್‌ನಲ್ಲಿ ಟೆಸ್ಟ್ ಪರಿಣತ ಬ್ಯಾಟ್ಸ್‌ಮನ್ ಚೇತೇಶ್ವರ್ ಪೂಜಾರ (4 ರನ್) ಮತ್ತು ನಾಯಕ ವಿರಾಟ್ ಕೊಹ್ಲಿಯ ವಿಕೆಟ್ ಗಳಿಸಿದರು. ಕೊಹ್ಲಿಗೆ ಖಾತೆ ತೆರೆಯುವ ಅವಕಾಶವನ್ನೂ ಕೊಡಲಿಲ್ಲ. ಇವರಿಬ್ಬರ ಕ್ಯಾಚ್‌ಗಳನ್ನೂ ಜೋಸ್ ಬಟ್ಲರ್ ಪಡೆದು ಸಂಭ್ರಮಿಸಿದರು.

ಇದಾಗಿ ಎರಡು ಓವರ್‌ಗಳು ಕಳೆಯುವಷ್ಟರಲ್ಲಿಯೇ ಉಪನಾಯಕ ಅಜಿಂಕ್ಯ ರಹಾನೆ ರನೌಟ್ ಆದರು. ಜಾನಿ ಬೆಸ್ಟೊ ಮಾಡಿದ ಚುರುಕಾದ ಫೀಲ್ಡಿಂಗ್ ಮತ್ತು ಥ್ರೋನಿಂದಾಗಿ ರಹಾನೆ ಆಟ ಮುಗಿಯಿತು.

ಭಾರತ ತಂಡದ ಕೆ.ಎಲ್. ರಾಹುಲ್ ಬ್ಯಾಟಿಂಗ್– ಎಎಫ್‌ಪಿ ಚಿತ್ರ

ಆದರೆ ಇನ್ನೊಂದೆಡೆ ರಾಹುಲ್ ತಾಳ್ಮೆಯಿಂದ ಆಡಿದರು. 151 ಎಸೆತಗಳನ್ನು ಎದುರಿಸಿದ ಅವರು ಅರ್ಧಶತಕದ ಗಡಿ ದಾಟಿದ್ದಾರೆ. ಅವರೊಂದಿಗೆ ರಿಷಭ್ ಪಂತ್ ಕೂಡ ಕ್ರೀಸ್‌ನಲ್ಲಿದ್ದಾರೆ.

ಇನಿಂಗ್ಸ್‌ನ 47ನೇ ಓವರ್ ಬೌಲಿಂಗ್ ನಡೆಯುತ್ತಿದ್ದ ಸಂದರ್ಭದಲ್ಲಿ ಮಳೆ ಸುರಿಯಲಾರಂಭಿಸಿತು. ಅದರಿಂದಾಗಿ ಆಟವನ್ನು ಸ್ಥಗಿತಗೊಳಿಸಲಾಯಿತು.

ಇಂಗ್ಲೆಂಡ್‌ನ ಮೊದಲ ಇನಿಂಗ್ಸ್ ಮೊತ್ತವನ್ನು ಚುಕ್ತಾ ಮಾಡಲು ಭಾರತಕ್ಕೆ ಇನ್ನೂ 58 ರನ್‌ಗಳ ಅಗತ್ಯವಿದೆ.

ಸ್ಕೋರ್ ಕಾರ್ಡ್

ಇಂಗ್ಲೆಂಡ್ (ಮೊದಲ ಇನಿಂಗ್ಸ್) 183 (65.4 ಓವರ್)

ಭಾರತ (ಮೊದಲ ಇನಿಂಗ್ಸ್) 4 ವಿಕೆಟ್‌ಗೆ 125 (46.4 ಓವರ್)

(ಬುಧವಾರ 13 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 21)

ರೋಹಿತ್ ಸಿ ಸ್ಯಾಮ್ ಬಿ ರಾಬಿನ್ಸನ್ 36 (107ಎ, 4X6), ರಾಹುಲ್ ಬ್ಯಾಟಿಂಗ್ 57 (148ಎ, 4X9), ಪೂಜಾರ ಸಿ ಬಟ್ಲರ್ ಬಿ ಆ್ಯಂಡರ್ಸನ್ 4 (16 ಎ), ವಿರಾಟ್ ಸಿ ಬಟ್ಲರ್ ಬಿ ಆ್ಯಂಡರ್ಸನ್ 0 (1ಎ), ರಹಾನೆ ರನೌಟ್ ಬೆಸ್ಟೊ 5 (5ಎ), ರಿಷಭ್ ಪಂತ್ ಬ್ಯಾಟಿಂಗ್ 7 (8ಎ, 4X1)

ಇತರೆ (ಬೈ 5, ಲೆಗ್‌ಬೈ 3, ನೋಬಾಲ್ 8) 16

ವಿಕೆಟ್ ಪತನ: 1–97 (ರೋಹಿತ್ ಶರ್ಮಾ, 37.3), 2–104 (ಚೇತೇಶ್ವರ್ ಪೂಜಾರ, 40.2), 3–104 (ವಿರಾಟ್ ಕೊಹ್ಲಿ, 40.3), 4–112 (ಅಜಿಂಕ್ಯ ರಹಾನೆ, 43.2)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 13.4–7–15–2, ಸ್ಟುವರ್ಟ್ ಬ್ರಾಡ್ 11–1–45–0, ಒಲಿ ರಾಬಿನ್ಸನ್ 15–5–32–1, ಸ್ಯಾಮ್ ಕರನ್ 7–1–25–0

ವಿಕೆಟ್ ಗಳಿಸಿದ ಜೇಮ್ಸ್ ಆ್ಯಂಡರ್ಸನ್ ಅವರು ಸಹ ಆಟಗಾರ ಸ್ಯಾಮ್ ಕರನ್ ಅವರೊಂದಿಗೆ ಸಂಭ್ರಮಿಸಿದರು– ಪಿಟಿಐ ಚಿತ್ರ

ಪ್ರೊ ಕಬಡ್ಡಿ ಲೀಗ್: 29ರಿಂದ ಹರಾಜು ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮುಂಬೈನಲ್ಲಿ ಹರಾಜು ಪ್ರಕ್ರಿಯೆ
- 12 ಫ್ರಾಂಚೈಸ್‌ಗಳು, 500ಕ್ಕೂ ಹೆಚ್ಚು ಆಟಗಾರರು

ಬೆಂಗಳೂರು: ಸುಮಾರು ಎರಡು ವರ್ಷಗಳ ಬಳಿಕ ಪ್ರೊ ಕಬಡ್ಡಿ ಲೀಗ್ ಆಯೋಜನೆಗೆ ವೇದಿಕೆ ಸಜ್ಜುಗೊಂಡಿದೆ. ಎಂಟನೇ ಆವೃತ್ತಿಯ ಲೀಗ್‌ಗೆ ಇದೇ 29ರಿಂದ 31ರವರೆಗೆ ಹರಾಜು ಪ್ರಕ್ರಿಯೆ ಮುಂಬೈನಲ್ಲಿ ನಡೆಯಲಿದೆ. ಲೀಗ್‌ನ ಆಯೋಜನಾ ಸಂಸ್ಥೆ ಮಶಾಲ್ ಸ್ಪೋರ್ಟ್ಸ್ ಗುರುವಾರ ಈ ವಿಷಯ ತಿಳಿಸಿದೆ. ಡಿಸೆಂಬರ್‌ನಲ್ಲಿ ಲೀಗ್ ಆರಂಭಿಸುವ ಸಾಧ್ಯತೆಯಿದೆ.

ದೇಶಿ, ವಿದೇಶಿ ಆಟಗಾರರು ಹರಾಜಿನಲ್ಲಿ ಪಾಲ್ಗೊಳ್ಳಲಿದ್ದು, ಇವರನ್ನು ಎ,ಬಿ,ಸಿ ಮತ್ತು ಡಿ ಎಂದು ವಿಭಜಿಸಲಾಗುತ್ತದೆ. ಬಳಿಕ ಈ ಆಟಗಾರರನ್ನು ಆಲ್‌ರೌಂಡರ್‌ಗಳು, ಡಿಫೆಂಡರ್ಸ್ ಮತ್ತು ರೇಡರ್‌ಗಳೆಂದು ವಿಂಗಡಿಸಲಾಗುತ್ತದೆ. ಎ ದರ್ಜೆಯ ಆಟಗಾರರಿಗೆ ₹ 30 ಲಕ್ಷ, ಬಿ ದರ್ಜೆಯ ಆಟಗಾರರಿಗೆ ₹ 20 ಲಕ್ಷ, ಸಿ ದರ್ಜೆಗೆ ₹ 10 ಲಕ್ಷ ಮತ್ತು ಡಿ ದರ್ಜೆಯಲ್ಲಿರುವ ಆಟಗಾರರಿಗೆ ₹ 6 ಲಕ್ಷ ಮೂಲ ಬೆಲೆ ನಿಗದಿಪಡಿಸಲಾಗುತ್ತದೆ.

2019ರಲ್ಲಿ ಕೊನೆಯ ಬಾರಿ ಪ್ರೊ ಕಬಡ್ಡಿ ಲೀಗ್ ನಡೆದಿತ್ತು.

ಆಟಗಾರರ ಮೇಲೆ ಹಣ ವಿನಿಯೋಗಿಸಲು ಪ್ರತಿ ಫ್ರಾಂಚೈಸ್‌ಗೆ ₹ 4.4 ಕೋಟಿ ಮೊತ್ತ ನಿಗದಿಪಡಿಸಲಾಗಿದೆ. 500ಕ್ಕಿಂತ ಕಬಡ್ಡಿ ಪಟುಗಳು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಆರು ಮತ್ತು ಏಳನೇ ಆವೃತ್ತಿಯಲ್ಲಿ ಆಡಿದ ಆಟಗಾರರು ಮತ್ತು 2020 ಹಾಗೂ 2021ರ ಎಕೆಎಫ್‌ಐ ರಾಷ್ಟ್ರೀಯ ಸೀನಿಯರ್ ಕಬಡ್ಡಿ ಚಾಂಪಿಯನ್‌ಷಿಪ್ ರ‍್ಯಾಂಕಿಂಗ್‌ನಲ್ಲಿ ಅಗ್ರ ಎಂಟು ಸ್ಥಾನಗಳಲ್ಲಿರುವ ತಂಡಗಳ ಆಟಗಾರರು ಹರಾಜಿನಲ್ಲಿ ಪಾಲ್ಗೊಳ್ಳಬಹುದಾಗಿದೆ.

ವಂದನಾ ಕುಟುಂಬಕ್ಕೆ ಜಾತಿ ನಿಂದನೆ: ವ್ಯಕ್ತಿ ಬಂಧನ

ಡೆಹ್ರಾಡೂನ್ (ಪಿಟಿಐ): ಭಾರತ ಹಾಕಿ ತಂಡದ ಆಟಗಾರ್ತಿ ವಂದನಾ ಕಟಾರಿಯಾ ಕುಟುಂಬದ ವಿರುದ್ಧ ಜಾತಿ ನಿಂದನೆ ಮಾಡಿದ ಆರೋಪದ ಮೇಲೆ ಉತ್ತರಾಖಂಡದ ಹರಿದ್ವಾರದಲ್ಲಿ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತನನ್ನು ವಿಜಯ್ ಪಾಲ್ ಎಂದು ಗುರುತಿಸಲಾಗಿದೆ.

ಒಲಿಂಪಿಕ್ಸ್‌ನಲ್ಲಿ ಅರ್ಜೆಂಟೀನಾ ಎದುರಿನ ಸೆಮಿಫೈನಲ್‌ನಲ್ಲಿ ಭಾರತ ಮಹಿಳಾ ತಂಡ ಸೋತಿತ್ತು. ಹರಿದ್ವಾರದ ರೋಷನಾಬಾದ್‌ನಲ್ಲಿರುವ ವಂದನಾ ಮನೆಯ ಮುಂದೆ ಇಬ್ಬರು ವ್ಯಕ್ತಿಗಳು ಪಂದ್ಯದ ನಂತರ ಪಟಾಕಿ ಹಚ್ಚಿ ಅಪಹಾಸ್ಯ ಮಾಡುವ ರೀತಿಯಲ್ಲಿ ಸಂಭ್ರಮಿಸಿದ್ದರು ಎಂದು ಸ್ಥಳೀಯ ಪೊಲೀಸರು ಹೇಳಿದ್ದಾರೆ. 'ಸದ್ದು ಕೇಳಿ ವಂದನಾ ಕುಟುಂಬಸ್ಥರು ಮನೆಯ ಹೊರಗಡೆ ಬಂದಾಗ ತಂಡದಲ್ಲಿ ದಲಿತರೇ ಹೆಚ್ಚು ಇರುವ ಕಾರಣ ಭಾರತ ಸೋತಿದೆ ಎಂದು ಈ ವ್ಯಕ್ತಿಗಳು ಹೇಳಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾಣೆಯಾಗಿದ್ದಾರೆ

ಚೆಲುವಯ್ಯ, 65 ವರ್ಷ ಕನ್ನಡ ಮಾತನಾಡುತ್ತಾರೆ. ಕೋಲು ಮುಖ, ಸಾಧಾರಣ ಮೈಕಟ್ಟು, ಗೋದಿ ಮೈಬಣ್ಣ ಎತ್ತರ 5.6 ಅಡಿ, ಬಿಳಿ ಕೂದಲು, ತುಂಬು ತೋಳಿನ ಬಿಸ್ಕೆಟ್ ಬಣ್ಣದ ಶರ್ಟ್, ಪಟಾಪಟಿ ನಿಕ್ಕರ್ ಮತ್ತು ಒಂದು ಟರ್ಕಿ ಟಾವಲ್ ಧರಿಸಿರುತ್ತಾರೆ.

ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ಸಂಪರ್ಕಿಸಿ: 9738847346 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ

ಯಂಗ್ ಒರಿಯನ್ಸ್ ತಂಡದ ಜಾನ್ (ಎಡ) ಹಾಗೂ ಮಂಗಳೂರು ಬಿ.ಸಿ ತಂಡದ ಎಚ್. ಸಂಕ್ರಿತ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ

ಒರಿಯನ್ಸ್‌ಗೆ ಭರ್ಜರಿ ಜಯ

ಬೆಂಗಳೂರು: ಅದ್ಭುತ ಸಾಮರ್ಥ್ಯ ತೋರಿದ ಯಂಗ್ ಒರಿಯನ್ಸ್ ತಂಡವು ಪ್ರೊ. ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸಿ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಗುರುವಾರ ನಡೆದ ಪಂದ್ಯದಲ್ಲಿ 80–69ರಿಂದ ಮಂಗಳೂರು ಬಿ.ಸಿ ತಂಡವನ್ನು ಸೋಲಿಸಿತು.

ವಿಜೇತ ತಂಡದ ಪರ ಜಾನ್ 21 ಪಾಯಿಂಟ್ಸ್ ಗಳಿಸಿದರೆ, ಮಂಗಳೂರು ಬಿ.ಸಿ ಪರ ಶಶಾಂಕ್ 25 ಪಾಯಿಂಟ್ಸ್ ಕಲೆಹಾಕಿದರು.

ಫುಟ್‌ಬಾಲ್: ಅಗ್ನಿಪುತ್ರ ಜಯಭೇರಿ

ಬೆಂಗಳೂರು: ಸಂಘಟಿತ ಆಟವಾಡಿದ ಅಗ್ನಿಪುತ್ರ ಎಫ್‌ಸಿ ತಂಡವು ಕೆಎಸ್‌ಎಫ್‌ಎ–ಬಿಡಿಎಫ್‌ಎ 'ಸಿ' ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಗುರುವಾರ ಇಲ್ಲಿ ನಡೆದ ಹಣಾಹಣಿಯಲ್ಲಿ 3–0ಯಿಂದ ವಿಜಯನಗರ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ವಿಜೇತ ಅಗ್ನಿಪುತ್ರ ಪರ ಸರಣ್ ಪಂದ್ಯದ ನಾಲ್ಕನೇ ನಿಮಿಷದಲ್ಲೇ ಗೋಲು ದಾಖಲಿಸಿ ಮುನ್ನಡೆ ಒದಗಿಸಿಕೊಟ್ಟರು. ಹರ್ಷಕುಮಾರ್ 11ನೇ ನಿಮಿಷ ಮತ್ತು ಪ್ರೇಮ್ ಹೆಚ್ಚುವರಿ ಅವಧಿಯಲ್ಲಿ ಗೋಲು ಹೊಡೆದು ತಂಡದ ಜಯವನ್ನು ಸುಲಭಗೊಳಿಸಿದರು.

ಮತ್ತೊಂದು ಪಂದ್ಯದಲ್ಲಿ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ಎಫ್‌ಸಿ ತಂಡವು 1–0ಯಿಂದ ಬಲಹಾರ್ಕ ಎಫ್‌ಸಿ ಎದುರು ಗೆದ್ದಿತು. ಲೆಜೆಂಡ್ಸ್ ತಂಡದ ಜೆ.ದಿನಕರನ್ 38ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಶುಕ್ರವಾರ ನಡೆಯುವ ಪಂದ್ಯಗಳಲ್ಲಿ ಒಲಿಂಪಿಯನ್ ರಾಮನ್ ಎಫ್‌ಸಿ–ರೊನಾಲ್ಡೊ ಎಫ್‌ಸಿ, ರಿಚಮಂಡ್ ಪ್ಯಾಂಥರ್ಸ್ ಎಫ್‌ಸಿ– ಅಲ್ ಫತೆಹ್ ಎಫ್‌ಸಿ ಮುಖಾಮುಖಿಯಾಗಲಿವೆ.

ಫುಟ್‌ಬಾಲ್ ಪಟು ನಾರಾಯಣ್ ನಿಧನ

ಮುಂಬೈ (ಪಿಟಿಐ): ಭಾರತ ತಂಡವನ್ನು ಎರಡು ಒಲಿಂಪಿಕ್ಸ್‌ಗಳಲ್ಲಿ ಪ್ರತಿನಿಧಿಸಿದ್ದ ಫುಟ್‌ಬಾಲ್ ಆಟಗಾರ ಎಸ್.ಎಸ್. 'ಬಾಬು' ನಾರಾಯಣ್ (86) ಗುರುವಾರ ಥಾಣೆಯಲ್ಲಿ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರು ಮತ್ತು ಪುತ್ರ ಇದ್ದಾರೆ. ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಈ ವಿಷಯ ತಿಳಿಸಿದೆ.

ಗೋಲ್‌ಕೀಪರ್ ಆಗಿದ್ದ ನಾರಾಯಣ್ 1956ರ ಮೆಲ್ಬರ್ನ್ ಮತ್ತು 1960ರ ರೋಮ್ ಒಲಿಂಪಿಕ್ಸ್‌ಗಳಲ್ಲಿ ಭಾರತ ತಂಡದ ಪರ ಕಣಕ್ಕಿಳಿದಿದ್ದರು. 1956ರ ಡಿಸೆಂಬರ್ ನಾಲ್ಕರಂದು ಮೆಲ್ಬರ್ನ್ ಕೂಟದಲ್ಲಿ ಯುಗೊಸ್ಲಾವಿಯಾ ಎದುರಿನ ಪಂದ್ಯದ ಮೂಲಕ ಅವರು ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಪದಾರ್ಪಣೆ ಮಾಡಿದ್ದರು. ಭಾರತದ ಪರ 9 ಪಂದ್ಯಗಳಲ್ಲಿ ಆಡಿದ್ದರು.

ಹಿಂದೂ ದೇಗುಲ ಧ್ವಂಸ: ಪಾಕ್ ವಿರುದ್ಧ ಭಾರತ ಸಮನ್ಸ್

ನವದೆಹಲಿ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ರಹೀಂ ಯಾರ್ ಖಾನ್‌ನಲ್ಲಿರುವ ಹಿಂದೂ ದೇವಾಲಯವನ್ನು ಧ್ವಂಸಗೊಳಿಸಿರುವ ಘಟನೆಗೆ ಸಂಬಂಧಿಸಿದಂತೆ ಭಾರತವು ಗುರುವಾರ ಪಾಕಿಸ್ತಾನದ ರಾಜತಾಂತ್ರಿಕರನ್ನು ಕರೆಸಿ ತನ್ನ ಬಲವಾದ ಪ್ರತಿಭಟನೆಯನ್ನು ದಾಖಲಿಸಿದೆ.

'ಪಾಕಿಸ್ತಾನದ ರಾಜತಾಂತ್ರಿಕರನ್ನು ಗುರುವಾರ ಮಧ್ಯಾಹ್ನ ಕರೆಸಲಾಯಿತು. ಹಿಂದೂ ದೇಗುಲದ ಧ್ವಂಸ ಘಟನೆಯನ್ನು ಖಂಡಿಸಿದ ಭಾರತವು ತೀವ್ರ ಪ್ರತಿಭಟನೆ ದಾಖಲಿಸಿತು' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾತ ಸಮುದಾಯಗಳ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ನಿರಂತರ ದಾಳಿಗಳ ಕುರಿತು ಭಾರತವು ಕಳವಳ ವ್ಯಕ್ತಪಡಿಸಿತು' ಎಂದೂ ಅವರು ಹೇಳಿದ್ದಾರೆ.

ಲಾಹೋರ್ ವರದಿ: ಇಲ್ಲಿನ ಪಂಜಾಬ್ ಪ್ರಾಂತ್ಯದಲ್ಲಿರುವ ಹಿಂದೂ ದೇವಾಲಯದ ಮೇಲೆ ಬುಧವಾರ ಮುಸ್ಲಿಮರ ಗುಂಪೊಂದು ದಾಳಿ ಮಾಡಿದ್ದರಿಂದ ದೇವಾಲಯದ ಕೆಲವು ಭಾಗಗಳು ಸುಟ್ಟು ಹೋಗಿದ್ದು, ದೇವರ ಮೂರ್ತಿಗಳೂ ಹಾನಿಗೊಂಡಿವೆ.

ದೇವಾಲಯದ ಮೇಲೆ ನಡೆದ ದಾಳಿಯನ್ನು ನಿಯಂತ್ರಿಸುವಲ್ಲಿ ಪೊಲೀಸರು ವಿಫಲರಾದ ನಂತರ ಪರಿಸ್ಥಿತಿ ನಿಯಂತ್ರಿಸಲು ಪಾಕಿಸ್ತಾನಿ ರೇಂಜರ್‌ಗಳನ್ನು ಕರೆಸಲಾಯಿತು.

ಅರಿಂದಮ್

ಲಾಹೋರ್‌ನಿಂದ 590 ಕಿ.ಮೀ ದೂರದಲ್ಲಿರುವ ರಹೀಂ ಯಾರ್ ಖಾನ್ ಜಿಲ್ಲೆಯ ಭೋಂಗ್ ನಗರದಲ್ಲಿರುವ ಮುಸ್ಲಿಂ ಸೆಮಿನರಿಯ ಗ್ರಂಥಾಲಯವನ್ನು ಅಪವಿತ್ರಗೊಳಿಸಿದ್ದಕ್ಕೆ ಪ್ರತಿಯಾಗಿ ಬುಧವಾರ ಮುಸ್ಲಿಂ ಸಮುದಾಯಕ್ಕೆ ಸೇರಿದ ಗುಂಪು ಹಿಂದೂ ದೇವಾಲಯದ ಮೇಲೆ ದಾಳಿ ನಡೆಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಮ್ಮು–ಕಾಶ್ಮೀರ: 370 ವಿಧಿ ರದ್ದತಿಗೆ ಎರಡು ವರ್ಷ

ವಿಶೇಷಾಧಿಕಾರ ಅಂತ್ಯ: ಬಿಜೆಪಿ ನೇತೃತ್ವದ ಸರ್ಕಾರದ್ದೇ ಉತ್ತರದಾಯಿತ್ವ– ಪಿಎಜಿಡಿ

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷಾಧಿಕಾರವನ್ನು ಮರಳಿಸುವಂತೆ ಕೋರಿ ಸಂಸತ್ ಹಾಗೂ ದೇಶದ ಜನರ ಮೊರೆ ಹೋಗಲಾಗುವುದು' ಎಂದು ಪೀಪಲ್ಸ್ ಅಲಯನ್ಸ್ ಫಾರ್ ಗುಪ್ಕಾರ್ ಡಿಕ್ಲರೇಷನ್ (ಪಿಎಜಿಡಿ) ಗುರುವಾರ ಹೇಳಿದೆ.

ಅಲ್ಲದೇ, 370ನೇ ವಿಧಿ ರದ್ದುಗೊಳಿಸಿದ ನಂತರದ ಅವಧಿಯಲ್ಲಿ ಆಗಿರುವ ಎಲ್ಲ ಬೆಳವಣಿಗೆಗಳಿಗೆ ಬಿಜೆಪಿ ಸರ್ಕಾರವನ್ನೇ ಉತ್ತರದಾಯಿಯನ್ನಾಗಿ ಮಾಡಲಾಗುವುದು ಎಂದೂ ಪಿಎಜಿಡಿ ಮುಖಂಡರು ಹೇಳಿದ್ದಾರೆ.

ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿರುವುದಕ್ಕೆ ಎರಡು ವರ್ಷಗಳು ತುಂಬಿವೆ. ಈ ಹಿನ್ನೆಲೆಯಲ್ಲಿ ಪಿಎಜಿಡಿ ಅಧ್ಯಕ್ಷರೂ ಆಗಿರುವ ನ್ಯಾಷನಲ್ ಕಾನ್ಫರೆನ್ಸ್‌ನ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರ ನಿವಾಸದಲ್ಲಿ ಮೈತ್ರಿಕೂಟದ ಅಂಗಪಕ್ಷಗಳ ಸಭೆ ನಡೆಯಿತು.

ಪಿಎಜಿಡಿ ಎಂಬುದು ಆರು ಪ್ರಮುಖ ರಾಜಕೀಯ ಪಕ್ಷಗಳ ಮೈತ್ರಿಕೂಟ. ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ಮರಳಿ ಪಡೆಯುವ ಸಲುವಾಗಿ ಹೋರಾಟ ನಡೆಸಲು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಈ ಮೈತ್ರಿಕೂಟ ರಚಿಸಲಾಗಿದೆ.

ಸಭೆಯಲ್ಲಿ ಮಾತನಾಡಿದ ವಿವಿಧ ಪಕ್ಷಗಳ ಮುಖಂಡರು, '2019ರ ಆಗಸ್ಟ್ 5ರಂದು ನಮ್ಮ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು' ಎಂದರು. ಸಂವಿಧಾನ ನೀಡಿರುವ ಈ ಹಕ್ಕುಗಳನ್ನು ಮರಳಿ ಪಡೆಯುವ ಶಪಥ ಮಾಡಿದರು. ಅಲ್ಲದೇ, ನಮ್ಮ ಹೋರಾಟವನ್ನು ತಡೆಯಲು ಯಾವುದೇ ಶಕ್ತಿಯಿಂದ ಸಾಧ್ಯವಿಲ್ಲ ಎಂಬುದಾಗಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಒಂದು ಗಂಟೆ ಕಾಲ ನಡೆದ ಈ ಸಭೆಯಲ್ಲಿ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ, ಸಿಪಿಎಂ ನಾಯಕ ಮೊಹಮ್ಮದ್ ಯೂಸೂಫ್ ತಾರಿಗಾಮಿ ಮತ್ತಿತರರು ಪಾಲ್ಗೊಂಡಿದ್ದರು.

'ಶೋಕಾಚರಣೆಯ ದಿನ': 'ಜಮ್ಮು–ಕಾಶ್ಮೀರದ ಪಾಲಿಗೆ ಶೋಕಾಚರಣೆಯ ದಿನವಿದು. 2019ರಲ್ಲಿ ಬಿಜೆಪಿ ಸರ್ಕಾರ ದಬ್ಬಾಳಿಕೆ ಆರಂಭಿಸಿತು. ಅನಾಗರಿಕ ರೀತಿಯಲ್ಲಿ ವರ್ತಿಸಲು ಶುರು ಮಾಡಿತು. ಕಾಶ್ಮೀರ ಶೋಕದಲ್ಲಿ ಮುಳುಗಿದ್ದರೆ ಬಿಜೆಪಿ ಸಂಭ್ರಮಾಚರಣೆಯಲ್ಲಿ ತೊಡಗಿರುವುದು ದುರದೃಷ್ಟಕರ' ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಗುರುವಾರ ಟ್ವೀಟ್ ಮಾಡಿದ್ದಾರೆ.

ಶ್ರೀನಗರ ಸೇರಿದಂತೆ ವಿವಿಧೆಡೆ, ಪಿಡಿಪಿ ಕಾರ್ಯಕರ್ತರು ಕಪ್ಪು ಪಟ್ಟಿ ಧರಿಸಿ, ಕರಾಳ ದಿನ ಆಚರಿಸಿದರು. ಪ್ರತಿಭಟನಾ ಮೆರವಣಿಗೆಯನ್ನೂ ನಡೆಸಿದರು.

ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ನೇತೃತ್ವದಲ್ಲಿ ಶ್ರೀನಗರದಲ್ಲಿ ಗುರುವಾರ ಪ್ರತಿಭಟನಾ ರ‍್ಯಾಲಿ ನಡೆಯಿತು –ಪಿಟಿಐ ಚಿತ್ರ

ಬಿಜೆಪಿಯಿಂದ ತ್ರಿವರ್ಣ ಧ್ವಜಾರೋಹಣ

ಶ್ರೀನಗರ/ಜಮ್ಮು: ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿರುವುದಕ್ಕೆ ಎರಡು ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ, ಜಮ್ಮು–ಕಾಶ್ಮೀರದ ವಿವಿಧೆಡೆ ಬಿಜೆಪಿ ವತಿಯಿಂದ ತಿರಂಗಾ ರ‍್ಯಾಲಿ ಹಾಗೂ ತ್ರಿವರ್ಣ ಧ್ವಜಾರೋಹಣ ಹಮ್ಮಿಕೊಳ್ಳಲಾಗಿತ್ತು.

ಅನಂತನಾಗ್ ಜಿಲ್ಲೆಯ ಖಾನಬಾಲ್ ಪಟ್ಟಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿಯ ಪುರಸಭೆ ಸದಸ್ಯ ರೊಮಾಸಿಯಾ ರಫೀಕ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸುವ ಮೂಲಕ ಸಂಭ್ರಮಾಚರಣೆಗೆ ಚಾಲನೆ ನೀಡಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಛುಗ್, ಬಂಡಿಪೊರಾ ಜಿಲ್ಲಾ ಘಟಕದ ಅಧ್ಯಕ್ಷ ಅಬ್ದುಲ್ ರೆಹಮಾನ್ ತಿಕ್ರಿ, ಮಂಡಲ ಅಭಿವೃದ್ಧಿ ಸಮಿತಿ ಸದಸ್ಯೆ ಸುಷ್ಮಾ ನೆಹರು ನೇತೃತ್ವ ವಹಿಸಿದ್ದರು.